ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 23, 2011 ಪುಟ 20 ರೂ. 14/-



ಸಿಪಿಕೆ ಸಂದರ್ಶನ






ಸಿಟಿ ರವಿ-ಪಲ್ಲವಿ
ಸೈಟು ಕದ್ದ ದಂಪತಿ

ಒಕ್ಕಲಿಗರ ಸಂಘದಲ್ಲಿ ದಂಗೆ





ಕಣ್ಣು ಕೀಳಿಸಿಕೊಂಡ ಪ್ರೇಮಿ
ಕುರುಡು ನಾಟಕ?




ಪ್ರತಿಷ್ಠೆಯ ಪ್ರಪಾತದಲ್ಲಿ ಹಂಪಿ ವಿವಿ

ಚರ್ಚ್ ದಾಳಿ ಹಿಂದೆ ಕಲ್ಲಡ್ಕ?

ನಾವಿರುವ ಸಂದರ್ಭ ಎಂತಹದ್ದೆಂದರೆ ಮಾಧ್ಯಮದ ಬೇಜವಾಬ್ದಾರಿತನವನ್ನು ತಡೆಗಟ್ಟಲು ಕಠಿಣ ಕಾನೂನನ್ನು ರೂಪಿಸಬೇಕೆಂದು ಖಟ್ಜು ಹೇಳಿದರೆ ಅದರ ಲಾಭವಾಗುವುದು ದಿನೇದಿನೇ ನಿರಂಕುಶವಾಗುತ್ತಿರುವ ಸರ್ಕಾರಕ್ಕೆ. ಅದು ಪ್ರಜಾತಂತ್ರದ ಉಸಿರನ್ನು ತೆಗೆದುಹಾಕಿದರೆ ಅದರ ನೇರ ಪ್ರಭಾವ ಬೀಳುವುದು ಸಾಮಾನ್ಯ ಜನರ ಮೇಲೆ! ಖಟ್ಜುರವರು ಮಾಡಿರುವ ಟೀಕೆಗಳಲ್ಲಿ ಕೆಲವು ಬೀಸುಮಾತಿನ ಸರಳೀಕರಣಗಳಿವೆ. ಇಡೀ ಮಾಧ್ಯಮವನ್ನು ದೋಷಿಯನ್ನಾಗಿ ತೋರುವುದು ಮತ್ತು ಮಾಧ್ಯಮ ಸ್ವಾತಂತ್ರ್ಯದ ಸಕಾರಾತ್ಮಕ ಅಂಶಗಳನ್ನು ಅವಗಣನೆ ಮಾಡಿರುವುದು ಒಪ್ಪಲಾಗದ ಅಂಶಗಳು.

ಮಾಧ್ಯಮಗಳ ಬಗ್ಗೆ ನ್ಯಾ. ಮಾರ್ಕಂಡೇಯ ಖಟ ಹೇಳಿದ್ದರಲ್ಲಿ ತಪ್ಪೇನಿದೆ?



ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿ ಹಲವಾರು ಪ್ರಗತಿಪರ ಮತ್ತು ಕೆಲವು ವಿವಾದಾತ್ಮಕ ನ್ಯಾಯಾದೇಶಗಳನ್ನು ಕೊಟ್ಟು ಖ್ಯಾತರಾಗಿದ್ದ ನ್ಯಾ. ಮಾರ್ಕಂಡೇಯ ಖಟ್ಜುರವರನ್ನು ನಿವೃತ್ತಿಯ ನಂತರ ಕಳೆದ ಅಕ್ಟೋಬರ್ ಐದರಂದು 'ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ'ದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಪ್ರೆಸ್ ಕೌನ್ಸಿಲ್‌ನ ಅಧ್ಯಕ್ಷರಾದ ಮೇಲೆ ಅವರು ಭಾರತೀಯ ಮಾಧ್ಯಮಗಳ ಬಗ್ಗೆ, ಪತ್ರಕರ್ತರ ವೃತ್ತಿಪರತೆ ಮತ್ತು ನೈತಿಕತೆ ಬಗ್ಗೆ ಮಾಡಿದ ಕೆಲವು ಕಟು ವಿಮರ್ಶೆಗಳು (ಕೆಲವು ಬೀಸು ಹೇಳಿಕೆಗಳು) ಮಾಧ್ಯಮ ದೊರೆಗಳ ತೀವ್ರ ಟೀಕೆಗೆ ಗುರಿಯಾಗಿವೆ. ಭಾರತೀಯ ಸಂಪಾದಕರುಗಳ ಕೂಟ (ಎಡಿಟರ್ಸ್ ಗಿಲ್ಡ್), ಇಂಡಿಯನ್ ನ್ಯೂಸ್‌ಪೇಪರ್ಸ್ ಸೊಸೈಟಿ, ನ್ಯಾಷನಲ್ ಬ್ರಾಡ್‌ಕಾಸ್ಟರ್ಸ್ ಅಸೋಸಿಯೇಷನ್‌ಗಳು ಎಲ್ಲಾ ಒಟ್ಟಾಗಿ ಖಟ್ಜು ಅವರ ಮೇಲೆ ಮುಗಿಬಿದ್ದಿವೆ.


ಇಷ್ಟಕ್ಕೂ, ಮಾಧ್ಯಮಗಳ ದೊರೆಗಳು ಹೀಗೆ ಮರ್ಮಕ್ಕೆ ಪೆಟ್ಟುಬಿದ್ದಂತೆ ಕೆಂಡಾಮಂಡಲವಾಗುವಂಥಾ ಯಾವ ಟೀಕೆಗಳನ್ನು ನ್ಯಾ. ಖಟ್ಜು ಮಾಡಿದ್ದಾರೆ?

ಪ್ರೆಸ್ ಕೌನ್ಸಿಲ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಸಿಎನ್‌ಎನ್-ಐಬಿಎನ್ ವಾಹಿನಿಯಲ್ಲಿ ಕರಣ್ ಥಾಪರ್ ನಡೆಸಿಕೊಡುವ 'ಡೆವಿಲ್ಸ್ ಅಡ್ವೋಕೇಟ್' ಕಾರ್ಯಕ್ರಮದಲ್ಲಿ ಅವರು ಅತಿಥಿಯಾಗಿ ಭಾಗವಹಿಸಿ ಮಾಧ್ಯಮದ ಬಗ್ಗೆ ತಮ್ಮ ಹಲವಾರು ಅಭಿಪ್ರಾಯಗಳನ್ನು ಬಿಚ್ಚು ಮಾತಿನಲ್ಲಿ ಹೇಳಿದ್ದಾರೆ. ಅದರಲ್ಲಿ ಮುಖ್ಯವಾಗಿ ಅವರು ತಮಗೆ ಭಾರತದ ಸುದ್ದಿ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಬಗ್ಗೆ ವಿಶೇಷ ಗೌರವವಿಲ್ಲವೆಂದೂ ಹೇಳಿರುವುದು ಈ ಮಾಧ್ಯಮ ದೊರೆಗಳ ಕಣ್ಣು ಕೆಂಪು ಮಾಡಿವೆ. ಹಾಗೆ ನೋಡಿದರೆ ಅದಕ್ಕೆ ಖಟ್ಜುರವರು ಕೊಡುತ್ತಿರುವ ಕಾರಣಗಳು ಹೊಸದೇನಲ್ಲ, ಅಂಥ ಟೀಕೆಗಳನ್ನು ಈಗಾಗಲೇ ಮಾಧ್ಯಮದೊಳಗೇ ಇರುವ ಹಿರಿಯರು ಮತ್ತು ಗಣ್ಯರು ಹಲವಾರು ಸಾರಿ ಮಾಡಿದ್ದಾರೆ. ಆದರೂ ಖಟ್ಜುರವರ ಅಭಿಪ್ರಾಯಕ್ಕೆ ಮಾತ್ರ ಮಾಧ್ಯಮದ ಬಾಸ್‌ಗಳು ಉರಿಯುತ್ತಿರುವುದೇಕೆ?

ತಮಗೆ ಪಿ.ಸಾಯಿನಾಥ್ ಮತ್ತು ಅವರಂಥ ಕೆಲವು ಗೌರವಾನ್ವಿತ ಅಪವಾದಗಳನ್ನು ಹೊರತುಪಡಿಸಿ ಶೇ.80ರಷ್ಟು ಮಾಧ್ಯಮದವರ ಬಗ್ಗೆ ಗೌರವವಿಲ್ಲ ಎಂದು ಖಟ್ಜುರವರು ಹೇಳಲು ಮೂರು ಪ್ರಧಾನ ಕಾರಣಗಳನ್ನು ಕೊಟ್ಟಿದ್ದಾರೆ:

1. ದೇಶದ ಶೇ.80ರಷ್ಟು ಜನ ತೀವ್ರವಾದ ಬಡತನ, ಅನಾರೋಗ್ಯ, ಅನಕ್ಷರತೆಯಿಂದ ನರಳುತ್ತಿರಬೇಕಾದರೆ ಶೇ.80ರಷ್ಟು ಮಾಧ್ಯಮಗಳಿಗೆ ಅದು ಸುದ್ದಿಯೇ ಆಗುವುದಿಲ್ಲ, ಬದಲಿಗೆ ಲೇಡಿ ಗಾಗಾ ಶೋ, ಅಥವಾ ಫ್ಯಾಷನ್ ಶೋಗಳು ಮುಖ್ಯವಾಗುತ್ತವೆ. ಯೂರೋಪಿನಂಥ ದೇಶಗಳಲ್ಲಿ ಹಳೆಯ ಊಳಿಗಮಾನ್ಯ ಸಮಾಜವು ಆಧುನಿಕ ಕೈಗಾರಿಕಾ ಸಮಾಜವಾಗಿ ಪರಿವರ್ತನೆಯಾಗುವ ಹೊತ್ತಿನಲ್ಲಿ ಸಮಾಜವನ್ನು ಅದಕ್ಕೆ ತಯಾರು ಮಾಡುವಲ್ಲಿ ಮಾಧ್ಯಮಗಳು ಪ್ರಧಾನ ಪಾತ್ರ ವಹಿಸುತ್ತಿದ್ದವು. ಆದರೆ ಭಾರತವು ಸಂಕ್ರಮಣ ಕಾಲಘಟ್ಟದಲ್ಲಿರುವಾಗ ಮಾಧ್ಯಮಗಳು ಆ ರೀತಿಯ ಜವಾಬ್ದಾರಿಯಿಂದ ನಡೆದುಕೊಳ್ಳದೆ ಕೇವಲ ರೋಚಕತೆ ಮತ್ತು ರಂಜಕತೆಯ ಬೆನ್ನುಹತ್ತಿವೆ.
2. ಭಾರತದ ಮಾಧ್ಯಮಗಳು ಅದರಲ್ಲೂ ಎಲೆಕ್ಟ್ರಾನಿಕ್ ಮಾಧ್ಯಮಗಳು ಬಹುಸಂಸ್ಕೃತಿ ಮತ್ತು ಬಹು ಧರ್ಮೀಯವಾದ ಈ ದೇಶದಲ್ಲಿ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಬರಲು ವಹಿಸಬೇಕಾದ ಪಾತ್ರವನ್ನು ವಹಿಸದೆ ಜನರನ್ನು ಕೋಮುಗಳ ಆಧಾರದಲ್ಲಿ ಒಡೆಯುತ್ತಿವೆ. ಉದಾಹರಣೆಗೆ ಎಲ್ಲೋ ಒಂದು ಕಡೆ ಬಾಂಬ್ ಬ್ಲಾಸ್ಟ್ ಆದರೆ ಯಾರೋ ಎಸ್‌ಎಮ್‌ಎಸ್ ಅಥವಾ ಮೇಲ್ ಕಳಿಸಿದರೆ ಅದರ ಪೂರ್ವಾಪರ ತನಿಖೆ ಮಾಡದೆ ಪ್ರಕಟಿಸುತ್ತವೆ. ಅದರಲ್ಲೂ ಅದು ಮುಸ್ಲಿಂ ಸಂಘಟನೆ ಅಥವಾ ವ್ಯಕ್ತಿಗಳ ಹೆಸರು ಹೊಂದಿದ್ದರಂತೂ ಮುಗಿದೇ ಹೋಯಿತು. ಇಡೀ ಮುಸ್ಲಿಮ್ ಸಮುದಾಯವೇ ಭಯೋತ್ಪಾದಕ ಎಂಬ ಅಭಿಪ್ರಾಯ ಮೂಡುವಂತಾಗುವಲ್ಲಿ ಮಾಧ್ಯಮಗಳ ಈ ಬೇಜವಾಬ್ದಾರಿಯುತ ಪಾತ್ರ ತುಂಬಾ ದೊಡ್ಡದು. ಅದೇ ರೀತಿ ಜನತೆಯ ದೈನಂದಿನ ಕಷ್ಟಗಳು ಸಾವಿರಾರು ಇರಬೇಕಾದರೆ ಅದಕ್ಕೆ ಕಾರಣಗಳೇನು ಎಂದು ಹುಡುಕಿ ಜನರ ಅರಿವನ್ನು ಹೆಚ್ಚಿಸುವ ಬದಲು ಮಾಧ್ಯಮಗಳು ಜ್ಯೋತಿಷ್ಯ, ಭವಿಷ್ಯ, ರಾಶಿಫಲ ಎಂದು ಜನರಲ್ಲಿ ಮೌಢ್ಯವನ್ನು ಬಿತ್ತುತ್ತಿವೆ.
3. ಮೂರನೆಯದಾಗಿ ಇಂದು ಮಾಧ್ಯಮದಲ್ಲಿರುವ ಬಹು ಪಾಲು ಮಂದಿಗೆ ಈ ದೇಶದ ಇತಿಹಾಸ, ಆರ್ಥಿಕತೆ, ಸಾಹಿತ್ಯದ ಗಂಧಗಾಳಿಯೂ ಗೊತ್ತಿಲ್ಲ, ಅದರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನವನ್ನೂ ಪಡುತ್ತಿಲ್ಲ, ಇದರಿಂದಾಗಿ ಕೆಲವು ಅಪವಾದಗಳನ್ನು ಬಿಟ್ಟರೆ ನನಗೆ ಮಾಧ್ಯಮಗಳ ಬಗ್ಗೆ ವಿಶೇಷವಾದ ಗೌರವವಿಲ್ಲ ಎಂದು ನ್ಯಾ. ಖಟ್ಜು ಹೇಳಿದ್ದಾರೆ.

ಇಷ್ಟೇ ಆಗಿದ್ದರೆ ಮಾಧ್ಯಮಗಳು ಏನೋ ಮುದುಕ



ಮಾತಾಡಿಕೊಳ್ಳುತ್ತಿದ್ದಾನೆ ಎಂದು ಸುಮ್ಮನಾಗಿಬಿಡುತ್ತಿದ್ದವೇನೋ? ಈ ಹಿರಿಯ ಈಗ ಪ್ರೆಸ್ ಕೌನ್ಸಿಲ್ ಅಧ್ಯಕ್ಷ ಆಗಿರುವುದರಿಂದ ಮತ್ತು ಅದಕ್ಕೆ ಮಾಧ್ಯಮಗಳನ್ನು ಸರಿದಾರಿಯಲ್ಲಿ ನಡೆಸುವ ಜವಾಬ್ದಾರಿಯೂ ಇರುವುದರಿಂದ "ತಪ್ಪು ದಾರಿ ಹಿಡಿದಿರುವ ಶೇ.80ರಷ್ಟು ಮಾಧ್ಯಮಗಳನ್ನು ಸರಿದಾರಿಗೆ ತರಲು ಕ್ರಮಗಳನ್ನು ತೆಗೆದುಕೊಳ್ಳುವುದಾಗಿಯೂ" ಘೋಷಿಸಿಬಿಟ್ಟಿದ್ದಾರೆ. ಆ ಕ್ರಮಗಳಲ್ಲಿ

1. ಈಗ ಪ್ರೆಸ್ ಕೌನ್ಸಿಲ್ ವ್ಯಾಪ್ತಿ ಕೇವಲ ಮುದ್ರಣ



ಶಿವಸುಂದರ್ ಚಾರ್ವಾಕ

ಮಾಧ್ಯಮಗಳ ಮೇಲೆ ಮಾತ್ರವೇ ಇದ್ದು ಅದರ ಕೆಳಗೆ ಎಲೆಕ್ಟ್ರಾನಿಕ್ ಮಾಧ್ಯಮವನ್ನೂ ತರಬೇಕು ಮತ್ತು ಅದನ್ನು "ಭಾರತೀಯ ಮಾಧ್ಯಮ ಪರಿಷತ್ತು" (ಮೀಡಿಯಾ ಕೌನ್ಸಿಲ್ ಆಫ್ ಇಂಡಿಯಾ) ಎಂದು ಪುನರ್ ನಾಮಕರಣ ಮಾಡಬೇಕು.

2. ಈವರೆಗೆ ತಪ್ಪು ಎಸಗುವ ಪತ್ರಿಕೆಗಳಿಗೆ ನೋಟಿಸು ಕಳಿಸುವ, ಅಥವಾ ವಾಗ್ದಂಡನೆ ವಿಧಿಸುವ ಅಧಿಕಾರ ಮಾತ್ರ ... ಕೌನ್ಸಿಲ್‌ಗಿತ್ತು, ಮೂರಕ್ಕಿಂತ ಹೆಚ್ಚುಬಾರಿ ಅದೇ ತ... ಎಸಗುವ ಪತ್ರಿಕೆಗಳಿಗೆ ಸರ್ಕಾರಿ ಜಾಹೀ... ತಡೆಯುವ, ಅಂಚೆ ರಿಯಾಯಿತಿ ನಿಲ್ಲಿಸುವ ಇ... ಅಧಿಕಾರವೂ ಪ್ರೆಸ್ ಕೌನ್ಸಿಲ್‌ಗೆ ಇರಬೇ... ಅಭಿಪ್ರಾಯ 80ರ ದಶಕದಲ್ಲಿ ಸುಳಿದುಹೋ... ಅದರ ದುರ್ಬಳಕೆ ಆಗಬಹುದೆಂಬ ಅಪಾಯದ ... ಯಲ್ಲಿ ಆ ಯೋಚನೆಯನ್ನೇ ಕೈಬಿಡುವಂತೆ ... ಲಾಗಿತ್ತು, ಈಗ ಖಟ್ಜುರವರು ತಪ್ಪು ಮಾಡುವ ... ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಸರ್ಕಾರಿ ಜಾಹಿ... ತನ್ನು ನಿಲ್ಲಿಸುವ, ಸರ್ಕಾರದ ಎಲ್ಲಾ ರಿಯಾಯಿತಿ... ಹಿಂಪಡೆಯುವ ಮಾತ್ರವಲ್ಲದೆ ಲೈಸೆನ್ಸ್ ... ರದ್ದುಪಡಿಸುವ ಅಧಿಕಾರವನ್ನೂ ಕೊಡಬೇಕೆ... ಆಗ್ರಹಿಸುತ್ತಿದ್ದಾರೆ. ಹಾಗೂ ಆ ನಿಟ್ಟಿನಲ್ಲಿ ಸರ್ಕಾರಕ್ಕೆ ... ಪ್ರತಿಪಕ್ಷಗಳಿಗೆ ಪತ್ರವನ್ನೂ ಬರೆದು ಈ ಪ್ರಯತ್ನ... ಚುರುಕುಗೊಳಿಸಿದ್ದಾರೆ.

ಮಾಧ್ಯಮ ದೊರೆಗಳನ್ನು ಕಂಗೆಡಿಸಿರುವುದು ... ವಿಷಯವೇ. ಸರ್ಕಾರ ಇಂಥ ಅಧಿಕಾರವನ್ನು ಪರಿ... ಕೊಡುವುದು, ಪ್ರತಿಪಕ್ಷಗಳು ಸರ್ಕಾರದ ಕ್ರಮ... ಬೆಂಬಲಿಸುವುದು ಇವೆಲ್ಲಾ ಸದ್ಯಕ್ಕೆ ಆಗದಿರುವ ಮಾ... ರಾಜಕಾರಣದಲ್ಲಿ ಕಠಿಣ ಲೋಕಪಾಲ ಮಸೂದೆ... ರಾಜಕಾರಣಿಗಳು ಒಪ್ಪುವುದಿಲ್ಲ, ಹಾಗೆಯೇ ಮಾ... ಕ್ಷೇತ್ರದಲ್ಲಿ ಇಂಥಾ ಕಠಿಣ ನಿಯಂತ್ರಣ ಕ್ರಮಗಳನ್ನು ಮಾ... ದೊರೆಗಳು ಒಪ್ಪುವುದಿಲ್ಲ, ಆ ವಿಷಯದಲ್ಲಿ ಮಾ... ಉದ್ಯಮಪತಿಗಳು ಮತ್ತು ರಾಜಕಾರಣಿಗಳು ಭಾ... ಭಾಯೀ.

ಆದರೆ ಅದಕ್ಕೆ 'ಮಾಧ್ಯಮ ಸ್ವಾತಂತ್ರ್ಯ' ಎಂಬ ಸು... ಮುಖವಾಡವನ್ನು ಮತ್ತು "ಸ್ವ ನಿಯಂತ್ರಣ"ವೆಂಬ ಸು... ಆತ್ಮವಂಚನೆಗಳನ್ನು ಮಾಡಿಕೊಳ್ಳುತ್ತಾರೆ ಅಷ್ಟೆ.

ಅದಿರಲಿ, ಮಾಧ್ಯಮಗಳ ಬಗ್ಗೆ ಖಟ್ಜುರವರು ಮಾ... ಟೀಕೆಗಳು ತಪ್ಪು ಎಂದು ಹೇಳಲು ಯಾರಿಗಾದರೂ ಸಾ... ಈ ದೇಶದಲ್ಲಿ ಜನರ ದೈನಂದಿನ ಸಮಸ್ಯೆಗ... ದಿಕ್ಕುತಪ್ಪಿಸಲು ರೋಚಕತೆ, ರಂಜಕತೆ, ಕೋ... ಭಾವನೆ ಮತ್ತು ಮೌಢ್ಯಗಳನ್ನು ಬಿತ್ತುವು... ಮಾಧ್ಯಮಗಳ ಪ್ರಧಾನ ಪಾತ್ರವಿಲ್ಲವೇ? ಬದುಕಿನ ಮೇಲೆ ಮತ್ತು ಚಿಂತನೆಯ ಮೇಲೆ ನೇರವಾದ ಪ್ರಭಾವ ಬೀರುವ ಮಾಧ್ಯಮಗಳು ... ಚಾರದಿಂದ ನಡೆದುಕೊಂಡರೆ ಅದರ ನೇರ ಬ... ಗಳಾಗುವುದು ಜನರೇ ಅಲ್ಲವೇ? ಹೀಗಾಗಿ ಅದಕ್ಕೆ ... ನಿಯಂತ್ರಣ ಬೇಡವೇ?

ಹಾಗೆಯೇ ಮತ್ತೊಂದು ಮುಖ್ಯ ಪ್ರಶ್ನೆಯನ್ನು ... ಸಂದರ್ಭದಲ್ಲಿ ಹಾಕಿಕೊಳ್ಳಲೇ ಬೇಕು.

...1

ನೋ ಕಾಮೆಂಟ್ಸ್

"ಭಾರತ ಸರ್ಕಾರದ ಸರ್ವಶಿಕ್ಷಾ ಅಭಿಯಾನದ ಡಿಐಎಸ್‌ಇ (ಡಿಸ್ಟ್ರಿಕ್ಟ್ ಇನ್ಫರ್ಮೇಷನ್ ಆನ್ ಸ್ಕೂಲ್ ಎಜುಕೇಷನ್) ಕೊಟ್ಟಿರುವ 2010-11 ನೇ ಸಾಲಿನ ಅಂಕಿ ಅಂಶದ ಪ್ರಕಾರ ಕರ್ನಾಟಕದಲ್ಲಿ ಐದಕ್ಕಿಂತ ಕಡಿಮೆ ಹಾಜರಾತಿ ಇರುವ 838, 10ಕ್ಕಿಂತ ಕಡಿಮೆ ಹಾಜರಾತಿ ಇರುವ 2945 ಮತ್ತು 15ಕ್ಕಿಂತ ಕಡಿಮೆ ಹಾಜರಾತಿ ಇರುವ 4564 ಪ್ರಾಥಮಿಕ ಶಾಲೆಗಳಿವೆ. ಐದಕ್ಕಿಂತ ಕಡಿಮೆ ಹಾಜರಾತಿ ಇರುವ ಶಾಲೆಗಳ ಮರಣಶಾಸನಕ್ಕೆ ಸರ್ಕಾರ ಈಗಾಗಲೇ ಹಸಿರು ನಿಶಾನೆ ತೋರಿದೆ. ಪ್ರಸಕ್ತ ಸಾಲಿನಲ್ಲಿ 10ಕ್ಕಿಂತ ಕಡಿಮೆ ಹಾಜರಾತಿ ಇರುವ ಶಾಲೆಗಳನ್ನು ಮುಚ್ಚಲೂ ತಯಾರಿ ನಡೆದಿದೆ. ಮುಂದಿನ ವರ್ಷ 15ಕ್ಕಿಂತ ಕಡಿಮೆ ಇರುವ ಶಾಲೆಗಳೋ?"

\- ವರದಿ




"ಶಿಕ್ಷಕರು ವಿಜ್ಞಾನ ಮತ್ತು ತಂತ್ರಜ್ಞಾನ ಬೋಧಿಸುವಾಗ ಕನ್ನಡವನ್ನು ಬಳಸುತ್ತಾ ಬಂದಿದ್ದರೆ ಇಂದು ಕನ್ನಡ ಇಂಗ್ಲಿಷ್ ಮಾಧ್ಯಮವೆಂಬ ಜಗಳವೇ ಇರುತ್ತಿರಲಿಲ್ಲ, ಶಾಲೆಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎಂಬ ಎರಡು ವಿಭಾಗಗಳು ಇರಲೇಕೂಡದು. ಎಲ್ಲರೂ ಒಟ್ಟಾಗಿಯೇ ಶಿಕ್ಷಣ ಕಲಿಯಬೇಕು. ಇಂಗ್ಲಿಷ್ ಕಲಿಸಬೇಕಾದರೆ ಎರಡು ತರಗತಿಗಳನ್ನು ಹೆಚ್ಚುವರಿಯಾಗಿ ನಡೆಸಬೇಕು. ಶಿಕ್ಷಕರು ವಿಜ್ಞಾನವನ್ನು ಕನ್ನಡದಲ್ಲಿ ಬೋಧಿಸಬೇಕು. ಪಾರಿಭಾಷಿಕ ಶಬ್ದಗಳ ಬಳಕೆಯನ್ನು ಇಂಗ್ಲಿಷ್‌ನಲ್ಲೇ ಮಾಡಬೇಕು. ಆಗ ವಿದ್ಯಾರ್ಥಿಗಳಿಗೆ ಕನ್ನಡ ಮತ್ತು ಇಂಗ್ಲಿಷ್ ಎರಡನ್ನೂ ಕಲಿಸಬಹುದು. ಆಗ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳ ಗೊಂದಲವೇ ಇರುವುದಿಲ್ಲ."

\- ಜಿ. ವೆಂಕಟಸುಬ್ಬಯ್ಯ

"ಭ್ರಷ್ಟಾಚಾರ ವಿರೋಧೀ ಹೋರಾಟದಲ್ಲಿ ಸರ್ಕಾರದ ಮತ್ತು ಜನರ ಹಣ ಇದ್ದರೆ ಮಾತ್ರ ಜನಲೋಕಪಾಲ ವ್ಯಾಪ್ತಿಗೆ ಬರುವುದೆಂದು ಅಣ್ಣಾ ಹಜಾರೆಯವರ ವಾದ. ಆದರೆ ಸ್ಟಾಕ್ ಎಕ್ಸ್‌ಚೇಂಜ್ ಮಾರ್ಕೆಟ್‌ನಲ್ಲಿ ದಾಖಲಾಗಿರುವ ಎಲ್ಲಾ ಬೃಹತ್ ಖಾಸಗಿ ಕಾರ್ಪೋರೇಟ್ ಕಂಪನಿಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಜನರ ಮತ್ತು ಸರ್ಕಾರದ ದುಡ್ಡನ್ನು ಕಬಳಿಸುತ್ತಿವೆ. ಉದಾಹರಣೆಗೆ ಈ ಎಲ್ಲಾ ಕಂಪನಿಗಳು ಸರ್ಕಾರಿ ಪೆನ್ಷನ್ ಫಂಡಿನಿಂದ, ವಿಮಾ ಕಂಪನಿ, ಸರ್ಕಾರೀ ಬ್ಯಾಂಕುಗಳಿಂದ ಬಂಡವಾಳವನ್ನು ಸಂಗ್ರಹಿಸುತ್ತವೆ. ಅಥವಾ ನೇರವಾಗಿ ಬಂಡವಾಳ ಮಾರುಕಟ್ಟೆಯಲ್ಲಿ ಜನರಿಂದ ಶೇರು ಹಣ ಸಂಗ್ರಹಿಸುತ್ತವೆ. ಅಂದಮೇಲೆ ಏಕೆ ಅವರನ್ನು ಲೋಕಪಾಲ್ ವ್ಯಾಪ್ತಿಗೆ ತರುತ್ತಿಲ್ಲ?"


\- ಗೌತಮ್ ನವಲಾಕ, ಚಿಂತಕ

ನಂಬಿದ್ರೆನಂಬಿ ಬಿಟ್ರೆಬಿಡಿ




"'ಕೃಷ್ಣಾ ಮೇಲ್ದಂಡೆ' ಯೋಜನೆ ತುಂಡುಗುತ್ತಿಗೆ ಕಾಮಗಾರಿ ಅವ್ಯವಹಾರದ ಬಗ್ಗೆ ತನಿಖೆ ನಡೆಸುತ್ತಿರುವ ಸಿಐಡಿ ಡಿಐಜಿ ಶಂಕರ್ ಬಿದರಿಯವರನ್ನು ಭೇಟಿ ಮಾಡಿದ್ದು ನಿಜ. ಕಾಮಗಾರಿ ಕುರಿತು ಸ್ಪಷ್ಟೀಕರಣ ಸಂಬಂಧ ಭೇಟಿ ನೀಡಿದ್ದೆ, ಮಾಧ್ಯಮಗಳು ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ, ನಾನೊಬ್ಬ ಜನಪ್ರತಿನಿಧಿಯಾಗಿ ಎಷ್ಟೋ ಅಧಿಕಾರಿಗಳನ್ನು ಭೇಟಿಯಾಗುತ್ತೇನೆ. ಹಾಗೆಯೇ ಅವರನ್ನು ಭೇಟಿಯಾಗಿದ್ದೆ, ಅಷ್ಟೆ."

\- ಎಚ್.ಡಿ. ಕುಮಾರಸ್ವಾಮಿ



"ನನಗೆ ಸಚಿವ ಸ್ಥಾನ ನೀಡದಿದ್ದರೂ ಚಿಂತೆ ಇಲ್ಲ, ಕಡೆಯ ಪಕ್ಷ ಯಡಿಯೂರಪ್ಪನವರ ಬಂಧನದ ವೇಳೆ ಎಲ್ಲಾ ಮುಖಂಡರೂ ಜೈಲಿಗೆ ಮತ್ತು ಆಸ್ಪತ್ರೆಗೆ ಹೋಗಿ ಮಾತಾಡಿಸಿಕೊಂಡು ಬಂದಂತೆ ಜನಾರ್ದನ ರೆಡ್ಡಿ ಬಂಧನದ ನಂತರ ಒಬ್ಬರೂ ನಮಗೆ ಸಾಂತ್ವನ ಹೇಳಿಲ್ಲ, ಅಷ್ಟೇ ಅಲ್ಲ, ಅವರನ್ನು ಭೇಟಿ ಮಾಡಲೂ ಹೋಗಿಲ್ಲ, ಅವರ ಮನೆಯವರನ್ನಾದರೂ ಭೇಟಿ ಮಾಡುವ ಸೌಜನ್ಯವನ್ನೂ ತೋರಿಲ್ಲ, ಅಗತ್ಯವಿದ್ದಾಗ ಮಾತ್ರ ನಮ್ಮನ್ನು ಬಳಸಿಕೊಂಡರು ಈಗ ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿದೆ."

\- ಶ್ರೀರಾಮುಲು



"ಕಾಂಗ್ರೆಸ್ಸನ್ನು ಹೊರತುಪಡಿಸಿ ಸ್ಪರ್ಧೆಯಲ್ಲಿರುವ 44 ಜನರಲ್ಲಿ ಯಾರಿಗೆ ಬೇಕಾದರೂ ಓಟು ಕೊಡಿ. ಅವರು ಭ್ರಷ್ಟರೋ ಅಲ್ಲವೋ ಎಂಬ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಅಕಸ್ಮಾತ್ ಅವರು ಭ್ರಷ್ಟರಾಗಿದ್ದರೆ ಅವರನ್ನು ಜನಲೋಕ್‌ಪಾಲ್ ಕಾಯಿದೆ ಜೈಲಿಗೆ ಕಳಿಸುತ್ತದೆ."

\- ಹಿಸ್ಸಾರ್ ಚುನಾವಣೆಯಲ್ಲಿ ಅಣ್ಣಾ ತಂಡದ ಅರವಿಂದ್ ಕೇಜ್ರಿವಾಲ್

ಅಂಟಾರ್ಟಿಕಾ ಎಂಬ ಮಾಯಾ ಲೋಕದಲ್ಲಿದ್ದ ಕನ್ವಲ್



• ಗೌರಿ ಲಂಕೇಶ್
editorlankesh@gmail.com

ಭೂಮಿಯ ದಕ್ಷಿಣ ಗೋಳದಲ್ಲಿರುವ ಥಂಡಿ ಥಂಡಿ ...ರ್ಟಿಕಾದಲ್ಲಿ ಮನುಷ್ಯರ ಜೀವನ ಹೇಗಿರುತ್ತೆ? ವರ್ಷಕ್ಕೆ ...ತಿಂಗಳ ಕಾಲ ಹಗಲು ಮತ್ತು ಆರು ತಿಂಗಳ ಕಾಲ ...ಇರುವ, ಪ್ರಪಂಚದ ಶೇಕಡಾ 90 ರಷ್ಟು ಮಂಜುಗಡ್ಡೆ ...ವ, ಅತಿ ಹೆಚ್ಚು ಗಾಳಿ ಬೀಸುವ, ಅತಿ ಶುಷ್ಕ ಪ್ರದೇಶವಾದ ...ಒಂದು ರೀತಿಯಲ್ಲಿ ಮರುಭೂಮಿಯಾದ ...ರ್ಟಿಕಾ ಖಂಡದಲ್ಲಿ ಜನ ಹೇಗೆ ವಾಸಿಸುತ್ತಾರೆ?

...ದ್ಯಾಕೋ ಈ ವಿಷಯದ ಬಗ್ಗೆ ನನಗೆ ...ಲಿನಿಂದಲೂ ಒಂದು ರೀತಿಯ ...ಮ. ಹಾಗೆಯೇ ...ಮರೀನ್(ಜಲಾಂತರ್ಗಾಮಿ ...ಲ್ಲಿ ಹೇಗೆ ಜನ ಜೀವಿಸುತ್ತಾರೆ ...ಂದರ ಬಗ್ಗೆಯೂ ನನಗೆ ...ರ ಕುತೂಹಲ. ನಾನು ...ತ್ರಿಕೆಯಲ್ಲಿ ವರದಿಗಾರ್ತಿ ...ದ್ದಾಗ ಒಮ್ಮೆ ಒಂದು ...ಮರೀನ್‌ಅನ್ನು ಹೊಕ್ಕು ಅದನ್ನು ...ಡುವ, ಅದರಲ್ಲಿ ಕಾಲ ...ಯುವ ಅವಕಾಶದಿಂದ ...ದರಲ್ಲೇ ವಂಚಿತಳಾಗಿದ್ದು ನನ್ನಲ್ಲಿ ...ಷ್ಟೂ ಬೇಸರ ಮೂಡಿಸುತ್ತಿದೆ.


...ಒಮ್ಮೆ ಬೆಂಗಳೂರಿನ ...ಮಾನ ಇಲಾಖೆಗೆ ...ಸೇರಿಕೊಂಡಿದ್ದ ಅಧಿಕಾರಿ ಒಬ್ಬರು ...ರ್ಟಿಕಾದಲ್ಲಿ ಹಲವು ತಿಂಗಳನ್ನು ಕಳೆದಿದ್ದರು. ...ನ್ನು ನಾನು ಭೇಟಿ ಆದಾಗ ಅವರು ಆ ಖಂಡದಲ್ಲಿನ ...ಅನುಭವಗಳನ್ನು, ಅಲ್ಲಿನ ಪರಿಸ್ಥಿತಿಯನ್ನು, ...ವನಶೈಲಿಯನ್ನು ವಿವರಿಸಿದ್ದರು. ಅವೆಲ್ಲ ತುಂಬಾ ...ಹಲಕಾರಿಯಾಗಿದ್ದವು.

...ತ್ತೀಚೆಗೆ 'ಓಪನ್' ಎಂಬ ಪತ್ರಿಕೆಯ ವೆಬ್‌ಸೈಟಿನಲ್ಲಿದ್ದ ...ಲೇಖನ ನನ್ನ ಗಮನ ಸೆಳೆಯಿತು. ಅದು ಕನ್ವಲ್ ...ಎಂಬ ಮಹಿಳಾ ವೈದ್ಯರು ಅಂಟಾರ್ಟಿಕಾದಲ್ಲಿ 16 ...ಳನ್ನು ಕಳೆದುದ್ದರ ಕುರಿತ ಲೇಖನ. ದೆಹಲಿಯಲ್ಲಿ ಭಾರತ ...ರದ ಆರೋಗ್ಯ ಇಲಾಖೆಯಲ್ಲಿ ವೈದ್ಯರಾಗಿದ್ದ ಕನ್ವಲ್ ...ರು ಅಂಟಾರ್ಟಿಕಾದ ಮೇಲೆ ಹೆಜ್ಜೆ ಇಟ್ಟು ಅಲ್ಲಿ ...ಳಾನುಗಟ್ಟಲೆ ವಾಸಿಸಿದ ಪ್ರಥಮ ಭಾರತೀಯ ಮಹಿಳೆ.

...ಒಮ್ಮೆ ಏನಾಯಿತೆಂದರೆ ದೆಹಲಿಯಲ್ಲಿರುವ ಕೇಂದ್ರ ...ರೋಗ್ಯ ಇಲಾಖೆಗೆ ಬಂದ ಒಂದು ಸುತ್ತೋಲೆಯು ...ಟಾರ್ಟಿಕಾದಲ್ಲಿರುವ ಭಾರತೀಯ ಶಿಬಿರದಲ್ಲಿ ಸೇವೆ ...ಲು ಆಸಕ್ತಿ ಇರುವವರು ಅರ್ಜಿ ಸಲ್ಲಿಸಬಹುದೆಂದು ...ತು. ಆ ಸುತ್ತೋಲೆಯಲ್ಲಿ ಅರ್ಜಿ ಸಲ್ಲಿಸುವವರಿಗೆ ...ಯಸ್ಸು ಮತ್ತು ಲಿಂಗ ಕುರಿತಂತೆ ವಿಶೇಷವಾದ ...ಬಂಧನೆಗಳಿರಲಿಲ್ಲವಾದ್ದರಿಂದ ಕನ್ವಲ್ ಅವರು ಸುಮ್ಮನೆ ...ದು ಅರ್ಜಿ ಗುಜರಾಯಿಸಿದರು. ಆಗ ಅವರಿಗೆ 51 ವರ್ಷ ...ಯಸ್ಸಾಗಿತ್ತು ಮತ್ತು ಅವರು ಮಹಿಳೆ ಆಗಿದ್ದರಿಂದ ತನಗೆ ...ಟಾರ್ಟಿಕಾ ಯಾತ್ರೆಗೆ ಆಹ್ವಾನ ಬರಲಾರದೆಂದೇ ...ದ್ದರು ಮತ್ತು ಆನಂತರ ತಾವು ಸಲ್ಲಿಸಿದ್ದ ಅರ್ಜಿಯ ಬಗ್ಗೆ ...ತೀ ಬಿಟ್ಟಿದ್ದರು.

ಇದಾದ ಹಲವಾರು ತಿಂಗಳ ನಂತರ ಒಂದು ದಿನ ...ದ್ದಂತೆ ಕನ್ವಲ್ ಅವರಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ...ಾಲಯದ ಸಮುದ್ರ ಅಭಿವೃದ್ಧಿ ಇಲಾಖೆಯಿಂದ ಕರೆ ...ತು. ಮಾತ್ರವಲ್ಲ ಮಾರನೆ ದಿನವೇ ಅವರು 16 ತಿಂಗಳ ...ಅಂಟಾರ್ಟಿಕಾದಲ್ಲಿ ಕಳೆಯಲು ಹೊರಡಬೇಕು ಎಂದು ...ರಿಗೆ ಸೂಚಿಸಲಾಯಿತು. ಅಂದರೆ ಕೇವಲ 24 ಗಂಟೆ ...ಲ್ಲಿ ಅವರು ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು, ಇತ್ತ ...ರ್ ಅವರು ಪಾಸ್‌ಪೋರ್ಟ್, ವೀಸಾ ಇತ್ಯಾದಿಗಳನ್ನು ಸಿದ್ಧ ಪಡಿಸಿಕೊಳ್ಳುತ್ತಿದ್ದರೆ ಅತ್ತ ಚಂಡಿಗಢದಲ್ಲಿದ್ದ ಅವರ ಪತಿ ಮತ್ತು ಮಕ್ಕಳು ಅವರಿಗೆ ಅಂಟಾರ್ಟಿಕಾದ ಚಳಿಯಲ್ಲಿ ಬೇಕಾಗುವ ಬಟ್ಟೆ ಬರೆಗಳನ್ನು ಖರೀದಿಸಲಾರಂಭಿಸಿದರು.

ಮಾರನೆ ದಿನವೇ ಮುಂಬೈಗೆ ಹಾರಿದ ಕನ್ವಲ್ ಅವರು ಅಂಟಾರ್ಟಿಕಾಕ್ಕೆ ತಮ್ಮೊಂದಿಗೆ ಹೋಗಲಿರುವ ತಂಡದ ಇತರೆ ಸದಸ್ಯರನ್ನು ಭೇಟಿ ಆದರು. ಆದರೆ ಕನ್ವಲ್ ಅವರಿಗೆ ಒಂದು ದಿನದ ಸಮಯ ನೀಡಲಾಗಿತ್ತಾದರೂ ತಂಡದ ಇತರರಿಗೆ ಅಷ್ಟೊತ್ತಿಗಾಗಲೇ ಅಂಟಾರ್ಟಿಕಾದಲ್ಲಿ ಕಾಲ ಕಳೆಯುವ ಬಗ್ಗೆ



ಕನ್ವಲ್ ವಿಲ್ಕು

ತರಬೇತಿ ನೀಡಲಾಗಿತ್ತು. ಆ ತಂಡದಲ್ಲಿ ಒಟ್ಟು 50 ಜನರಿದ್ದು ಅವರಲ್ಲಿ 26 ಜನ ಬೇಸಿಗೆಯ ನಾಲ್ಕು ತಿಂಗಳನ್ನು ಮಾತ್ರ ಅಂಟಾರ್ಟಿಕಾದಲ್ಲಿ ಕಳೆಯುವವರಾಗಿದ್ದು, ಕನ್ವಲ್ ಅವರನ್ನು ಸೇರಿಸಿದಂತೆ ಇತರೆ 24 ಜನ ಆ ಮರುಭೂಮಿಯಲ್ಲಿ ಒಟ್ಟು 16 ತಿಂಗಳನ್ನು ಕಳೆಯಬೇಕಿತ್ತು. ಕನ್ವಲ್ ಅವರು ಆ ತಂಡದಲ್ಲಿದ್ದ ಏಕೈಕ ಮಹಿಳೆ ಆಗಿದ್ದರಲ್ಲದೆ ಅವರಿಗೆ ಇತರರಿಗಿಂತ ಹೆಚ್ಚು ವಯಸ್ಸಾಗಿತ್ತು. ಮುಂಬೈಯಲ್ಲಿ ತಂಡದ ಎಲ್ಲರಿಗೆ ಥಂಡಿ ವಾತಾವರಣದಲ್ಲಿ ಅಗತ್ಯವಾದ ಗ್ಲೌವ್ ಮತ್ತು ಶೂ ಸಮೇತ ಇಡೀ ಉಡಿಗೆತೊಡಿಗೆಗಳನ್ನು ನೀಡಲಾಯಿತು.

ದೆಹಲಿಯಿಂದ ಮುಂಬೈಗೆ, ಮುಂಬೈನಿಂದ ದಕ್ಷಿಣ ಆಫ್ರಿಕಾದ ಕೇಪ್ ಟೌನಿಗೆ ಇಡೀ ತಂಡ ಹೋಯಿತು. ಕೇಪ್ ಟೌನಿನಿಂದ ಮಂಜುಗಡ್ಡೆಯನ್ನು ಕುಯ್ಯುವ ವಿಶೇಷ ಹಡಗಿನಲ್ಲಿ ಪ್ರಯಾಣ ಮುಂದುವರೆಯಿತು. ಅಂಟಾರ್ಟಿಕಾವನ್ನು ತಲುಪಲು ಹಡಗು 15 ದಿನ ತೆಗೆದುಕೊಂಡಿತು. ಮತ್ತೆ ಅಲ್ಲಿಂದ ಮೈತ್ರಿ ಎಂದು ಹೆಸರಿಟ್ಟಿದ್ದ ಭಾರತದ ಶಿಬಿರಕ್ಕೆ ಹೆಲಿಕಾಪ್ಟರ್‌ನಲ್ಲಿ ತಂಡ ಹೋಯಿತು.

ನಾಲ್ಕು ತಿಂಗಳ ಕಾಲಕ್ಕೆ ಬಂದಿದ್ದ ಬೇಸಿಗೆ ತಂಡದಲ್ಲಿ ಹೆಚ್ಚಾಗಿ ವಿಜ್ಞಾನಿಗಳಿದ್ದರೆ, ದೀರ್ಘಕಾಲ ಅಂಟಾರ್ಟಿಕಾದಲ್ಲಿ ತಂಗಲಿದ್ದ ತಂಡದಲ್ಲಿ ಸೈನ್ಯಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅವರೊಂದಿಗೆ ಹಿಮ ವಿಜ್ಞಾನಿಗಳು ಮತ್ತು ಭೂವಿಜ್ಞಾನಿಗಳಲ್ಲದೆ ಎಲ್ಲರ ವೈದ್ಯೆಯಾಗಿ ಕನ್ವಲ್ ಅವರನ್ನು ಕರೆದುಕೊಂಡು ಹೋಗಲಾಗಿತ್ತು.

ಮೈತ್ರಿ ಎಂಬ ಭಾರತದ ಶಿಬಿರದಲ್ಲಿ ಮಂಜುಗಡ್ಡೆಯೊಳಗೆ ರಂಧ್ರಗಳನ್ನು ಕೊರೆದು ಮೊದಲೇ ತಯಾರಿಸಿದ್ದ ವಿಶೇಷ ಫೈಬರ್‌ಅನ್ನು ಉಪಯೋಗಿಸಿ ಎರಡು ರೀತಿಯ ವಸತಿ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು. ಬೇಸಿಗೆ ತಂಡಕ್ಕೆ ಕೆಲಮಹಡಿಯಲ್ಲಿ ಕಚೇರಿ ಮತ್ತು ಸಂಶೋಧನಾ ಸ್ಥಳಗಳಿದ್ದು ಮೊದಲನೆ ಮಹಡಿಯಲ್ಲಿ ಮಲಗಲು ಸ್ಥಳವಿತ್ತು. ಆ ಸ್ಥಳ ಅದೆಷ್ಟು ಚಿಕ್ಕದಾಗಿತ್ತೆಂದರೆ ಪ್ರೌಢರು ಯಾರೂ ಅದರೊಳಗೆ ನಿಲ್ಲಲೂ ಜಾಗವಿರಲಿಲ್ಲ. ಆದ್ದರಿಂದ ಎಲ್ಲರೂ ಕೂತುಕೊಂಡೇ ಮಲಗುವ ಸ್ಥಳವನ್ನು ಪ್ರವೇಶಿಸಬೇಕಿತ್ತು.

ಅಂಟಾರ್ಟಿಕಾದಲ್ಲಿ ದೀರ್ಘಕಾಲ ಉಳಿಯಲಿರುವ ತಂಡಕ್ಕೆ ಚಿಕ್ಕಪುಟ್ಟ ಕೊಠಡಿಗಳಿದ್ದು ಅದರೊಳಗೆ ನಿಲ್ಲುವಷ್ಟು ಜಾಗವಿತ್ತು. ಆದರೆ ಇಡೀ ಶಿಬಿರದಲ್ಲಿ ಸ್ನಾನ ಮಾಡಲು ಎಲ್ಲೂ ಒಂದು ಬಚ್ಚಲುಮನೆ ಇರಲಿಲ್ಲ. ಆಗ ಕನ್ವಲ್ ಅವರಿಗೆಂದು ಒಂದು ಸ್ನಾನದ ಕೊಠಡಿಯನ್ನು ತಂಡದ ಇತರರು ಸಿದ್ಧಪಡಿಸಿದರು. ಕನ್ವಲ್ ಅವರು ಹೇಳುವಂತೆ "ಅಂಟಾರ್ಟಿಕಾದಲ್ಲಿ- 600-700 ಸೆಂಟಿಗ್ರೇಡ್ ಚಳಿಯಲ್ಲೂ ಭಾರತದ ತಂಡದವರು ಪ್ರತಿದಿನ ಸ್ನಾನ ಮಾಡುತ್ತಿದ್ದೆವು. ಬೇಸಿಗೆಯಲ್ಲಿ ಅಂಟಾರ್ಟಿಕಾದಲ್ಲಿ ಸೆಖೆ ಇರುವುದಿಲ್ಲ, ಅಲ್ಲಿ ಬೇಸಿಗೆಯಲ್ಲೂ -150 ಸೆಂಟಿಗ್ರೇಡ್ ಚಳಿ ಇರುತ್ತದೆ. ಆದರೂ ನಾವೆಲ್ಲರು ಸ್ನಾನ ಮಾಡುತ್ತಿದ್ದೆವು. ಆದರೆ ನಮ್ಮ ಶಿಬಿರದ ಹತ್ತಿರವೇ ಇದ್ದ ರಷ್ಯನ್ನರ ಶಿಬಿರದಲ್ಲಿದ್ದ ಜನ ತಿಂಗಳಾನುಗಟ್ಟಲೆ ಸ್ನಾನವನ್ನೇ ಮಾಡುತ್ತಿರಲಿಲ್ಲ, ಅವರ ಗಬ್ಬು ವಾಸನೆ ದೂರದಿಂದಲೇ ನಮ್ಮನ್ನು ಅಪ್ಪಳಿಸುತ್ತಿತ್ತು."

ಇನ್ನು ಶಿಬಿರದಲ್ಲಿದ್ದ ಟಾಯ್ಲೆಟ್ ಕತೆಯನ್ನಂತೂ ಕೇಳುವುದೇ ಬೇಡ. ಅಲ್ಲಿ ಟಾಯ್ಲೆಟ್ ಅಂದರೆ ಒಂದು ದೊಡ್ಡ ರಂಧ್ರವಿದ್ದ ಒಂದು ಪುಟ್ಟ ಕೊಠಡಿ. ಅದರೊಳಗೆ ನೀರು, ಇತ್ಯಾದಿಯ ವ್ಯವಸ್ಥೆ ಇಲ್ಲ. ಅಷ್ಟೇ ಅಲ್ಲ, ಅಂಟಾರ್ಟಿಕಾ ಒಪ್ಪಂದದ ಪ್ರಕಾರ ಯಾರೂ ಆ ಖಂಡದಲ್ಲಿ ಯಾವ ತ್ಯಾಜ್ಯವನ್ನೂ ಬಿಡಬಾರದು. ಆದ್ದರಿಂದ ಆ ಟಾಯ್ಲೆಟ್‌ನಲ್ಲಿ ಎಲ್ಲರ ಮೂತ್ರ ಒಂದು ಡಬ್ಬದಲ್ಲಿ ಸಂಗ್ರಹವಾಗುತ್ತಿದ್ದು ಪ್ರತಿ ದಿನ ತಂಡದ ಒಬ್ಬರು ಆ ಡಬ್ಬದಲ್ಲಿದ್ದ ಎಲ್ಲವನ್ನೂ ಹೊರತೆಗೆದು ಸುಡಬೇಕು ಮತ್ತು ಹಾಗೆ ಸುಟ್ಟ ನಂತರ ಉಳಿದ ಬೂದಿಯನ್ನು ಸಂಗ್ರಹಿಸಿ ತಂಡವು ತನ್ನ ದೇಶಕ್ಕೆ ವಾಪಸ್ ಬರುವಾಗ ಆ ಬೂದಿಯನ್ನು ತಮ್ಮ ದೇಶಕ್ಕೆ ವಾಪಸ್ ತರಬೇಕು.

ತಂಡದ ಇತರರಿಗಿಂತ ವಯಸ್ಸಿನಲ್ಲಿ ಹಿರಿಯರಾಗಿದ್ದ, ಮತ್ತು ಇಡೀ ತಂಡದಲ್ಲಿ ಏಕೈಕ ಮಹಿಳೆ ಆಗಿದ್ದ ಕನ್ವಲ್ ಅವರು ಸಹಜವಾಗಿಯೇ ಹಲವಾರು ಸಮಸ್ಯೆಗಳನ್ನು ಆ ಶಿಬಿರದಲ್ಲಿ ಎದುರಿಸಿದರು. ಅವರೇ ಹೇಳುವಂತೆ:

"ಆರಂಭದ ದಿನಗಳಲ್ಲಿ ನನ್ನ ಇರುವಿಕೆಯೇ ತಂಡದ ಪುರುಷರಿಗೆ ದೊಡ್ಡ ಸಮಸ್ಯೆ ಆಗಿತ್ತು. ಅವರೆಲ್ಲ ನೆಮ್ಮದಿಯಿಂದ ಕುಡಿಯಲು ನಾನು ಅಡ್ಡಿ ಆಗಿದ್ದೇನೆ ಎಂದು ಅವರು ಭಾವಿಸಿದ್ದರು. ನನಗೆ ಅವರ ಕುಡಿತದಿಂದ ಯಾವ ಸಮಸ್ಯೆಯೂ ಇರಲಿಲ್ಲ, ಆದರೆ ನಮ್ಮ ತಂಡದ ನೇತೃತ್ವ ವಹಿಸಿದ್ದವರು ಮಹಿಳೆಯೊಬ್ಬರು ತಮ್ಮೊಂದಿಗೆ ಇರುವುದರಿಂದ ಎಲ್ಲರೂ ತಮ್ಮ ವರ್ತನೆ ಮೇಲೆ ನಿಗಾ ಇಟ್ಟಿರಬೇಕೆಂದು ಎಲ್ಲರನ್ನೂ ಎಚ್ಚರಿಸಿದ್ದು ಅವರೆಲ್ಲರಲ್ಲಿ ನನ್ನ ಬಗ್ಗೆ ಅಸಮಾಧಾನ ಹೆಚ್ಚಾಗಲು ಕಾರಣವಾಯಿತು. ಅವರೆಲ್ಲರು ನನ್ನ ವಯಸ್ಸಿನ ಬಗ್ಗೆ, ಇಂತಹ ಶಿಬಿರಗಳಲ್ಲಿ ನನಗೆ ಅನುಭವ ಇಲ್ಲದಿದ್ದುದರ ಬಗ್ಗೆ ಲೇವಡಿ ಮಾಡುತ್ತಿದ್ದರು. ಅಷ್ಟೇ ಅಲ್ಲ, ನನ್ನಿಂದ ಅಲ್ಲಿ ಬಹಳ ದಿನ ಇರುವುದು ಸಾಧ್ಯವಿಲ್ಲವೆಂದೂ ಮೂರು ತಿಂಗಳೊಳಗೆ ನಾನು ಏರೋಪ್ಲೇನ್ ಹತ್ತಿ ವಾಪಸ್ ಓಡಿಹೋಗುತ್ತೇನೆಂದೂ ಕೀಟಲೆ ಮಾಡುತ್ತಿದ್ದರು. ಆದರೆ ಅಂಟಾರ್ಟಿಕಾದಲ್ಲಿ ದೀರ್ಘ ಕಾಲ ಕಳೆದರೆ ಅಂತಹ ಸಾಹಸ ಮಾಡಿದ ದಕ್ಷಿಣ ಏಷಿಯಾದ ಪ್ರಥಮ ಮಹಿಳೆ ಎಂದು ನಾನು ದಾಖಲೆ ಮಾಡಲಿದ್ದೆ ಎಂಬ ಅರಿವು ನನಗಿತ್ತು. ಆದ್ದರಿಂದ ಅವರೆಲ್ಲ ನನ್ನ ಬಗ್ಗೆ ಅದೆಷ್ಟೇ ಅಸಮಾಧಾನಗೊಂಡಿದ್ದರೂ, ಲೇವಡಿ ಮಾಡಿದರೂ ನಾನು 16 ತಿಂಗಳ ಕಾಲ ಅಲ್ಲಿ ಕಳೆಯುವೆನೆಂದು ನಿರ್ಧಾರ ಮಾಡಿದೆ.

ನಾನು ಅಡುಗೆ ಮಾಡಲು ಪ್ರಾರಂಭಿಸಿದ ನಂತರ ನನ್ನ ಬಗ್ಗೆ ತಂಡದ ಪುರುಷರಿಗಿದ್ದ ಅಸಮಾಧಾನ ಕರಗಲಾರಂಭಿಸಿತು. ಮೊದಲ ದಿನ ನಾನು ತುಂಬಾ ಕಾಳಜಿ ವಹಿಸಿ ಒಬ್ಬಳೇ ತಂಡದ ಎಲ್ಲಾ 24 ಜನರಿಗೆ ಅಡುಗೆ ಮಾಡಿದೆ. ಪ್ರತಿಯೊಬ್ಬರಿಗೂ ಬಿಸಿಯಾದ ಮೆತ್ತನೆ ಚಪಾತಿ ಮತ್ತು ಪರೋಟ ಬಡಿಸಿದೆ. ಎಲ್ಲರೂ ಹೊಟ್ಟೆ ತುಂಬ ತಿಂದು ಮುಗಿಸುವ ಹೊತ್ತಿಗೆ ನಿಂತೂ ನಿಂತೂ ನನ್ನ ಪಾದಗಳು ಊದಿಕೊಂಡಿದ್ದವು. ಆದರೆ ಎಲ್ಲರಿಗೂ ನನ್ನ ಅಡುಗೆ ಎಷ್ಟು ಇಷ್ಟವಾಯಿತೆಂದರೆ ಸ್ವಲ್ಪ ದಿನಗಳಲ್ಲೇ ನಾನು ಪ್ರತಿ ಭಾನುವಾರ ಎಲ್ಲರಿಗೂ ಅಡುಗೆ ಮಾಡಲಾರಂಭಿಸಿದೆ. ದೆಹಲಿಯಲ್ಲಿದ್ದಾಗ ನಾನು ಪತ್ನಿ ಮತ್ತು ತಾಯಿ ಆಗಿದ್ದರೂ ನಾನು ವೈದ್ಯೆ ಕೂಡ ಆಗಿದ್ದರಿಂದ ನನ್ನ ಮನೆಯವರಿಗೂ ಅಷ್ಟು ಆಸಕ್ತಿಯಿಂದ ಅಡುಗೆ ಮಾಡುತ್ತಿರಲಿಲ್ಲ. ಇದು ನನ್ನಲ್ಲಿ ಬೇಸರ ಮೂಡಿಸಿತು."

ಅಂದರೆ ಮರುಭೂಮಿಯಾದ ಅಂಟಾರ್ಟಿಕಾದಲ್ಲೂ, ಸುಶಿಕ್ಷತರಿದ್ದ ತಂಡದಲ್ಲೂ ಕನ್ವಲ್ ತರಹದ ವಿದ್ಯಾವಂತ ಮಹಿಳೆ ಕೂಡ ಪುರುಷರ ಮನವೊಲಿಸಲು ಅಡುಗೆ ಮನೆ ಸೇರಬೇಕಾಯಿತು. ಇದೆಂತಹ ವಿಪರ್ಯಾಸ ನೋಡಿ.


ಅಂಟಾರ್ಟಿಕಾದಂತಹ ದೂರದ ಪ್ರದೇಶದಲ್ಲಿ ದೀರ್ಘ ಕಾಲ ವಾಸಮಾಡುವುದು ಸುಲಭದ ಮಾತಲ್ಲ. ತಮ್ಮ ಕುಟುಂಬದ ಸದಸ್ಯರ, ಮಿತ್ರರ ನೆನಪುಗಳು, ದಿನನಿತ್ಯದ ಸಂಗತಿಗಳು ಕಾಡುತ್ತವೆ. ಕನ್ವಲ್ ಅವರನ್ನೂ ಅಂತಹ ನೆನಪುಗಳು ಕಾಡಿದವು. ಇವತ್ತು ಯಾವ ಹೊತ್ತಿನಲ್ಲಾದರೂ ನಮಗೆ ಬೇಕಾದವರಿಗೆ ಸುಲಭವಾಗಿ ಫೋನ್ ಮಾಡಬಹುದು. ಆದರೆ ಅಂಟಾರ್ಟಿಕಾದಿಂದ ಅದು ಸಾಧ್ಯವಿರಲಿಲ್ಲ, ಅಲ್ಲಿದ್ದದ್ದು ಒಂದೇ ಒಂದು ಫೋನ್. ಆದ್ದರಿಂದ ತಂಡದ ಸದಸ್ಯರು ತಿಂಗಳಿಗೊಮ್ಮೆ - ಅದೂ ಆರು ನಿಮಿಷಗಳಿಗೆ ಮಾತ್ರ- ತಮ್ಮ ಕುಟುಂಬದವರಿಗೆ ಫೋನ್ ಮಾಡಬಹುದಿತ್ತು, ಅದು ಅದೃಷ್ಟ ಅವರ ಪರವಿದ್ದರೆ. ಯಾಕೆಂದರೆ ಹಲವೊಮ್ಮೆ ಆ ಮರುಭೂಮಿಯಿಂದ ಹೊರ ಪ್ರಪಂಚಕ್ಕೆ ಇದ್ದ ಸಂಪರ್ಕ ಮಾರ್ಗಗಳು ಕೆಟ್ಟುಬಿಡುತ್ತಿದ್ದವು. ಅವುಗಳು ರಿಪೇರಿ ಆಗುವುದಕ್ಕೆ ಎರಡು ಮೂರು ತಿಂಗಳುಗಳೇ ಹಿಡಿಯುತ್ತಿತ್ತು.

ತಂಡದ ವೈದ್ಯರಾಗಿದ್ದ ಕನ್ವಲ್ ಅವರ ಜವಾಬ್ದಾರಿಗಳಲ್ಲಿ ಒಂದು ಎಲ್ಲರ ಆರೋಗ್ಯ ಸರಿ ಇದೆ ಎಂದು ನೋಡಿಕೊಳ್ಳುವುದು. ಅದರ ಬಗ್ಗೆ ಅವರು ಹೀಗೆ ಹೇಳುತ್ತಾರೆ:


"ಆರು ತಿಂಗಳು ಕತ್ತಲೆ ಆವರಿಸಿದ ಚಳಿಗಾಲವಂತೂ ಎಂಥವರಲ್ಲೂ ಬೇಸರ ಮೂಡಿಸುವಂತಿತ್ತು. ಆದರೆ ನಾನು ತಂಡದ ವೈದ್ಯಳಾಗಿದ್ದ ಕಾರಣ ಇತರರು ಮಾನಸಿಕವಾಗಿ ಸ್ಥೈರ್ಯ ಕಳೆದುಕೊಳ್ಳಬಾರದೆಂದು ನನ್ನ ಉತ್ಸಾಹ ಕುಂದಿದ್ದರೂ ಅದನ್ನು ಇತರರಿಗೆ ತೋರ್ಪಡಿಸದೆ ಉಲ್ಲಾಸದಿಂದಿರುತ್ತಿದ್ದೆ.

ಶಿಬಿರದಲ್ಲಿ ಒಂದು ಸುಸಜ್ಜಿತ ಕ್ಲಿನಿಕ್ ಮತ್ತು ಆಪರೇಷನ್ ಥಿಯೇಟರ್ ಇದ್ದವು. ಆದರೆ ನನ್ನೊಂದಿಗೆ ನರ್ಸ್ ಆಗಲಿ


8...



ಅಂಟಾರ್ಟಿಕಾದಲ್ಲಿ ಪೆಂಗ್ವಿನ್‌ಗಳು




ಹಿಮ ಗವಿಯ ಮುಂದೆ ಕನ್ವಲ್



ಭಾರತದ ಶಿಬಿರ

ಮಂಗಳೂರು: ಮತೋನ್ಮತ್ತ ಭಟ್ಟ-ಮುತಾಲಿಕ್ ಮೇಲಾಟ

ಚರ್ಚ್ ದಾಳಿ ಮಾಡಿಸಿದ್ದು ಚೆಡ್ಡಿ ಡಾನ್ ಕಲ್ಲಡ್ಕನಾ



ಕರಾವಳಿ 'ಚೆಡ್ಡಿ ರಿಪಬ್ಲಿಕ್' ಆಗಿರುವುದು ಈಗೀಗ ನಿಸ್ಸಂಶಯವಾಗಿ ಸಾಬೀತಾಗುತ್ತಿದೆ! ಸಂಘಪರಿವಾರದ ಸೈತಾನರು ಈ ನೆಲದ ಕಾನೂನು-ಕಟ್ಟಳೆ, ರೀತಿ-ರಿವಾಜು, ಕೊನೆಗೆ ಮನುಷ್ಯತ್ವಕ್ಕೂ ಇಡೀ ದಕ್ಷಿಣ ಕನ್ನಡದಲ್ಲಿ ನೆಲೆ-ಬೆಲೆ ಇಲ್ಲದಂತೆ ಮಾಡಿಬಿಟ್ಟಿದ್ದಾರೆ. ಗೋ ಪ್ರಾಣ, ಹಿಂದೂ ಹೆಣ್ಣಿನ ಮಾನವನ್ನೇ ಬಂಡವಾಳ ಮಾಡಿಕೊಂಡು ಪಾಲಿಟಿಕಲ್ ಮೈಲೇಜು ಪಡೆಯಲು ಹಿಂದೂತ್ವವಾದಿ ಹರಾಮಿಗಳು ದಿನಕ್ಕೊಂದರಂತೆ ಪಾತಕ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತರ ಪಾಲಿಗಂತೂ ಅವಿಭಜಿತ ದಕ್ಷಿಣ ಕನ್ನಡವೆಂಬುದು ರೌರವ ನರಕದಂತಾಗಿ ಹೋಗಿದೆ!

ಕರಾವಳಿಯಲ್ಲಿ ಕ್ರಿಶ್ಚಿಯನ್-ಮುಸ್ಲಿಂ ಸಮುದಾಯ ಕೈಯಲ್ಲಿ ಜೀವ ಹಿಡಿದು ಬದುಕುತ್ತಿದೆ! ಸ್ಥಳೀಯ ಸಂಘಪರಿವಾರದ 'ಡಾನ್' ಕಲ್ಲಡ್ಕ ಪ್ರಭಾಕರ ಭಟ್ಟನಿಗೆ ಯಾವಾಗ ಧರ್ಮಕಾರಣದ ಹುಕ್ಕಿ ಬರುತ್ತದೋ ಹೇಳಲಾಗದು. ಕಲ್ಲಡ್ಕನಿಗೆ ಆರೆಸ್ಸೆಸ್-ಬಿಜೆಪಿ ಮೇಲಿನ ಹಿಡಿತ ಬಿಗಿಗೊಳಿಸಿಕೊಂಡು ಬೇಳೆ ಬೇಯಿಸಿಕೊಳ್ಳಬೇಕೆಂಬ ತೆವಲು ಶುರುವಾಯ್ತೆಂದರೆ ಸಾಕು, ಅಮಾಯಕ ಅಲ್ಪಸಂಖ್ಯಾತರಿಗೆ ಗಂಡಾಂತರ ಗ್ಯಾರಂಟಿ ಎಂದೇ ಅರ್ಥ! ಈಗಂತೂ ಬಿಜೆಪಿ ಸರ್ಕಾರದ ಸೂತ್ರಧಾರ ವಿಪ್ರರಲ್ಲಿ ಪ್ರಮುಖನಾಗಿರುವ ಈ ಭಟ್ಟನ ಭಂಡಾಟದಿಂದ ದಕ್ಷಿಣಕನ್ನಡ ಅಲ್ಪಸಂಖ್ಯಾತರ ಮೇಲೆ ಅಸಂಖ್ಯ ಹಲ್ಲೆಗಳಾಗುತ್ತಿವೆ. ಪೊಲೀಸರ ಸಹಕಾರದಿಂದಲೇ ಮೇಲಿಂದ ಮೇಲೆ ಭಜರಂಗಿ ಭಾನ್ಗಡಿಗಳು ನಿರಾತಂಕವಾಗಿ ನಡೆಯುತ್ತಿವೆ; ಚರ್ಚ್-ಮಸೀದಿ ಸುಖಾಸುಮ್ಮನೆ ದಾಳಿಗೀಡಾಗುತ್ತಿವೆ. ದಕ್ಷಿಣ ಕನ್ನಡದ ಅನೈತಿಕ ಪೊಲೀಸ್‌ಗಿರಿಯ ಪುಂಡಾಟ ಮತ್ತು ಹುಸಿ ಮತಾಂತರದ ಹುಯಿಲಿನ ಕ್ರೌರ್ಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕುಖ್ಯಾತಿ ಪಡೆದಿವೆ...


ಈಗ ಕರಾವಳಿಯ-ಅದರಲ್ಲೂ ಮಂಗಳೂರು ಏರಿಯಾದ ಮುಸ್ಲಿಂ-ಕ್ರಿಶ್ಚಿಯನ್ನರಿಗೆ ಹೊಸದೊಂದು ಹಿಂಸೆ-ಭಯ ಶುರುವಾಗಿದೆ. ಹಿಂದೂವಾದಿಗಳ ಪಡೆ ಎರಡಾಗಿ ಒಡೆದು ಜಿದ್ದಿಗೆ ಬಿದ್ದಿರುವುದು ಅಂತಿಮವಾಗಿ ಅಲ್ಪಸಂಖ್ಯಾತರನ್ನೇ ಬಲಿ ಪಡೆಯುತ್ತಿದೆ! ಕಲ್ಲಡ್ಕದ ಗುಹೆಯಲ್ಲಿ ಕುಳಿತು ಭಜರಂಗಿ, ಆರೆಸ್ಸೆಸ್, ವಿಹಿಂಪ ಮತ್ತಿತರ ಮನೆ ಮುರುಕರ ಪಡೆ ಪೋಷಿಸುತ್ತಿರುವ ಕಲ್ಲಡ್ಕ ಪ್ರಭಾಕರ ಭಟ್ಟರ ದಗಲ್ಬಾಜಿ ದಂಧೆ ಕಂಡು ತಲೆರೋಸಿ ಬಂಡೆದ್ದವರು ಪ್ರಮೋದ್ ಮುತಾಲಿಕ್‌ನ ಶ್ರೀರಾಮ ಸೇನೆ ಕಟ್ಟಿಕೊಂಡಿದ್ದಾರೆ. ಹೀಗಾಗಿ ಭಟ್ಟನ ಭಜರಂಗದಳ ಮತ್ತು ಮುತಾಲಿಕನ ಶ್ರೀರಾಮಸೇನೆ ಹಿಂದೂತ್ವದ ಚಾಂಪಿಯನ್‌ಶಿಪ್‌ಗಾಗಿ ಪೈಪೋಟಿಗೆ ಬಿದ್ದು ಅಲ್ಪಸಂಖ್ಯಾತರ ಪ್ರಾಣ ಹಿಂಡುತ್ತಿವೆ. ಎರಡೂ ಮತಾಂಧ ಮನುವಾದಿ ಗ್ಯಾಂಗ್ ತಾವೇ ಅಲ್ಪಸಂಖ್ಯಾತರ ಮಾರಣಹೋಮ ಮಾಡಲು ಅವತಾರವೆತ್ತಿದ 'ಧರ್ಮಾತ್ಮರು' -ಹಿಂದೂತ್ವದ ಸಂರಕ್ಷಕರೆಂದು ಪೋಸು ಕೊಡಲು ಮಾಡಬಾರದ ಮಸಲತ್ತು ಮಾಡುತ್ತಿವೆ.

ಮುತಾಲಿಕ್ ಸಂಘಪರಿವಾರದಿಂದ ಸಿಡಿದು ಹೊಸ ಹಿಂದೂ ತಾಲಿಬಾನ್ ತಯಾರಿಸಿಕೊಂಡಾಗ ಹಿಂದೂತ್ವದ ಗರಡಿಯಲ್ಲಿ ಪಳಗಿದ್ದ ದಕ್ಷಿಣ ಕನ್ನಡದ ದೊಡ್ಡದೊಂದು ಹಿಂಡು ಆತನ ಬ್ಯಾನರಿನಡಿ ಸಂಘಟಿತವಾಗಿತ್ತು! ಇದು ಹಿಂದೂತ್ವ ಗುತ್ತಿಗೆ ಹಿಡಿದ ಗೆಟಪ್ಪಿನಲ್ಲಿ ಓಡಾಡುತ್ತಿದ್ದ ಚೆಡ್ಡಿ ಚತುರ ಕಲ್ಲಡ್ಕ ಪ್ರಭಾಕರ ಭಟ್‌ನ ಕಂಗೆಡಿಸಿಬಿಟ್ಟಿತ್ತು. ಮುತಾಲಿಕ್ ಕರಾವಳಿಯ ಯಾವ ಮೂಲೆಗೆ ಬಂದರೂ ಭಟ್ಟನಿಗೆ ತನ್ನ ಹಿಂದೂ ಡಾನ್‌ಗಿರಿಗೆಲ್ಲಿ ಧಕ್ಕೆ ಬರುತ್ತದೋ ಎಂಬ ಚಡಪಡಿಕೆ ಶುರುವಾಯಿತು. ದಕ್ಷಿಣ ಕನ್ನಡದ ಖತರ್‌ನಾಕ್ ಹಿಂದೂ ಗೂಂಡಾಗಳೆಂದೇ ಹೆಸರುವಾಸಿಯಾಗಿರುವ ಪುತ್ತೂರಿನ ಅರುಣಕುಮಾರ್ ಪುತ್ತಿಲ, ಮಂಗಳೂರಿನ ಪ್ರಸಾದ್ ಅತ್ತಾವರ್, ಪಡೀಲ್‌ನ ಸಂತೋಷ್, ಜಿತೇಶ್ ಉಡುಪಿ, ಸಂಗಮ್ ಪ್ರದೀಪ್‌ನಂಥವರೆಲ್ಲ ಶ್ರೀರಾಮಸೇನೆ ಸೇರಿಕೊಂಡಿದ್ದರು. ಪುತ್ತೂರಿನ ಅರುಣ ಪುತ್ತಿಲನಂತೂ ಡಿ.ವಿ. ಸದಾನಂದ ಗೌಡರಿಗೆ ಸೆಡ್ಡು ಹೊಡೆಯುತ್ತ ಬಂದಾತ. ಪುತ್ತಿಲನ ಮುಗಿಸಲು ಡಿವಿ ಮಾಡಿದ ಕಸರತ್ತು ಒಂದೆರಡಲ್ಲ. ಇಂಥ ಹಿಂದೂತ್ವದ ಬೆಂಕಿನವಾಬರನ್ನೇ ಸೆಳೆದಿದ್ದ ಮುತಾಲಿಕ್ ಜಿಲ್ಲೆಯಲ್ಲಿ ಎಲ್ಲೇ ಭೈಠಕ್ ನಡೆಸಿದರೂ ಅಲ್ಲಿ ಆತ ಮೊದಲು ಮೂದಲಿಸುತ್ತಿದ್ದುದೇ ಎದುರಾಳಿ ಕಲ್ಲಡ್ಕ ಭಟ್ ಮತ್ತವನ ಚೆಡ್ಡಿ ಬ್ರಿಗೇಡನ್ನು!




ಭಗ್ನಗೊಂಡ ಏಸು ಪ್ರತಿಮೆ

ಇತ್ತ ಕಲ್ಲಡ್ಕ ಭಟ್ಟನ ಬಳಗ 'ಗೆಟ್ ಟುಗೆದರ್' ಆದಾಗೆಲ್ಲ ಮುತಾಲಿಕನ ಸೇನೆ ಹಣಿವ ಸ್ಕೆಚ್‌ಗಳೇ ರಚನೆಯಾಗುತ್ತಿದ್ದವು. ಈ ಹಿಂದೂ ಗೂಂಡಾ ಗುರುಗಳಿಬ್ಬರೂ ಪರಸ್ಪರ ಕತ್ತಿಮಸೆಯಹತ್ತಿದ್ದರು. ಮುತಾಲಿಕ್ ಕರಾವಳಿಗೆ ಬಂದಾಗೆಲ್ಲ ಒಂದಲ್ಲ ಒಂದು ತರದಲ್ಲಿ ಕಲ್ಲಡ್ಕನ ಅಡಿಯಾಳಿನಂತಿರುವ ಸ್ಥಳೀಯ ಬಿಜೆಪಿ ಶಾಸಕ, ಭಜರಂಗಿ ಭೂಪರನ್ನು 'ಕಾಫಿರ್' ಎಂದು ಬಯ್ಯುತ್ತಿದ್ದ. ಇದು ಪರೋಕ್ಷವಾಗಿ ಬಿಜೆಪಿ-ಆರೆಸ್ಸೆಸ್‌ನ ದೊಣ್ಣೆ ನಾಯಕ ಕಲ್ಲಡ್ಕ ಭಟ್ಟನ ಮರ್ಮಕ್ಕೆ ತಿವಿಯುತ್ತಿತ್ತು! ಇದರಿಂದ ಕೆರಳಿದ ಷಡ್ಯಂತ್ರಗಾರ ಕಲ್ಲಡ್ಕ ಭಟ್ಟ ತನ್ನ ವೈರಿ ಮುತಾಲಿಕನನ್ನು ಮಣಿಸಲು ಯಡ್ಡಿ-ಗೌಡರ ಸರ್ಕಾರದ ಆಡಳಿತ ಯಂತ್ರವನ್ನೇ ಬಳಸಿಕೊಂಡುಬಿಟ್ಟ! ಮುತಾಲಿಕನ ಸೇನೆಯ ಮುಂಚೂಣಿ ಹುಡುಗರಿಗೆ ಕಾನೂನಿನ ಕುಣಿಕೆ ಹಾಕಿ ನೇತು ಹಾಕಲು ರಹಸ್ಯ 'ಫರ್ಮಾನು' ಆಡಳಿತಗಾರರಿಗೆ ನೀಡಿದ್ದ. ಕಾನೂನು ಉಲ್ಲಂಘಿಸಿ ಶ್ರೀರಾಮಸೇನೆ ಹುಡುಗರು ರೌಡಿ ಗಿರಿ ಮಾಡುತ್ತಿದ್ದಾರೆಂದು ಕೆಲವರ ಜೈಲಿಗಟ್ಟಿದರೆ ಆ ಸಂಘಟನೆಗೆ ಹಿಂದೂಗಳ ಮಧ್ಯೆ ಡ್ಯಾಮೇಜಾಗುತ್ತದೆಂಬ ಲೆಕ್ಕಾಚಾರ ಕಂತ್ರಿ ಭಟ್ಟನ ದಾಗಿತ್ತು; ತನ್ಮೂಲಕ ತನ್ನ ನೇತೃತ್ವದ ಹಿಂದೂ ತಂಡವನ್ನು ಏಕಮೇವಾದ್ವಿತೀಯವಾಗಿ ಮೆರೆಸುವ ಯೋಚನೆ ಕಲ್ಲಡ್ಕ ಭಟ್ಟನದಾಗಿತ್ತು.



ಕಲ್ಲಡ್ಕ ಭಟ್ಟ

ಮುತಾಲಿಕನ ಸೇನೆಯ ಘಟಕ ಎಲ್ಲಾದರೂ ಸ್ಥಾಪನೆ ಆಗುತ್ತದೆಂದರೆ ಭಟ್ಟ ಪ್ರಚೋದಿತ ಭಜರಂಗಿ-ಬಿಜೆಪಿ-ಎಬಿವಿಪಿ-ಆರೆಸ್ಸೆಸ್ ಯುದ್ಧ ಸನ್ನದ್ಧವಾಗಿ ಎದುರಾಳಿ ಟೀಮನ್ನು ಹಿಮ್ಮೆಟ್ಟಿಸಲು ಹೋಗುತ್ತಿತ್ತು. ಮುತಾಲಿಕ್ ಮತ್ತವನ ಸೇನಾಪತಿಗಳು ಹೆಜ್ಜೆ-ಹೆಜ್ಜೆಗೆ ಪ್ರತಿತಂತ್ರ ಹೆಣೆಯುತ್ತಲೇ ಹೋದರು. ಈ ಧರ್ಮಾಂಧ ದಾಯಾದಿಗಳ ಗುದ್ದಾಟಕ್ಕೆ ನಿಷ್ಪಾಪಿ ಮುಸ್ಲಿಂ-ಕ್ರಿಶ್ಚಿಯನ್ನರ ಮಾನ-ಪ್ರಾಣ ಹರಣ ಆಗುವಂತಾಗಿದ್ದು ಮಾತ್ರ ಘೋರ ದುರಂತವೇ ಸರಿ! ಎರಡೂ ಕಡೆಯವರು ಚರ್ಚ್-ಮಸೀದಿಗೆ ದಾಳಿ ಮಾಡುವುದು, ಜಾನುವಾರು ಮಾರಾಟಗಾರರ ಮೇಲೆ ಹಲ್ಲೆ ಮಾಡುವುದು, ರಕ್ತ ಪಾತಕ್ಕಿಳಿಯುವುದು, ಅನೈತಿಕ ಪೊಲೀಸ್‌ಗಿರಿಗಳೆಲ್ಲ ಮಾಮೂಲಾಗಿ ಹೋಯ್ತು. ಅಷ್ಟೇ ಅಲ್ಲ, ಈ ಪುಂಡಾಟದಿಂದ 'ಧರ್ಮಕಾರಣ' ಲಾಭ ಸಿಗುತ್ತದೆಂದಾದರೆ ತಾವೇ ಸದ್ರಿ ಧರ್ಮೊ... ಮಾಡಿದ್ದೆಂದು ಕೊಚ್ಚಿಕೊಳ್ಳುವ, ಕಾನೂನಿನ ತೊ... ದರೂ ಸುತ್ತಿಕೊಂಡರೆ ಎದುರಾಳಿ ಹಣೆಗೆ ಈ 'ಅ... ಕಟ್ಟುವ 'ಆಟ' ಚೆಡ್ಡಿ ಮತ... ಆಡಹತ್ತಿತ್ತು!!



ದಾಳಿ ಮಾಡಿ ಸಿಕ್ಕಿಬಿದ್ದ ಶಿಬು

ಕಪಿಸೇನೆ ಸರದಾರ ಪ್ರ... ಮುತಾಲಿಕ್ ದಕ್ಷಿಣ ಕನ್ನಡಕ್ಕೆ ... ನೆಂದರೆ ಸಾಕು, ಆತನ ಗ್ಯಾಂಗನ್... ನಿನ ಇಕ್ಕಳಕ್ಕೆ ಸಿಲುಕಿ ಪೊಲಿ... ಛೂ ಬಿಡುವ ಕಿತಾಪತಿ ಕಲ್ಲ... ಮಾಡುವುದು ಹಿಂದೂ ಪರಿ... ಬಹಿರಂಗ ರಹಸ್ಯದ ಸಂಗತಿ. ... ಲಿಕ್ ಕರಾವಳಿಯಲ್ಲಿ ಬೈಠಕ್ ನ... ಭಾಷಣ ಬಿಗಿದರೆ ಅಥವಾ ಪ್ರೆಸ್... ಮಾಡಿದರೆ ತನ್ನ ಅಸ್ತಿತ್ವಕ್ಕೆ ಸ... ಖಾತ್ರಿಯೆಂದುಕೊಂಡಿರುವ ... ಭಟ್ ಆತನ ಚಟುವಟಿಕೆ ನಡೆ... ನಾಜೂಕಾಗಿ ಮಸಲತ್ತು ಮಾಡ... ಮುತಾಲಿಕ್ ಜಿಲ್ಲೆಗೆ ಬರುವ ... ಚರ್ಚ್ ಮೇಲೆ ಭಜರಂಗಿಗಳಿಂ... ಮಾಡಿಸಿ ಕಾನೂನು ಸುವ್ಯ... ಷನ್‌ಗೆ ಒಳಪಡುವಂತೆ ಭಟ್... ತ್ತಾನೆ. ಶಾಂತಿ ಭಂಗವಾಗುವ ಸ... ಭೂತ ತೋರಿಸಿ ಮುತಾಲಿ... ಬಿಚ್ಚದೆ ಮರಳಿ ಹೋಗುವಂತೆ ಪೊಲೀಸರಿಂ... ಮಾಡುತ್ತಾನೆ.

2008ರ ಕುಪ್ರಸಿದ್ಧ ಚರ್ಚ್ ದಾಳಿ ನಡೆದಿದ್ದು ... ಲಿಕ್‌ನ ಕರಾವಳಿ ಭೇಟಿಯ ಮುನ್ನಾದಿನ! ಆ ಅನ... ಭಜರಂಗಿಗಳೇ ಸೂತ್ರದಾರರು. ಆದರೆ ಅಂದು ... ದಾಳಿಯ ಆರೋಪದಲ್ಲಿ ಫಿಕ್ಸ್ ಆ... ಕಂಡವರೆಲ್ಲ ಮುತಾಲಿಕ್‌ನ ಶ್ರೀ... ಸೇನೆಯ ಪುಂಡ ಫಂಟರ್‌ಗಳು! ... -ಕಚೇರಿ ಎಂದು ಅಲೆದು ಸುಸ್ತಾದ... ಹುಡುಗರಿಗೆ ಕಲ್ಲಡ್ಕನ ಏ... ಶ್ರೀರಾಮ ಸೇನೆ ಬಿಟ್ಟು ತಮ್ಮ ಒ... ಹಿಂದೂ ಪಡೆ ಸೇರಿಕೊಂಡರೆ ಕೇಸ... ಮಾಡಿಸಿ ಮುಕ್ತಿ ಕೊಡಿಸುವ... ನೀಡಿದರು. ಈಗ ದಕ್ಷಿಣ ಕನ್ನಡದ ... ಅಂಡರ್‌ವರ್ಲ್ಡ್ ಕಾರಸ್ಥಾನ-ಅನೈ... ಹಾರದ ಆರೋಪ ಎದುರಿಸುತ್ತಿರುವ ಖತರ್‌ನಾಕ್... ಅತ್ತಾವರ ಒಬ್ಬನೇ! ಹೀಗೆ ಮುತಾಲಿಕ್ ಕರಾವಳಿ... ಆಗ್ತಾನೆಂದಾಗ ಅಲ್ಪಸಂಖ್ಯಾತರು ಭಜರಂಗಿಗ...


ಚರ್ಚ್ ದಾಳಿಗೆ ಲೈಂಗಿಕ ಲೇಪ!!

ಮಂಗಳೂರಿನ ಅಲ್ಫೋನ್ಸ್ ಕ್ಯಾಥೋಲಿಕ್ ಚರ್ಚ್ ಮೇಲೆ ದಾಳಿ ಮಾಡಿಸಿದ ತೆರೆಮರೆಯ ಹಿಂದೂ ಡಾನ್-ಡಾಕೂಗಳೀಗ ಇಡೀ ಪ್ರಕರಣಕ್ಕೆ ಲೈಂಗಿಕ ಲೇಪ ಕೊಡುವ ಅನೈತಿಕ ಕಾರ್ಯಾಚರಣೆಗೆ ಕೈಹಾಕಿದ್ದಾರೆ. ಚರ್ಚ್ ಆಡಳಿತಗಾರರನ್ನು ಡೀಮೊರಲೈಸ್ ಮಾಡಿ ಹಡಬೆ ಹಿಂದೂಗಳ ಕ್ರೈಮ್‌ನ ತನಿಖೆಯ ದಿಕ್ಕು ತಪ್ಪಿಸುವ ವ್ಯವಸ್ಥಿತ ಮಸಲತ್ತಿದು. ಚರ್ಚ್‌ನ ಫಾದರ್ ಮತ್ತು ಕ್ರೈಸ್ತ ಮುಖಂಡರ ಮೇಲೆ ಅನೈತಿಕ ವ್ಯವಹಾರದ ಆಪವಾದ ಹಾಕಿ ಬಾಯಿ ಮುಚ್ಚಿಸಿದರೆ ಯುದ್ಧಗೆಲ್ಲಬಹುದೆಂಬ ಹೇಡಿ ಲೆಕ್ಕಾಚಾರ ಭಜರಂಗಿ-ಚೆಡ್ಡಿ-ಕಾವಿ ಭೂಪರದು.

ಚರ್ಚ್ ಮೇಲೆ ದಾಳಿ ನಡೆದೇ ಇಲ್ಲ; ಚರ್ಚ್‌ನ ಸಿಸ್ಟರ್ ಜತೆ ರಾಸಲೀಲೆ ನಡೆಸುತ್ತಿದ್ದವನೊಬ್ಬ ಸಿಕ್ಕಿಬಿದ್ದು ಓಡಿಹೋಗುವಾಗ ಗಡಿಬಿಡಿಯಲ್ಲಿ ಏಸು ಮತ್ತು ಮೇರಿ ಪ್ರತಿಮೆ ಒಡೆದುಹಾಕಿದ್ದಾನೆಂಬ 'ನೀಲಿಕತೆ' ಕಟ್ಟಿ ಹಿಂದೂ ಮತಾಂಧರು ತೇಲಿಬಿಟ್ಟಿದ್ದಾರೆ. ಈ ಕೊಳಕು ಪುರಾಣ ಚೆಡ್ಡಿ ಪತ್ರಿಕೆ 'ಜಯಕಿರಣ'ದಲ್ಲಿ ಪ್ರಕಟಿಸಲಾಗಿದೆ. ಚರ್ಚ್ ದಾಳಿ ಹೊತ್ತಲ್ಲಿ ಫಾದರ್ ಸೆಬ್ಯಾಸ್ಟಿನ್ ಸಿ.ಕೆ. ಮತ್ತವರ ಸಂಗಡವಿದ್ದ ಹುಡುಗರ ಕೈಲಿ ಸಿಕ್ಕಿಬಿದ್ದಿದ್ದ ರೌಡಿ ಸಿಬು ಯಾನೆ ಸುಬ್ಬು ಬೆತ್ತಲಾಗಿದ್ದ. ಇದನ್ನೇ ಆಧಾರವಾಗಿಟ್ಟು ಜಯಕಿರಣದಲ್ಲಿ ಸೆಕ್ಸ್ ಸ್ಟೋರಿ ಹೆಣೆಯಲಾಗಿದೆ.

ಶಿಬು ಬಸ್ ಕಂಡೆಕ್ಟರ್ ಆಗಿದ್ದಾಗ ಆತನಿಗೆ ಕಾಲೇಜಿಗೆ ಓಡಾಡುವ ಕ್ರಿಶ್ಚಿಯನ್ ಹುಡುಗಿಯೊಬ್ಬಳ ಪರಿಚಯವಾಗಿತ್ತಂತೆ. ಅದು ಪ್ರಣಯವಾಗುವ ಹೊತ್ತಿಗೆ ಆಕೆ ಸಿಸ್ಟರ್ ಆಗಿ ಅಲ್ಫೋನ್ಸ್ ಚರ್ಚ್ ಸೇರಿದ್ದಳು. ಆಕೆಯೊಂದಿಗೆ 'ಸ್ನೇಹ' ಮುಂದುವರೆಸಿದ್ದ ಶಿಬು ಫೋನ್‌ನಲ್ಲಿ ಮಾತಾಡುತ್ತಿದ್ದ. 'ಆಕೆ'ಯೂ ಶಿಬುಗೆ ಫೋನ್ ಮಾಡುವುದು-ಭೇಟಿಯಾಗುವುದು ಮಾಡುತ್ತಿದ್ದಳು. ಇವರ 'ಆಟ' ಚರ್ಚ್‌ನಲ್ಲೂ ನಡೆಯುತ್ತಿತ್ತು. ಮೊನ್ನೆ 'ಆಕೆ' ಜತೆ ಸೇರಿದಾಗ ಯಾರೋ ಕಂಡರೆಂದು ಬೆದರಿ ಓಡುವಾಗ ಶಿಬು ಏಸು ಮತ್ತು ಮೇರಿ ಪ್ರತಿಮೆ ಬೀಳಿಸಿ ಹೋಗಿದ್ದಾನೆ. ಚರ್ಚ್‌ನ ಬಾಗಿಲು ಫಾದರ್ ತಕ್ಷಣ ಹಾಕಿಸಿದ್ದರಿಂದ ಬೆತ್ತಲಾಗಿದ್ದ ಶಿಬುಗೆ ತಪ್ಪಿಸಿಕೊಳ್ಳಲಾಗಲಿಲ್ಲ, ಇದು 'ಜಯಕಿರಣ'ದ ಸಂಶೋಧನಾ 'ಲೇಖನ'!!

ಚರ್ಚ್‌ನಲ್ಲಾಗಿರುವ ದಾಂಧಲೆ ನೋಡಿದರೆ ಇದು ಆಚಾನಕ್ ಆಗಿದ್ದಲ್ಲ ಎಂದು ಎಂಥ ಗಾಂಪನಿಗೂ ಗೊತ್ತಾಗುತ್ತದೆ. ಇದು ವ್ಯವಸ್ಥಿತ ದಾಳಿ. ಕ್ರೈಸ್ತರ ದೇವರ ಮೂರ್ತಿಗಳನ್ನಷ್ಟೇ ಅಲ್ಲ ಪೀಠೋಪಕರಣವನ್ನು ಒಡೆದು ಪುಡಿಮಾಡಲಾಗಿದೆ. ಹಾಗಿದ್ದರೆ ಶಿಬು ಬೆತ್ತಲಾಗಿದ್ದೇಕೆ? ದಾಳಿಕೋರರ 'ಗುರು'ಗಳ ನಿರ್ದೇಶನವೇ ಹಾಗಿತ್ತು. ಶಿಬುನೊಬ್ಬನೇ ಬೆತ್ತಲಾಗಿ ಸಿಕ್ಕಿಬೀಳುವಂತೆ ಮಾಡಬೇಕು. ಉಳಿದ ದಾಳಿಗಾರರು ತಪ್ಪಿಸಿಕೊಳ್ಳಬೇಕು. ಬೆತ್ತಲೆ ಮಾನವ ಸಿಕ್ಕಿಬಿದ್ದನೆಂದು ಜಗಜ್ಜಾಹೀರಾದರೆ ಲೈಂಗಿಕ ವ್ಯವಹಾರ ಚರ್ಚ್‌ನಲ್ಲಿ ನಡೆಯುತ್ತಿದೆ ಎಂದು ಗುಲ್ಲೆಬ್ಬಿಸಲು ಹಿಂದೂ ಹಿರೇಮಣಿಗಳಿಗೆ ಅನುಕೂಲವಾಗುತ್ತದಲ್ಲವಾ? ಇದು 'ಅಸಲಿ' ಕತೆ.



ಇಲ್ಲಿ 'ಜಯಕಿರಣ' ಎಂಬ ಬಿಜೆಪಿ-ಭಜರಂಗಿ-ಹಿಂದೂ ಪುಂಡರ ಮುಖವಾಣಿಯ ಜಾತಕವನ್ನು ಒಂಚೂರು ಪರಿಶೀಲಿಸಲೇಬೇಕು. ಇದು ಪಕ್ಕಾ ದೋನಂಬರ್ ದಂಧೆದಾರ-ಕೋಮು ಕಿತಾಪತಿಗಾರರ ಹ್ಯಾಂಡ್‌ಬಿಲ್! ಇದರ ಒಡೆಯ ಪ್ರಕಾಶ್ ಪಾಂಡೇಶ್ವರ 'ತ್ರಿವಳಿ ಕೊಲೆ' ಪ್ರಕರಣದ ಪರಮ ಪಾತಕಿ! ಈತನಿಗೆ ಒಂದಿಷ್ಟು ಅಡ್ಡಕಸುಬುಗಳಿವೆ. ಮೊದಲು ಒಂದಂಕಿ ಲಾಟರಿ-ಭೂಗತ ಸುಲಿಗೆ-ಕೊಲೆಯಂಥ ಕ್ರಿಮಿನಲ್ ದಂಧೆ ಮಾಡುತ್ತಿದ್ದ. ಈಗ ಒಂಚೂರು ಬದಲಾದಂತೆ ಪೋಸು ಕೊಡುತ್ತ 'ಪತ್ರಿಕೆ' ಪ್ರಾರಂಭಿಸಿದ್ದಾ... ಅಕ್ರಮ ದಂಧೆಗೆ ಅಧಿಕಾರಿಗಳನ್ನು ಪಳಗಿಸಲು ಇದನ್ನೇ ಅಸ್ತ್ರ ಮಾಡಿಕೊಂ...

ಇಂಥ ಪ್ರಳಯಾಂತಕ ಪಾಂಡೇಶ್ವರ ಈಗ ಮಂಗಳೂರಿನ 'ಪ್ರತಿಷ್ಠಿತ' ... ಎಸ್ಟೇಟ್ ಉದ್ಯಮಿ. ಹೀಗಾಗಿ ಆತನಿಗೆ ಸಹಜವಾಗೇ ಮಂಗಳೂರಿನ ... ಬಿಲ್ಡರ್ಸ್-ರಿಯಲ್ ಎಸ್ಟೇಟ್ ಉದ್ಯಮಿಗಳ ಕ್ಯಾಪ್ಟನ್-ಮಂತ್ರಿ ಕೃಷ್ಣ ಪಾಲೇ... ಸುಬ್ಬು ಸಿಕ್ಕಿದೆ. ಗೆಳೆಯನ ತಾರೀಫು ಮಾಡಲು-ಹಿಂದೂತ್ವ ಉದ್ದೀಪನಗೂ... ತನ್ನ 'ಜಯಕಿರಣ' ಬಳಸುತ್ತಾನೆ. ಭಜರಂಗಿ-ಚೆಡ್ಡಿ... ಪಾತಕಗಳೆಲ್ಲ ಈ ಪತ್ರಿಕೆಯಲ್ಲಿ ಪವಿತ್ರ ... ಕಾರ್ಯವಾಗಿ ವಿಜೃಂಭಿಸುತ್ತದೆ. ಅವ... ಅಲ್ಪಸಂಖ್ಯಾತರ ವಿರುದ್ಧ ಅಪಪ್ರಚಾರ ... ಪುಂಖಾನುಪುಂಖವಾಗಿ ನಡೆಯುತ್ತದೆ.

ಅಂದಹಾಗೆ 'ಜಯಕಿರಣ' ಪ್ರಿಂಟ್ ಆಗ... ಮನುವಾದಿ ಮಸಲತ್ತಿನ 'ಹೊಸದಿಗಂತ' ದೈ... 'ಹೊಸದಿಗಂತ'ದವರು ಅಗ್ಗದಲ್ಲಿ ಜಯ... ಅಚ್ಚುಹಾಕಿಕೊಡುವುದೇ ಹಿಂದೂತ್ವದ ಹರ... ವಿಜೃಂಭಿಸಲು ತಮಗೊಂದು ಸಾಥ್ ಇರಲೆಂಬ ... ಉದ್ದೇಶದಿಂದ.

ಒಟ್ಟಿನಲ್ಲಿ ಈ 'ದಿಗಂತ-ಕಿರಣ' ... ಮಂಗಳೂರಿನ ಕೋಮು ಸೌಹಾರ್ದಕ್ಕೆ ಕಂ... ಮಾಧ್ಯಮಗಳಾಗಿ ಕಾಡುತ್ತಿವೆ. ಸುಳ್ಳು 'ಚರ್ಚ್... ಸ್ಟೋರಿ' ಗೀಚಿದ್ದಕ್ಕೆ ಪೊಲೀಸ್ ಕಮೀ... 'ಜಯಕಿರಣ'ಕ್ಕೆ ಎಚ್ಚರಿಕೆಯನ್ನೂ ನೀಡಿದ್ದಾರಂತೆ... ಇದು ಕಣ್ಣೊರೆಸುವ ತಂತ್ರವಾಗಿದೆ. ಈ 'ಜಯ... ದಿಂದ ನಿರಂತರವಾಗಿ ಹೊರಡುತ್ತಿರುವ 'ಕ... ವಿಕಿರಣ' ಶಾಶ್ವತವಾಗಿ ನಿಲ್ಲಿಸಬೇಕಾಗಿದೆ.

ಆ ತಾಕತ್ತು ಕಮೀಷನರ್ ಸೀಮಂತ್‌ಕುಮಾರ್ ಸಿಂಗ್‌ಗೆ ಇದೆಯ...

ಮುತಾಲಿಕ್ ಮುಲುಕಾಟ!


ಮುತಾಲಿಕ್

ಅಲ್ಫೋನ್ಸ್ ಚರ್ಚ್ ಮೇಲೆ ಚೆಡ್ಡಿ ಪ್ರೇರಿತ ಭಜರಂಗಿ ದಾಳಿಯ ಮರುದಿನ ಹಿಂದೂ ತಾಲಿಬಾನಿ ಪ್ರಮೋದ್ ಮುತಾಲಿಕ್ ಮಂಗಳೂರಿಗೆ ಬಿಜಯಂಗೈದಿದ್ದ. ಈತನ ಕೋಮು ಸವಾರಿಯ ಉದ್ದೇಶ-ದಗಲುಬಾಜಿ ದತ್ತಮಾಲೆ ಅಭಿಯಾನದ ಬಗ್ಗೆ ಒಂದು ಪತ್ರಿಕಾಗೋಷ್ಠಿ ನಡೆಸುವುದಾಗಿತ್ತು. ಮುತಾಲಿಕ್‌ಗೆ ಮಂಗಳೂರಲ್ಲಿ ಬಾಲ ಬಿಚ್ಚಲು ಬಿಡಬಾರದೆಂಬ ಹಿಡನ್ ಹಿಕಮತ್ತಿನಿಂದಲೇ ಆತ ಬರುವ ಹೊತ್ತಿಗೇ ಸರಿಯಾಗಿ ಚರ್ಚ್ ದಾಳಿ ಪ್ಲಾನ್ ಚೆಡ್ಡಿ ರಿಂಗ್ ಮಾಸ್ಟರ್ ಹಾಕಿಕೊಂಡು ಕೂತಿದ್ದ!


ಕರಾವಳಿಯ ಆರೆಸ್ಸೆಸ್ ದೊರೆ ಕಲ್ಲಡ್ಕ ಪ್ರಭಾಕರ ಭಟ್ ಶ್ರೀರಾಮ ಸೇನೆಯೆಂಬ ತನ್ನ ಎದುರಾಳಿ ಹಿಂದೂ ಪಡೆಯ ಸ್ವಯಂ ಘೋಷಿತ ನಾಯಕಗ್ರೇಸ ಪ್ರಮೋದ್ ಮುತಾಲಿಕ್‌ನ ಬೆನ್ನುಬಿದ್ದು ಕಾಡುತ್ತಿರುವುದು ಈಗ ಬಹಿರಂಗ ರಹಸ್ಯ. ಮಂಗಳೂರಿಗೆ ಮೊನ್ನೆ ಬಂದಾಗ ಮುತಾಲಿಕ್ ದಾಯಾದಿ ದ್ವೇಷಾಸೂಯೆಯ ಕಿರಿಕ್‌ನಿಂದ ಹೈರಾಣಾಗಿ ಹೋಗಿದ್ದು ಮೋಜಾಗಿದೆ. ಪೊಲೀಸರನ್ನು ಛೂ ಬಿಟ್ಟು ಆತನಿಗೆ ಪ್ರೆಸ್‌ಮೀಟ್ ಮಾಡಲು ಅನುಮತಿ ಕೊಡಬಾರದೆಂದೇ ಭಜರಂಗಿಗಳು ಅಲ್ಫೋನ್ಸ್ ಚರ್ಚ್ ಮೇಲೆ ದಾಳಿ ಮಾಡಿದ್ದರು. ಹೀಗಾಗಿ ಪೊಲೀಸರು ಮುತಾಲಿಕ್‌ಗೆ ಚರ್ಚ್ ದಾಳಿ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾರಣಕ್ಕೆ ಪತ್ರಿಕಾಗೋಷ್ಠಿ ನಡೆಸದಂತೆ ಎಚ್ಚರಿಸಿದ್ದರು. ಆದರೂ ಕದ್ದೊಮುಚ್ಚಿಯಾದರೂ ಪ್ರೆಸ್‌ಮೀಟ್ ಮಾಡಿಯೇ ತೀರಬೇಕೆಂಬ ಹಠದಿಂದ ಮುತಾಲಿಕ್ ಅಣಿಯಾಗಿದ್ದ. ಮೊದಲು ಮಾಯಾ ಇಂಟರ್ ನ್ಯಾಷನಲ್ ಹೋಟೆಲಿನಲ್ಲಿ ಪತ್ರಿಕಾಗೋಷ್ಠಿಯೆಂದು ಪತ್ರಕರ್ತರಿಗೆ ತಿಳಿಸಲಾಗಿತ್ತು. ಆದರೆ ಅದು ಪೊಲೀಸರಿಗೆ ತಿಳಿದು ಅಲ್ಲಿಗೆ ಬಂದಿದ್ದರು. ಆಗ ಬಲ್ಲಾಳ್ ಬಾಗ್‌ಪತ್ತುಮುಡಿ ಸೌಧಕ್ಕೆ ಮಾಧ್ಯಮ ಮಂದಿ ಕರೆದೊಯ್ದು ಗೋಷ್ಠಿ ನಡೆಸಲು ಮುತಾಲಿಕ್ ಪ್ರಯತ್ನಿಸಿದ. ಅಲ್ಲೂ ಪೊಲೀಸರು ಪ್ರತ್ಯಕ್ಷವಾಗಿದ್ದರು. ಆ ಬಳಿಕ ಹೋಟೆಲ್ ಉದ್ಯಮಿಯೊಬ್ಬನ ಮನೆಗೆ ಪತ್ರಿಕಾಗೋಷ್ಠಿ ಸ್ಥಳಾಂತರಿಸಲಾಯ್ತು. ಅಲ್ಲಿಗೂ ಪೊಲೀಸರು ಬಂದಿದ್ದರು. ಆದರೆ ತಾನೇನೂ ಉದ್ರೇಕಕಾರಿ ಮಾತಾಡೋದಿಲ್ಲ ಎಂದು ಮುತಾಲಿಕ್ ಚೆಡ್ಡಿ ಪೊಲೀಸರ ಮನವೊಲಿಸಿದ್ದರಿಂದ ಅವಕಾಶ ಸಿಕ್ಕಿತು. ಅಷ್ಟೊತ್ತಿಗೆ ಮುತಾಲಿಕ್ ಮಾಮ ಸುಸ್ತು ಹೊಡೆದುಹೋಗಿದ್ದ.

ಅಲ್ಲಾತ ದಾಯಾದಿ ಕಿರುಕುಳದಿಂದ ತಾನು ಸುಸ್ತಾಗಿರುವುದನ್ನು ತೋರಿಸಿಕೊಂಡಿದ್ದು ಕುತೂಹಲಕರವಾಗಿತ್ತು, 'ನಾನು ಮಂಗಳೂರಿಗೆ ಯಾವಾಗ ಬಂದರೂ ಕ್ರಿಶ್ಚಿಯನ್ ಅಥವಾ ಮುಸ್ಲಿಮರ ಮೇಲೆ ದಾಳಿ ಆಗುತ್ತದೆ... ಇದು ಮಾಡೋದು ಮತ್ಯಾರೂ ಅಲ್ಲ... ನನ್ನ ಹಣಿಯಲೆಂದು ಹಿಂದೂ ಸಂಘಟನೆಗಳೇ ಕಿರಿಕ್ ಮಾಡುತ್ತಿವೆ..." ಎಂದು ಮುತಾಲಿಕ್ ಮುಲುಕಾಡಿದ!

ಬಿಜೆಪಿ ವಿರುದ್ಧ ತಿರುಗಿ ಬಿದ್ದಿರುವ ಮುತಾಲಿಕ್‌ನ ಕಾಡುತ್ತಿರುವುದೇ ಬಿಜೆಪಿ ಪ್ರೇರಿತ ಚೆಡ್ಡಿ-ಭಜರಂಗಿಗಳೆಂಬುದು ಎಲ್ಲರಿಗೂ ಗೊತ್ತಿರುವ ಸತ್ಯವೇ.

...ದುರ್ಯಾಚರಣೆಗೆ ಬಲಿಯಾಗಬೇಕಾಗಿದೆ. ಒಂದಲ್ಲ ಒಂದು ...ಕ್ ಮುತಾಲಿಕ್ ಬರುವ ಮುನ್ನಾದಿನ ನಡೆಯುತ್ತದೆ.

ಈಗ ಮಂಗಳೂರು ನಗರದ ಕಂಕನಾಡಿಯ 'ಅಲ್ಫೋನ್ಸ್ ಚರ್ಚ್' ಮೇಲೆ ನಡೆದಿರುವ ಹೇಯ-ಬರ್ಬರ ದಾಳಿ ಕೂಡ ...ಡ್ಕ ಭಟ್ಟ ಮತ್ತು ಪ್ರಮೋದ್ ಮುತಾಲಿಕ್ ಹಿಂದೂ ...ನ್'ಗಿರಿಗಾಗಿ ನಡೆಸುತ್ತಿರುವ ಒಣ ಪ್ರತಿಷ್ಠೆಯ ಮೇಲಾಟ ...ಬದಾದ ಪಾತಕ ಎಂದೇ ಕರಾವಳಿಯಲ್ಲಿ ...ಖ್ಯಾನಿಸ ಲಾಗುತ್ತಿದೆ. ಕಳೆದ ನವೆಂಬರ್ ...ರ ರಾತ್ರಿ ಸುಮಾರು 9 ಗಂಟೆ ವೇಳೆಗೆ ...ಂಡದ ನಶೆಯಲ್ಲಿದ್ದ ಮೂವರು ...ಯುವಕರು ಚರ್ಚ್‌ನ ಪಕ್ಕದ ಬಾಗಿಲ ಮೂಲಕ ಒಳ ಪ್ರವೇಶಿಸಿದ್ದಾರೆ. ಅವರನ್ನು ...ಫಾದರ್ ಮತ್ತು ಜತೆಗಿದ್ದ ಒಂದಿಷ್ಟು ...ಕ್ಕಳು 'ನೀವ್ಯಾರು' ಎಂದು ಕೇಳಿದ್ದಾರೆ. ...ದರ್‌ರನ್ನು ಪಕ್ಕಕ್ಕೆ ತಳ್ಳಿದ ಈ ಹಿಂದೂ ...ಮಿಗಳು ಏಸು ಪ್ರತಿಮೆ, ಮೇರಿ ...ತೆಯ ವಿಗ್ರಹ ಮತ್ತು ಪೀಠೋಪ ಕರಣ ಪುಡಿಗಟ್ಟಿ ...ಟ್ಟಹಾಸಗೈದಿದ್ದಾರೆ.




ಈ ಪುಂಡಾಟ ನಡೆಯುತ್ತಿದ್ದಾಗ ಫಾದರ್ ...ತವರೊಂದಿಗಿದ್ದ ಹುಡುಗರು ಚರ್ಚ್‌ನ ...ಗಿಲುಗಳನ್ನೆಲ್ಲ ಮುಚ್ಚಿದ್ದಾರೆ. ಆದರೆ ಆ ವೇಳೆಗಾಗಲೇ ...ಪಿಗಳಿಬ್ಬರು ಪರಾರಿಯಾಗಿದ್ದರು. ಒಬ್ಬ ಸಿಕ್ಕಿಬಿದ್ದ. ಆತ ...ಕ್ಕಾ ಭಜರಂಗಿ, ...ಜರಂಗಿಗಳ ಹಲವು ...ಧ್ವಂಸಕ ...ಕ್ರಮ-ಹಿಂಸಾಚಾರ ...ದೊಂಬಿಗಳಲ್ಲಿ ...ಭಾಗಿಯಾದ ಟ್ರ್ಯಾಕ್ ...ರೆಕಾರ್ಡಿನವ ಈ ...ಬು ಯಾನೆ ಸುಬ್ಬು. ಕೇರಳ ಮೂಲದ ...ಸುಬ್ಬು ಜಲ್ಲಿಗುಡ್ಡೆ ...ಯಲ್ಲಿ ವಾಸ ...ವಾಗಿದ್ದಾನೆ.



ಮಂಗಳೂರು ನಗರದಲ್ಲಿ ಓಡಾಡುವ 10 ನಂಬರಿನ ...ಸಿಟಿ ಬಸ್‌ನಲ್ಲಿ ಕಂಡಕ್ಟರ್ ಆಗಿದ್ದ ಈತ ಕೆಲದಿನ ಗಳಿಂದ ...ಕೆಲಸ ಕಳೆದುಕೊಂಡು ಅಂಡಲೆಯುತ್ತಿದ್ದ. ಈತನ ಜತೆ ...ಗಿದ್ದ ದಿನೇಶ್ ಎಂಬ ವೃತ್ತಿನಿರತ ಭಜರಂಗಿಯೂ ಈಗ ...ಸಿಕ್ಕಿಬಿದ್ದಿ ದ್ದಾನೆ. ಈತ ಹಿಂದೂ ಹುಚ್ಚಾಟ ...ಗಳಲ್ಲಿ ಸಕ್ರಿಯವಾಗಿ ಅನಾಚಾರ ಎಸಗುವ ...ಕ್ರಿಮಿನಲ್. ಮಜಾ ಎಂದರೆ ...ಚೆಡ್ಡೀಕರಣಗೊಂಡಿರುವ ಮಂಗಳೂರಿನ ...ಪೊಲೀಸರು- "ಮದ್ಯದ ಅಮಲಿನಲ್ಲಿ ಚರ್ಚ್‌ಗೆ ನುಗ್ಗಿದ್ದ ಈ ಹುಡುಗರಿಗೆ ಅಂದು ...ರಾತ್ರಿ ಏನಾಯ್ತೆಂಬುದೇ ಗೊತ್ತಿಲ್ಲ" ಎಂದು ...ಹೇಳುತ್ತಿದ್ದಾರೆ. ಹಿಂದೆಲ್ಲ ಚರ್ಚ್ ಮೇಲೆ ದಾಳಿ ...ನಡೆದಾಗ ಅಪರಾಧಿಗಳ ಹಿಡಿಯದೆ ...ದಾಕ್ಷಿಣ್ಯ ತೋರಿಸಿದ್ದ ಕರ್ಮಗೇಡಿ ಪೊಲೀಸರು ಈಗ ...ಪಾತಕಿಗಳು ಸಿಕ್ಕರೂ ಕೇಸ್ ಹಳ್ಳ ಹಿಡಿಸುವ ...ಹುನ್ನಾರದಲ್ಲಿದ್ದಾರೆ. ಸಿಎಂ ಡಿವಿಎಸ್ ಗೌಡರ ಗಾಡ್‌ಫಾದರ್ ಕಲ್ಲಡ್ಕ ಭಟ್ಟರ ಸುಗ್ರೀವಾಜ್ಞೆಯೇ ಹಾಗಿರುವಾಗಿದೆ!

ಮಂಗಳೂರು ನಗರದ ಕ್ರೈಸ್ತ ಸಂಸ್ಥೆಗಳ ಮೇಲೆ ಕಳೆದ ಹದಿನೈದು ದಿನದಲ್ಲಿ ನಡೆದ ಮೂರನೇ ಅಟ್ಯಾಕ್ ಇದು. ಅಕ್ಟೋಬರ್ 22ರ ರಾತ್ರಿ ಮೂವರು ಭಜರಂಗಿಗಳು ಬೆಂದೂರಿನ ಸಂತ ತೆರೇಸಾ ಚರ್ಚ್‌ನ ಸ್ಕೂಲಿನ ಮೇರಿ ಮಾತೆಯ ಗಾಜಿನ ಪೆಟ್ಟಿಗೆಗೆ ಇಟ್ಟಿಗೆ ಎಸೆದು ಚೂರು ಮಾಡಿದ್ದರು. ಅದೇ ದಿನ ನಂತೂರು ಪದವಿನಲ್ಲಿ ಕ್ರೈಸ್ತರು ನಡೆಸು ತ್ತಿರುವ ಶಾಲೆಮೇಲೂ ಕಲ್ಲು ತೂರಿ ಚಾಪೆಲ್‌ನ ಗಾಜು ಒಡೆಯಲಾಗಿತ್ತು. ಈ ಬಗ್ಗೆ ಪೊಲೀಸರಿಗೆ ದೂರೂ ಕೊಡ ಲಾಗಿದೆ. ಆದರೆ ಮಂಗಳೂರಿನ ಖಾಕಿ ಕಿರಾತಕರಿಗೆ ಒಬ್ಬೇ ಒಬ್ಬ ಕ್ರಿಮಿನಲ್‌ನ ಹಿಡಿಯಲಾಗಿಲ್ಲ. ಬುದ್ಧಿಪೂರ್ವಕವಾಗೇ ನಿರ್ಲಕ್ಷ್ಯ ತೋರಿಸುತ್ತಿರುವ ಪೊಲೀಸರು ಚೆಡ್ಡೀಕರಣಗೊಂಡಿರುವುದಕ್ಕೆ ಇದು ಸಾಕ್ಷ್ಯಾಧಾರ! ಭಜರಂಗಿ ಸಾಮ್ರಾಜ್ಯವಾಗಿರುವ ಕರಾವಳಿಯಲ್ಲಿ ಪೊಲೀಸರು ಕರ್ತವ್ಯ ಭ್ರಷ್ಟರಾಗಿ ಹಿಂದೂ ಪರ ಕಾರ್ಯಾಚರಣೆ ನಡೆಸುತ್ತಿರುವುದನ್ನು ಹಲವು ತನಿಖಾ ಆಯೋಗಗಳು ಗುರುತಿಸಿವೆ. ಆದರೂ ಈ ಹರಾಮಿ ಪೊಲೀಸರಿಗೆ ಅಂಕುಶ ಇಡಲಾಗಿಲ್ಲ.

ಕಳೆದ ಮೂರ್‍ನಾಲ್ಕು ತಿಂಗಳಿಂದ ಭಜರಂಗಿಗಳು ನಡೆಸುತ್ತಿರುವ ಆಟಾಟೋಪ-ದೊಂಬಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಬಿಜೆಪಿ ಆಳ್ವಿಕರ ಸಹಕಾರ-ಅವರ ದೇವಪಿತ್ರು ಕಲ್ಲಡ್ಕ ಭಟ್ಟನಂಥವರ ರಹಸ್ಯ ನಿರ್ದೇಶನದಲ್ಲಿ 2008ರಲ್ಲಿ ನಡೆದ ಚರ್ಚ್ ದಾಳಿಯ ಸ್ಟೈಲ್‌ನಲ್ಲೇ ಮತ್ತೆ ಕ್ರೈಸ್ತರ ಮೇಲೆರಗಲು ಹಿಂದೂ ಕ್ರಿಮಿಗಳು ಹಿಕಮತ್ತು ನಡೆಸಿದ್ದಾರೆಂಬ ಅನುಮಾನ ಎಂಥವರಿಗೂ ಮೂಡುತ್ತದೆ. ಆಗಸ್ಟ್‌ನಲ್ಲಿ ಪೊಲೀಸರೇ ಮಂಗಳೂರು ನಗರ ಸುತ್ತಮುತ್ತಲಿನ ಪ್ರಾಟೆಸ್ಟೆಂಟ್ ಅರ್ಚಕರನ್ನು ಠಾಣೆಗೆ ಕರೆಸಿಕೊಂಡು, ಅವರು ನಡೆಸುತ್ತಿರುವ ಪ್ರಾರ್ಥನಾ ಸಭೆಗಳನ್ನು ತಕ್ಷಣದಿಂದ ಸ್ಥಗಿತ ಗೊಳಿಸುವಂತೆ ತಾಕೀತು ಮಾಡಿ ಧಮಕಿ ಹಾಕಿದ್ದರು. ಈಗ ಸರಣಿಯಾಗಿ ಚರ್ಚ್-ಕ್ರೈಸ್ತರ ಸಂಸ್ಥೆಗಳ ಮೇಲೆ ದಾಳಿ-ದೌರ್ಜನ್ಯ ನಡೆಯುತ್ತಿದೆ.



ಮಂಗಳೂರಿನ ಪೊಲೀಸರು ನಿಯತ್ತಿನಿಂದ ಕರ್ತವ್ಯ ನಿಭಾಯಿಸಿದ್ದರೆ, ತಮಗೆ ಅನ್ನ ಕೊಡು ತ್ತಿರುವ ಸಂವಿಧಾನಕ್ಕೆ ನಿಷ್ಠರಾಗಿದ್ದರೆ ಇಂಥ ದುರಾಚಾರ-ಕ್ರೌರ್ಯಕಾಂಡ ನಡೆಯುತ್ತಲೇ ಇರಲಿಲ್ಲ. ಈ ಕ್ರಿಮಿನಲ್ ಪೊಲೀಸರಿಗೆ ಪಾಠ ಕಲಿಸುವರ್‍ಯಾರು? ಭೂಭಾನ್ಗಡಿಯಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿರುವ ಗೃಹಮಂತ್ರಿ ಅಶೋಕ್‌ಗೆ ಇತ್ತ ಗಮನ ಹರಿಸಲು ಪುರುಸೊತ್ತಾದರೂ ಎಲ್ಲಿದೆ? ಪಾಪ!

• ನಹುಷ


ಬಿಜೆಪಿ ಸರ್ಕಾರದಲ್ಲಿ ಹೆಚ್ಚಾದ ದಲಿತರ ಮೇಲಿನ ದೌರ್ಜನ್ಯ

ಕನ್ನಡ ಶಾಲೆಗಳನ್ನು ಮುಚ್ಚಲು ವ್ಯವಸ್ಥಿತ ಪಿತೂರಿ......!

ಪರಿಶಿಷ್ಟ ಜಾತಿ-ವರ್ಗಗಳ ವಿದ್ಯಾರ್ಥಿ ನಿಲಯಗಳ ಬಾಗಿಲು ಹಾಕುವ ಯೋಜನೆ....!!

ಈಗ ದಲಿತರ ಮೇಲಿನ ದೌರ್ಜನ್ಯಗಳ ಪ್ರಕರಣಗಳಲ್ಲಿ ಹೆಚ್ಚಳ....!!!!

-ಬಿಜೆಪಿಗಳು ಕನಸು ಕಾಣುತ್ತಿರುವ 'ಮನುಧರ್ಮ ಶಾಸ್ತ್ರ' ಪ್ರಣೀತ ಸಮಾಜ ಅಸ್ತಿತ್ವಕ್ಕೆ ಬರುವುದಕ್ಕೆ ಇನ್ನು ಹೆಚ್ಚು ದಿನ ಕಾಯಬೇಕಾಗಿಲ್ಲವೆಂದು ಕಾಣುತ್ತದೆ. ಬ್ರಾಹ್ಮಣಶಾಹಿಗಳು ಬಯಸುವಂತೆಯೇ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರವು ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗ ಒಂದು ಹೊಸ ದಾಖಲೆಯನ್ನೇ ನಿರ್ಮಿಸಿದೆ.




ರಾಜ್ಯಾದ್ಯಂತ ದಲಿತ ಸಮುದಾಯದವರ ಮೇಲಿನ ದೌರ್ಜನ್ಯದ ಸಂಖ್ಯೆಯಲ್ಲಿ ಹೆಚ್ಚಳ ಸಾಧಿಸಿರುವುದೇ ಈ ಸಾಧನೆಯಾಗಿದೆ.

ಕರ್ನಾಟಕದ ಹಲವು ಸಾಮಾಜಿಕ ಕಾರ್ಯಕರ್ತರು, ದಲಿತ ಸಂಘಟನೆಗಳು, ಎನ್‌ಜಿಓಗಳು ಹಾಗೂ ಬುದ್ಧಿಜೀವಿಗಳೆಲ್ಲಾ ಸೇರಿ ಇತ್ತೀಚೆಗೆ ಒಂದು ಅಧ್ಯಯನ ವರದಿ ಬಿಡುಗಡೆ ಮಾಡಿದ್ದಾರೆ. ಪರಿಶಿಷ್ಟ ಜಾತಿ/ಪಂಗಡ (ದೌರ್ಜನ್ಯ ತಡೆ) ಕಾಯ್ದೆ, 1989ರ ಮೇಲ್ವಿಚಾರಣೆ ಹಾಗೂ ಬಲವರ್ಧನಾ ಸಮಿತಿ ಎಂಬ ಹೆಸರಿನ ಈ ತಂಡ ಕರ್ನಾಟಕದ ಎಲ್ಲಾ ಜಿಲ್ಲೆಗಳ ಮಾಹಿತಿ ಕಲೆಹಾಕಿ ಈ ವಿಶ್ಲೇಷಣಾತ್ಮಕ ವರದಿ ನೀಡಿದೆ.

ಸ್ವತಂತ್ರ ಭಾರತದಲ್ಲಿ ಸಂವಿಧಾನ ರಚನೆಯಾಗಿ, ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಕಾಯ್ದೆ ಜಾರಿಗೆ ಬಂದಿದ್ದರೂ ದಲಿತ ಸಮುದಾಯಗಳ ಮೇಲಿನ ದೌರ್ಜನ್ಯಗಳು ಹಾಗೆಯೇ ಮುಂದುವರೆಯುತ್ತಿವೆ. ಅದರಲ್ಲೂ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇದರ ಪ್ರಮಾಣ ಹೆಚ್ಚಾಗಿದೆಯೆಂದು ಕೆಲ ಅಂಕಿ ಅಂಶಗಳು ಹೇಳುತ್ತಿವೆ. ಈಗ ಕರ್ನಾಟಕವೂ ಇದಕ್ಕೆ ಹೊರತಲ್ಲ. ಕಳೆದ ಆರೆಂಟು ವರ್ಷಗಳಲ್ಲಿ ಸರಾಸರಿ ವರ್ಷಕ್ಕೆ ಒಂದು ಸಾವಿರದಷ್ಟು ದೌರ್ಜನ್ಯದ ಘಟನೆಗಳು ಕರ್ನಾಟಕದಲ್ಲಿ ದಾಖಲಾಗುತ್ತಿದ್ದರೆ ಈಗ ಬಿಜೆಪಿ ಸರ್ಕಾರದಲ್ಲಿ ಆ ಸಂಖ್ಯೆ ವರ್ಷಕ್ಕೆ ಒಂದೂವರೆ ಸಾವಿರ ಮೀರುತ್ತಿದೆ. ಅಂದರೆ ಮೇಲ್ಜಾತಿ ಹಾಗೂ ಮೇಲ್ವರ್ಗದ ಜನ ಬಿಜೆಪಿ ಸರ್ಕಾರದ ಪರೋಕ್ಷ ಬೆಂಬಲದೊಂದಿಗೆ ದೌರ್ಜನ್ಯಗಳ ಹೊಸ ಅಧ್ಯಾಯ ಶುರು ಮಾಡುತ್ತಿರುವಂತೆ ಕಾಣುತ್ತಿದೆ.

ಒಂದು ಖಚಿತ ಅಂಕಿ ಅಂಶಗಳ ಮೂಲಕ ಹೇಳಬೇಕೆಂದರೆ 2008 ರಲ್ಲಿ 1494, 2009 ರಲ್ಲಿ 1441 ಹಾಗೂ 2010 ರಲ್ಲಿ ಒಟ್ಟು 1632 ದೌರ್ಜನ್ಯದ ಘಟನೆಗಳು ಅಧಿಕೃತವಾಗಿ ದಾಖಲಾಗಿದೆ. ನೆನಪಿಡಿ' ಇದು ದಾಖಲಾದ ಅಂದರೆ ಬೆಳಕಿಗೆ ಬಂದ ಪ್ರಕರಣಗಳ ಸಂಖ್ಯೆ ಮಾತ್ರ.' ಇದಲ್ಲದೆ ಯಾರ ಗಮನಕ್ಕೂ ಬಾರದ, ದೂರು ದಾಖಲಿಸಲು ಬಾಧಿತರು ಹೆದರಿ ಸುಮ್ಮನಾಗಿರುವ ಪ್ರಕರಣಗಳ ಸಂಖ್ಯೆ ಖಂಡಿತ ಇದರ ನಾಲ್ಕು ಪಟ್ಟು ಇರಬಹುದು. ಒಂದು ಸರ್ಕಾರವು ನಿರ್ದಿಷ್ಟ ಜಾತಿ-ಜನಾಂಗಗಳ ವಿರುದ್ಧ ಇದೆ ಎಂಬುದು ಗೊತ್ತಾದರೆ ಸಾಕು ಪಾಳೇಗಾರಿಕೆ ಶಕ್ತಿಗಳಿಗೆ ಅದೇ ದೊಡ್ಡ ಬಲ. ಇದು ಮತ್ತೂ ಹರಡುತ್ತಾ ಸರ್ಕಾರಿ ಯಂತ್ರಾಂಗ, ಪೊಲೀಸು ಹಾಗೂ ಕೋರ್ಟುಗಳನ್ನು ವ್ಯಾಪಿಸಬಲ್ಲದು.



ಕರ್ನಾಟಕದ ನಿರ್ದಿಷ್ಟ ಸಂದರ್ಭದ ಬಗ್ಗೆ ಹೇಳಲು ಇಲ್ಲಿ ಬೇಕಾದಷ್ಟು ವಿಚಾರಗಳಿವೆ.

ಸರ್ಕಾರವೇ ದಲಿತರ ಶತ್ರು

ಜಾತಿ ದೌರ್ಜನ್ಯ ತಡೆಗೆ ಸಂವಿಧಾನದತ್ತವಾದ ಕೆಲ ಕಾಯ್ದೆ ಕಾನೂನುಗಳು ಇರುವಂತೆಯೇ ಅವುಗಳನ್ನು ಜಾರಿಗೊಳಿಸಲು ಉಸ್ತುವಾರಿ ನೋಡಲು ಸರ್ಕಾರಿ ಸಮಿತಿಗಳೂ ಇವೆ.

ಆದರೆ ಈಗಿನ ಬಿಜೆಪಿ ಸರ್ಕಾರ ಅವೆಲ್ಲವನ್ನು ನಿಷ್ಕ್ರಿಯ ಗೊಳಿಸಿಬಿಟ್ಟಿದೆ.

ಉದಾಹರಣೆಗೆ ಹೇಳಬೇಕೆಂದರೆ ಪರಿಶಿಷ್ಟ ಜಾತಿ-ಪಂಗಡಗಳ ಮೇಲಿನ ದೌರ್ಜನ್ಯ ನಿಯಂತ್ರಣ ಕುರಿತಂತೆ ರಾಜ್ಯಾದ್ಯಂತ ನಿಗಾ ಇಡಲು ಕಾನೂನಿನ ಪ್ರಕಾರ (SWD 34/SDA 2010) ಮೇ 14, 2010 ಬೆಂಗಳೂರು) ಒಂದು ನೋಡಲ್ ಏಜನ್ಸಿ ಅಸ್ತಿತ್ವದಲ್ಲಿದೆ.

ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿಯೇ ಇದರ ಅಧ್ಯಕ್ಷರಾಗಿರುತ್ತಾರೆ. ಉಳಿದಂತೆ ಈ ನೋಡಲ್ ಏಜನ್ಸಿಯ ಕಾರ್ಯದರ್ಶಿಯಾಗಿ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇದ್ದಾರೆ.

ರಾಜ್ಯ ಉನ್ನತ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜಾಗೃತ ಮತ್ತು ಉಸ್ತುವಾರಿ ಸಮಿತಿ ಎಂದು ಹೇಳಲಾಗುವ ಈ ಏಜನ್ಸಿಯಲ್ಲಿ ದಲಿತ ಕ್ಯಾಬಿನೆಟ್ ಸಚಿವರು, ಗೃಹ ಸಚಿವರು, ಸಮಾಜ ಕಲ್ಯಾಣ ಇಲಾಖೆ, ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಹಾಗೂ ವಿವಿಧ ಇಲಾಖಾ ಮುಖ್ಯಸ್ಥರು ಸದಸ್ಯರಾಗಿದ್ದಾರೆ.

ಈ ಏಜನ್ಸಿಯು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ ಪರಿಸ್ಥಿತಿಯ ಪರಾಮರ್ಶೆ ನಡೆಸಬೇಕೆಂಬ ನಿಯಮವಿದೆ. ಆದರೆ ಈ ಬಿಜೆಪಿಗಳು ಅಂತಹ ಸಭೆಯನ್ನೇ ನಡೆಸದೆ ನಿರ್ಲಕ್ಷಿಸುತ್ತಿದ್ದಾರೆ. ಯತಾಃರಾಜಾ ತಥಾಃಪ್ರಜಾ ಅನ್ನುವಂತೆ ಕೆಳಹಂತದ ಅಧಿಕಾರಿಗಳೂ ಸಭೆ ನಡೆಸುತ್ತಿಲ್ಲ. ರಾಜ್ಯಮಟ್ಟದಲ್ಲಿ ಒಂದು ನೋಡಲ್ ಏಜನ್ಸಿ ಇರುವಂತೆಯೇ ಜಿಲ್ಲಾ ಮಟ್ಟದಲ್ಲೂ ಡಿಸಿ, ಸಮಾಜ ಕಲ್ಯಾಣ ಇಲಾಖೆ ಪೊಲೀಸ್ ಇಲಾಖೆ ಒಳಗೊಂಡಂತೆ ನೋಡಲ್ ಏಜನ್ಸಿಗಳಿವೆ. ಇಲ್ಲೂ ಸಹ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಯಬೇಕೆಂದಿದೆ. ಆದರೆ ಅಂತಹ ಸಭೆಗಳು ಎಲ್ಲಿಯೂ ನಡೆಯುತ್ತಿಲ್ಲ. ಇದರ ಬಗ್ಗೆ ನಿಖರವಾದ ಅಂಕಿ ಸಂಖ್ಯೆಗಳ ಮೂಲಕವೇ ಹೇಳಬೇಕೆಂದರೆ ಒಂದು ಜಿಲ್ಲೆಯಲ್ಲಿ ವರ್ಷಕ್ಕೆ 4 ರಂತೆ ಒಟ್ಟು 30 ಜಿಲ್ಲೆಗಳಲ್ಲಿ 120 ಸಭೆಗಳು ನಡೆಯಬೇಕಿದ್ದರೂ 2008 ರಲ್ಲಿ ನಡೆದದ್ದು ಕೇವಲ 36 ಸಭೆಗಳು ಮಾತ್ರ. ಅದೇ ರೀತಿ 2009 ರಲ್ಲಿ 38 ಹಾಗೂ 2010 ರಲ್ಲಿ ಒಟ್ಟು 56 ಸಭೆಗಳು ನಡೆದಿವೆ. ಅಂದರೆ ವರ್ಷಕ್ಕೆ ನಾಲ್ಕು ಸಭೆಗಳ ಬದಲಾಗಿ ಸರಾಸರಿ 1 ಸಭೆ ಮಾತ್ರ ನಡೆದಿದೆ.

ಹೀಗೆ ಜಾತಿ ದೌರ್ಜನ್ಯ ನಿಯಂತ್ರಿಸುವ ನೋಡಲ್ ಏಜನ್ಸಿಯೇ ನಿಯಮಿತವಾಗಿ ಸಭೆ ನಡೆಸದೆ ಹೋದರೆ ದೌರ್ಜನ್ಯ ನಿಯಂತ್ರಿಸುವ, ಜಾಗೃತಿ ಮೂಡಿಸುವ ಮಾತೆಲ್ಲಿಂದ ಬರಬೇಕು?

ತೀರ್ಪು ಮತ್ತು ಶಿಕ್ಷೆಯ ಪ್ರಮಾಣ

ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳ ಪೈಕಿ ದಾಖಲಾಗುವ ಪ್ರತಿ ನೂರು ಕೇಸುಗಳಲ್ಲಿ ಅಂತಿಮವಾಗಿ ಶಿಕ್ಷೆಯಾಗುವ ಸಂಖ್ಯೆ ಎಷ್ಟು ಗೊತ್ತೆ?

ಶೇಕಡಾ 5 ಮಾತ್ರ!


ಭಾರತದ ರಾಷ್ಟ್ರೀಯ ಸರಾಸರಿ 28% ಇದ್ದರೆ ಕರ್ನಾಟಕ ಹಾಗೂ ಗುಜರಾತ್ ರಾಜ್ಯಗಳಲ್ಲಿ ದೌರ್ಜನ್ಯಕ್ಕೀಡಾದ ದಲಿತರಲ್ಲಿ ಶೇಕಡಾ 5 ರಷ್ಟು ಜನ ಮಾತ್ರ ನ್ಯಾಯ ಪಡೆಯುತ್ತಿದ್ದಾರೆ. ಕೊನೆಗೆ ಈ ಶೇಕಡಾ 5 ಪ್ರಕರಣಗಳಲ್ಲೂ ಶಿಕ್ಷೆಯ ಪ್ರಮಾಣಕ್ಕೂ ದೌರ್ಜನ್ಯದ ಸ್ವರೂಪ ಹಾಗೂ ಆದ ನಷ್ಟಗಳಿಗೂ ಹೋಲಿಸುವಂತಿರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ದೌರ್ಜನ್ಯಕ್ಕೊಳಗಾದ ವರ ಪರವಾಗಿ ನಿಲ್ಲಬೇಕಾದ ಪೊಲೀ ಸರು, ಸರ್ಕಾರಿ ವಕೀಲರು ನಿರ್ಲಕ್ಷ್ಯ ತೋರುವುದೇ ಆಗಿದೆ. ಅನೇಕ ಪ್ರಕರಣಗಳಲ್ಲಿ ಸೂಕ್ತ ಸಾಕ್ಷ್ಯಧಾರ ಸಂಗ್ರಹಿಸದೆ, ಕೇಸ್‌ನ ತಳಹದಿಯನ್ನೇ ದುರ್ಬಲಗೊಳಿಸಿರುತ್ತಾರೆ. ಸಾಕ್ಷಿ ದಾರರಿಗೆ ಪ್ರಯಾಣ ಭತ್ಯೆ ನೀಡಬೇಕೆಂಬ ಕಾನೂನಿದೆಯಾದರೂ ಅದನ್ನು ಜನರಿಗೆ ತಿಳಿಸದೆ ಗುಟ್ಟಾಗಿಡಲಾಗಿದೆ. ಇದರ ಇನ್ನೊಂದು ವಂಚನೆಯೆಂದರೆ 'ರಾಜಿ' ಮಾಡಿಸುವ ಮೂಲಕ ಕೇಸ್‌ಗಳನ್ನು ಮುಗಿಸುತ್ತಿರುವುದು. ಪರಿಶಿಷ್ಟರ ಮೇಲಿನ ದೌರ್ಜನ್ಯದ ಪ್ರಕರಣಗಳನ್ನು ರಾಜೀ ಮಾಡಿಸುವ ಮೂಲಕ ಮುಕ್ತಾಯಗೊಳಿಸುವುದನ್ನು ಸುಪ್ರೀಂಕೋರ್ಟ್ ಅಪೀಲ್ ಸಂಖ್ಯೆ 959/2011 ರ ಮೂಲಕ ನಿರ್ಬಂಧಿಸಿದೆ. ಹಾಗಿದ್ದಾಗಲೂ ಕರ್ನಾಟಕದಲ್ಲಿ 40 ಕ್ಕೂ ಹೆಚ್ಚು ಕೇಸ್‌ಗಳನ್ನು ರಾಜಿ ಮಾಡಿಸುವ ಮೂಲಕ ಕಾನೂನುಬಾಹಿರವಾಗಿ ಮುಕ್ತಾಯಗೊಳಿಸಲಾಗಿದೆ. ಇಂತ ಪ್ರಕರಣಗಳಲ್ಲಿ ದೌರ್ಜನ್ಯ ವೆಸಗಿ ನಂತರ ರಾಜಿಯಾಗಿರುವ ಆರೋಪಿಗಳ ವಿರುದ್ಧ ಅವರ ರಾಜಿ ಹೇಳಿಕೆಯನ್ನೇ ತಪ್ಪೊಪ್ಪಿಗೆ ಎಂದು ಪರಿಗಣಿಸಿ ಪ್ರಕರಣಗಳಿಗೆ ಮರುಚಾಲನೆ ನೀಡಬೇಕಿದೆ.

ಇದಲ್ಲದೆ ಬಾಧಿತ ಜನರಿಗೆ ಪುನರ್ವಸತಿ ಕಲ್ಪಿಸುವ ವಿಚಾರದಲ್ಲೂ ಬಿಜೆಪಿ ಸರ್ಕಾರ ನಿರಾಸಕ್ತಿ ತೋರಿಸುತ್ತಿದೆ. ಮತ್ತೊಂದೆಡೆ ಪೊಲೀಸರು ವಿನಾಕಾರಣ 'ಬಿ' ರಿಪೋರ್ಟ್ ಹಾಕಿ ಅನೇಕ ಕೇಸ್‌ಗಳನ್ನು ಮುಚ್ಚಿಹಾಕುತ್ತಲೂ ಇದ್ದಾರೆ.

ಈ ಎಲ್ಲಾ ಅಂಶಗಳ ಬಗ್ಗೆ ವಿವರವಾದ ಮಾಹಿತಿ ಕಲೆಹಾಕಿ ವರದಿ ಸಿದ್ಧಪಡಿಸಲು NCDHR, ಬುದ್ದಿಸ್ಟ್ ಲೀಗ್, ರೆಡ್ಸ್ ಸಂಚಯ, ನೆಲೆ, ಓಪನ್‌ಸ್ಪೇಸ್ ಮುಂತಾದ ಅನೇಕ ಸಂಸ್ಥೆಗಳು ಕೈಜೋಡಿಸಿವೆ.

ಕರ್ನಾಟಕದ ಜನಜೀವನ ದಿನೇದಿನೇ ಹೆಚ್ಚೆಚ್ಚು ಕ್ರೌರ್ಯದತ್ತ ಸಾಗುತ್ತಿರುವುದಕ್ಕೆ ಇದೆಲ್ಲಾ ಸಾಕ್ಷಿಯಾಗಿದೆ. ಅದಕ್ಕೆ ಹೇಳಿ ಮಾಡಿಸಿದಂತೆ ಮೇಲ್ಜಾತಿ-ಮೇಲ್ವರ್ಗದವರ ಕೈಲೇ ಬಿಜೆಪಿ ಸರ್ಕಾರವೂ ಇದೆ.

• ಪಾರ್ವತೀಶ



ಕಣ್ಣು ಕೀಳಿಸಿಕೊಂಡ ಪ್ರೇಮಿ ಕುರುಡು ನಾಟಕ ಆರಂಭಿಸಿದನಾ?

ಅನುಷಾ ಎಂಬ ಹುಡುಗಿಯನ್ನು ಪ್ರೀತಿಸಿ, ನಂತರ ಆ ಪ್ರೇಮ ಪ್ರಕರಣ ಎತ್ತೆತ್ತಲೋ ಸಾಗಿ ಕಡೆಗೊಂಡು ದಿ… ಹುಡುಗಿ ಮನೆಯವರಿಂದ ಕಣ್ಣು ಕೀಳಿಸಿಕೊಂಡಿದ್ದ ಮಂಡ್ಯದ ಹುಡುಗ ರಘು ಈಗ ಎಲ್ಲಿದ್ದಾನೆ? ಏ… ಮಾಡುತ್ತಿದ್ದಾನೆ? 'ಕಣ್ಣಿಲ್ಲದಿದ್ದರೂ ಪರವಾಗಿಲ್ಲ ರಘು ಬಾಳಿಗೆ ಆಸರೆಯಾಗುತ್ತೇವೆ ಎಂದು ಬಂದ ಹೆಣ್ಣುಮಕ್… ಕತೆ ಏನಾಯಿತು? ಎಂದೆಲ್ಲಾ ಹುಡುಕಹೊರಟರೆ ಆತನ ಸ್ನೇಹಿತರಿಂದಲೇ ಒಂದಿಷ್ಟು ವಿಚಿತ್ರವೆನಿಸುವಂ… ಆತನ ಬಗ್ಗೆ ಅನುಮಾನ ಹುಟ್ಟಿಸುವ ಮಾಹಿತಿಗಳು ಹೊರಬೀಳುತ್ತಿವೆ....

ಮೊದಲು ಒಂದು ಪುಟ್ಟ ಫ್ಲ್ಯಾಶ್‌ಬ್ಯಾಕ್:

ವರ್ಷಗಟ್ಟಲೆ ಒಬ್ಬರನ್ನೊಬ್ಬರು ಪ್ರೀತಿಸಿ, ಇದ್ದಬದ್ದ ಕೇರಿ ಕೊಂಪೆಗಳಲ್ಲೆಲ್ಲ ತಿರುಗಾಡಿ, ಮನೆಯವರ ಅಭಿಪ್ರಾಯದ ವಿರುದ್ಧ ಓಡಿ ಹೋಗಿ ಧರ್ಮಸ್ಥಳದಲ್ಲಿ ಪ್ರೇಮಿಗಳಿಬ್ಬರು ಮದುವೆಯಾಗುತ್ತಾರೆ. ಆನಂತರ ಅವರಿಬ್ಬರು ಒಂದಿಷ್ಟು ದಿನ ದೂರದೂರುಗಳಲ್ಲೆಲ್ಲಾ ಅಲೆದಾಡಿ ಮತ್ತೆ ತಮ್ಮೂರಿಗೆ ವಾಪಸ್ಸಾಗುತ್ತಾರೆ. ಇನ್ನಾದರೂ ತಮ್ಮ ಸಂಬಂಧವನ್ನು ತಮ್ಮ ಮನೆಯವರು ಒಪ್ಪುತ್ತಾರೆ ಎನ್ನುವ ನಂಬಿಕೆ ಜೋಡಿಗಳದ್ದು. ಆದರೆ ಅವರಿಬ್ಬರು ಊರಿಗೆ ಬಂದು ಇಳಿಯುತ್ತಿದ್ದಂತೆ ಹುಡುಗಿಯ ಮನೆಯವರು ಆಕೆಯ ತಾಳಿ ಕಿತ್ತುಹಾಕಿ, ಹುಡುಗನನ್ನು ಆಲೆಮನೆಗೆ ಎಳೆದೊಯ್ದು ಸಮಾ ರುಬ್ಬಿ ಕಳಿಸುತ್ತಾರೆ.

ಕೆಲ ದಿನಗಳ ನಂತರ:

ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲೇರುತ್ತದೆ. ಪೊಲೀಸರ ಮುಂದೆ ಕತ್ತು ಬಗ್ಗಿಸಿ ನಿಂತ ಹುಡುಗಿ 'ಅವನಿಗೂ ನನಗೂ ಯಾವ ಸಂಬಂಧವೂ ಇಲ್ಲ' ಎಂದುಬಿಡುತ್ತಾಳೆ. ತಾಳಿ ಕಟ್ಟಿಸಿಕೊಂಡ ಹುಡುಗಿಯೇ ಪ್ಲೇಟು ಬದಲಿಸಿದ ಮೇಲೆ ಹುಡುಗ ಕೈಚೆಲ್ಲಿ ನಿಲ್ಲುತ್ತಾನೆ. ಹುಡುಗಿಯ ಕಡೆಯವರು ಹುಡುಗನಿಗೆ ಧಮಕಿ ಹಾಕಿ 'ಇನ್ನಾವತ್ತೂ ಈಕೆಯ ತಂಟೆಗೆ ಹೋಗೊಲ್ಲ' ಎಂದು ಆತನಿಂದ ಮುಚ್ಚಳಿಕೆ ಬರೆಸಿಕೊಂಡು ಕಳಿಸುತ್ತಾರೆ.



ಚಾಮರಾಜಪೇಟೆಯ ರಘುವಿನ ಮಲ್ಟಿ ಜಿಮ್ ಸೆಂಟರ್

ತಿಂಗಳುಗಟ್ಟಲೆ, ವರ್ಷಗಟ್ಟಲೆ ಲವ್ ಮಾಡಿ, ಸಿಕ್ಕಲ್ಲೆಲ್ಲಾ ಅಲೆದಾಡಿ ಕಡೆಗೆ ಮದುವೆಯೂ ಮುಗೀತು ಅನ್ನೋವಷ್ಟರಲ್ಲಿ ಕೈಕೊಟ್ಟ ಹುಡುಗಿಯ ಮೇಲೆ ಕೆಂಡಾಮಂಡಲನಾಗುವ ಹುಡುಗನ ಎದೆಯಲ್ಲಿ ಆಕೆಯ ಮೇಲೆ ದ್ವೇಷ, ಅಸಹನೆ, ಸಿಟ್ಟು, ಸಡವುಗಳೆಲ್ಲಾ ಒಟ್ಟೊಟ್ಟಿಗೇ ಜ್ವಾಲೆಯಂತೆ ಕುದಿಯುತ್ತದೆ. ಆದರೆ ಏನೂ ಮಾಡಲಾಗದ ಹುಡುಗ ಹುಟ್ಟೂರನ್ನು ಬಿಟ್ಟು ಬೆಂಗಳೂರು ಸೇರುತ್ತಾನೆ. ಜಿಮ್ ಒಂದರಲ್ಲಿ ಕೋಚ್ ಆಗಿ ಸೇರಿ ಹೊಸ ಬದುಕು ಆರಂಭಿಸುತ್ತಾನೆ.

ಅಲ್ಲಿಗೆ ಕಥೆ ಮತ್ತೊಂದು ಟ್ವಿಸ್ಟ್ ಪಡೆಯುತ್ತದೆ!




ಅನುಷಾ

ಕೈಕೊಟ್ಟ ಹುಡುಗಿ ಮತ್ತೊಂದು ಮದುವೆಯಾಗುತ್ತಿದ್ದಾಳೆ ಎಂಬ ಸುದ್ದಿ ಹುಡುಗನ ಕಿವಿ ತಲುಪುತ್ತದೆ. ಮದುವೆಯ ಆರತಕ್ಷತೆಗೆ ಹೊರಟು ನಿಲ್ಲುತ್ತಾನೆ. ಈತ ಅಲ್ಲಿಗೆ ಹೋಗಿದ್ದು ಆಕೆಯ ಮೇಲೆ ಪ್ರತೀಕಾರ ತೀರಿಸಿಕೊಳ್ಳಲಿಕ್ಕಾ? ತನಗೆ ಮೋಸ ಮಾಡಿದವಳನ್ನು ಮದುಮಗಳ ರೂಪದಲ್ಲಿ ಕಾಣಲಿಕ್ಕಾ? ಅಥವಾ ಆಕೆಯನ್ನು ಅಪಹರಿಸಿಕೊಂಡು ಹೋಗೋದಕ್ಕಾ?

ಈತ ಬಂದ ಕಾರಣವಾದರೂ ಏನು ಎಂದು ಅರಿತುಕೊಳ್ಳುವ ಬದಲಾಗಿ ಹುಡುಗಿಯ ಅಣ್ಣ ಮತ್ತು ಆತನ ಭಂಟರು ಹುಡುಗನ ಹಿಂದಿನಿಂದ ಬಂದು ಕಬ್ಬಿಣದ ಸಲಾಕೆಗಳಿಂದ ಆತನಿಗೆ ಯದ್ವಾತದ್ವಾ ಹೊಡೆಯಲು ಶುರು ಮಾಡುತ್ತಾರೆ... ಆತನ ಕೈಕಾಲು ಕಟ್ಟಿ, ಯಾವುದೋ ಲಗೇಜು ಆಟೋದಲ್ಲಿ ಆತನನ್ನು ತುಂಬಿಕೊಳ್ಳುತ್ತಾರೆ. ಆ ಹುಡುಗಿಯ ಅಣ್ಣ ಯಾವ ಕರುಣೆಯನ್ನೂ ತೋರದೆ ಹುಡುಗನ ಕಣ್ಣುಗಳಿಗೆ ಕೈಯಿಟ್ಟವನೇ ಆಳಕ್ಕೆ ಬೆರಳುಗಳನ್ನು ತೂರಿಸಿ ಚಿವುಟಿಬಿಡುತ್ತಾನೆ...

ಅಬ್ಬಬ್ಬ... ಈ ಕಥೆಯನ್ನು ಎಲ್ಲೋ ಕೇಳಿದ್ದೀವಲ್ಲಾ ಎಂದು ಅನಿಸುತ್ತಿದೆಯಾ? ಖಂಡಿತಾ ಇದು ಯಾವುದೋ ಸಿನಿಮಾದ ಕತೆಯಲ್ಲ, ಬದಲಾಗಿ ಕಳೆದ ಏಪ್ರಿಲ್ ತಿಂಗಳಲ್ಲಿ ಮಂಡ್ಯದ ಬಾಡಿ ಬಿಲ್ಡರ್ ಕಂ ಜಿಮ್ ಟ್ರೈನರ್ ರಘು ಮತ್ತು ಅನುಷಾ ಎಂಬ ಪ್ರೇಮಿಗಳ ಕತೆ ಇದು...

ಪ್ರೀತಿಸಿದ ತಪ್ಪಿಗೆ ಕಣ್ಣುಗಳನ್ನೇ ಧ್ವಂಸ ಮಾಡಿಸಿಕೊಂಡ ರಘು ಬಗ್ಗೆ ಆರು ತಿಂಗಳ ಹಿಂದೆ ರಾಜ್ಯವ್ಯಾಪಿ ಅನುಕಂಪಕದ ಅಲೆ ಎದ್ದಿತ್ತು, ರಾಜ್ಯದ ಕೊಡುಗೈ ದಾನ್‌ಗಳು ಆತನಿಗೆ ಲಕ್ಷಾಂತರ ರೂಪಾಯಿ ಹಣವನ್ನು ದಾನ ಮಾಡಿದರು. ಕೆಲವರು ಆತನ ವೈದ್ಯಕೀಯ ವೆಚ್ಚವನ್ನೂ ಭರಿಸಿದರು. ನೈನ್‌ರಸ ನಾಯಕ ಜಗ್ಗೇಶ್, ಚಿನ್ನದ ವ್ಯಾಪಾರಿ ಶರವಣ ಸೇರಿದಂತೆ ಇನ್ನೊಂದಿಷ್ಟು ಮಂದಿ ಜೊತೆಗೂಡಿ ಈತನಿಗೆ ಬೆಂಗಳೂರಿನ ಚಾಮರಾಜಪೇಟೆ ಏರಿಯಾದಲ್ಲಿ ಒಂದು ವಿಶೇಷ ಮಲ್ಟಿ ಜಿಮ್ ತೆರೆಯಲು ಹೆಗಲು ಕೊಟ್ಟರು. ಮತ್ತಷ್ಟು ಜನ ಮಹನೀಯರುಗಳು ರಘು ಕೈಗೆ ಚೆಕ್‌ನೀಡಿ ಪಬ್ಲಿಸಿಟಿ ಪಡೆದರು. ಆದರೆ ಅಂತಹ ಚೆಕ್‌ಗಳನ್ನು ಬ್ಯಾಂಕ್‌ಗೆ ಹಾಕಿದ ಮೇಲೆ ಸುಮಾರು ಆರು ಲಕ್ಷ ರೂಪಾಯಿಗಳ ಚೆಕ್‌ಗಳು ಪಟಪಟನೆ ಬೌನ್ಸ್ ಆದವು!



ಇದೆಲ್ಲದರ ಮಧ್ಯೆ ಹಲವು ಮಾಧ್ಯಮಗಳು ರಘುನನ್ನು ಹೀರೋನಂತೆ ಬಿಂಬಿಸಿದವು. ನಿರ್ದೇಶಕ ಎಸ್. ನಾಣಿ 'ಈತನ ದುರಂತ ಪ್ರೇಮಕತೆಯನ್ನು ಸಿನಿಮಾ ಮಾಡ್ತೀನಿ' ಎಂದು ಅನೌನ್ಸು ಮಾಡಿದರು!

ಈಗ ಈ ಕಥೆ ಮತ್ತೊಂದು ಕಡೆ ಹೊರಳಿಕೊಂಡಿದೆ...

"ರಘುಗೆ ಇತ್ತೀಚೆಗೆ ಒಂದು ಕಣ್ಣಿನ ದೃಷ್ಟಿ ಬಂದಿದೆ. ಆದರೂ ಆತ ಡ್ರಾಮಾ ಮಾಡ್ತಾ ಇದಾನೆ" ಅನ್ನೋ ಮಾತು ಸ್ವತಃ ಆತನ ನಿಕಟವರ್ತಿಗಳಿಂದಲೇ ಕೇಳಿಬರುತ್ತಿದೆ. ಅದಕ್ಕೆ ಇಂಬು ನೀಡುವ ಅನೇಕ ಉದಾಹರಣೆಗಳೂ ಅವರಲ್ಲಿವೆ.

ಕೆಲ ದಿನಗಳ ಹಿಂದೆ ಸ್ನೇಹಿತನೊಬ್ಬ ರಘು ಮುಂದೆ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಿದ್ದಾನೆ. ಎಷ್ಟೇ ಆದರೂ ಇಪ್ಪತ್ತೈದು ವರ್ಷಗಳಿಂದ ಎಲ್ಲವನ್ನೂ ಸಹಜವಾಗೇ ನೋಡುತ್ತಾ ಪ್ರಾಪಂಚಿಕ ಸುಖವನ್ನು ಅನುಭವಿಸಿದ ಹುಡುಗ ರಘು. "ಏನ್ಲಾ ಮಗಾ ಹೊಸಾ ಶರ್ಟು ಹಾಕ್ಕೊಂಬಂದುಬಿಟ್ಟಿದೀಯ. ಸುಟ್ತಾಗೈತೆ" ಎಂದುಬಿಟ್ಟಿದ್ದಾನೆ. ತಕ್ಷಣ ತನ್ನ ತಪ್ಪಿನ ಅರಿವಾಗಿ ತಬ್ಬಿಬ್ಬಾಗಿ ಮಾತು ಬದಲಿಸಿದ್ದಾನೆ. ಅಲ್ಲಿಯವರೆಗೆ ರಘು ಸ್ನೇಹಿತರಿಗೆ ಈತನಿಗೆ ಕಣ್ಣು ಕಾಣುತ್ತಿದೆ ಎಂಬ ಸುಳಿವು ಸಿಕ್ಕಿರಲೇ ಇಲ್ಲ. ಆನಂತರ ಮೆಲ್ಲಗೆ ಈತನನ್ನು ಅಬ್ಸರ್ವ್ ಮಾಡಲು ಶುರು ಮಾಡಿದ್ದಾರೆ. ಅವರು ಮಾತಾಡುವಾಗ ಅತ್ತಿತ್ತ ಚಲಿಸಿದರೆ ಈತನ ದೃಷ್ಟಿ ಕೂಡಾ ಅವರತ್ತಲೇ ಚಲಿಸುತ್ತಿದ್ದವಂತೆ.

ರಘು ಎಂಥಾ ಐನಾತಿ ಗಿರಾಕಿ ಗೊತ್ತೆ? ಜನ ಈತನಿಗೆ ಕರುಣೆ ತೋರಿ ಕೊಟ್ಟ ದುಡ್ಡನ್ನು ಐಷಾರಾಮಿ ಜೀವನಕ್ಕೆ, ಚಿಲ್ಲರೆ ಶೋಕಿಗಳಿಗೆ ವ್ಯಯಿಸುತ್ತಿದ್ದಾನೆ. ಚಾಮರಾಜಪೇಟೆ, ರಾಯನ್ ಸರ್ಕಲ್ ಬಳಿ ಇರುವ ಅತ್ಯಾಧುನಿಕ ಜಿಮ್‌ನಿಂದ ಏನಿಲ್ಲವೆಂದರೂ ತಿಂಗಳಿಗೆ ಅರವತ್ತೆಪ್ಪತ್ತು ಸಾವಿರ ವರಮಾನವೂ ಬರುತ್ತಿದೆ. "ಹೇಗಿದೆ ಈಗಿನ ಬದುಕು" ಎಂದು ಪತ್ರಿಕೆ ಪ್ರಶ್ನಿಸಿದರೆ "ಮೊದಲಿಗಿಂತಲೂ ಸೂಪರ್ ಆಗಿದೆ. ಕಣ್ಣು ಕಾಣೋದಿಲ್ಲ ಅನ್ನೋದಷ್ಟೇ ಸಮಸ್ಯೆ" ಎಂದು ತನ್ನ ಇಂದಿನ ಪರಿಸ್ಥಿತಿಯ ಕುರಿತು ಹೆಮ್ಮೆಯಿಂದ ಹೇಳಿಕೊಳ್ಳುವ ರಘು ಸಂಜೆಯಾಯಿತೆಂದರೆ, ಗೋರಿಪಾಳ್ಯದ ಬಾರ್‌ವೊಂದರಲ್ಲಿ ತನ್ನ ಪಟಾಲಂ ಸಮೇತ ಕುಡಿಯಲು ಕೂರುತ್ತಾನೆ ಎಂದರೆ ನಂಬಲೇಬೇಕು. ಹಾಗೆ ಕುಡಿಯಲು ಕೂತಾಗ ಈತನ ಫ್ರೆಂಡೊಬ್ಬ "ರಘುಗೆ ಕಣ್ಣು ಕಾಣುತ್ತಾ ಇಲ್ವಾ ಅಂತ ಟೆಸ್ಟ್ ಮಾಡೇ ಬಿಡ್ತೀನಿ" ಎಂದು ಉಳಿದ ಸ್ನೇಹಿತರ ಕಿವಿಯಲ್ಲಿ ಹೇಳಿ ಅಂಟಿಸಿದ್ದ ಸಿಗರೇಟನ್ನು ಆತನ ಕೈಗೆ ಇಡಲು ಹೋದನಂತೆ. ತಕ್ಷಣ ರಘು ಸರಕ್ಕನೆ ಕೈ ಎತ್ತಿಬಿಟ್ಟಿದ್ದಾನೆ. ಈತನಿಗೆ ಒಂದಿಷ್ಟಾದರೂ ಕಣ್ಣು ಕಾಣುತ್ತಿದೆ ಅನ್ನೋದನ್ನು ಈಗ ಆತನ ಸ್ನೇಹಿತರೇ ನಿದರ್ಶನಗಳ ಸಮೇತ ಸಾಕ್ಷೀಕರಿಸುತ್ತಿದ್ದಾರೆ.

ಇರಲಿ, ಹೇಗೂ ಕಣ್ಣು ಡ್ಯಾಮೇಜಾಗಿರುವ ಹುಡುಗ ಮುಂದಿನ ಬದುಕಿಗಾಗಿ ಸಣ್ಣ ಸುಳ್ಳು ಹೇಳಿ ಸೇಫ್ ಗೇಮ್ ಆಡುತ್ತಿದ್ದಾನೆ ಎಂದು ವಿನಾಯ್ತಿ ಕೊಡಬಹುದೋ ಏನೋ?

ಆದರೆ ಈತ ಮತ್ತಷ್ಟು ಹುಡುಗಿಯರನ್ನು ನ… ಯಾಮಾರಿಸುತ್ತಿರುವುದನ್ನು ಮಾತ್ರ ಯಾರೂ ಕ್ಷಮಿಸಲ…

ಪ್ರಪೋಸ್ ಮಾಡಿದವಳಿಗೆ ಗೇಟ್‌ಪಾ…

ಮಾಧ್ಯಮಗಳಲ್ಲಿ ಈತನ ದುಸ್ಥಿತಿಯನ್ನು ಕಂಡು ಸಿ… ಬಿದ್ದ ಅದೆಷ್ಟೋ ಹೆಣ್ಣುಮಕ್ಕಳು ರಘುವಿನ ಬಾಳಿನಲ್ಲಿ… ಹೊತ್ತಿಸಬೇಕು ಎಂದು ಬಯಸಿದ್ದರು. ಅಂಥವರಲ್ಲಿ… ಎಂಬಾಕೆ ತನ್ನ ಫ್ಯಾಮಿಲಿ ಸಮೇತ ಬೆಂಗಳೂರಿಗೆ… ತಾನು ಈತನನ್ನು ಮದುವೆಯಾಗುತ್ತೇನೆ ಎಂದಿ… ಮೈಸೂರಿನ ಮೇಘನಾ ಮತ್ತು ಮಧು ಎಂಬ ಯುವತಿ… ಕೂಡಾ 'ರಘುನನ್ನು ಮದುವೆಯಾಗಲು ನಾನು… ಎಂದಿದ್ದರು. ತೀರಾ ಟಿವಿ ಚಾನೆಲ್ಲುಗಳ ಎದುರೇ… ರಘುಗೆ ಪ್ರಪೋಸ್ ಮಾಡಿದವಳು ಧಾರವಾ… ರೇಣುಕಾದೇವಿ ಎಂಬಾಕೆ.

ಆದರೆ ಹಿಂದೆ ಅನುಷಾಳ ಬಾಳಿನಲ್ಲಿ ಆ… ಅಭ್ಯಾಸವಿದ್ದ ರಘು ಆನಂತರ ಆಕೆಯ ಅಣ್ಣನಿಂದಲೇ… ಪೆಟ್ಟು ತಿಂದರೂ ಬುದ್ಧಿ ಕಲಿತಂತೆ ಕಾಣುತ್ತಿಲ್ಲ, ರೇ… ಜೊತೆ ಮನಬಂದಂತೆ ವರ್ತಿಸಿದ, 'ನಿನ್ನ ಮದುವೆಯ… ಎಂದು ಆರಂಭದಲ್ಲೇ ನಂಬಿಸಿದ್ದ ರಘು ಈಗ ಆ… ಫೋನು ಮಾಡಿದರೆ 'ಅಮ್ಮ, ಅಕ್ಕ' ಎಂದು ಬೈದು… ಕುಕ್ಕುತ್ತಾನಂತೆ.

ಹಿಂದೆ, ಮಂಡ್ಯದಲ್ಲಿ ಸಿದ್ದಪ್ಪ ಎಂಬ ನೀರಾ ವ್ಯಾ… ಬಳಿ ಕಾರು ಚಾಲಕನಾಗಿದ್ದಾಗಲೇ ಈತ ಎರಡು…




ಸಿನಿಮಾ ತೆಗೀತೀನಿ ಅನ್ನುತ್ತಿರು…

ಪ್ರಕರಣಗಳಲ್ಲಿ ಸಿಕ್ಕಿಕೊಂಡಿದ್ದ. ಮಹಿಳಾ ಕಾಲೇಜಿನ ಬ… ಹಾಕಿಕೊಂಡು ಹೆಣ್ಣುಮಕ್ಕಳನ್ನು ಚೇಡಿಸಿಕೊಂಡಿರ… ನಂತರ ಅನುಷಾ ಎಂಬ ಹುಡುಗಿಯ ಬಾಳಿನಲ್ಲೂ… ಕೊಟ್ಟು, ಆಕೆಯನ್ನು ಮದುವೆಯಾಗಿ, ಕಡೆಗೆ ಆಕೆ ದ… ಮೇಲೆ 'ನಿಮ್ಮ ಮನೆಯವರಿಂದ ಹಣ ಕೊಡಿ… ಬಿಟ್ಟುಬಿಡುತ್ತೀನಿ' ಎಂದು ಬ್ಲಾಕ್ ಮೇಲ್ ಮಾಡಿ… ತನ್ನ ಕಣ್ಣುಗಳಿಗೇ ಕೇಡು ತಂದುಕೊಂಡ ರಘು ಇನ್ನ… ಬದಲಾಗುತ್ತಾನೆ ಅನ್ನೋ ಭರವಸೆ ಎಲ್ಲರಲ್ಲೂ ಮ… ಆದರೆ ಆತನ ಸ್ನೇಹಿತರ ಪ್ರಕಾರ ಅದೆಲ್ಲಾ ಶುದ್ಧ… ಸುಳ್ಳು.

ರಘು ಎಂಬ ಈ ಯುವಕ ಅತಿ ಘೋರ… ತುತ್ತಾದಮೇಲೂ ಬದಲಾಗದೆ ಉಳಿದಿರುವುದು… ದುರಂತ.

• ಅರುಣ್‌ಕೋ…


ಡಾ. ಭುಜಂಗಶೆಟ್ಟಿ ಏನಂತಾರೆ?



ಔಷಧಗಳ ಖರ್ಚು ಬಿಟ್ಟು ಮಿಕ್ಕ ಸಂಪೂರ್ಣ ಆಸ್ಪತ್ರೆ ಸೌಲಭ್ಯವನ್ನು ನೀಡಿ ರಘುವಿಗೆ ಸಹಕರಿಸಿದ್ದು ನಾರಾಯಣ ನೇತ್ರಾಲಯದ ಡಾ. ಭುಜಂಗಶೆಟ್ಟಿ.

ಈಗ ರಘುಗೆ ದೃಷ್ಟಿ ಬಂದಿದೆ. ಆದರೂ ಆತ ಧನಸಹಾಯಗಳು ನಿಂತುಹೋಗುತ್ತವೆಂದು ನಾಟಕವಾಡುತ್ತಿದ್ದಾನೆ ಎಂದು ಆತನ ಜೊತೆಗಿರುವ ಸ್ನೇಹಿತರೇ ಆರೋಪಿಸುತ್ತಿರುವುದನ್ನು ಕನ್‌ಫರ್ಮ್ ಮಾಡಿಕೊಳ್ಳೋಣ ಎಂದು ಪತ್ರಿಕೆ ಡಾ.ಭುಜಂಗಶೆಟ್ಟರನ್ನು ಸಂಪರ್ಕಿಸಿದಾಗ ಅವರು 'ಆತನ ಕಣ್ಣಿನ ವಿಷನ್ ನರ್ವ್‌ಗಳು ಹಾಳಾಗಿವೆ. ಬಲಗಣ್ಣಿನ ಆಪ್ಟಿಕಲ್ ನರವಂತೂ ರಿಕವರ್ ಆಗೋದೇ ಇಲ್ಲ. ಆದರೆ ಬಲಬಾಗದ ಕಣ್ಣುಗುಡ್ಡೆಗಳು ಸಂಪೂರ್ಣ ಆರೋಗ್ಯಕರವಾಗಿವೆ. ನಾನು ಕಳೆದ ಬಾರಿ… ನೇತ್ರ ಪರೀಕ್ಷೆ ಮಾಡಿದಾಗ ಅಂಥಾ ಯಾವ ಡೆವಲಪ್‌ಮೆಂಟುಗಳೂ ಕಂಡುಬರಲಿಲ್ಲ. ಆದರೆ ಆ ಕಣ್ಣು ಕ್ರಮ… ಚೇತರಿಸಿಕೊಂಡು ದೃಷ್ಟಿಬರುವ ಸಾಧ್ಯತೆಗಳೂ ಇವೆ. ಆತನ ಕುರಿತ ಆರೋಪಗಳ ಬಗ್ಗೆ ನಾನು ಏನೂ ಹೇಳ… ಆದರೆ ಮತ್ತೊಮ್ಮೆ ಆತನ ಕಣ್ಣುಗಳನ್ನು ಪರೀಕ್ಷೆಗೆ ಒಳಪಡಿಸಿದರೆ ದೃಷ್ಟಿಯ ಕುರಿತಾಗಿ ಸ್ಪಷ್ಟವಾಗಿ ಗೊತ್ತಾಗಲಿದೆ' ಎಂ…

ಕ್ರಾಂತಿ ಸಂಪಾದಕನ ಕೊಲೆಗಡುಕರಿಗೆ ಕೊನೆಗೂ ಶಿಕ್ಷೆ?


ಸಿದ್ಧರಾಮೇಶ್

ಸತತ ಇಪ್ಪತ್ತೇಳು ವರ್ಷಗಳ ಕಾಲ ಕಾನೂನಿನ ಕಣ್ಣಿಗೆ ಮಣ್ಣೆರಚಿಕೊಂಡು ಬಂದಿದ್ದ ಪಾತಕಿಗಳಿಗೆ ಸಿ.ಬಿ.ಐ. ಕಠಿಣ ಶಿಕ್ಷೆ ವಿಧಿಸಿ ಎಂದು ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದೆ. ಇದರಿಂದ ಆರೋಪಿಗಳ ಎದೆಯಲ್ಲಿ ಸಣ್ಣ ನಡುಕ ಶುರುವಾಗಿದೆ. ಮಾಡಿದ್ದುಣ್ಣೋ ಮಾರಾಯ ಎಂಬ ನಾಣ್ಣುಡಿಯಂತೆ ಕೆಲವೇ ತಿಂಗಳುಗಳಲ್ಲಿ ಸಿದ್ಧರಾಮೇಶನ ಕೊಲೆಗೈದ ಪಾತಕಿಗಳು ನೇರ ಸೆರೆಮನೆ ಸೇರುವುದು ಖಚಿತ ಎಂಬ ಆಶಾಭಾವನೆ ಮೊಳೆತಿದೆ.

1984 ರ ಫೆಬ್ರುವರಿ 14 ರಂದು ಗುಲ್ಬರ್ಗಾ ಬಸ್‌ಸ್ಟ್ಯಾಂಡ್ ಎದುರುಗಡೆಯೇ ಇರುವ ಶಾಂತಿನಗರದ ಪ್ರವೇಶದಲ್ಲಿಯೇ ಭೀಕರ ಹತ್ಯೆಯೊಂದು ನಡೆದು ಹೋಯಿತು. ಇದು ಜಿಲ್ಲೆಯನ್ನು ಮಾತ್ರವಲ್ಲ ಇಡೀ ಕರ್ನಾಟಕದ ಜನತೆಯನ್ನು ತೀವ್ರವಾಗಿ ಕಾಡಿತು. ಏಕೆಂದರೆ ಹತ್ಯೆಯಾದಾತ ಶ್ರೀಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಆದರೆ ಆತ ಶ್ರೀಸಾಮಾನ್ಯನ ನೋವಿಗೆ ಮಿಡಿಯುವ ಪತ್ರಿಕೆಯೊಂದರ ಸಂಪಾದಕನಾಗಿದ್ದ ಜನಾನುರಾಗಿಯಾಗಿದ್ದ. ಈ ಪತ್ರಕರ್ತ ತನ್ನ ಆರಂಭದ ದಿನಗಳನ್ನು ಡಾ.ಪಾಟೀಲ ಪುಟ್ಟಪ್ಪನವರಲ್ಲಿ ಕಳೆದರೂ ತನ್ನದೇ ಆದ ಸ್ವಂತ ವ್ಯಕ್ತಿತ್ವ ಪಡೆದುಕೊಂಡವರಾಗಿದ್ದರು. ಹಾಗಂತಲೇ ತನ್ನ ಹುಟ್ಟೂರು ಗದಗನ್ನು ತೊರೆದು ಬಂದು ಗುಲ್ಬರ್ಗಾದಲ್ಲಿ ಸ್ವಂತ ಮುದ್ರಣಾಲಯ ಮಾಡಿಕೊಂಡು ಜನಪರವಾದ ಧೋರಣೆಗಳುಳ್ಳ ಒಂದು ದಿನ ಪತ್ರಿಕೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೊರಟಿದ್ದರು. ಈತ ಮತ್ತಾರು ಅಲ್ಲ 'ಕ್ರಾಂತಿ' ದಿನಪತ್ರಿಕೆಯ ಸಂಪಾದಕ ಸಿದ್ಧರಾಮೇಶ್ ಮುಧೋಳ್.

ಈಗಿನಂತೆ ತಂತ್ರಜ್ಞಾನ ಅಷ್ಟು ಮುಂದುವರೆದ ಕಾಲ ಅದಾಗಿರಲಿಲ್ಲ. ಕಂಪ್ಯೂಟರ್ ಗೊತ್ತಿರಲಿಲ್ಲ. ಕ್ಷಣಾರ್ಧದಲ್ಲಿಯೇ ಎಲ್ಲಾ ಸಂಗತಿಗಳು ಗೊತ್ತಾಗುತ್ತಿರಲಿಲ್ಲ. ಹೆಚ್ಚೆಂದರೆ ಸರಕಾರದ ವಾರ್ತಾ ಇಲಾಖೆಗೆ ಬರುವ ಟೆಲಿಪ್ರಿಂಟ್‌ಗಳ ಸಹಾಯ ಮಾತ್ರ ದಿನಪತ್ರಿಕೆಗಳಿಗೆ ಇತ್ತು. ಈ ಸಂಪನ್ಮೂಲಗಳನ್ನು ಉಪಯೋಗಿಸಿ ಪತ್ರಿಕೆ ನಡೆಸಬೇಕಿತ್ತು. ಆದರೆ 'ಕ್ರಾಂತಿ' ದಿನ ಪತ್ರಿಕೆಯ ಸಂಪಾದಕ ಆರಂಭದ ದಿನಗಳಲ್ಲಿ ಇಟ್ಟ ಹೆಜ್ಜೆಗಳು ಬಹು ವಿಭಿನ್ನವಾಗಿದ್ದವು.

ಬರೀ ಪಿ.ಟಿ.ಐ. ಮತ್ತು ಯು.ಎನ್.ಐ. ಸುದ್ದಿ ಸಂಸ್ಥೆಗಳ ವರದಿಗಳನ್ನೇ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುತ್ತ ಕೈ ತೊಳೆದುಕೊಳ್ಳುತ್ತಿದ್ದ ದಿನಗಳಲ್ಲಿ ಜನ ಸಾಮಾನ್ಯನ ನೋವಿಗೆ ಮಿಡಿಯುವ ಪ್ರಾಣಮಿತ್ರನಾಗಿ 'ಕ್ರಾಂತಿ' ಹೊರಹೊಮ್ಮತೊಡಗಿತ್ತು. ಯಾರು ಮುನಿದು ನಮ್ಮನೇನು ಮಾಡುವರು? ಯಾರು ಮುನಿದು ನಮ್ಮನ್ನೆಂತು ಮಾಡುವುದು? ಎಂಬ ಧೋರಣೆಗಳನ್ನು ಇಟ್ಟುಕೊಂಡಿದ್ದ ಸಿದ್ಧರಾಮೇಶ ಮುಧೋಳ್ ಜನ ಸಾಮಾನ್ಯನ ನೋವು ನಲಿವುಗಳಿಗೆ 'ಕ್ರಾಂತಿ' ಪತ್ರಿಕೆಯನ್ನು ವೇದಿಕೆಯಾಗಿ ಕಲ್ಪಿಸಿದ್ದರು.

ಬದಲಾವಣೆ ಎಂಬುದು ಏನು ಎಂಬುದೇ ಗೊತ್ತಿಲ್ಲದ ಹಲವು ಸ್ಥಾಪಿತ ಹಿತಾಸಕ್ತಿಗಳಿಗೆ 'ಕ್ರಾಂತಿ' ಪತ್ರಿಕೆಯ ವರದಿಗಳು ಸಾಕಷ್ಟು ಫಾಸಿ ಉಂಟುಮಾಡಿದ್ದವು. ಅದರಲ್ಲೂ ಗುಲ್ಬರ್ಗಾ ಪೊಲೀಸ್ ವ್ಯವಸ್ಥೆ ಆಗ ಕೆಟ್ಟು ಕೆರ ಹಿಡಿದು ಹೋಗಿತ್ತು. ಪೊಲೀಸ್ ಇಲಾಖೆ ತನ್ನ ದರ್ಪವನ್ನು ಮೆರೆದು ಜನ ಸಾಮಾನ್ಯನ ಬದುಕಿಗೆ ಉರುಳಾದ ಹಲವಾರು ಪ್ರಸಂಗಗಳೇ ಅಲ್ಲಿ ಜರುಗಿ ಹೋಗಿದ್ದವು. ಇಂಥ ಸರ್ವಾಧಿಕಾರಿ ಮನೋಭಾವನೆಯ ವ್ಯವಸ್ಥೆಯನ್ನು ಎಚ್ಚೆತ್ತ ಮನಸ್ಥಿತಿಯ ಪತ್ರಕರ್ತ ಹೇಗೆ ಸಹಿಸಿಕೊಳ್ಳಲು ಸಾಧ್ಯ? ಆದ್ದರಿಂದಲೆ 'ಕ್ರಾಂತಿ' ಪತ್ರಿಕೆಯ ಸಂಪಾದಕ ಸಿದ್ಧರಾಮೇಶ ತನ್ನ ಪತ್ರಿಕೆಯ ವರದಿಗಳ ಮೂಲಕ ಜನ ಸಾಮಾನ್ಯರಲ್ಲಿ ಪುಳಕ ಹುಟ್ಟಿಸಿದರೆ ಭ್ರಷ್ಟ ಅಧಿಕಾರಶಾಹಿ ಜನರಲ್ಲಿ ತೀವ್ರ ನಡುಕ ಉಂಟು ಮಾಡಿದ್ದರು.

ತನ್ನ ಖಾಕಿ ಡ್ರೆಸ್ ಮೂಲಕ ಜನರಲ್ಲಿ ಒಂದು ರೀತಿಯ ಭಯದ ವಾತಾವರಣ ಉಂಟು ಮಾಡಿ ತಾನು ನಡೆದುದೇ ದಾರಿ ಎಂಬಂತೆ ಹೊರಟ ಅಂದಿನ ಗುಲ್ಬರ್ಗಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ನಾರಾಯಣ ಸಹಜವಾಗಿ 'ಕ್ರಾಂತಿ'ಯ ಕೆಂಗಣ್ಣಿಗೆ ಗುರಿಯಾಗಿದ್ದ. ಜನಪರವಾಗಿರುವ ಸಂಪಾದಕ ಸಿದ್ಧರಾಮೇಶ ಅವರು ನಾರಾಯಣನ ಒಂದೊಂದು ಅವತಾರಗಳನ್ನೂ ಧಾರಾವಾಹಿಯಾಗಿ ಪ್ರಕಟಿಸುತ್ತ ಬಂದರು. ಅಫಜಲಪುರ ತಾಲೂಕಿನ ಅರ್ಜುಣಗಿ ಗ್ರಾಮದಲ್ಲಿ ವರದಕ್ಷಿಣೆಗಾಗಿ ನಡೆದ ಕೊಲೆಯನ್ನು ವ್ಯವಸ್ಥಿತವಾಗಿ ಮುಚ್ಚಿಹಾಕಲು ಪೊಲೀಸ್ ಇಲಾಖೆಯ ಈ ಮುಖ್ಯಾಧಿಕಾರಿ ಪ್ರಯತ್ನಿಸುತ್ತಿದ್ದರೆ 'ಕ್ರಾಂತಿ' ತೆಪ್ಪಗೆ ಕೂಡಲಿಲ್ಲ. ಈ ಪ್ರಕರಣದ ಒಂದೊಂದೇ ಮಜಲುಗಳನ್ನು ವಿವರಿಸುತ್ತ ಹೋದಂತೆ ನೆಲದಲ್ಲಿ ಹೂತು ಹೋದ ಶವವನ್ನು ಮತ್ತೆ ಹೊರತೆಗೆದು ಪೋಸ್ಟ್‌ಮಾರ್ಟಂಗೆ ಅಣಿಗೊಳಿಸಬೇಕಾಯಿತು. ಆ ಪೋಸ್ಟ್‌ಮಾರ್ಟಂನ ವರದಿಗಳು ಪತ್ರಿಕೆ ವ್ಯಕ್ತಪಡಿಸಿದ ಸಂಶಯಗಳಿಗೆ ಪುಷ್ಟಿ ನೀಡಿದವು. ಕಾನೂನಿನ ಕಣ್ಣಿಗೆ ಮಣ್ಣೆರಚಿ ಪೊಲೀಸ್ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದ ಖುಳಗಳೆಲ್ಲ ಮತ್ತೆ ಜೈಲು ಸೇರಬೇಕಾಯಿತು.


ಇದನ್ನೆಲ್ಲ ಕೆ. ನಾರಾಯಣ ಎಂಬ ಜಿಲ್ಲಾ ಪೊಲೀಸ್ ವ(ಅ)ರಿಷ್ಠಾಧಿಕಾರಿ ತೀರಾ ಮೈಮೇಲೆ ಎಳಕೊಂಡು ರಮರಾಡಿ ಮಾಡಿಕೊಂಡುಬಿಟ್ಟ. ವ್ಯಕ್ತಿ ಪ್ರತಿಷ್ಠೆ ಕಾಡತೊಡಗಿದೊಡನೆ ವಿನಾಕಾರಣ 'ಕ್ರಾಂತಿ' ಪತ್ರಿಕೆಯ ಸಂಪಾದಕ ಸಿದ್ಧರಾಮೇಶ ಮುಧೋಳರ ಮೇಲೆ ಕೆಂಡಕಾರತೊಡಗಿದ.

ದಿನನಿತ್ಯ ಜಿಲ್ಲೆಯಾದ್ಯಂತ ಜರುಗುವ ಪೊಲೀಸ್ ದೌರ್ಜನ್ಯ ಹಾಗೂ ಅವರ ಲಂಚಗುಳಿತನ ಕುರಿತು ವರದಿಗಳು ಮತ್ತಷ್ಟು ಹರಿತವಾಗಿ ಪ್ರಕಟಗೊಳ್ಳುತ್ತಲೇ ನಡೆದವು. ಇದರಿಂದ ವ್ಯಗ್ರನಾದ, ವಿವೇಚನೆ ಕಳೆದುಕೊಂಡ ಪೊಲೀಸ್ ವರಿಷ್ಠಾಧಿಕಾರಿ ಕೆ. ನಾರಾಯಣ 30 ದಿನಗಳಲ್ಲಿಯೇ 36 ಕೇಸುಗಳನ್ನು ಸಿದ್ಧರಾಮೇಶ್ ವಿರುದ್ಧ ಹೆಟ್ಟಿಬಿಟ್ಟ. ಗುಲ್ಬರ್ಗಾ ನಗರದ ಎಲ್ಲಾ ಪೊಲೀಸ್ ಠಾಣೆಗಳ ರೌಡಿಗಳ ಪಟ್ಟಿಯಲ್ಲಿ ಸಿದ್ಧರಾಮೇಶ್ ಭಾವಚಿತ್ರ ಅಂಟಿಸಿಬಿಟ್ಟ. ಇದಕ್ಕೆ ಅನುಗುಣವಾಗಿ ಜಿಲ್ಲೆಯಿಂದಲೇ ಅವರನ್ನು ಗಡಿಪಾರು ಮಾಡಲೂ ಸಹ ನಾರಾಯಣ ಹಿಂದೆ ಮುಂದೆ ನೋಡಲಿಲ್ಲ. ರಾಜ್ಯ ಹೈಕೋರ್ಟ್ ಜಿಲ್ಲಾ ವರಿಷ್ಠಾಧಿಕಾರಿಯ ನಿಲುವನ್ನು ರದ್ದುಗೊಳಿಸಿದ್ದರಿಂದ ನಾರಾಯಣ ಮತ್ತಷ್ಟು ವ್ಯಗ್ರನಾದ.

ನಡೆದೇ ಹೋಯಿತು ಪತ್ರಕರ್ತನ ಕೊಲೆ

ಅದು 1984ರ ಫೆಬ್ರವರಿ 14 ನೇ ತಾರೀಖು. ಅವತ್ತು ಪತ್ರಿಕಾ ಕಾರ್ಯಾಲಯದಿಂದ ಸಿದ್ಧರಾಮೇಶ್ ಕೇಸೊಂದಕ್ಕೆ ಸಂಬಂಧಪಟ್ಟಂತೆ ತನ್ನ ಓರ್ವ ವಕೀಲ ಮಿತ್ರ ಸಿ.ವಿ.ಮಾಲಿ ಪಾಟೀಲ ಎನ್ನುವವರ ಹತ್ತಿರ ಹೋಗಿದ್ದರು. ಅಲ್ಲಿ ಅವರೊಂದಿಗೆ ಕೆಲಹೊತ್ತು ಮಾತಾಡಿ, ಅವರ ಮನೆಯಿಂದ ಹೊರಟಾಗ, ರಾತ್ರಿ ಸುಮಾರು 9.30 ಆಗಿತ್ತು.

ಎಂ.ಎಸ್.ಕೆ. ಮಿಲ್ ಮುಖ್ಯರಸ್ತೆ ಹಿಡಿದು, ಸಂತೋಷ್ ಟಾಕೀಸ್ ದಾಟಿ, ತಾನಿರುವ ಶಾಂತಿನಗರ ಎಂಬ ಕಾಲೋನಿಗೆ ಸಿದ್ಧರಾಮೇಶ್ ತಮ್ಮ ಕಾರು ಹೊರಳಿಸುತ್ತಿದ್ದಾಗ ನಡುಬೀದಿಯಲ್ಲಿ ಒಬ್ಬ ಸೈಕಲ್ ಕೆಡವಿಕೊಂಡು ನಿಂತದ್ದನ್ನು ನೋಡಿದ. ಅವರು ಕಾರು ನಿಲ್ಲಿಸಿ ಹಾರ್ನ್ ಬಾರಿಸುವಷ್ಟರಲ್ಲಿ ನಾಲ್ಕಾರು ಜನರು ಕಾರಿನ ಹತ್ತಿರ ಬಂದರು. ಏನೋ ಅಪಾಯ ಎಂದರಿತ ಸಿದ್ಧರಾಮೇಶ್ ಇನ್ನೇನು ಕಾರನ್ನು ತಿರುಗಿಸಿಕೊಳ್ಳಬೇಕೆನ್ನುವುದರೊಳಗೆ ಅವರ ಹಿಂದಿನಿಂದ ಬಂದ ಯಾರೋ ಸಿದ್ಧರಾಮೇಶ್ ಅವರ ಬೆನ್ನಿಗೆ ಬಲವಾಗಿ ಇರಿದರು.


ಶ್ರೀಮತಿ ಅನ್ನಪೂರ್ಣ

ಕಾರು ಬಾಗಿಲು ತೆರೆದು ಅವರನ್ನು ಹೊರಕ್ಕೆ ಎಳೆದಾಗ, ಕುಸಿದು ಕೆಳಕ್ಕೆ ಬಿದ್ದ ಸಿದ್ಧರಾಮೇಶ್ ಬದಿಗಿದ್ದ ಬ್ರಿಡ್ಜಿನ ತಗ್ಗಿಗೆ ಉರುಳಿದರು. ಅಲ್ಲೇ ಇದ್ದ ದೊಡ್ಡ ದೊಡ್ಡ ಕಲ್ಲುಗಳನ್ನೆತ್ತಿ ಅವರ ತಲೆಗೆ ಹಾಕಿದ ಹಂತಕರು ಅಲ್ಲಿಂದ ಪರಾರಿಯಾದರು. ಈ ಘಟನೆ ನಡೆದಾಗ ಬೀದಿ ದೀಪ ಇರಲಿಲ್ಲ.

ನೋವಿನಿಂದ ಜೋರಾಗಿ ಸಿದ್ಧರಾಮೇಶ್ ಕೂಗಿದರು, ಕಿರುಚಿದರು. ಬಿದ್ದಲ್ಲಿಂದಲೇ ಪಕ್ಕದ ಮನೆಯ ಅಣ್ಣಾರಾವ್ ಬಂದರವಾಡ್ ಅವರ ಹೆಸರಿಡಿದು ಕರೆದರು. ಆಮೇಲೆ ಮೆಲ್ಲಗೆ ಅಲ್ಲಿಂದೆದ್ದು, ಸಾವರಿಸಿಕೊಂಡು ಮತ್ತೆ ಮತ್ತೆ ಅಣ್ಣಾರಾವ್‌ರವರನ್ನು ಕರೆಯುತ್ತ, ಕಾರ್ ಹತ್ತಿರ ಬಂದಾಗ, ಮನೆಯೊಳಗಿಂದ ಅಣ್ಣಾರಾವ್ ಲುಂಗಿಯಲ್ಲೇ ಹೊರಗೆ ಓಡಿಬಂದರು.

"ಏನು? ಎಂತು?" ಎಂದು ವಿಚಾರಿಸುವುದರೊಳಗಾಗಿ ಸಿದ್ಧರಾಮೇಶ್ "ಕೊನೆಗೂ ನನ್ನ ಕೊಂದರು. ಬೆನ್ನಲ್ಲಿ ರಕ್ತ ಹರಿಯುತ್ತಿದೆ ನೋಡಿ. ಏನಾದ್ರೂ ಮಾಡಿ ನನ್ನನ್ನು ಉಳಿಸಿರಿ. ನಾನು ಜೀವಂತ ಇರೋತನಕ ನನ್ನ ಹೆಂಡತಿ ಮಕ್ಕಳು ನಿಮ್ಮನ್ನ ದೇವರು ಅಂತಾ ಸೇವೆ ಮಾಡ್ತೀವಿ.... ಮೊದಲು ನೀರು ಕೊಡಿ.... ನೀರು....." ಎಂದಾಗ ಅಣ್ಣಾರಾವ್ ಕೂಡಲೇ ನೀರು ತರಿಸಿಕೊಟ್ಟರು. ರಕ್ತ ಹರಿಯುತ್ತಿದ್ದಲ್ಲಿಗೆ ಬಟ್ಟೆ ಒತ್ತಿ ಕಟ್ಟಿದರು. ಆದರೂ ರಕ್ತ ಹರಿಯೋದು ನಿಲ್ಲಲಿಲ್ಲ. ಆಸ್ಪತ್ರೆಗೆ ಹೋಗಲು ಸಿದ್ಧರಾಮೇಶರ ಕಾರ್ ಸ್ಟಾರ್ಟ್ ಮಾಡಲು ಹೋದರು. ಆದರೆ ಅದು ಸ್ಟಾರ್ಟ್ ಆಗಲಿಲ್ಲ.


ಸಿದ್ಧರಾಮೇಶ್‌ನ ಶವದ ಮುಂದೆ ಅವರ ಕುಟುಂಬದವರು....

ತಮ್ಮ ಮನೆಯೊಳಕ್ಕೆ ಹೋದ ಅಣ್ಣಾರಾವ್ ತಮ್ಮ ಕಾರು ತಂದು, ಅದರಲ್ಲಿ ಸಿದ್ಧರಾಮೇಶ್ ಅವರನ್ನು ಆಸ್ಪತ್ರೆಗೆ ಸಾಗಿಸಿದರು. ಸಿದ್ಧರಾಮೇಶ್ ಆಗ "ನೀರು! ನೀರು!!" ಎನ್ನುತ್ತಿದ್ದರಂತೆ. ಆಸ್ಪತ್ರೆಯಲ್ಲಿ ವೈದ್ಯರು ಕೂಡಲೇ ಆಕ್ಸಿಜನ್ ಕೊಟ್ಟು, ಉಪಚರಿಸಿದರೂ ಸಿದ್ಧರಾಮೇಶ್ ಸಾವನ್ನಪಿದರು.

ಮುಂದುವರೆಯಿತು 'ಕ್ರಾಂತಿ

ಬದುಕಿನಲ್ಲಿ ಸಾಕಷ್ಟು ನೋವು-ಅವಮಾನಗಳನ್ನು ಸಹಿಸಿಕೊಂಡ ಸಿದ್ಧರಾಮೇಶ್ ಮುಧೋಳರ ಕುಟುಂಬ ಮತ್ತೆ ಎಂದಿನಂತೆ ತಲೆ ಎತ್ತಿಕೊಂಡು ಪತ್ರಿಕೆಯನ್ನು ಮುನ್ನಡಿಕೊಂಡು ಬಂದುದೇ ಒಂದು ದೊಡ್ಡ ಪವಾಡ.

ಬರೀ ಸಾಕ್ಷಿಗಳ ಮೂಲಕ ಮಾತ್ರ ಸತ್ಯಾಸತ್ಯತೆಯನ್ನು ಪರಾಂಭರಿಸಿನೋಡುವ ನ್ಯಾಯದೇವತೆಯ ಕಣ್ಣಿನಲ್ಲಿ ಸತತ ಇಪ್ಪತ್ತೇಳು ವರ್ಷಗಳಿಂದಲೂ ಆರೋಪಿಗಳಾದ ಮಾರುತಿ ದೇವಪ್ಪ ಗಾಂವಕರ್, ಮಲ್ಲಿಕಾರ್ಜುನಪ್ಪ ಚೆನ್ನಪ್ಪ ತೋಟದ, ಸಿದ್ರಾಮ ಪುಂಡಲಿಕ್, ಯೋಗಿನಾಥ ಶಾಂತಪ್ಪ, ಬಾಬಾ ಶಿವರಾಯಪ್ಪ, ಸೈ.ರಫೀಕ್ ಅಹ್ಮದ್, ಸೈ. ಖುರೇಷಿ, ಮಲ್ಲಿನಾಥ ಶೇಖರಪ್ಪ, ಅಂಬುದೌಲಪ್ಪ ಹಾಗೂ ಇದೆಲ್ಲಕ್ಕೂ ಕಾರಣೀಕರ್ತನಾದ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಕೆ.ನಾರಾಯಣ ನ್ಯಾಯಾಲಯದ ಕುಣಿಕೆಯಿಂದ ಪಾರಾಗುತ್ತಲೇ ಬಂದಿದ್ದರು. ಈ ಪ್ರಕರಣ ಕುರಿತು ಸಿ.ಬಿ.ಐ. ವಿಚಾರಣೆಗಳು ನಡೆದರೂ ಕಾಣದ ಕೈಗಳ ಕರಾಮತ್ತುಗಳಿಂದ 2008 ಆಗಸ್ಟ್ 16 ರಂದು ನಮ್ಮ ರಾಜ್ಯದ ಹೈಕೋರ್ಟ್ ಇವರೆಲ್ಲರನ್ನೂ ಖುಲಾಸೆಗೊಳಿಸಿ ಎಲ್ಲರನ್ನು ತಬ್ಬಿಬ್ಬುಗೊಳಿಸಿತು.


ಆದರೆ ಹಠ ಬಿಡದ ತ್ರಿವಿಕ್ರಮನಂತೆ 'ಕ್ರಾಂತಿ' ಪತ್ರಿಕೆಯ ಇಂದಿನ ಸಂಪಾದಕ ಕ್ರಾಂತಿಕುಮಾರರ ಪ್ರಯತ್ನಗಳಿಗೆ ಕೊನೆಗೂ ಸಿಬಿಐ ಸೋತು ಹೋಗಿದೆ. ಸಿದ್ಧರಾಮೇಶ್‌ರ ಪತ್ನಿ ಶ್ರೀಮತಿ ಅನ್ನಪೂರ್ಣ ಅವರು ಸಲ್ಲಿಸಿದ್ದ ಖಾಸಗಿ ಮೇಲ್ಮನವಿಯನ್ನು ಪುರಸ್ಕರಿಸಿ 2009 ಆಗಸ್ಟ್ ತಿಂಗಳಲ್ಲಿ ಜೆ.ಎಂ.ಎಫ್.ಸಿ. ಕೋರ್ಟ್ ಆರೋಪಿಗಳೆಲ್ಲರಿಗೂ ನೋಟಿಸ್ ಜಾರಿಗೊಳಿಸಲು ಆದೇಶಿಸಿತ್ತು. ಆದರೆ ಕಾನೂನು ಚಾಪೆಯ ಕೆಳಗೆ ತೂರಿದರೆ ರಂಗೋಲಿಯ ಕೆಳಗೆ ತೂರುವ ಪ್ರವೃತ್ತಿಯ ಆರೋಪಿಗಳು ಆ ಕುಣಿಕೆಯಿಂದ ಪಾರಾಗುವ ಯೋಜನೆಗಳನ್ನು ರೂಪಿಸಿಕೊಂಡರು. ಕೋರ್ಟ್‌ನ ನೋಟಿಸುಗಳು ತಮಗೆ ತಲುಪದಂತೆ ವ್ಯವಸ್ಥೆ ಮಾಡಿಕೊಂಡರು.

ಈ ನೋಟಿಸ್‌ಗಳನ್ನು ಜೆ.ಎಂ.ಎಫ್.ಸಿ. ನ್ಯಾಯಾಲಯ ಗುಲಬರ್ಗಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯ ಮೂಲಕ ಆರೋಪಿಗಳಿಗೆ ಮತ್ತು ನವದೆಹಲಿಯಲ್ಲಿನ ಸಿಬಿಐ ಕಚೇರಿಗೂ ತಲುಪಿದ ನಂತರ ಎಚ್ಚೆತ್ತ ಕೇಂದ್ರೀಯ ತನಿಖಾ ದಳ ತಕ್ಷಣವೇ ಕೈಬಿಟ್ಟಿದ್ದ ಪ್ರಕರಣವನ್ನು ಮತ್ತೆ ಕೈಗೆತ್ತಿಕೊಂಡು ಇದೀಗ ಸುಪ್ರೀಂಕೋರ್ಟ್‌ನಲ್ಲಿ ಸ್ವಯಂ ಪ್ರೇರಣೆಯಿಂದ ವಿಶೇಷ ಮೇಲ್ಮನವಿಯನ್ನು ಸಲ್ಲಿಸಿದೆ. ಸಿಬಿಐನ ವಿಶೇಷ ಮೇಲ್ಮನವಿಯನ್ನು ಕೈಗೆತ್ತಿಕೊಂಡ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಶ್ರೀ. ಅಲ್ತಮಸ್ ಕಬೀರ ಮತ್ತು ನ್ಯಾಯಮೂರ್ತಿ ಶ್ರೀ ಸುರೀಂದರ್‌ಸಿಂಗ್ ನಿಜ್ಜರ್ ಅವರನ್ನು ಒಳಗೊಂಡ ಪೀಠ ಎಲ್ಲ ಆರೋಪಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಜೊತೆಗೆ ಸಿ.ಬಿ.ಐ.ನಲ್ಲಿರುವ ಭಾರತದ ಸಾಲಿಸಿಟರ್ ಜನರಲ್ ಅವರೇ ವಾದ ಮಂಡನೆ ಮಾಡುತ್ತಾರೆ. ಹೀಗಾಗಿ ಆರೋಪಿಗಳು ಎಷ್ಟೇ ಪ್ರಭಾವಿಯಾದರೂ ಕಾನೂನಿನ ಕುಣಿಕೆಯಿಂದ ಪಾರಾಗಲು ಸಾಧ್ಯವಿಲ್ಲ.

ಅದು ಹೇಗೋ ಸತತ ಇಪ್ಪತ್ತೇಳು ವರ್ಷಗಳ ಕಾಲ ಕಾನೂನಿನ ಕಣ್ಣಿಗೆ ಮಣ್ಣೆರಚಿಕೊಂಡು ಬಂದಿದ್ದ ಪಾತಕಿಗಳಿಗೆ ಸಿ.ಬಿ.ಐ. ಕಠಿಣ ಶಿಕ್ಷೆ ವಿಧಿಸಿ ಎಂದು ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದೆ. ಇದರಿಂದ ಆರೋಪಿಗಳ ಎದೆಯಲ್ಲಿ ಸಣ್ಣ ನಡುಕ ಶುರುವಾಗಿದೆ. ಮಾಡಿದ್ದುಣ್ಣೋ ಮಾರಾಯ ಎಂಬ ನಾಣ್ಣುಡಿಯಂತೆ ಕೆಲವೇ ತಿಂಗಳುಗಳಲ್ಲಿ ಮುಧೋಳನ ಕೊಲೆಗೈದ ಪಾತಕಿಗಳು ನೇರ ಸೆರೆಮನೆ ಸೇರುವುದು ಖಚಿತ ಎಂಬ ಆಶಾಭಾವನೆ ಮೊಳೆತಿದೆ. ಜನರ ನಾಡಿ ಮಿಡಿತಕ್ಕೆ ಸ್ಪಂದಿಸಿದ ಪತ್ರಕರ್ತನ ಕೊಲೆಯನ್ನು ಈ ನೆಲದ ಕಾನೂನುಗಳು ಗಮನಿಸಿ ಆರೋಪಿಗಳಿಗೆ ತಕ್ಕ ಶಿಕ್ಷೆಯಾಗಲಿ ಎಂದು ಲಂಕೇಶ್ ಆಶಿಸುತ್ತದೆ.

• ವಿಶ್ವಾರಾಧ್ಯ ಸತ್ಯಂಪೇಟೆ

ಅನ್ನಗಳ್ಳ ಪತ್ರಕರ್ತ ನರೇನಹಳ್ಳಿ ಅರುಣ್‌ಕುಮಾರ



ನಿರೀಕ್ಷೆಯಂತೆ ಚಿತ್ರದುರ್ಗ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ, ಉದಯವಾಣಿ ದಿನಪತ್ರಿಕೆಯ ಜಿಲ್ಲಾ ವರದಿಗಾರ ಅರುಣ್‌ಕುಮಾರ್ ಯಾನೆ ನರೇನಹಳ್ಳಿ ಅರುಣ್‌ಕುಮಾರ್ 420 ಕೇಸಿನಲ್ಲಿ ಬುಕ್ಕಾಗಿ ಪೊಲೀಸರಿಂದ ತಲೆಮರೆಸಿಕೊಂಡಿದ್ದಾನೆ.

ರಾಜ್ಯಮಟ್ಟದ ಪತ್ರಿಕೆಯೊಂದರಲ್ಲಿ ಜಿಲ್ಲಾ ವರದಿಗಾರನಾಗಿದ್ದು ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷನಾಗಿದ್ದ ವ್ಯಕ್ತಿ 420 ಕೇಸಿನಲ್ಲಿ ಆರೋಪಿಯಾಗಿ ನ್ಯಾಯಾಲಯದ ಕಟಕಟೆ ಹತ್ತುತ್ತಿರುವುದು ಜಿಲ್ಲೆಯ ಇತಿಹಾಸದಲ್ಲಿ ಇದೇ ಮೊದಲು. ಹಾಗಾಗಿ ಜಿಲ್ಲೆಯ ಪತ್ರಕರ್ತರಿಗೂ ಇದೊಂದು ಮುಜುಗರದ ಬೆಳವಣಿಗೆಯಾಗಿದೆ.

ಜನಪರ ಹೋರಾಟಗಾರ, ಪ್ರಗತಿಪರ ಚಿಂತಕ, ಎನ್‌ಜಿಓಗಳ ವಕ್ತಾರ, ಶೋಷಿತರ ಪರ ಸದಾ ಚಿಂತಿಸುವ ಸಾಮಾಜಿಕ ಕಾರ್ಯಕರ್ತನೆಂದು ಚಲಾವಣೆಯಾಗುತ್ತಿದ್ದ ನರೇನಹಳ್ಳಿ ಅರುಣ್‌ಕುಮಾರ್‌ಗೆ ಈ ದುಸ್ಥಿತಿ ಏಕೆ ಬಂತು? ಪೊಲೀಸರ ಕಣ್ತಪ್ಪಿಸಿಕೊಂಡು ಅಂಡಲೆಯಬೇಕಾದ ಸನ್ನಿವೇಶ ಏಕೆ ನಿರ್ಮಾಣವಾಯಿತು? ಈತ ಮಾಡಿದ ಮಹಾಪರಾಧವೇನು? ಎಂಬಂತಹ ಪ್ರಶ್ನೆಗಳು ಸಹಜವಾಗಿಯೇ ಹುಟ್ಟಿಕೊಳ್ಳುತ್ತವೆ.

ಜಗಳೂರು ತಾಲ್ಲೂಕಿನ ನರೇನಹಳ್ಳಿಯ ಅರುಣ್‌ಕುಮಾರ್ ವಿದ್ಯಾಭ್ಯಾಸಕ್ಕೊಂದು ಚಿತ್ರದುರ್ಗಕ್ಕೆ ಪಾದಾರ್ಪಣೆ ಮಾಡಿದಾಗ ಎಲ್ಲರಂತೆ ಹಾಸ್ಟೆಲ್, ರೂಮು, ಡಿಸಿ ಸರ್ಕಲ್, ಹೋರಾಟ ಅದು ಇದು ಎಂದು ಅಂಡಲೆಯುತ್ತಿದ್ದ. ದಲಿತಪರ-ಪ್ರಗತಿಪರ ಹೋರಾಟಗಳಿಗೆ ಫಲವತ್ತಾದ ಚಿತ್ರದುರ್ಗದಲ್ಲಿ ಭಾಷಣಗಳು-ಘೋಷಣೆಗಳಿಂದ ಸ್ಫೂರ್ತಿಗೊಂಡು ಈತ ನಿಧಾನವಾಗಿ ಸಂಘಸಂಸ್ಥೆಗಳ ಜೊತೆ ಒಡನಾಟ ಬೆಳೆಸಿಕೊಂಡ.

ಎದುರಿಗಿದ್ದವರನ್ನು ಮೋಡಿ ಮಾಡುವ, ಸುಲಭವಾಗಿ ಯಾಮಾರಿಸುವ ಮಾತುಗಾರಿಕೆಯ ಶೈಲಿ ರಕ್ತಗತವೆನ್ನುವಷ್ಟು ಆತನಲ್ಲಿ ಅಂತರ್ಗತವಾಗಿತ್ತು, ಜೊತೆಗೆ ಒಂದಿಷ್ಟು ಗೀಚುವುದನ್ನು ಅಭ್ಯಾಸ ಮಾಡಿಕೊಂಡ. 'ಪತ್ರಕರ್ತ'ನೆಂಬ ಬೋರ್ಡು ನೇತುಹಾಕಿಕೊಳ್ಳಲು ಇಷ್ಟು ಸಾಕಲ್ಲವೇ? ಅಂತೂ ನರೇನಹಳ್ಳಿ ಅರುಣ್‌ಕುಮಾರ್ **Activist Journalist** ಪೋಜು ಕೊಡಲಾರಂಭಿಸಿದ.

ಮಹಾನ್‌ಗ್ರಂಥಗಳನ್ನು, ಆಂಗ್ಲ ಪತ್ರಿಕೆಗಳನ್ನು ಸದಾ ಕೈಯಲ್ಲಿಡಿದು ತಿರುಗಾಡುವುದು, ಸಿಕ್ಕವರಿಗೆಲ್ಲ ಏನಾದರೊಂದು ಹುಳಬಿಟ್ಟು ತಾನು ಎಲ್ಲ ಬಲ್ಲ ಮಹಾತ್ಮ-ಬುದ್ಧಿಜೀವಿ ಎಂಬಂತೆ ಪೋಜುಕೊಡುವುದು ಇವನ ನಿತ್ಯದ ಕಾಯಕವಾಯಿತು.

ಅದರಲ್ಲೂ ಸಾಹಿತ್ಯ ಸಂಸ್ಕೃತಿ-ಸಮಾಜ ಹೀಗೆ ಯಾವುದೇ ವಿಷಯವಾದರೂ ಸೈ ಮುನ್ನುಡಿ-ಹಿನ್ನುಡಿ ಎರಡನ್ನೂ ಓದಿ ತಲೆಮೇಲೆ ಹೊಡೆದಂತೆ ಮಾತನಾಡುತ್ತಿದ್ದ

ಈತ ಎಂತಹವರನ್ನು ಬಕರಾಗಳಾಗಿಸುತ್ತಿದ್ದ ಪರಿಯೂ ಅಪರೂಪವಾದದ್ದು, ಸುಮಾರು ಹದಿನೈದು-ಇಪ್ಪತ್ತು ವರ್ಷಗಳ ಅವಧಿಯಲ್ಲಿ ಮುಕ್ತವಿಚಾರ ವೇದಿಕೆ, ಈ ಸಂಜೆ ದಿನ ಪತ್ರಿಕೆ, ಜನನಾಡಿ ಎಂಬ ಸ್ಥಳೀಯ ಪತ್ರಿಕೆ, ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಹೀಗೆ ಎಲ್ಲೆಂದರಲ್ಲೇ ಠಳಾಯಿಸುತ್ತಿದ್ದ ಅರುಣ್‌ಕುಮಾರ್ ಬ್ಯಾನರ್-ಲೆಟರ್‌ಹೆಡ್ ಪ್ರಧಾನವಾಗಿದ್ದ ಕೆಲ ಎನ್‌ಜಿಓಗಳಲ್ಲೂ ಸಕ್ರಿಯವಾಗಿದ್ದ.

ಈತ ಎಲ್ಲೇ ಸಕ್ರಿಯವಾಗಿದ್ದರೂ ತನಗೆ ಸಿಗುವ ಮಾನ್ಯತೆ, ಜನಪ್ರಿಯತೆ ಬಗ್ಗೆ ಮಾತ್ರ ಚಿಂತಿಸುತ್ತಿದ್ದ. ಆತನೇ ಮುಂದಾಳುತನ ವಹಿಸಿಕೊಳ್ಳುವಂಥ ಪರಿಸ್ಥಿತಿಗಳನ್ನು ಸೃಷ್ಟಿಸುವಲ್ಲೂ ನಿಸ್ಸೀಮನಾಗಿದ್ದ. ಕೊನೆಗೆ ನೀರಾವರಿ ಹೋರಾಟ ಸಮಿತಿಯಿಂದ ಅದ್ಯಾವುದೋ ಭಿನ್ನಾಭಿಪ್ರಾಯದಿಂದ ದೂರವಾದ ಅರುಣ್‌ಕುಮಾರ್‌ನನ್ನು ಕೈಹಿಡಿದದ್ದು ಎನ್‌ಜಿಓ ಮತ್ತು ಉದಯವಾಣಿ ಪತ್ರಿಕೆ.

ಎನ್‌ಜಿಓದಲ್ಲಿ ಏನು ಕಿಸಿದನೋ ಗೊತ್ತಿಲ್ಲ, ಉದಯವಾಣಿಗಂತೂ ವೃತ್ತಿಪರವಾಗಿ ನಯಾಪೈಸದ ಶ್ರಮ ಹಾಕಲಿಲ್ಲ, ತನ್ನ ಭಾವಮೈದ ಮೇಘ ಗಂಗಾಧರ ನಾಯ್ಕ್ ಎಂಬಾತ ತುಮಕೂರಿನಿಂದ ಪ್ರಕಟವಾಗುವ ಪ್ರಜಾಪ್ರಗತಿ ಎಂಬ ದಿನಪತ್ರಿಕೆಗೆ ಟೈಪಿಸಿದ ವರದಿಗಳ ಸಾಫ್ಟ್‌ಕಾಪಿಗಳೇ ನೇರವಾಗಿ ಉದಯವಾಣಿ ಕಚೇರಿಗೆ ತಲುಪುತ್ತಿದ್ದವು.


ಕಳೆದ 3-4 ವರ್ಷದಲ್ಲಿ ಉದಯವಾಣಿಯಲ್ಲಿ ಪ್ರಕಟವಾದ ವರದಿಗಳನ್ನು ಅದೇ ದಿನ ಪ್ರಜಾಪ್ರಗತಿಯಲ್ಲಿ ಪ್ರಕಟವಾದ ವರದಿಗಳನ್ನು ಗಮನಿಸಿದರೆ ಇದು



ಬಣಜಾರ ಬಾಲಕರ ವಿದ್ಯಾರ್ಥಿ ನಿಲಯ

ತಿಳಿಯುತ್ತದೆ. ಇದು ದುರ್ಗದ ಪತ್ರಕರ್ತರೆಲ್ಲರಿಗೂ ತಿಳಿದಿದ್ದ ಸಾರ್ವ ಸತ್ಯವಾಗಿತ್ತು, ರಾಜ್ಯಮಟ್ಟದ ಪತ್ರಿಕೆಯೊಂದರ ವರದಿಗಾರಿಕೆಯ ಜವಾಬ್ದಾರಿಯ ಹೀಗೂ ನಿಭಾಯಿಸಬಹುದೆಂಬುದರ ಹೊಸ ಮಾದರಿಯನ್ನು ಅರುಣ್‌ಕುಮಾ ಹಾಕಿಕೊಟ್ಟಿದ್ದ. ವಸ್ತುಸ್ಥಿತಿ ಹೀಗಿದ್ದರೂ ಹೊಸದಾಗಿ ಪತ್ರಕರ್ತರಾಗಿ ಆಗಮಿಸ ಯುವಕರಿಗೆ, ಹೋರಾಟದ ಮನಸ್ಸುಗಳಿಗೆ ಅದೇ ಕ್ಲೀಷೆಯ ಆದರ್ಶಗಳ ಸುರಿ ಸುರಿಸುತ್ತ ಬಕರಾಗಳನ್ನಾಗಿಸುವುದನ್ನು ಮಾತ್ರ ನಿಲ್ಲಿಸಿರಲಿಲ್ಲ.

ಇಂತಹ ಅರುಣ್‌ಕುಮಾರ್ ತಾನು ಪ್ರತಿನಿಧಿಸುವ ಶೋಷಿತ ಲಂಬ ಸಮುದಾಯದ ಉದ್ಧಾರ ಮಾಡುತ್ತೇನೆಂದು ಹೊರಟಾಗ ಸಹಜವಾಗಿ ಅನುಮಾನಗಳು ಹುಟ್ಟಿಕೊಂಡಿದ್ದವು. ಈ ಅನುಮಾನ ನಿಜವಾಗಿದೆ. ಬಣಜಾರ ಬಾಲಕರ ವಿದ್ಯಾರ್ಥಿನಿಲಯದ ಕಾರ್ಯದರ್ಶಿಯಾಗಿ 2008-(10ನೇ ಸಾಲಿನಲ್ಲಿ ಸುಮಾರು 10-15 ವಿದ್ಯಾರ್ಥಿಗಳು ಜೋಗಿಮಟ್ಟಿ ರಸ್ತೆಯಲ್ಲಿ ಶ್ರೀವಾಸುದೇವರೆಡ್ಡಿ ಪ್ರೌಢಶಾಲೆಯಲ್ಲಿ ವ್ಯಾಸಾಂಗ ಮಾಡುತ್ತಿದ್ದಾರೆ



ಸುಳ್ಳುದಾಖಲೆ ಸೃಷ್ಟಿಸಿ ಸಮಾಜ ಕಲ್ಯಾಣ ಇಲಾಖೆಯಿ ಅನುದಾನ ಪಡೆದಿದ್ದಾನೆ.

ಒಂದು ಕಡೆ ಪತ್ರಕರ್ತ, ಮತ್ತೊಂದು ಕಡೆ ಹೋರ ಗಾರನ ಪೋಜು ಕೊಡುತ್ತ ಈತ ಎಸಗುತ್ತಿದ್ದ ವಂಚನೆಗ ಸಹಿಸಿಕೊಳ್ಳಲಾಗದೇ ಅದೇ ಬಣಜಾರ ಬಾಲಕರ ವಿದ್ಯಾ ನಿಲಯದ ಉಪಾಧ್ಯಕ್ಷ ಹಾಗೂ ಜಿ.ಪಂ.ಮಾಜಿ ಸ ಜಿ.ರಾಜಾನಾಯ್ಕ, ಕಳೆದೆರಡು ವರ್ಷಗಳಿಂದ ನರೇನ ಅರುಣ್‌ಕುಮಾರ್ ಮತ್ತಾತನ ತರಲೆ ಸಹವರ್ತಿಗಳ ಬಣಜಾರ ಬಾಲಕರ ವಿದ್ಯಾರ್ಥಿನಿಲಯವನ್ನು ಪಾ ಮಾಡಬೇಕೆಂದು ಹೋರಾಟ ನಡೆಸುತ್ತಲೇ ಬಂದಿದ್ದರು.

ಈಗ ಅದಕ್ಕೆ ಕಾಲ ಕೂಡಿ ಬಂದ್ದಿದೆ. ವಿದ್ಯಾರ್ಥಿಗಳ ಹೆಸರಿನಲ್ಲಿ ನ ದಾಖಲೆಗಳನ್ನು ಸೃಷ್ಟಿಸಿ ವಂಚಿಸಿರುವ ಪ್ರಕರಣದ ಬೆನ್ನುಹತ್ತಿ ಅದಕ್ಕೆ ಅಗತ್ಯ ಎಲ್ಲಾ ಪೂರಕ ದಾಖಲೆಗಳನ್ನು ಒಟ್ಟುಮಾಡಿ ಚಿತ್ರದುರ್ಗ ನಗರದ ಪೊಲಿ ಠಾಣೆಯಲ್ಲಿ IPC 1860(U/S-468, 471, 420) ಪ್ರಕರಣಗಳನ್ನು ದಾಖ ನರೇನಹಳ್ಳಿ ಅರುಣ್‌ಕುಮಾರ್‌ನನ್ನು ಬಂಧಿಸಿ ಕಾನೂನು ಕ್ರಮಕೈಗೊಳ್ಳ ಒತ್ತಾಯಿಸಿದ್ದಾರೆ.

ಈ ನಡುವೆ ಪ್ರಕರಣವನ್ನು ರಾಜಿ ಪ್ರಯತ್ನಗಳ ಮೂಲಕ ಇತ್ಯ ಪಡಿಸಿಕೊಳ್ಳಲು ಇನ್ನಿಲ್ಲದ ವಿಫಲ ಪ್ರಯತ್ನಗಳನ್ನು ನಡೆಸಿ ಕೊನೆಗೆ ಕೈಚೆಲ್ಲಿ ಅರುಣ್‌ಕುಮಾರ್ ಈಗ ನಿರೀಕ್ಷಣಾ ಜಾಮೀನಿನ ನಿರೀಕ್ಷೆಯಲ್ಲಿ ತಲೆಮ ಕೊಂಡಿದ್ದಾನೆ.

ದಾಖಲೆಗಳು ಪಕ್ಕಾ ಇರುವುದರಿಂದ ಅರುಣ್‌ಕುಮಾರ್‌ನ ಚಮಕ್ ಪ್ರಭಾವಗಳು ಏನೂ ಮಾಡಲಾರವು. ದುರ್ಗದ ಪತ್ರಕರ್ತರ ಪಾಲಿಗೆ ಇದು ಅ ಮುಜುಗರದ ಸನ್ನಿವೇಶವಂತೂ ಆಗಿದೆ.

• ವರದಿಗ


ಅಂಟಾರ್ಟಿಕಾ ಎಂಬ ಮಾಯಾ ಲೋಕದಲ್ಲಿ

....3

ಸಹಾಯಕರಾಗಲಿ ಯಾರೂ ಇರಲಿಲ್ಲ, ಅಷ್ಟೇ ಅಲ್ಲ, ಆ ಶಿಬಿರದಲ್ಲಿ ನಾನೇ ರೇಡಿಯಾಲಜಿಸ್ಟ್, ಪಥಾಲಾಜಿಸ್ಟ್, ಡಿಯಾಗ್ನಾಸ್ಟೀಷಿಯನ್, ಸರ್ಜನ್, ನರ್ಸ್ ಎಲ್ಲವೂ ಆಗಿದ್ದೆ. ಸಾಮಾನ್ಯವಾಗಿ ಅಂಟಾರ್ಟಿಕಾದಲ್ಲಿ ಯಾರೂ ಕಾಯಿಲೆ ಬೀಳುವುದಿಲ್ಲ, ಯಾಕೆಂದರೆ ಆ ಖಂಡದಲ್ಲಿ ವೈರಸ್‌ಗಳಾಗಲಿ, ಬ್ಯಾಕ್ಟೀರಿಯಾಗಳಾಗಲಿ ಇಲ್ಲ. ಆದರೆ ನಾನು ಅಲ್ಲಿದ್ದಾಗ ಹಲವಾರು ತುರ್ತು ಪರಿಸ್ಥಿತಿಗಳು ಎದುರಾದವು. ಒಮ್ಮೆ ನಮ್ಮ ತಂಡದ ಒಬ್ಬರ ಬೆನ್ನಿಗೆ ಬೆಂಕಿ ತಾಗಿತು. ಇನ್ನೊಮ್ಮೆ ಒಬ್ಬರು ಆಯಿಲ್ ಟ್ಯಾಂಕರ್‌ನಿಂದ ಬಿದ್ದು ಬೆನ್ನಿಗೆ ಗಾಯವಾಯಿತು. ಮತ್ತೊಮ್ಮೆ ಒಬ್ಬರ ದೇಹದಲ್ಲಿದ್ದ ಗಡ್ಡೆಯನ್ನು ನಾನು ತೆಗೆಯಬೇಕಾಯಿತು. ಕೆಲ ವರ್ಷಗಳ ಹಿಂದೆ ಇನ್ನೊಂದು ಶಿಬಿರದಲ್ಲಿದ್ದ ವೈದ್ಯರೊಬ್ಬರು ಅಡುಗೆಯವನ ಕೈಗೆ ಒಂದು ಕನ್ನಡಿ ಕೊಟ್ಟು ತಮ್ಮ ಅಪೆಂಡಿಸೈಟಿಸ್ ಆಪರೇಶನ್‌ಅನ್ನು ತಾವೇ ಮಾಡಿಕೊಂಡಿದ್ದರು ಎಂದು ಯಾರೋ ಹೇಳಿದರು. ಅದೃಷ್ಟವಶಾತ್ ನಾನು ಅಲ್ಲಿದ್ದಾಗ ಯಾರೂ ಮರಣಹೊಂದಲಿಲ್ಲ, ಯಾಕೆಂದರೆ ಸಾಮಾನ್ಯವಾಗಿ ಅಲ್ಲಿ ಮರಣಹೊಂದಿದವರ ಕಳೆಬರವನ್ನು ನಮ್ಮ ದೇಶಕ್ಕೆ ವಾಪಸ್ ಕಳುಹಿಸುವುದಿಲ್ಲ, ಬದಲಾಗಿ ಅಲ್ಲೇ ಅದನ್ನು ಸುಟ್ಟುಹಾಕಲಾಗುತ್ತದೆ."

ಕನ್ವಲ್ ಅವರ ತಂಡದ ಇತರ ಸದಸ್ಯರು ತಮ್ಮ ಕೆಲಸದ ಭಾಗವಾಗಿ ಅಂಟಾರ್ಟಿಕಾವನ್ನು ಸುತ್ತಾಡುತ್ತಿದ್ದರು. ಆರಂಭದಲ್ಲಿ ಕನ್ವಲ್ ಅವರನ್ನು ಯಾರೂ ಇಂತಹ ಸುತ್ತಾಟಕ್ಕೆ ಕರೆದುಕೊಂಡು ಹೋಗುತ್ತಿರಲಿಲ್ಲ, ಆದರೆ ಅವರ ಅಡುಗೆಯ ರುಚಿಯನ್ನು ಆಸ್ವಾಧಿಸಿದನಂತರ ಅವರನ್ನೂ ಸಾಧ್ಯವಾದಾಗಲೆಲ್ಲ ಭೂತಜ್ಞರು, ಭೂವಿಜ್ಞಾನಿಗಳು, ಪವನತಜ್ಞರು ಕರೆದುಕೊಂಡು ಹೋಗುತ್ತಿದ್ದರಂತೆ. ಅಂತಹ ಸುತ್ತಾಟದಲ್ಲಿ ಕನ್ವಲ್ ಅವರು ಅಂಟಾರ್ಟಿಕಾದ ಸಹಜ ಮತ್ತು ಏಕೈಕ ಜೀವಿಗಳಾದ ಪೆಂಗ್ವಿನ್‌ಗಳನ್ನು ಕಂಡದ್ದರ ಬಗ್ಗೆ ತುಂಬಾ ಚೆನ್ನಾಗಿ ವಿವರಿಸಿದ್ದಾರೆ:

"ಪೆಂಗ್ವಿನ್‌ಗಳ ಇಡೀ ಸಂತಾನೋತ್ಪತ್ತಿ ಚಕ್ರವನ್ನು ನಾನು ಗಮನಿಸಿದೆ. ಚಳಿಗಾಲದಲ್ಲಿ ಸಂತಾನವೃದ್ಧಿ ಮಾಡುವ ಪೆಂಗ್ವಿನ್‌ಗಳು ಸಣ್ಣ ಸಮೆಗಲ್ಲುಗಳಿಂದ ತಮ್ಮ ಗೂಡನ್ನು ಕಟ್ಟಿಕೊಂಡು ಅದರಲ್ಲಿ ಮೊಟ್ಟೆ ಇಡುತ್ತವೆ. ಹೆಣ್ಣು ಪೆಂಗ್ವಿನ್‌ಗಳು ಮೊಟ್ಟೆ ಇಟ್ಟನಂತರ ಸಮುದ್ರಕ್ಕೆ ತೆರಳುತ್ತವೆ.



ಆಗ ಪುರುಷ ಪೆಂಗ್ವಿನ್‌ಗಳು ಗೂಡಿನಿಂದ ಕಿಂಚಿತ್ತೂ ಅಲುಗಾಡದೆ ಮೊಟ್ಟೆಗಳಿಗೆ ತಮ್ಮ ಪಾದಗಳ ಮೂಲಕ ಕಾವು ಕೊಡುತ್ತವೆ. ಸಮುದ್ರದಲ್ಲಿ ಪ್ರೋಟೀನ್ ಭರಿತ ಕ್ರಿಲ್ ಎಂಬ ಮೀನುಗಳನ್ನು ಹೊಟ್ಟೆತುಂಬ ತಿಂದು ವಾರಗಳನಂತರವೋ, ತಿಂಗಳುಗಳ ನಂತರವೋ ಹೆಣ್ಣು ಪೆಂಗ್ವಿನ್‌ಗಳು ವಾಪಸ್ ಬರುವಹೊತ್ತಿಗೆ ಅವು ದಷ್ಟಪುಷ್ಟವಾಗಿರುತ್ತವೆ. ಆದರೆ ಹಾಗೆ ವಾಪಸ್ ಬರುವಾಗ ತಂದೆ ಪೆಂಗ್ವಿನ್‌ಗೆ ಮತ್ತು ಮಕ್ಕಳು ಪೆಂಗ್ವಿನ್‌ಗಳಿಗೆ ಸಾಕಷ್ಟು ಕ್ರಿಲ್ ಮೀನುಗಳನ್ನು ತನ್ನ ಬಾಯಿಯಲ್ಲಿ ಹೊತ್ತು ತರುವುದನ್ನು ತಾಯಿ ಪೆಂಗ್ವಿನ್‌ಗಳು ಮರೆಯುವುದಿಲ್ಲ. ತಾಯಿ ಪೆಂಗ್ವಿನ್ ವಾಪಸ್ ಬರುವ ಹೊತ್ತಿಗೆ ಮರಿ ಮೊಟ್ಟೆಯಿಂದ ಹೊರಬಾರದಿದ್ದರೆ ತಂದೆ ಪೆಂಗ್ವಿನ್ ಆ ಮೊಟ್ಟೆಗಳನ್ನು ತಾಯಿ ಪೆಂಗ್ವಿನ್‌ಗೆ 'ಪಾದಾಂತರಿಸಿ' ಸಮುದ್ರಕ್ಕೆ ತೆರಳುತ್ತವೆ. ಅಷ್ಟು ದಿನ ಚಲಿಸದೇ ಗೂಡಿನ ಮೇಲೆ ನಿಂತಿದ್ದರಿಂದ ಗಂಡು ಪೆಂಗ್ವಿನ್‌ಗಳು ತೆಳ್ಳಗಾಗಿರುತ್ತವೆ. ಈಗ ಕ್ರಿಲ್ ಮೀನುಗಳನ್ನು ತಿಂದು ಮತ್ತೆ ದಷ್ಟಪುಷ್ಟವಾಗುವುದು ಗಂಡು ಪೆಂಗ್ವಿನ್‌ಗಳ ಸರದಿ. ನನ್ನನ್ನು ಅಂಟಾರ್ಟಿಕಾದಲ್ಲಿ ಏಕಾಂಗಿತನ ಕಾಡಿದ್ದರೂ ಪೆಂಗ್ವಿನ್‌ಗಳ ಈ ಜೀವನ ಕ್ರಮವನ್ನು ನೋಡುವ ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ."

ಈಗ ಅಂಟಾರ್ಟಿಕಾದಲ್ಲಿ 27 ದೇಶಗಳ ಶಿಬಿರಗಳಿದ್ದು ಎಲ್ಲಾ ದೇಶಗಳ ಶಿಬಿರಗಳು ಜೂನ್ 21ರಂದು ಅಂಟಾರ್ಟಿಕಾ ದಿನಾಚರಣೆಯನ್ನು ಆಚರಿಸುತ್ತವೆ. ಅದರೊಂದಿಗೆ ಆಯಾ ಶಿಬಿರಗಳಲ್ಲಿ ಪಾರ್ಟಿಗಳು, ತಂಡದ ಸದಸ್ಯರ ಹುಟ್ಟುಹಬ್ಬಗಳು, ಸ್ವತಂತ್ರ ದಿನಾಚರಣೆಗಳನ್ನೂ ಆಚರಿಸಲಾಗುತ್ತದೆ. ಇತರೆ ದೇಶಗಳು ಒಂದೊಂದು ಶಿಬಿರ ಸ್ಥಾಪಿಸಿದ್ದರು ಅಮೆರಿಕ ಅಂಟಾರ್ಟಿಕಾದಲ್ಲಿ ಬರೋಬ್ಬರಿ ನಾಲ್ಕು ಶಿಬಿರಗಳನ್ನು ಸ್ಥಾಪಿಸಿದೆ. ಅಷ್ಟೇ ಅಲ್ಲ, ಅಮೆರಿಕಾದ ಶಿಬಿರಗಳಲ್ಲಿ ವಾಸಿಸಲು ಬರುವ ಅಮೆರಿಕನ್ನರು ಅಲ್ಲೇ ಮಕ್ಕಳನ್ನು ಪಡೆಯಲು ಪ್ರಯತ್ನಿಸುತ್ತಾರಂತೆ. ಅದಕ್ಕೆ ಕಾರಣ ಹೀಗೆ ಅಂಟಾರ್ಟಿಕಾದಲ್ಲಿ ಜನಿಸಿದ ಮಕ್ಕಳಿಗೆ ಮುಂದೊಂದು ದಿನ ಅಂಟಾರ್ಟಿಕಾದ 'ಪೌರತ್ವ' ಸಿಗುತ್ತದೆ ಎಂಬ ಆಶೆ. ಆದರೆ ಒಂದು ದೇಶವೂ ಅಲ್ಲದ, ಜನರು ಸಹಜವಾಗಿ ವಾಸಿಸಲು ಅಸಾಧ್ಯವಾಗಿರುವ ಅಂಟಾರ್ಟಿಕಾದಂತಹ ಪ್ರದೇಶದ 'ಪೌರತ್ವ' ತಮ್ಮ ಮಕ್ಕಳಿಗೆ ಬೇಕೆನ್ನುವ ಅಮೆರಿಕನ್ನರದ್ದು ಇದೆಂತಹ ಹುಚ್ಚು ಅನ್ನಿಸುತ್ತದೆ. ಆದರೆ ಇದರ ಹಿಂದೆ ಒಂದು ಹುನ್ನಾರವಿದೆ. ಅದೇನೆಂದರೆ ಅಂಟಾರ್ಟಿಕಾ ಖಂಡದಲ್ಲಿ ಅಪಾರ ಖನಿಜ ಸಂಪತ್ತು ಆದರ ಮೇಲೆ ಮುಂದೊಂದು ದಿನ ತಮ್ಮ ಹಕ್ಕನ್ನು ಸಾಧಿ ಸ್ಕೆಚ್ ಅನ್ನು ಅಮೆರಿಕನ್ನರು ಈಗಾಗಲೇ ಹಾಕಿದ್ದಾರೆ.

ಅಂಟಾರ್ಟಿಕಾದಲ್ಲಿ ಕನ್ವಲ್ ಅವರು ತುಂಬಾ ಇಷ್ಟ ದೃಶ್ಯ ಆಕಾಶದಲ್ಲಿ ಕುಣಿದಾಡುವ ಬೆಳಕಿನ ಚುಕ್ಕಿ "ಅರೋರ ಆಸ್ಟ್ರೇಲಿಸ್ (ದಕ್ಷಿಣ ಧ್ರುವ ಪ್ರಭೆ) ನೋಡಿದಾಗ ಆಗುವ ಸಂತೋಷವನ್ನು ವಿವರಿಸಲು ಅ ಸೂರ್ಯನಿಂದ ಹೊರಡುವ ವಿದ್ಯೂದೀಕರಣಗೊಂಡ ಗಳು ಆಕಾಶದಲ್ಲಿ ವಿವಿಧ ಬಣ್ಣಗಳನ್ನು, ವಿವಿಧ ಆಕಾರಗ ಪಡೆದು ಕುಣಿದಾಡುವುದನ್ನು ಕಂಡಿದ್ದಕ್ಕೆ ನನ್ನ ಅಂಟಾರ್ಟಿ ಯಾತ್ರೆ ಸಫಲವಾಯಿತು ಎನ್ನಬಲ್ಲೆ. ಇನ್ನೊಂದು ಗಮನ ಅಂಶ ಯಾವುದೆಂದರೆ ಅಂಟಾರ್ಟಿಕಾದಲ್ಲಿ ಸೂ ಉತ್ತರದಲ್ಲಿ ಹುಟ್ಟುವುದು ಮತ್ತು ಉತ್ತರದಲ್ಲೇ ಮು ವುದು" ಎನ್ನುತ್ತಾರೆ ಕನ್ವಲ್.

ನಿಮಗೆ ಮತ್ತೆ ಅಂಟಾರ್ಟಿಕಾಗೆ ಹೋಗುವ ಅವ ಸಿಕ್ಕರೆ ಏನು ಮಾಡುತ್ತೀರಿ ಎಂದರೆ ಕನ್ವಲ್ ಅವರು " ಜೀವನ ಸಾಗಿಸುವುದು ಬಹಳ ಕಷ್ಟ. ಆದರೂ ಸ್ವಚ್ಛ ಸುಂದರವಾದ ಆ ಮಾಯಾಲೋಕಕ್ಕೆ ಹೋಗುವ ಅವ ಮತ್ತೊಮ್ಮೆ ಸಿಕ್ಕರೆ ಕಂಡಿತವಾಗಿಯೂ ಹೋಗುತ್ತೇ ಎನ್ನುತ್ತಾರೆ.

ಅಂಟಾರ್ಟಿಕಾ ದೊಡ್ಡದಾದ ನೀರ್ಗಲ್ಲಿನ ಮರು ಭೂ ಯಾಗಿದ್ದು ಅಲ್ಲಿ ಅಪರೂಪವಾದ ಹಲವು ಹುಲ್ಲು ಹೊರತಾಗಿ ಬೇರೆ ಏನೂ ಬೆಳೆಯುವುದಿಲ್ಲ. ಆದ್ದರಿಂದ ಕ ಅವರು ಭಾರತಕ್ಕ ವಾಪಸ್ ಬಂದಾಗ ತಮ್ಮೊಂದಿಗೆ ಒಂದ ಅಂಟಾರ್ಟಿಕಾದ ಹುಲ್ಲನ್ನು ತಂದಿದ್ದರಂತೆ. "ಆ ಹುಲ್ಲನ್ನು ಸಂಬಂಧಿಕರಿಗೆ ತೋರಿಸಿದಾಗ ಅವರಿಗೆ ಅದರ ಬಗ್ಗೆ ಆಸಕ್ತಿ ಮೂಡಲಿಲ್ಲ, ಬದಲಾಗಿ ನಾನು ಅಂಟಾರ್ಟಿಕಾ ಏನೇನನ್ನು ಖರೀದಿಸಿದೆ ಎಂಬುದರ ಬಗ್ಗೆ ಅವರಿಗೆ ಆಸಕ್ತಿ ಇತ್ತು!" ಎನ್ನುತ್ತಾರೆ ಕನ್ವಲ್ ತಮ್ಮ ಕತೆ ಮುಗಿಸು


ಅಂಟಾರ್ಟಿಕಾದಲ್ಲಿ ಕನ್ವಲ್ ಎಂಬ ಮಹಿಳೆಯ ಭವಗಳು ನನಗೆ ಇಷ್ಟವಾದ್ದರಿಂದ ಅದನ್ನು ನಿಮ್ಮೊ ಹಂಚಿಕೊಂಡಿದ್ದೇನೆ...

• ಗೌರಿ ಲಂಕೇ

ಕಾವ್ಯ-ಸಾಹಿತ್ಯದ ಮೂಲಭೂತವಾದ ಪ್ರಕಾರ -ಸಿಪಿಕೆ

ಗಂಗಾವತಿಯಲ್ಲಿ ನಡೆಯಲಿರುವ 78 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಗೊಂಡಿರುವ ಡಾ.ಸಿ.ಪಿ. ಕೃಷ್ಣಕುಮಾರ್ ಅವರೊಂದಿಗೆ 1995 ರಲ್ಲಿ ನಡೆಸಿದ ಸಂದರ್ಶನಗಳನ್ನು ಇಲ್ಲಿ ಮತ್ತೆ ಪ್ರಕಟಿಸುತ್ತಿದ್ದೇವೆ.

ಸಂದರ್ಶನ: **ಹೊರೆಯಾಲ ದೊರೆಸ್ವಾಮಿ**



ಸತತ ಪರಿಶ್ರಮ ಮತ್ತು ತಾಳ್ಮೆ ಇದ್ದರೆ ಮನುಷ್ಯ ಏನೆಲ್ಲ ಮತ್ತು ಎಷ್ಟೆಲ್ಲಾ ಬರೆಯಬಹುದೆಂಬುದಕ್ಕೆ ಸಿಪಿಕೆ ಎಂದು ಹೆಸರಾದ ಡಾ. ಸಿ.ಪಿ. ಕೃಷ್ಣಕುಮಾರ್ (ಚಿಕ್ಕನಾಯಕನಹಳ್ಳಿ ಪುಟ್ಟೇಗೌಡ್ ಕೃಷ್ಣಕುಮಾರ್, ಜ: 1939) ಒಂದು ಉತ್ತಮ ನಿದರ್ಶನ. ಕಾವ್ಯ, ಪ್ರಬಂಧ, ವಿಮರ್ಶೆ, ಸಂಶೋಧನೆ, ಭಾಷಾಂತರ, ಜಾನಪದ, ಸಂಪಾದನ ಇತ್ಯಾದಿ ಪ್ರಕಾರಗಳಲ್ಲಿ ಈವರೆಗೆ 185 ಕೃತಿಗಳನ್ನು ಹೊರತಂದಿರುವ ಮತ್ತು ಸತತವಾಗಿ ಇನ್ನೂ ಬರೆಯುತ್ತಲೇ ಇರುವ ಸಿಪಿಕೆ ಸಾಹಿತ್ಯ ಕ್ಷೇತ್ರದಲ್ಲಿ ಒಂದು ದಾಖಲೆಯನ್ನೇ ನಿರ್ಮಾಣ ಮಾಡಿದ್ದಾರೆಂಬುದು ಗಮನಿಸಬೇಕಾದ ಸಂಗತಿ. (ಈ ಕೃತಿ 12 ಕವನ ಸಂಕಲನಗಳನ್ನು ಹೊರತುಪಡಿಸಿದರೆ ಉಳಿದವೆಲ್ಲ ಸೃಜನೇತರ ಸಾಹಿತ್ಯ ಪ್ರಕಾರಕ್ಕೆ ಸೇರಿದವು) ಇಷ್ಟೊಂದು ಗಣನೀಯವಾಗಿ ಸಾಹಿತ್ಯ ಕೃತಿಗಳನ್ನು ರಚಿಸಿರುವ ಅವರ ಕರ್ತೃತ್ವ ಶಕ್ತಿಯನ್ನು ನಾವು ಶ್ಲಾಘಿಸಬಹುದಾದರೂ ಅವು ಸತ್ವದಲ್ಲಿ ಮತ್ತು ತತ್ವದಲ್ಲಿ ಮಹತ್ವವಾದವು ಎಂಬುದು ಮಾತ್ರ ಚರ್ಚಾಸ್ಪದವಾದ ಸಂಗತಿ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿರುವ ಸಿಪಿಕೆಯವರ ಬರವಣಿಗೆಗಳ ಬಗ್ಗೆ ಸ್ಥೂಲವಾಗಿ ಹೇಳುವುದಾದರೆ ಅವು 'ಸರಳ' (ಭಾಷಾಂತರ ಕೃತಿಗಳನ್ನು ಬಿಟ್ಟು). ಸಂಕೀರ್ಣತೆ ಸಾಹಿತ್ಯದ ಪ್ರಮುಖ ಲಕ್ಷಣ ಎಂಬುದನ್ನು ಅವರು ಪ್ರತಿಪಾದಿಸುತ್ತಾರೆ. ಸರಳತೆ ಸಾಹಿತ್ಯವಾಗಬಾರದ್ದೆಂದೇನೂ ಇಲ್ಲ. ಆದರೆ, ಸರಳತೆ ಬರೀ ಸರಳತೆಯಾದರೆ? ಜೀವನವನ್ನು ಪರಿಗ್ರಹಿಸುವುದು, ಮಾನಸಿಕ ತೊಳಲಾಟಗಳು, ಸಂಘರ್ಷಗಳು ಇಂಥವೆಲ್ಲವನ್ನು ಸಾಹಿತ್ಯದಲ್ಲಿ ಕೇವಲ ಸರಳವಾಗಿಯೇ ನೋಡುವುದಾದರೆ ಅಂತಹ ಸಾಹಿತ್ಯ ಕೃತಿಗಳು ಬರೀ ಸರಳ ಕೃತಿಗಳಾಗೇ ನಿಂತುಬಿಡುವ ಅಪಾಯವಿಲ್ಲದೆಯೂ ಇಲ್ಲ. ಈ ದೃಷ್ಟಿಯಿಂದ ಸಿಪಿಕೆಯವರ ಸೃಜನಾತ್ಮಕ ಮತ್ತು ಸೃಜನೇತರ ಸಾಹಿತ್ಯ ಕೃತಿಗಳನ್ನೆಲ್ಲ ವಸ್ತುನಿಷ್ಠವಾದ ವಿಮರ್ಶೆಗೆ ಒಳಗಾಗಿಸಬೇಕಾದ ಅಗತ್ಯ ಇಲ್ಲದೆ ಇಲ್ಲ.

ಮೂಲತಃ ಸರಳ ವ್ಯಕ್ತಿತ್ವದ ಸಿಪಿಕೆ ಯಾವ ಗೋಜಲು ಗೊಂದಲಗಳಿಗೆ ಅಷ್ಟಾಗಿ ಸಿಕ್ಕಿಹಾಕಿಕೊಳ್ಳುವವರಲ್ಲ. ತಾವಾಯಿತು ತಮ್ಮ ಕೆಲಸವಾಯಿತು. ಹೀಗೆ, ಇತಿಮಿತಿಯಲ್ಲಿ ಬದುಕುತ್ತ, ಅದಕ್ಕನುಗುಣವಾಗಿ ಬರೆಯುತ್ತ ಬಂದಿರುವ ಸಿಪಿಕೆಯವರೊಂದಿಗೆ ನಡೆಸಿದ ಸಂದರ್ಶನ ಇಲ್ಲಿದೆ.

* *ಸಾಹಿತ್ಯವನ್ನು ನೀವು ಯಾವ ಅರ್ಥದಲ್ಲಿ ಸ್ವೀಕರಿಸುತ್ತೀರಿ?*

ಸಾಹಿತ್ಯವನ್ನು ಬದುಕಿನ ಅರ್ಥ ಅಂತಲೇ ಭಾವಿಸಬೇಕಾಗುತ್ತದೆ. ಒಂದು ದೃಷ್ಟಿಯಲ್ಲಿ ಬದುಕು ಸರಳ. ಸಾಹಿತ್ಯ ಸಂಕೀರ್ಣ. ಮನುಷ್ಯನ ಅವ್ಯಕ್ತವಾದ ಮುಖಗಳನ್ನು, ಆಯಾಮಗಳನ್ನು ಸಾಹಿತ್ಯ ಹಿಡಿದಿಡುತ್ತದೆ. ಸಾಹಿತ್ಯ ವಾಸ್ತವಿಕವಾಗಿರಬೇಕು; ಆದರ್ಶವಾಗಿರಬೇಕು ಎಂದು ಹೇಳುತ್ತಾರೆ. ಆದರೆ, ಇವೆರಡನ್ನೂ ಮೀರಿದ್ದು ಸಾಹಿತ್ಯ. ಆದರ್ಶ ಅಂದರೆ ಕನ್ನಡಿ ಅಂತಲೂ ಅರ್ಥವಿದೆ. ಹಾಗಾಗಿ, ಸಾಹಿತ್ಯ ಜೀವನದ ಗತಿಬಿಂಬ, ಪ್ರತಿಬಿಂಬ ಅಂತಲೂ ಹೇಳಲಾಗದು. 'ಪ್ರತಿಮೆ' ಅನ್ನಬಹುದು. ಸರಳವಾಗುವುದಿಲ್ಲ, ಸಂಕೀರ್ಣ.

* *ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೆಲಸ ಮಾಡುತ್ತಿರುವ ನಿಮಗೆ ತೀರ ಇಷ್ಟವಾದ ಕ್ಷೇತ್ರ ಯಾವುದು? ಯಾಕೆ?*

ನನ್ನ ಮೊದಲ ಒಲವು ಕಾವ್ಯ. ಆಮೇಲೆ ಕಾವ್ಯ ಮೀಮಾಂಸೆ. ಕಾವ್ಯ ಸಾಹಿತ್ಯದ ಮೂಲಭೂತವಾದ ಪ್ರಕಾರ. ಅದರ ಸಂತೋಷ ಬೇರೆ ಯಾವುದರಲ್ಲೂ ಇಲ್ಲ. ಭಾರತೀಯ ಪರಂಪರೆಯಲ್ಲಿ ಕಾವ್ಯಕ್ಕೆ ಬಹಳ ವಿಶಾಲವಾದ ಅರ್ಥವಿದೆ. ಎಲ್ಲ ಅನುಭವಗಳನ್ನೂ ಅದು ವಿಶಾಲಗೊಳಿಸುತ್ತದೆ. ಕಾವ್ಯದ ನನ್ನ ಒಲವಿಗೆ ತರ್ಕಬದ್ಧವಾದ ಕಾರಣವೇನೂ ಇಲ್ಲ. ಅಂತಃಕರಣ ಬೇಕಿದೆ ಅಷ್ಟೆ. ಚಿಕ್ಕಂದಿನಲ್ಲಿ ನನ್ನಜ್ಜಿ ಜನಪದ ಕಥೆ, ಹಾಡುಗಳನ್ನು ಹೇಳಿಕೊಡುತ್ತಿದ್ದರು. ಸರ್ವೇಯರ್ ಆಗಿದ್ದ ನನ್ನ ತಂದೆ ಕುಮಾರವ್ಯಾಸ ಭಾರತದ ವಾಚನ ಮಾಡುತ್ತಿದ್ದರು. ಇವು ಕೂಡ ನನ್ನ ಮೇಲೆ ಪ್ರಭಾವ ಬೀರಿವೆ. (ನನ್ನ ತಂದೆ ಮತ್ತು ನಾನು ಇಬ್ಬರೂ ಬೇರೆಬೇರೆ ಕಾಲದಲ್ಲಿ ತೀನಂಶ್ರೀ ಅವರ ಶಿಷ್ಯರು)

* *ಹಳಗನ್ನಡ ಸಾಹಿತ್ಯವನ್ನು ಆಧುನಿಕ ಕಾಲದ ಸಂವೇದನೆಗಳಿಗೆ ತಕ್ಕಂತೆ ಪರಿವರ್ತಿಸಿಕೊಳ್ಳಲು ಸಾಧ್ಯವಿದೆಯೆ?*

ಪರಿವರ್ತಿಸಿಕೊಳ್ಳಲು ಸಾಧ್ಯ, ಆದರೆ ಎಲ್ಲವೂ ಅಲ್ಲ, ತ್ರಿಕಾಲ ಬಾಧಿತವಾದವುಗಳನ್ನು ಮಾತ್ರ. ಅಂದರೆ ಮಾನವಭಾವ ಮೂಲವಾದವುಗಳು ಸಾಮಾಜಿಕ ಪ್ರಶ್ನೆ ಬಂದಾಗ ಬೇರೆಯಾಗುತ್ತವೆ. ವಚನ ಸಾಹಿತ್ಯ ಇಂದಿಗೂ ನಿಲ್ಲುತ್ತದೆ. ಪಂಪಭಾರತದ ಭೀಷ್ಮ-ಕರ್ಣನ ಪ್ರಸಂಗದಲ್ಲಿ ಬರುವ ಕುಲ, ಜಾತಿ ಪ್ರಶ್ನೆಗಳು ಸ್ವೀಕಾರಾರ್ಹವಾದವು. ಹರಿಹರ, ರಾಘವಾಂಕ ಹೀಗೆ ಅನೇಕ ಕವಿಗಳು ಇಂದಿಗೂ ಪ್ರಸ್ತುತರಾಗುತ್ತಾರೆ. ಹಾಗೆಯೇ ಹಿಂದಿನ ಕವಿಗಳ ನಿಸರ್ಗಪ್ರೀತಿ-ಪರಿಸರ ರಕ್ಷಣೆಯು ಇಂದಿನ ದಿನಗಳಲ್ಲಿ ಒಂದು ಮೌಲ್ಯವೇ. ಮಾವು ಮತ್ತು ಮಲ್ಲಿಗೆ ಕರ್ನಾಟಕ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ಈ ಬಗ್ಗೆ ಹಳಗನ್ನಡ ಸಾಹಿತ್ಯದಲ್ಲಿ ಅನೇಕ ನಿದರ್ಶನಗಳಿವೆ. ನಮ್ಮ ಸಂಸ್ಕೃತಿಯ ಮುಂದುವರಿಕೆಗೆ ಈ ಎಲ್ಲ ಪ್ರಜ್ಞೆ ನಮಗೆ ಅವಶ್ಯಕ.

* *ಕನ್ನಡ ಸಾಹಿತ್ಯದ ವಿಮರ್ಶಾಕ್ಷೇತ್ರದ ಒಲವು ನಿಲುವುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?*

ಇಲ್ಲಿರುವ ಸಮಸ್ಯೆ- ಒಂದೇ ಮಾತಿನಲ್ಲಿ ಹೇಳುವುದಾದರೆ ಸಾಹಿತ್ಯದಲ್ಲ, ಸಾಹಿತಿಗಳದ್ದು; ವಿಮರ್ಶಕರದ್ದು- ಸಮಸ್ಯೆ. ವಿಮರ್ಶೆಯಲ್ಲಿ (ಇಂದಿನ) ವಸ್ತುನಿಷ್ಠತೆ, ಪ್ರಾಮಾಣಿಕತೆ ಕಂಡುಬರುವುದಿಲ್ಲ, ಗುಂಪುಗಾರಿಕೆ. ಒಂದು ಜಾತಿ ಆಧಾರದ ಮೇಲೆ. ಇನ್ನೊಂದು ಬೇರೆ ಆಧಾರಗಳ ಮೇಲೆ. ಇವೆರಡೂ ಅಪಾಯಕಾರಿ. ವಿಮರ್ಶೆ ಆರೋಗ್ಯಕರವಾಗಿಲ್ಲ, ಪೂರ್ವಗ್ರಹಪೀಡಿತವಾಗಿದೆ.

* *ಇಂಥ ಪರಿಸ್ಥಿತಿ ಕನ್ನಡದಲ್ಲಿ ಯಾಕಿದೆ?*

ಒಂದು ಮಾತಿನಲ್ಲಿ ಹೇಳುವುದಾದರೆ ಸ್ವಾರ್ಥಪ್ರವೃತ್ತಿ. ಬೇರೆ ಭಾಷೆಗಳಲ್ಲಿ ಹೇಗಿದೆಯೋ ಗೊತ್ತಿಲ್ಲ, ಈ ಬಗ್ಗೆ ಇನ್ನೂ ವಿಶ್ಲೇಷಣೆ ಬೇಕಿದೆ.

* *ಶೀಘ್ರ ಪ್ರಗತಿಯ ಆಧುನಿಕ ಬೆಳವಣಿಗೆಯ ನಡುವೆ ಸಾವಿರಾರು ವರ್ಷಗಳ ಪರಂಪರೆಯ ಜಾನಪದ ಎಷ್ಟರಮಟ್ಟಿಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬಲ್ಲದು?*

ಜಾನಪದ ಪರಂಪರೆಯನ್ನು ಎರಡು ರೀತಿಗಳಲ್ಲಿ ಉಳಿಸಿಕೊಳ್ಳಬಹುದು. ಒಂದು ವಸ್ತು ಸಂಗ್ರಹಾಲಯಗಳಲ್ಲಿ, ಎರಡು ಬದುಕಿನಲ್ಲಿ. ಆದರೆ, ಅದನ್ನು ಯಥಾವತ್ತಾಗಿ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಆಧುನಿಕ ಸಂವೇದನೆಗಳಿಗೆ ತಕ್ಕಂತೆ ಅದನ್ನು ಉಳಿಸಿಕೊಳ್ಳಬೇಕು. ಕಾಲಕ್ಕೆ ತಕ್ಕಂತೆ ಬದಲಾವಣೆ ಆಗಬೇಕು. ಈ ದೃಷ್ಟಿಯಲ್ಲಿ ಯಕ್ಷಗಾನದ ಪ್ರಯೋಗಗಳು ಸ್ವಾಗತಾರ್ಹವಾದವು. ಜನಪದ ಸಾಹಿತ್ಯದಲ್ಲೂ ಅಷ್ಟೆ. ಅದರ ಆತ್ಮವನ್ನು ಉಳಿಸಿಕೊಳ್ಳಬೇಕು. ಜನಪದ ಸಾಹಿತ್ಯದಲ್ಲಿ ಬರುವ ಮೂಢನಂಬಿಕೆ, ಆಚರಣೆಗಳನ್ನು ಕೈಬಿಡಬೇಕು. ಜಾನಪದ ನಿರಂತರವಾದುದು. ಅದು ಎಲ್ಲದಕ್ಕೂ ಮೂಲಸೂತ್ರ. ನಮ್ಮ ಮನಸ್ಸಿನಲ್ಲೂ ಜಾನಪದ ಇದ್ದೇ ಇರುತ್ತದೆ.

* *ನೀವು ಹೆಚ್ಚಾಗಿ ಹಳಗನ್ನಡ ಸಾಹಿತ್ಯ, ಸಂಸ್ಕೃತ ಸಾಹಿತ್ಯದ ಬಗ್ಗೆ ಗಮನ ಹರಿಸುತ್ತೀರಿ. ಆಧುನಿಕ ಕನ್ನಡ ಸಾಹಿತ್ಯದ ಬಗ್ಗೆ ನಿಮ್ಮ ಒಲವು ಅಷ್ಟಾಗಿ ಕಂಡುಬರುದಿಲ್ಲವಲ್ಲಾ? ಯಾಕೆ?*

ಆಧುನಿಕ ಕನ್ನಡ ಸಾಹಿತ್ಯದಲ್ಲೂ ಕೆಲಸ ಮಾಡಿದ್ದೇನೆ. 'ಗ್ರಂಥಲೋಕ'ದಲ್ಲಿ ಸಮಕಾಲೀನ ಕೃತಿಗಳ ಬಗ್ಗೆ ಬರೆಯುತ್ತಿದ್ದೆ. 'ನೂರಾರು ವಿಮರ್ಶೆಗಳು' ಆಧುನಿಕ ಕನ್ನಡ ಸಾಹಿತ್ಯದ ಬಗ್ಗೇ ಇದೆ. ಆದರೆ, ನನಗೆ ಮೊದಲಿನಿಂದಲೂ ಹಳಗನ್ನಡ ಸಾಹಿತ್ಯದ ಸಂಪರ್ಕ ಹೆಚ್ಚು. ಹಾಗಾಗಿ, ಆ ಸಾಹಿತ್ಯ ಕುರಿತು ಹೆಚ್ಚು ಕೆಲಸ ಮಾಡಿದ್ದೇನೆ. ಸಂಸ್ಕೃತ ಸಾಹಿತ್ಯವನ್ನು ಕನ್ನಡಕ್ಕೆ ತರುವಲ್ಲಿ ಕೆಲಸ ಮಾಡಿದ್ದೇನೆ. ಇದಕ್ಕೆಲ್ಲ ಬಾಹ್ಯಕಾರಣವೂ ಇದೆ. ನಾನು ಅಧ್ಯಾಪಕನಾದುದರಿಂದ ಪಾಠ ಪ್ರವಚನಗಳ ಸಿದ್ಧತೆಯ ದೃಷ್ಟಿಯಿಂದ ಹೀಗೆ ಮಾಡಬೇಕಾಯಿತು. ಇತ್ತೀಚಿನ ಕೃತಿಗಳನ್ನು ಓದಿಲ್ಲ, ಕೆಲವನ್ನು ಓದಲು ಆಗುವುದೂ ಇಲ್ಲ, ಕಾಳು ಇವೆ. ಜೊಳ್ಳು ಇವೆ.

* *ನೀವು ಭಾಷಾಂತರ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದೀರಿ. ಈ ಬಗ್ಗೆ ಹೇಳುವಿರಾ?*

ಇಂಗ್ಲಿಷಿನಿಂದ ಕಾವ್ಯ ಮೀಮಾಂಸೆಗೆ ಸಂಬಂಧಿಸಿದಂತೆ, ಸಂಸ್ಕೃತದಿಂದ ಕಾವ್ಯ ನಾಟಕಕ್ಕೆ ಸಂಬಂಧಿಸಿದಂತೆ ಭಾಷಾಂತರಗಳನ್ನು ಮಾಡಿದ್ದೇನೆ. ನಾನು ಹೈಸ್ಕೂಲಿನಲ್ಲಿದ್ದಾಗ ನಮ್ಮೂರಿನಲ್ಲಿ ವಯಸ್ಕರ ಶಿಕ್ಷಣ ಸಮಿತಿಯ 'ಪುಸ್ತಕ ಪ್ರಪಂಚ' ಎಂಬ ಪತ್ರಿಕೆ ಬರುತ್ತಿತ್ತು, ಅದರಲ್ಲಿ ಭಾಷಾಂತರ ಲೇಖನಗಳೇ ಇರುತ್ತಿದ್ದವು. ಬಹುಶಃ ಅವನ್ನು ಓದುವುದರಿಂದ ನಾನು ಆ ಕಡೆಗೆ ಮನಸ್ಸು ತಿರುಗಿಸಿದೆ. ಅಧ್ಯಾಪಕನಾದ ಮೇಲೆ ಕನ್ನಡ ಸಾಹಿತ್ಯದ ಕೊರತೆ ಕಾಣಿಸತೊಡಗಿತು. ಅದನ್ನು ತುಂಬಿಕೊಳ್ಳಬೇಕೆಂಬ ದೃಷ್ಟಿಯಿಂದ ಇಂಗ್ಲಿಷ್ ಕೃತಿಗಳತ್ತ ಗಮನಹರಿಸಿದೆ. ಅನುವಾದಿಸಿದೆ. ಹಡ್ಸನ್ನನ 'ಕಾವ್ಯ ಪ್ರವೇಶ'ದಂಥ ಕೃತಿಗಳು ಇಂದಿಗೂ ನಮ್ಮಲ್ಲಿ ಇಲ್ಲ, ಕನ್ನಡಕ್ಕೆ ಇಂಥವು ಬೇಕು. ಅನುವಾದಗಳು ಎಂದರೆ ಮನೆಗೆ ಬಂದ ಸೊಸೆ ಹಾಗೆ. ಬರಬರುತ್ತಾ ನಮ್ಮವೇ ಆಗಿಬಿಡುತ್ತವೆ.

ನಾನು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸುವಾಗ ಕೆಲವು ವ್ಯಾವಹಾರಿಕ ಕಾರಣವಿಲ್ಲದೆ ಇಲ್ಲ, ಅದರಲ್ಲಿ ಮುಖ್ಯವಾದುದು ಪಠ್ಯಪುಸ್ತಕದ ಉದ್ದೇಶ. ಕೆಲವು text bookಗಳೂ ಆದವು. ಭಾಷಾಂತರ ಒಂದು ಕಲೆ. ಅದಕ್ಕೆ ಪ್ರತಿಭೆ ಮತ್ತು ಶ್ರಮ ಬೇಕು. ಬಹಳ ಕಷ್ಟವಾದ ಕೆಲಸ. ಆದರೆ, ಇಷ್ಟವಾದ ಕೆಲಸ. ಭಾಷಾಂತರ ಎಂದೂ ಮೂಲಕೃತಿಯಷ್ಟು ಶ್ರೇಷ್ಠವಾದ ಕೆಲಸವಲ್ಲ, ಸ್ವತಂತ್ರವಾಗಿ ಬರೆಯುವ ಲೇಖಕ ಭಾಷಾಂತರಕ್ಕೆ ಹೋಗದಿರುವುದೇ ಒಳ್ಳೆಯದು. ಭಾಷಾಂತರಕ್ಕೆ ಒಳ್ಳೆಯ ಮನ್ನಣೆ ಇಲ್ಲ.

* *ಇಂದಿನ ಬದುಕು-ಹಿಂದಿನ ಬದುಕನ್ನು ಒಬ್ಬ ಸಾಹಿತಿಯಾಗಿ ಹೇಗೆ ಪರಿಭಾವಿಸುತ್ತೀರಿ?*

ಮೂಲತಃವಾಗಿ ಬದುಕಿಗೆ ಕಾಲ ವಿಂಗಡಣೆ ಇಲ್ಲ, ಬದುಕು ಅಖಂಡವಾದುದು. ಹಿಂದಿನ ಬದುಕನ್ನು ಇಂದಿನ ಬದುಕಿನಿಂದಲೇ ಅರ್ಥೈಸಬೇಕಾಗುತ್ತದೆ. ಅದನ್ನು ಕಲೆ, ಸಾಹಿತ್ಯ ಇತ್ಯಾದಿಗಳ ಮೂಲಕ ಕಂಡುಕೊಳ್ಳಬೇಕು. ಅಂದರೆ, ಇಂದಿನ ಮೌಲ್ಯಗಳಿಂದ. ಹಿಂದೆ ಶಾಂತಿ ಇತ್ತು, ಆದರೆ, ಪರಿವರ್ತನಶೀಲವಾಗಿರಲಿಲ್ಲ ಸಮಾಜ. ಇಂದು ಪರಿವರ್ತನಶೀಲತೆ ಕಂಡುಬರುತ್ತದೆ. ಶಾಂತಿ ಇಲ್ಲ, ಸಮಾಜ ಪರಿವರ್ತನೆಗೆ ಹೋರಾಡಬೇಕು. ಶಾಂತಿಯೂ ಅದರಲ್ಲಿ ಸುಪ್ತವಾಗಿರಬೇಕು.

* *ಪಾಶ್ಚಾತ್ಯ ಸಂಸ್ಕೃತಿಯತ್ತ ಹಾತೊರೆಯುತ್ತಿರುವ ಇಂದಿನ ಭಾರತೀಯ ಮನಸ್ಸುಗಳನ್ನು ಕಂಡಾಗ ನಿಮಗೇನನ್ನಿಸುತ್ತದೆ?*

ಇಲ್ಲಿ ಸಂಸ್ಕೃತಿ ಎಂದರೇನು ಎಂಬುದೇ ಮೂಲಭೂತ ಪ್ರಶ್ನೆ. ಪಾಶ್ಚಾತ್ಯ ಸಂಸ್ಕೃತಿಯಲ್ಲೂ ಒಳ್ಳೆಯದು ಇದೆ. ಭಾರತೀಯ ಸಂಸ್ಕೃತಿಯಲ್ಲೂ ಬಿಡಬಹುದಾದದ್ದು ಇದೆ. ಇವೆರಡರ ನಡುವೆ ಸಮನ್ವಯಬೇಕು. 'ಕಾಯಕ ಸಂಸ್ಕೃತಿ' (ವೃತ್ತಿಗೌರವ) ಅವರಲ್ಲಿದೆ. ನಮ್ಮಲ್ಲಿಲ್ಲ, ನಮ್ಮದು ಸುಖದ ಮೂಲಕ ಸುಖವನ್ನು ಅರಸುವುದು. ಇದು ಭ್ರಷ್ಟಾಚಾರಕ್ಕೆ, ಶೋಷಣೆಗೆ ಮೂಲವಾಗುತ್ತದೆ.

* *ನೀವು ಸಾಹಿತ್ಯದತ್ತ ಒಲವು ತೋರಿಸಿದ್ದೇಕೆ?*

ಹಿಂದೆ ಹೇಳಿದ ಹಾಗೆ ನಮ್ಮ ಮನೆಯ ವಾತಾವರಣ. ಜೊತೆಗೆ ಇಂಟರ್‌ಮೀಡಿಯೆಟ್‌ನಲ್ಲಿ ಓದುತ್ತಿದ್ದಾಗ (ಶಿವಮೊಗ್ಗೆಯಲ್ಲಿ) ಶಿವರುದ್ರಪ್ಪ, ಅನಂತಮೂರ್ತಿ ನಮ್ಮ ಮೇಷ್ಟ್ರಾಗಿ ಬಂದರು. ಅವರ ಪ್ರಭಾವವೂ ನನ್ನ ಮೇಲೆ ಆಯಿತು.

* *ಒಬ್ಬ ಲೇಖಕ-ಪ್ರಕಾಶಕರಾಗಿ ನಿಮ್ಮ ಅನುಭವವೇನು?*

ಲಾಭವೇನೂ ಆಗಿಲ್ಲ, ಪುಸ್ತಕ ಹೊರತರಬೇಕು. ನಾಲ್ಕು ಜನ ಓದಬೇಕು. ಈ ದೃಷ್ಟಿಯಿಂದ 1976ರಲ್ಲಿ 'ಚಿತ್ರಭಾನು' ಪ್ರಕಾಶನ ಶುರುಮಾಡಿದೆ. ಸಂಬಳದಲ್ಲಿ ಒಂದಿಷ್ಟು ಹಣ ಮೀಸಲಿರಿಸಿದೆ. 500 ಪ್ರತಿಗಳನ್ನು ಅಚ್ಚು ಹಾಕಿಸುತ್ತಿದ್ದೆ. (ಕೆಲವೊಮ್ಮೆ 300 ಪ್ರತಿಗಳನ್ನು) ಆದರೆ, ಸರಿಯಾದ ಹಣಕಾಸಿನ ಲೆಕ್ಕ ಇಡಲಿಲ್ಲ, ಲೇಖಕನ ಸಂಭಾವನೆಯ ರೂಪದ ಹಣ ಬಂದಿದೆ ಅನ್ನಬಹುದು.

* *ಕನ್ನಡದ ಭವಿಷ್ಯದ ಬಗ್ಗೆ ನಿಮ್ಮ ತರ್ಕವೇನು?*

ಅಂದರೆ ಕನ್ನಡ ಭಾಷೆಯ ಬಗ್ಗೆ ಆತಂಕ ಇದೆ. ಧೈರ್ಯವೂ ಇದೆ. ಕನ್ನಡಕ್ಕೆ ಭವ್ಯವಾದ, ದಿವ್ಯವಾದ ಪರಂಪರೆ ಇದೆ. ಅದು ತನ್ನನ್ನು ತಾನು ರಕ್ಷಿಸಿಕೊಳ್ಳಬಲ್ಲದು. ಹಾಗಂತ ಅದನ್ನು ಹಾಗೆಯೇ ಬಿಡಲು ಆಗೋಲ್ಲ, ಹೋರಾಡಬೇಕು. ಕನ್ನಡದ ಹೆಸರಿನಲ್ಲಿ ನಡೆಯುವ ಹೋರಾಟಗಳಲ್ಲಿ ನಿಸ್ಪೃಹತೆ ಇಲ್ಲ, ಸ್ವಾರ್ಥತನವಿದೆ. ಗುಂಪುಗಾರಿಕೆ ಇದೆ. ಕನ್ನಡ ಚಳವಳಿಗಳು ರಾಜಕೀಯ ಪಕ್ಷಗಳ ಹಾಗೆ ವರ್ತಿಸುತ್ತವೆ. ಹೊಂದಾಣಿಕೆ ಇಲ್ಲ, ಕನ್ನಡಕ್ಕಿಂತ, ಕನ್ನಡಕ್ಕಾಗಿ ಹೋರಾಡುವವರದ್ದೇ ಸಮಸ್ಯೆ. ಎಲ್ಲ ಜಾಡುಗಳು ಒಂದುಗೂಡಬೇಕು.

* *ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶನಾವಧಿಯಲ್ಲಿ ನೀವೆಷ್ಟು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿದಿರಿ?*

ನಾನು ನಿರೀಕ್ಷಿಸಿದ ಹಾಗೆ ಪರಿಣಾಮಕಾರಿಯಾಗಿ ಕೆಲಸ ಮಾಡಲು ಆಗಲಿಲ್ಲ. ವಿಶ್ವವಿದ್ಯಾನಿಲಯದ ಆಗಿನ ಆಡಳಿತ ವ್ಯವಸ್ಥೆ ಸಹಕಾರ ಕೊಡಲಿಲ್ಲ, ಹಣ ಕೊಡಲಿಲ್ಲ, ಒಂದು ವಿಚಾರ ಸಂಕೀರ್ಣ ಮಾಡಲೂ ನನ್ನಿಂದ ಸಾಧ್ಯವಾಗಲಿಲ್ಲ. ಇರುವ ಯೋಜನೆಗಳನ್ನು ಉಳಿಸಿದರೆ ಸಾಕಾಗಿತ್ತು. ಈಚೀಚೆಗೆ ಕೆಲಸಗಳು ಆಗುತ್ತಿಲ್ಲ, ಹಿಂದೆ ಹಾಗಿರಲಿಲ್ಲ, ಬಹುಶಃ ಕಾಲಧರ್ಮ ಅಂತ ತೋರುತ್ತದೆ. ಈಗ ಪರವಾಗಿಲ್ಲ.

* *ಪ್ರಸ್ತುತ ಆರ್ಥಿಕ-ಸಾಮಾಜಿಕ ಪರಿಸ್ಥಿತಿಯಲ್ಲಿ ಸಾಹಿತ್ಯ ಯಾವ ಪಾತ್ರ ವಹಿಸಬಹುದು?*

ಸಾಹಿತ್ಯದ ಉದ್ದೇಶ ಏನು ಎಂಬುದರ ಬಗ್ಗೆಯೇ ಚರ್ಚೆ ಇದೆ. ಸಾಮಾಜಿಕಬದ್ಧ ಸಾಹಿತ್ಯ ಹಿಂದೆ ಇತ್ತು, ಇಂದು, ದಲಿತ-ಬಂಡಾಯ ಸಾಹಿತ್ಯದಲ್ಲಿ ಅದನ್ನು ಕಾಣಬಹುದು. ಮೂಲಭೂತ ಸಮಸ್ಯೆ ಅಂದರೆ-ನಿರಕ್ಷರಿಗಳೇ ತುಂಬಿರುವ ಈ ದೇಶದಲ್ಲಿ ಸಾಹಿತ್ಯ ಹೇಗೆ ಕೆಲಸ ಮಾಡಬಹುದು ಅನ್ನುವುದು. ಮುಂದೆ (21ನೇ ಶತಮಾನದಲ್ಲಿ) ಸಾಹಿತ್ಯ ಸಾಮಾಜಿಕವಾಗಿ ಕೆಲಸ ಮಾಡಬಹುದೊ ಏನೊ? ಸಾಹಿತ್ಯಕ್ಕಿಂತಲೂ ಆರ್ಥಿಕ, ಸಾಮಾಜಿಕ, ರಾಜಕೀಯ ಚಳವಳಿಗಳು ಹೆಚ್ಚು ಪ್ರಭಾವ ಬೀರುತ್ತವೆ. ಯಾವುದೇ ಸಾಹಿತ್ಯವಾಗಲಿ ಅದು ಕಲೆಯನ್ನು ಬಿಟ್ಟುಕೊಡಬಾರದು. ಕಲಾತ್ಮಕವಾಗಿ ಇದ್ದರೆ ಆಕೃತಿ ತಾನಾಗಿಯೇ ಸಮಾಜದಲ್ಲಿ ಪ್ರಭಾವ ಬೀರುತ್ತದೆ. ನಾವು ಪುಸ್ತಕ ಸಂಸ್ಕೃತಿಯನ್ನು ಹೆಚ್ಚೆಚ್ಚು ಬಳಕೆಯಲ್ಲಿ ತರಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಅಪಾಯಗಳೇ ಹೆಚ್ಚು.

* *ಕಡೆಯದಾಗಿ, ಬದುಕಿನ ನಿಮ್ಮ ದೃಷ್ಟಿಕೋನವೇನು?*

'ಬದುಕು ಮತ್ತು ಬದುಕೋದು' (Live and let Live). ನಾನೂ ಬದುಕಿ ಇತರರೂ ಸಂತೋಷದಿಂದ, ನೆಮ್ಮದಿಯಿಂದ ಬದುಕುವುದಕ್ಕೆ ಅವಕಾಶ ಮಾಡಿಕೊಡುವುದು.

(ಆಗಸ್ಟ್, 23, 1995)



ಸಿ.ಟಿ.ರವಿ-ಪಲ್ಲವಿ ಸೈಟು ಕದ್ದ ದಂಪತಿ


ಪಲ್ಲವಿ

• ಪಾರ್ವತೀಶ


ಇದೊಂದು ಚೋರ ವಿದ್ಯಾ ಪಾರಂಗತ ದಂಪತಿಗಳ ಕತೆ. ಬಿಜೆಪಿಗಳ ಹಗರಣವೆಂಬ ಮೆಗಾಸೀರಿಯಲ್‌ನ ಹೊಸ ಎಪಿಸೋಡೂ ಹೌದು.

ರಾಜ್ಯ ಬಿಜೆಪಿಯ ವಕ್ತಾರ, ಚಿಕ್ಕಮಗಳೂರಿನ ಶಾಸಕ ಸಿ.ಟಿ.ರವಿ ಹಾಗೂ ಮತ್ತವನ ಹೆಂಡತಿ ಪಲ್ಲವಿ ಸೇರಿಕೊಂಡು ಕರ್ನಾಟಕ ಹೌಸಿಂಗ್ ಬೋರ್ಡ್‌ಗೆ ಉಂಡೆನಾಮ ಹಾಕಿರುವ ಭೂಹಗರಣವಿದು.

ಹೇಳಿಕೇಳಿ ಈ ಸಿ.ಟಿ.ರವಿ ಚಾಂಪಿಯನ್ ಹೋರಾಟಗಾರ. ಹಿಂದೂ ಧರ್ಮಕ್ಕಾಗಿ ಪ್ರಾಣವನ್ನೇ ಕೊಡುತ್ತೇನೆಂದು ಆವಾಗೀವಾಗ ಹೇಳುತ್ತಿದ್ದ ತ್ಯಾಗಮಯಿ. ಆದರೆ ಈಗ ಅದೇ ರವಿ ಹಿಂದೂ ಧರ್ಮದ ಉದ್ಧಾರದ ಕೆಲಸ ಎಲ್ಲಾ ಬಿಟ್ಟು ದುಡ್ಡು ಮಾಡಲು ನಿಂತಿದ್ದಾನೆ. ತನ್ನ ಕೆಲ ದಡ್ಡ ಶೂದ್ರ ಶಿಷ್ಯರಿಗೆ ಹಿಂದೂ ಧರ್ಮದ ಕೆಲಸ ವಹಿಸಿರುವ ರವಿ ಈಗ ಹೆಂಡತಿಯನ್ನು ಮುಂದೆ ಬಿಟ್ಟು ಭೂಗಳ್ಳತನ ಶುರುಮಾಡಿದ್ದಾನೆ.

ರವಿ ಮತ್ತು ಪಲ್ಲವಿ ಚಿಕ್ಕಮಗಳೂರು ಟೌನಿನಲ್ಲಿ ನಡೆಸುತ್ತಿರುವ ಲ್ಯಾಂಡ್ ವ್ಯವಹಾರ ನೋಡಿ ಜನ ದಂಗುಬಡಿದು ಹೋಗಿದ್ದಾರೆ. ಶಾಸಕ ಸಿ.ಟಿ.ರವಿ ಮತ್ತವನ ಕುಟುಂಬದವರು ಚಿಕ್ಕಮಗಳೂರಿನ ಅರೆನೂರು, ರಾಮನಹಳ್ಳಿ, ಕಲ್ಯಾಣನಗರ ಲೇಔಟ್, ಮೈಸೂರು, ಬೆಂಗಳೂರುಗಳಲ್ಲಿ ಕೋಟ್ಯಂತರ ಬೆಲೆಯ ಆಸ್ತಿ ಮಾಡಿದ್ದಾರೆ. ದೇವನಹಳ್ಳಿ ಏರ್‌ಪೋರ್ಟ್ ಏರಿಯಾದಲ್ಲಿ ಬೇನಾಮಿ ಹೆಸರುಗಳಲ್ಲಿ ರವಿ ಮಾಡಿಕೊಂಡಿರುವ ಆಸ್ತಿಯ ಬಗ್ಗೆ ಕೆದಕಿದರೆ ಅದರದ್ದೇ ಇನ್ನೊಂದು ಹಗರಣವಾದೀತು.

ಸದ್ಯಕ್ಕೆ ರವಿಯ ಪತ್ನಿ ಪಲ್ಲವಿ ಚಿಕ್ಕಮಗಳೂರು ಟೌನ್‌ನಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ಗೆ ತಪ್ಪು ಮಾಹಿತಿ ನೀಡಿ ಲಪಟಾಯಿಸಿರುವ ಸೈಟುಗಳ ವಿಚಾರ ನೋಡೋಣ.


ಕರ್ನಾಟಕ ಗೃಹ ಮಂಡಳಿ

INTIMATION OF ALLOTMENT OF C.A SITE

PRESIDENT
SRI ANJANEYA EDUCATION TRUST
VIJAYAPURA

Office of the Housing Commissioner
Karnataka Housing Board,
Bangalore 560 009.

Ref No	Category	C.A Site Number	Allotment Nature	Reservation Nature
234	C.A.Site	6A 6B	STRAY	GENERAL

ಪಲ್ಲವಿಯ ಸೈಟು ಅರ್ಜಿ ಮತ್ತು ಕೆಹೆಚ್‌ಬಿ ಮಂಜೂರಾತಿ

ಬೋರ್ಡೇ ಇರದ ಟ್ರಸ್ಟನು ತೇಲಿ ಬಿಟ್ಟ ಪಲ್ಲವಿ

ಈ ಪಲ್ಲವಿಯು ಒಂದು ರೀತಿ ಪರಮಾತ್ಮ ಸಿನಿಮಾದ ಹಾಡು 'ನಾ ಬೋರ್ಡು ಇರದ ಬಸ್ಸನ್ನು ಹತ್ತಿ ಬಂದ' ತರದ್ದೇ ಕೆಲಸ ಮಾಡಿದ್ದಾರೆ. ತನ್ನದೊಂದು ಆಂಜನೇಯ ಎಜುಕೇಷನ್ ಟ್ರಸ್ಟ್ ಇದೆ ಎಂದು ಹೇಳಿಕೊಂಡು ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಚಿಕ್ಕಮಗಳೂರಿನಲ್ಲಿ ನಿರ್ಮಿಸಿರುವ 5ನೇ ಹಂತದ ಲೇಔಟ್‌ನಲ್ಲಿ 27,997 ಚದರಡಿ ವಿಸ್ತೀರ್ಣದ ಮೂರು ಸಿಎ ಸೈಟುಗಳನ್ನು 'ಶಾಲೆ' ತೆರೆಯುವ ನೆಪದಲ್ಲಿ ಮಂಜೂರು ಮಾಡಿಸಿಕೊಂಡು ಗುಳುಂ ಮಾಡಿದ್ದಾರೆ.

ಸಾರ್ವಜನಿಕ ಸೇವೆಗೆ ಒಂದು ಶಾಲೆ ಅಂತ ಆಗುವಾಗ ತನ್ನ ಸ್ವಂತಕ್ಕೊಂದು ಸೈಟು ಬೇಡವೇ? 'ಬೇಕೆ ಬೇಕು' ಎಂದು ತೀರ್ಮಾನಿಸಿದ ಈ ದಂಪತಿ ಒಂದಲ್ಲ ಎರಡು ಸೈಟುಗಳನ್ನು ಒಂದೇ ಏಟಿಗೆ ನುಂಗಿದ್ದಾರೆ!

ಮಜಾ ಅಂದರೆ ಈ ಹಿಂದೂ ವೀರನ ಪತ್ನಿ ಪಲ್ಲವಿಗೆ ತಾನು ಮಾಡುತ್ತಿರುವುದು ಅಕ್ರಮ ಕೆಲಸ ಅಂತ ಅಳುಕಿತ್ತೋ ಏನೋ. ಹಾಗಾಗಿ ಸೈಟಗಾಗಿ ಅರ್ಜಿ ಹಾಕುವಾಗ, ಸೈಟು ರಿಜಿಸ್ಟರ್ ಮಾಡಿಸುವಾಗ ತಾನು ಶಾಸಕ ರವಿಯ ಪತ್ನಿ ಎಂಬುದನ್ನು ಮುಚ್ಚಿಡಲು ಪಲ್ಲವಿ ನಾಗರಾಜ್ ಎಂದು ದಾಖಲಿಸಿದ್ದಾರೆ.

ಈ ನಾಗರಾಜ್ ಯಾರು ಗೊತ್ತೇ?

ಸೈಟುಕಳ್ಳಿ ಪಲ್ಲವಿಯ ಅಪ್ಪ!

ಆದರೂ ತನ್ನ ವಿಳಾಸ ಬರೆಯುವಾಗ ಈಕೆ ಸಿ.ಟಿ. ರವಿಯ ಮನೆ ಇರುವ ಸೂರ್ಯ ಮ್ಯಾನ್‌ಷನ್, ವಿಜಯಪುರ, ಚಿಕ್ಕಮಗಳೂರು ಎನ್ನುವ ಅಡ್ರೆಸ್ಸನ್ನೇ ಬರೆದಿದ್ದಾರೆ. ಪಲ್ಲವಿ ಅಧ್ಯಕ್ಷೆಯಾಗಿರುವ ಆಂಜನೇಯ ಎಜುಕೇಷನ್ ಟ್ರಸ್ಟ್ ಒಂದು ನೋಂದಾಯಿತ ಸಂಸ್ಥೆಯಾ, ಟ್ರಸ್ಟಾ ಎಂಬುದನ್ನು ಪರಿಶೀಲಿಸದೆ ಕೆಹೆಚ್‌ಬಿಯು ದೊಡ್ಡಸೈಜಿನ ಸೈಟನ್ನು ಪಲ್ಲವಿಗೆ ಮಂಜೂರು ಮಾಡಿದೆ.

ಈ ರೀತಿ ಸಿಎ ಸೈಟುಗಳನ್ನು ಮಂಜೂರು ಮಾಡುವಾಗ ಫಲಾನುಭವಿಗಳು ಯಾವ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದಾರೆ? ಅದು ನೋಂದಾಯಿತ ಸಂಸ್ಥೆಯೇ? ಅದರ ಹಿನ್ನೆಲೆ, ಸಾಮರ್ಥ್ಯ ಇದೆಲ್ಲವನ್ನು ಚೆಕ್ ಮಾಡಿಯೇ ಸಮರ್ಪಕವೆನಿಸಿದರೆ ಮಾತ್ರ ಸಿಎ ಸೈಟುಗಳನ್ನು ಮಂಜೂರು ಮಾಡಬೇಕಾಗುತ್ತದೆ.

ಇದೇ ಕಾನೂನು, ಇದೇ ನಿಯಮ.

ಆದರೆ ಪಲ್ಲವಿ ಶಾಸಕ ಸಿ.ಟಿ.ರವಿಯ ಪತ್ನಿ ಎಂಬ ಕಾರಣಕ್ಕೆ ಹೌಸಿಂಗ್ ಬೋರ್ಡ್‌ನ ಅಧಿಕಾರಿಗಳು ಯಾವ ಪೂರಕ ದಾಖಲೆಗಳನ್ನೂ ಕೇಳದೆ, ಅಫಿಡವಿಟ್ ಅನ್ನೂ ಪಡೆಯದೆ ಜುಜುಬಿ ಎರಡು ಪುಟಗಳ ಅರ್ಜಿಯನ್ನು ಆಧರಿಸಿಯೇ 13 ಸಾವಿರ ಚದರಡಿಯ ಕೋಟಿಗಟ್ಟಲೇ ಬೆಲೆಬಾಳುವ ಸೈಟುಗಳನ್ನು ಜುಜುಬಿ 11.99 ಲಕ್ಷ ರೂ. ಗಳಿಗೆ ದಾನಕೊಟ್ಟಂತೆ ಕೊಟ್ಟಿದ್ದಾರೆ. ಕೆಹೆಚ್‌ಬಿಯ ನಿಯಮಗಳ ಪ್ರಕಾರ ಒಂದು ಸರ್ಕಾರಿ ಅಥವಾ ಸಹಕಾರಿ ಸಂಸ್ಥೆಯ ಮೂಲಕ ಒಮ್ಮೆ ಒಬ್ಬರು ಸೈಟು ಪಡೆದರೆ ಅವರಾಗಲಿ, ಅವರ ಕುಟುಂಬದವರಾಗಲಿ ಇನ್ನೆಲ್ಲೂ ಇನ್ನೊಂದು ಸೈಟು ಪಡೆಯುವಂತಿಲ್ಲ. ಈ ಮಾತು ಏಕೆ ಹೇಳಬೇಕಾಯಿತೆಂದರೆ ಶಾಸಕ ಸಿ.ಟಿ.ರವಿ ಬೆಂಗಳೂರಿನಲ್ಲಿ ಬಿಡಿಎಯಿಂದ ಮಜಭೂತಾದ ಸೈಟೊಂದನ್ನು ಗಿಟ್ಟಿಸಿದ್ದಾನೆ. ಆದರೆ ರವಿ ಪತ್ನಿ ಪಲ್ಲವಿ ರವಿಯನ್ನು ಮೀರಿಸುವಂತೆ ಸೈಟು ಕಳ್ಳತನದ ವಿದ್ಯೆ ಕಲಿತಿದ್ದಾರೆ.

ಕೆಹೆಚ್‌ಬಿ ಮೂಲಕ ತನ್ನ ನಕಲಿ ಶಿಕ್ಷಣ ಸಂಸ್ಥೆ ಹೆಸರಲ್ಲಿ 13 ಸಾವಿರ ಚದರಡಿ ಸೈಟು ನುಂಗಿದ ಪಲ್ಲವಿ ಅದೇ ಬಡಾವಣೆಯಲ್ಲಿ ತನ್ನ ಸ್ವಂತಕ್ಕೆಂದು ಇನ್ನೆರಡು ಸೈಟು ಪಡೆದಿರುವುದಕ್ಕೆ ಈಗ ದಾಖಲೆಗಳು ಸಿಕ್ಕಿವೆ.

ದಿನಾಂಕ 12-4-2007ರಂದು ಒಂದೇ ದಿನ ಚಿಕ್ಕಮಗಳೂರು ಕರ್ನಾಟಕ ಹೌಸಿಂಗ್ ಬೋರ್ಡ್‌ನ 5ನೇ ಹಂತದ ಲೇಔಟ್‌ನಲ್ಲಿ ಸೈಟ್ ನಂಬರ್ 113 ಹಾಗೂ 114ನ್ನು ಈ ಪಲ್ಲವಿ ನಾಗರಾಜ್ ಹೆಸರಿಗೆ ರಿಜಿಸ್ಟರ್ ಮಾಡಿಕೊಡಲಾಗಿದೆ. ಅಷ್ಟರಲ್ಲಾಗಲೇ ಅಂದರೆ 6-1-2007ರಲ್ಲೇ ಪಲ್ಲವಿಯ ಆಂಜನೇಯ ಟ್ರಸ್ಟಿಗೆ ಮೊದಲ ಕಂತಿನಲ್ಲಿ 14 ಸಾವಿರ ಚದರಡಿ ಜಾಗವನ್ನು ಕೊಡಲಾಗಿತ್ತು. ನಂತರ 2007ರ ಏಪ್ರಿಲ್ ತಿಂಗಳಲ್ಲಿ ಆಕೆಯ ಸ್ವಂತಕ್ಕೆಂದು ಎರಡು ದೊಡ್ಡ ಸೈಟುಗಳನ್ನು ಕೆಹೆಚ್‌ಬಿ ದಯಪಾಲಿಸಿತು. ಇಷ್ಟು ಸಾಲದೆಂಬಂತೆ ಆದ ಕೆಹೆಚ್‌ಬ ಲೇಔಟ್‌ನಲ್ಲಿ ದಿನಾಂಕ 24-10-2007ರಂದು ಪುನಃ 1372 ಚದರಡಿಯ ಸಿಎ ಸೈಟ್ ನಂಬರ್ 8ನ್ನು ಪಲ್ಲವಿ ಲಪಟಾಯಿಸಿದ್ದಾರೆ. ಈ ಸೈಟ ಆಂಜನೇಯ ಟ್ರಸ್ಟಿಗೆಂದು 6-1-2007ರಲ್ಲಿ ನುಂಗಿದ್ದ 6 ಎ ಹಾಗೂ 6 ಜಾಗದ ಪಕ್ಕದ ಸೈಟೇ ಆಗಿರುವುದು ವಿಶೇಷ.

ಇಲ್ಲಿನ ಪ್ರಶ್ನೆ ಏನೆಂದರೆ ಈ ಪಲ್ಲವಿ ನಿರ್ಗತಿಕರೇನ ಈಕೆಯ ಗಂಡ ಶಾಸಕನಾಗಿದ್ದಾನೆ. ರವಿಗೆ ಅರೆನೂರು ಹತ್ತಿ ಐದು ಎಕರೆ ತೋಟ, ರಾಮನಹಳ್ಳಿಯಲ್ಲಿ 1.32 ಎಕ ಜಮೀನು, ಕಲ್ಯಾಣನಗರ ಲೇಔಟ್‌ನಲ್ಲಿ ಸೈಟು, ಬೆಂಗಳೂರಿನ ಹೆಚ್.ಬಿ.ಲೇಔಟ್‌ನಲ್ಲಿ 40x60 ಅಳತೆಯ ಬಿಡಿಎ ಸೈಟು, ರಾಮೋನಹಳ್ಳಿಯ ಸೈಟು ಮನೆಗಳಿವೆ.

ಇದಲ್ಲದೆ ಸ್ವತಃ ಪಲ್ಲವಿ ಹೆಸರಿನಲ್ಲೂ ರಾಮನಹಳ್ಳಿಯಲ್ಲಿ ತೆಂಗಿನ ತೋಟ ಜಮೀನು, ಮನೆಗಳಿವೆ. ಇವೆಲ್ಲ ಇರುವುದರ ಜೊತೆಗೆ ಚಿಕ್ಕಮಗಳೂರಿ ವಿಜಯಪುರದಲ್ಲಿ ಸೂರ್ಯ ಮ್ಯಾನ್‌ಷನ್(ಮಗನ ಹೆಸರಿನ ಮನೆ) ಬಂಗಲೆಯು ಇದೆ. ಇಷ್ಟೆಲ್ಲಾ ಕೋಟಿಗಟ್ಟಲೆ ಬೆಲೆಯ ಆಸ್ತಿ ಇದ್ದರೂ ಕೂಡ ರವಿ-ಪಲ್ಲ ಚೋರದಂಪತಿಗೆ ಇನ್ನಷ್ಟು ಸರ್ಕಾರಿ ಸೈಟು ನುಂಗುವ ದುರಾ ಯಾಕೆ ಬಂತು?

ಈಗ ಪಲ್ಲವಿ ಮಂಜೂರು ಮಾಡಿಸಿಕೊಂಡಿರು ಸೈಟುಗಳ ಒಟ್ಟು ವಿಸ್ತೀರ್ಣ ಲೆಕ್ಕ ಹಾಕಿದರೆ ಅದ ಮೂವತ್ತು ಸಾವಿರ ಚದರಡಿಗೂ ಹೆಚ್ಚಾಗಿದೆ. ಇದ ಜಾಗವನ್ನು ತಲಾ 600 ಚದರಡಿಯಂತೆ ಐವತ ಜನಸಾಮಾನ್ಯರಿಗೆ ಸೈಟು ನೀಡಬಹುದಿತ್ತು.

ಈ ಹಗರಣದ ಬಹಳ ಮುಖ್ಯ ಪ್ರಶ್ನೆ ಏನೆಂದರೆ ಸೈಟ ನುಂಗುವಾಗ ಪಲ್ಲವಿ ತನ್ನ ಆಂಜನೇಯ ಟ್ರಸ್ಟ್ ದಾಖಲೆಗಳನ್ನೇ ಕೊಡದಿದ್ದರೂ ಕೆಹೆಚ್‌ಬ ಅದು ಹೇ ಅಷ್ಟು ದೊಡ್ಡ ಸೈಟನ್ನು ಮಂಜೂರು ಮಾಡಿತು?

ಹೀಗೆ ಅಸ್ತಿತ್ವದಲ್ಲೇ ಇರದಿದ್ದ ಟ್ರಸ್ಟಿನ ಹೆಸರ ಸರ್ಕಾರಿ ಜಾಗ ನುಂಗಿರುವ ತನ್ನ ಪತ್ನಿ ಪಲ್ಲ ಬಗ್ಗೆ ರವಿ ಏನು ಹೇಳುತ್ತಾನೆ?

ಇಂದಲ್ಲ ನಾಳೆ ಈ ಸೈಟುಕಳ್ಳಿ ಪಲ್ಲವಿಯ ವಿರುದ್ಧ ಲೋಕಾಯುಕ್ತ ಕೋರ್ಟ್‌ನಲ್ಲಿ ಪ್ರಕರಣ ದಾಖಲಾಗುವುದು ಖಚಿತ. ಶಾಸಕ ಸಿ.ಟಿ.ರವಿ ಈ ಜಾಗ ಕಬಳಿಸಲು ತ ರಾಜಕೀಯ ಪ್ರಭಾವ ಬಳಸಿರುವುದಕ್ಕೆ ಹೆಚ್ಚಿನ ಸಾಕ್ಷಿ ಪುರಾ ಬೇಕಿಲ್ಲ, ಕೋಟಿಗಟ್ಟಲೇ ಬೆಲೆಯ ಈ ಸೈಟುಗಳಿಗೆ ಪಲ್ಲ ಕೊಟ್ಟಿರುವ ಹಣ ಜುಜುಬಿ ಎನ್ನುವಂತಿದೆ.

ಕೆಹೆಚ್‌ಬಿ ಕಾಲೋನಿಯ 3ನೇ ಹಂತದ ಸೈಟ್ ನಂಬ 113 ಹಾಗೂ 114ಕ್ಕೆ ತಲಾ 1.64 ಲಕ್ಷವನ್ನಷ್ಟೇ ನೀಡಿದ್ದಾ ಆಗಲೇ ಸೈಟುಗಳ ಮಾರುಕಟ್ಟೆ ಬೆಲೆ ಅದರ ನಾಲ ಪಟ್ಟಿನಷ್ಟಿತ್ತು.

ತನ್ನ ಪತ್ನಿ ಪಲ್ಲವಿಯ ಈ ಭೂಕಬಳಿಕೆಯ ಬ ಹಿಂದೂವೀರ ಸಿ.ಟಿ.ರವಿಯೇ ಏನಾದರ ಹೇಳಲೇಬೇಕು!

ಯಾಕೆಂದರೆ ಈ ರವಿ ಗಿವಿ ಮುಂತಾದವರ ಭಾರತಾಂಬೆಯ ಸೇವೆಗೆಂದೇ ಅವತಾ ಎತ್ತಿದವರು. ಹಿಂದೂ ಧರ್ಮದ ಉದ್ಧಾರ ಬಿಟ್ಟ ರವಿಗೆ ಬೇರೆ ಕೆಲಸವೇ ಇರಲಿಲ್ಲ, ಅಂತದರ ರವಿಯ ಹೆಂಡತಿ ಪಲ್ಲವಿ 'ಸೈಟು ಕ ಎನಿಸಿಕೊಂಡಿರುವುದು ಪ್ರಶ್ನಾರ್ಹವಾಗಿದೆ.

ಚಿಕ್ಕಮಗಳೂರಿನ ವಿರೋಧಿ ನಾಯ ಜೆಡಿಎಸ್‌ನ ಭೋಜೇ ಗೌಡರಾದರೂ ಪಲ್ಲ ರವಿ ಚೋರ [illegible]



ದೇವನಹಳ್ಳಿಲಿ ಸಿ.ಟಿ.ರವಿಯ ಅಕ್ರಮ ಆಸ್ತಿಗಳಿವೆ

ರಾಜ್ಯ ಬಿಜೆಪಿ ನಾಯಕರೆಲ್ಲರೂ ಮಾಡುತ್ತಿರುವಂತೆ ಸಿ.ಟಿ.ರವಿಯೂ ತನ್ನ ಕೈಲಾದಷ್ಟು ಅಕ್ರಮ ಆಸ್ತಿ ಮಾಡಿಕೊಂಡಿದ್ದಾನೆ. ಅದರಲ್ಲಿ ದೇವನಹಳ್ಳಿಯ ನಂದಿಬೆಟ್ಟ ರಸ್ತೆ ಸಮೀಪದ ರೈಲ್ವೇ ಹಳಿಯ ಬಳಿ ಇರುವ ಸರ್ಕಾರಿ ಗೋಮಾಳ ಗುಳುಂ ಪ್ರಕರಣವೂ ಒಂದಾಗಿದೆ.

ಇಲ್ಲಿ ರವಿ ಮಾತ್ರವಲ್ಲ ಅರವಿಂದ ಲಿಂಬಾವಳಿ ಸೇರಿದಂತೆ ಬಚ್ಚೇಗೌಡ ಮುಂತಾದವರು ಸರ್ಕಾರಿ ಜಾಗ ಕಬಳಿಸಿದ್ದಾರೆ. [illegible] ಅಲ್ಲಿ ಮಾರ್ಗದರ್ಶಕರೆಂದರೆ ದೇವನಹಳ್ಳಿಯ ಬಿಜೆಪಿ ನಾಯಕ ನಾಗೇಶ. [illegible]

ಒಕ್ಕಲಿಗರ ಸಂಘದಲ್ಲಿ ಕೆಂಚಪ್ಪ ಗೌಡನ ವಿರುದ್ಧ ದಂಗೆ

• ರಾ. ಸೋಮನಾಥ್




ಕೆಂಚಪ್ಪ ಗೌಡ

ಒಕ್ಕಲಿಗರ ಸಂಘದ ಒಳಕಚ್ಚಾಟ ಮತ್ತೆ ಬೀದಿಗೆ ಬಿದ್ದಿದೆ.

ಡ್ರಾಪ್‌ಔಟ್ ಸೀಟ್ ಕಳ್ಳ ದಂಧೆಗೆ ಕೈಯಿಟ್ಟು ಎಲ್ಲಿ ...ಪಾಲಾಗುತ್ತೇನೋ ಎಂದು ಭೂಗತನಾಗಿ ಪರಾರಿ ...ದ ಅಧ್ಯಕ್ಷ ಕೆಂಚಪ್ಪ ಗೌಡ. ಜನರಲ್ ಸೆಕ್ರೆಟರಿ ಇದೇ ...ಮು ಕಾದು ಏನೆಲ್ಲಾ ದೋಚಬಹುದೆಂದು ಹೊಂಚಿ ...ಪ್ರ.ಕಾ. ಡಾ. ಕೆ. ಮಹದೇವ್, ಇವರಿಬ್ಬರು ತಿಂದುಬಿಟ್ಟ ...ಳೆ ಚಕ್ಕಳಕ್ಕಾಗಿ ಜೊಲ್ಲು ಸುರಿಸುತ್ತಿರುವ ಮಾಜಿ ...ಂಚಿ ರಮೇಶ್, ಇವರ ಜೊತೆ ಸೇರಿ ಗಂಟು ಹೊಡೆ... ಹವಣಿಸುತ್ತಿರುವ ಡಾ. ನವೀನ್ ಮತ್ತು ನಂಜುಂಡೇ... ...ಂಥ ಹೊಟ್ಟೆಬಾಕರು ಒಂದೆಡೆಯಾದರೆ, ಇಂಥಾ ...ರಿಂದ ಸಂಘದ ಆಸ್ತಿ, ಒಕ್ಕಲಿಗರ ಹಿತಾಸಕ್ತಿಯನ್ನು ...ಲು ಪ್ರತಿನಿತ್ಯ ಹೆಣಗಾಡುತ್ತಿರುವ ಎ. ಪ್ರಸಾದ್, ಪ್ರೊ. ನಾಗರಾಜ್, ಬಿ. ಮುನೇಗೌಡ, ಅ. ದೇವೇಗೌಡ, ಡಾ. ...ಗೌಡ, ಆಡಿಟರ್ ನಾಗರಾಜ್, ಪ್ರೊ. ಮಲ್ಲಯ್ಯ ...ಶಾಸಕ ಶ್ರೀನಿವಾಸ್ ಮುಂತಾದವರ ಗುಂಪು ...ದೆ.

ಮೇಲುನೋಟಕ್ಕೆ ಇದು ಅಧ್ಯಕ್ಷ ಕೆಂಚಪ್ಪ ಗೌಡ ಮತ್ತು ... ನಾಗರಾಜ್ ಬಣಗಳ ನಡುವಿನ ಸ್ವಪ್ರತಿಷ್ಠೆಯ ...ದಂತೆ ಕಂಡರೂ ಆಳದಲ್ಲಿರುವುದು ಸಂಘವನ್ನು ...ದಂತೆ ದೋಚಿ ಏಪಾಳಿಯುಬ್ಬಿಸ ಹೊರಟ ಅಧ್ಯಕ್ಷ ...ಗೌಡನ ಭ್ರಷ್ಟ ಪಟಾಲಂ ವಿರುದ್ಧದ ಹೋರಾಟವೇ.



...ಕೆಂಚಪ್ಪ ಗೌಡ ಎಲ್ಲಿ ಜೈಲುಪಾಲಾಗುತ್ತೇನೋ ಎಂದು ...ಕ್ರಿಮಿನಲ್‌ನಂತೆ ತಲೆ ಮರೆಸಿಕೊಂಡರೆ, ಡ್ರಾಪ್‌ಔಟ್ ...ದಂಧೆಯಲ್ಲಿ ಆತನ ಪಾಲುದಾರರಾದ ಶಿವಾಜಿನಗರದ ...ಇಷ್ತಿಯಾಕ್ ಪೈಲ್ವಾನ್, ಘಟಿಂಗರಾದ ಮಲ್ಲಿಕ್ ಮತ್ತು ...ಹಿಂ ಗ್ಯಾಂಗ್‌ನಿಂದ ಪ್ರಾಣ ಉಳಿಸಿಕೊಳ್ಳಲು ಪ್ರೊ. ...ರಾಜ್ ಮತ್ತು ಪ್ರಸಾದ್ ಬಂದೂಕುಧಾರಿ ಬಾಡಿಗಾರ್ಡ್ ...ರಕ್ಷಣೆಯಲ್ಲಿ ಓಡಾಡುತ್ತಿದ್ದಾರೆ. ಈ ಎರಡೂ ಬಣಗಳ ...ಜಣೆಯಿಂದ ಸಂಘವನ್ನು ಉಳಿಸಲು ಕಾಂಗ್ರೆಸ್‌ನ ಡಿ.ಕೆ, ಜೆಡಿಎಸ್‌ನ ಚಲುವರಾಯಸ್ವಾಮಿ ಮತ್ತು ... ನಾಯಕ ಬಚ್ಚೇಗೌಡರಂಥವರೇ ಸಂಘಕ್ಕೆ ಬಂದು ...ಡಬೇಕಾಗಿದೆ.

...ತಿಮವಾಗಿ ಇದು ಮಾಜಿ ಪ್ರಧಾನಿ ದೇವೇಗೌಡರ ...ಬಂದು ನಿಲ್ಲುತ್ತಾ ಅಥವಾ ಕೇಂದ್ರ ಮಂತ್ರಿ ಎಸ್.ಎಂ. ...ಷ್ಣ ಪ್ರಾಜ್ಯಕ್ಕೆ ಎಳೆಯುತ್ತಾ ಗೊತ್ತಿಲ್ಲ. ಕೊನೆಕೊನೆಗೆ ...ಚುಂಚನಗಿರಿ ಬಾಲಗಂಗಾಧರನಾಥರ ಪಾಲಿಗಿದು ...ವಾಗಬಹುದಾ? ಅದಕ್ಕೂ ಮೊದಲೇ ಗೃಹಮಂತ್ರಿ ...ಕೈಚಳಕ ತೋರಬಹುದಾ?

...ದಂತೂ ಸತ್ಯ. ಒಕ್ಕಲಿಗರ ಸಂಘದಲ್ಲೀಗ ಸ್ಪಷ್ಟ ...ರೋಧಿ ಗ್ಯಾಂಗುಗಳು ಹುಟ್ಟಿಕೊಂಡಿವೆ. ಅಧ್ಯಕ್ಷ ...ಗೌಡನನ್ನು ಹೊರದಬ್ಬಿ ಸಂಘಕ್ಕೊಂದು ಮುಕ್ತಿ ...ಲು ಪಕ್ಷಬೇಧ, ಪ್ರಾಂತಭೇದ ಮರೆತು ಒಕ್ಕಲಿಗರ ...ಳ ಪ್ರತಿನಿಧಿಗಳೆಲ್ಲರೂ ಒಕ್ಕೊರಲಿನಿಂದ ...ಸಿದ್ದು ಬಹುಶಃ ಸಂಘದ ಇತಿಹಾಸದಲ್ಲಿ ಇದೇ ...ರಬೇಕು. ಇಂಥದೊಂದು ದಾವಾನಲಕ್ಕೆ ...ವಾದದ್ದು ಡ್ರಾಪ್‌ಔಟ್ ದಂಧೆ!

ಕಾಮೆಡ್ ಕೆ ಎಂಬ ಹುತ್ತ

...ಒಂದೇ ವರ್ಷಕ್ಕೆ ನಯಾಪೈಸೆಯ ಬಂಡವಾಳ ... 12 ಕೋಟಿ ರೂಪಾಯಿಗಳಷ್ಟನ್ನು ದುಡಿಯಲು ...ಧ್ಯ? ಅದೂ ಕೇವಲ 24 ಕಾಮೆಡ್ ಕೆ ಮೆಡಿಕಲ್ ...ಗಳಿಂದ ಒಂದೇ ತಿಂಗಳಲ್ಲಿ 12 ಕೋಟಿ ದುಡಿಯ... ...ದರೆ, ಇನ್ನು ಇಂಜಿನಿಯರಿಂಗ್, ಎಂಬಿಎ ಇತ್ಯಾದಿ ...ಷ್ಟು ದೋಚಲು ಸಾಧ್ಯ? ...

ಸರ್ಕಾರಿ ನಿಯಂತ್ರಣದ ಸೀಇಟಿಯಿಂದ ಮುಕ್ತಗೊಂಡ ರಾಜ್ಯದ ಅನೇಕ ಖಾಸಗಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜು ಧಣಿಗಳೆಲ್ಲ ಸೇರಿ ಹುಟ್ಟುಹಾಕಿದ್ದು ಕಾಮೆಡ್ ಕೆ. ಅಂದರೆ ಸರ್ಕಾರಿ ನಿಯಂತ್ರಣವಿಲ್ಲದೆ ಖಾಸಗಿ ಮೆಡಿಕಲ್ ಕಾಲೇಜುಗಳು ತಾವೇ ಪರೀಕ್ಷೆ ನಡೆಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕ್ಯಾಪಿಟೇಶನ್, ಡೊನೇಷನ್ ಯಾವುದೂ ಇಲ್ಲದೆ ಕೇವಲ ಸರ್ಕಾರ ನಿಗದಿಪಡಿಸಿದ ಶುಲ್ಕ ಪಡೆದು ಸೀಟು ನೀಡುವುದು.

ಉದಾಹರಣೆಗೆ ಒಕ್ಕಲಿಗರ ಸಂಘವೇ ನಡೆಸುವ ಕಿಮ್ಸ್ ಅರ್ಥಾತ್ ಕೆಂಪೇಗೌಡ ಇನ್ಸ್‌ಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನಲ್ಲಿರುವ ಪ್ರತಿ ವರ್ಷದ ಒಟ್ಟು ಸೀಟುಗಳ ಸಂಖ್ಯೆ ನೂರಿಪ್ಪತ್ತು. ಈ ಪೈಕಿ 26 ಮ್ಯಾನೇಜ್‌ಮೆಂಟ್ ಕೋಟಾದ ಸೀಟುಗಳು. ಇಂಥ ಪ್ರತಿ ಸೀಟೊಂದನ್ನು ಅರವತ್ತೋ ಎಪ್ಪತ್ತೋ ಲಕ್ಷಕ್ಕೆ ಆಡಳಿತ ಮಂಡಳಿ ಮಾರಿಕೊಳ್ಳುತ್ತದೆ. ದಾವಣಗೆರೆಯ ಶಾಮನೂರು, ಕೋಲಾರದ ಜಾಲಪ್ಪ ತುಮಕೂರಿನ ಪರಮೇಶ್ವರ್, ಬೆಳ್ಳೂರಿನ ಆದಿಚುಂಚನಗಿರಿ, ಬಿಜಾಪುರದ ಎಂ.ಬಿ. ಪಾಟೀಲ್, ಬೆಳಗಾವಿಯ ಕೆಎಲ್‌ಇಯ ಕೋರೆ, ಸುತ್ತೂರು ಸ್ವಾಮೀಜಿ ಮುಂತಾದವರೆಲ್ಲಾ ಈ ರೀತಿ ಮ್ಯಾನೇಜ್‌ಮೆಂಟ್ ಕೋಟಾದ ಸೀಟು ಮಾರಿಕೊಂಡೇ ತಮ್ಮ ಕಾಲೇಜು-ಆಸ್ಪತ್ರೆಗಳನ್ನು ನಡೆಸೋದು. ಹೀಗೆ 26 ಮ್ಯಾನೇಜ್‌ಮೆಂಟ್ ಸೀಟುಗಳನ್ನು ಯಥೇಚ್ಛ ರೇಟಿಗೆ ಮಾರಿಕೊಳ್ಳುವ ಒಕ್ಕಲಿಗರ ಸಂಘ ಉಳಿಕೆ 96 ಸೀಟುಗಳ ಪೈಕಿ 48 ಸೀಟುಗಳನ್ನು ಸರ್ಕಾರದ ಸೀಇಟಿ ಅಭ್ಯರ್ಥಿಗಳಿಗೆ ವಿತರಿಸುತ್ತದೆ. ಉಳಿಕೆ 48 ಸೀಟುಗಳೇ ಕಾಮೆಡ್ ಕೆ ಸೀಟುಗಳು!

ಡ್ರಾಪ್‌ಔಟ್ಸ್ ಮಾಫಿಯಾ

ಈ ಕಾಮೆಡ್ ಕೆ ಸೀಟುಗಳೆಂದರೆ ಸೀಇಟಿಗಿಂತಲೂ ಕೊಂಚ ದುಬಾರಿ. ಉದಾಹರಣೆಗೆ ಸೀಇಟಿ ಸೀಟೊಂದಕ್ಕೆ ಎರಡೂವರೆ ಲಕ್ಷದಷ್ಟು ಶುಲ್ಕವಿದ್ದರೆ ಕಾಮೆಡ್ ಕೆ ಸೀಟಿಗೆ 3.60 ಲಕ್ಷದಷ್ಟು ಫೀಜಿರುತ್ತದೆ. ಬಹುತೇಕ ಖಾಸಗಿ ಮೆಡಿಕಲ್ ಕಾಲೇಜು ಧಣಿಗಳಿಗೆ ತಲಾ 3.60 ಲಕ್ಷಕ್ಕೆ ಬಿಕರಿಯಾಗುವ ಈ ಕಾಮೆಡ್ ಕೆ ಸೀಟನ್ನು ಡೊನೇಷನ್ ಸೀಟನ್ನಾಗಿ ಪರಿವರ್ತಿಸಿ ಆರವತ್ತೋ ಎಪ್ಪತ್ತೋ ಲಕ್ಷಕ್ಕೆ ದೋಚುವ ದುರಾಶೆ. ಹೀಗೆ ಕಾಮೆಡ್‌ಕೆ ಸೀಟುಗಳನ್ನು ಕಳ್ಳದಾರಿಯಲ್ಲಿ ಪೇಮೆಂಟ್ ಕೋಟಾ ಸೀಟುಗಳನ್ನಾಗಿ ಪರಿವರ್ತಿಸಿ ಕೋಟಿ ಕೋಟಿ ದೋಚುವ ಥರೇವಾರಿ ಗ್ಯಾಂಗುಗಳು ಹುಟ್ಟಿಕೊಂಡಿವೆ.

ಅದು ಡ್ರಾಪ್‌ಔಟ್ ಸೀಟ್ ಮಾಫಿಯಾ!

ಎಂ.ಎಸ್. ರಾಮಯ್ಯ ಮೆಡಿಕಲ್ ಕುಬೇರರಿಂದ ಹಿಡಿದು ದಾವಣಗೆರೆಯ ಕ್ಯಾಪಿಟೇಶನ್ ಧಣಿ ಶಾಮನೂರರ ತನಕ, ಬೆಳಗಾವಿಯ ಕೋರೆಯ ಕೆಎಲ್‌ಇ ಚಕ್ರಾಧಿಪತ್ಯದಿಂದ ಹಿಡಿದು ಬಿಜಾಪುರದ ಬಿಎಲ್‌ಡಿಯ ಡೊನೇಷನ್ ದೊರೆಗಳ ತನಕ ಆದಿಚುಂಚನಗಿರಿಯಿಂದ ಮೊದಲಾಗಿ ಅನೇಕ ಖಾಸಗಿ ಮೆಡಿಕಲ್ ಕಾಲೇಜು ಧಣಿಗಳು ಹುಟ್ಟಿಹಾಕಿದ್ದೇ ಈ ಡ್ರಾಪ್‌ಔಟ್ ದಂಧೆಯನ್ನು. ಒಂದೇ ಮಾತಲ್ಲಿ ಹೇಳಬೇಕೆಂದರೆ ಇದು ಕಾಮೆಡ್ ಕೆ ಸೀಟುಗಳನ್ನು ಮ್ಯಾನೇಜ್‌ಮೆಂಟ್ ಸೀಟುಗಳನ್ನಾಗಿ ಪರಿವರ್ತಿಸಿ ಕೋಟಿಕೋಟಿ ದೋಚುವ ಮಾಯಾಜಾಲ. ಸುಪ್ರೀಂಕೋರ್ಟ್ ಕಟ್ಟಪ್ಪಣೆಯಂತೆ ಪ್ರತಿ ಖಾಸಗಿ ಮೆಡಿಕಲ್ ಕಾಲೇಜುಗಳೂ ಅರ್ಧ ಸೀಇಟಿ ಮತ್ತು ಇನ್ನರ್ಧ ಕಾಮೆಡ್ ಕೆಗೆ ಒಳಪಡಿಸಲೇಬೇಕು. ಕಾಮೆಡ್ ಕೆ ಸೀಟುಗಳ ಪೈಕಿ ಅರ್ಧದಷ್ಟನ್ನಾದರೂ ಲಪಟಾಯಿಸಿಬಿಟ್ಟರೆ-

ಇದಕ್ಕೆಂದೇ ತಲೆ ಎತ್ತಿದ್ದ ಡ್ರಾಪ್‌ಔಟ್ ಸೀಟ್ ಮಾಫಿಯಾದ ಕಿಂಗ್‌ಪಿನ್ನುಗಳೆಂದರೆ ವಿಲ್ಸನ್ ಗಾರ್ಡನ್ನಿನ ಡಾ. ಇಬ್ರಾಹಿಂ ಪಾಷಾ, ಹೆಚ್‌ಬಿಆರ್ ...



ಯಲಹಂಕ ನಾಗರಾಜ್



ಎನ್.ರಮೇಶ್



ಪ್ರೊ. ನಾ...

ಇಂಥದೊಂದು ಗ್ಯಾಂಗ್‌ನ ರಕ್ಷಣೆಯ ಹೊಣೆ ಹೊತ್ತಿದ್ದು ಶಿವಾಜಿನಗರದ ರಣಪಾತಕಿ ಇಷ್ತಿಯಾಕ್ ಪೈಲ್ವಾನ್!

ಪಿಯುಸಿಯಲ್ಲಿ ಉತ್ತೀರ್ಣರಾದ ಪ್ರತಿಭಾವಂತ ವಿದ್ಯಾರ್ಥಿಗಳು ತಾನೇ ಕಾಮೆಡ್‌ಕೆ ಪರೀಕ್ಷೆಗೆ ಕೂತು ಮೆಡಿಕಲ್ ಸೀಟಿನ ಆಕಾಂಕ್ಷಿಗಳಾಗೋದು? ದೂರದ ಮುಂಬಯಿ, ದೆಹಲಿ, ಜಲಂದರ್, ಲಕ್ನೋ ಮುಂತಾದ ವಿಜ್ಞಾನ ಕಾಲೇಜುಗಳ ಪ್ರತಿಭಾವಂತ ಪಿಯುಸಿ ವಿದ್ಯಾರ್ಥಿಗಳದ್ದೇ ಪಟ್ಟಿಯೊಂದು ಇವರ ಬಳಿಯಿರುತ್ತದೆ. ಆ ರೀತಿ ರ್‍ಯಾಂಕ್ ಗಿಟ್ಟಿಸಿದ ಜಾಣ ವಿದ್ಯಾರ್ಥಿಯನ್ನು ಈ ತಂಡ ಸಂಪರ್ಕಿಸುತ್ತದೆ. ಆತನ ತಂದೆ ತಾಯಂದಿರನ್ನೂ ಬುಟ್ಟಿಗೆ ಹಾಕಿಕೊಳ್ಳುತ್ತಾರೆ. ಆತ ಮಾಡಬೇಕಾದದ್ದು ಈ ಗ್ಯಾಂಗ್ ಹೇಳಿದ ಒಂದಷ್ಟು ಕಾಗದ ಪತ್ರಗಳಿಗೆ ಸಹಿ ಹಾಕುವುದು ಮತ್ತು ಇವರು ಹೇಳಿದಾಗ ಬೆಂಗಳೂರಿಗೆ ಬಂದು ಕಾಮೆಡ್ ಕೆ ಅಧಿಕಾರಿಗಳೆದುರು ಕಂಠಪಾಠ ಒಪ್ಪಿಸುವುದು.

ಬಾಡಿಗೆಗೆ ಬಂದ ವಿದ್ಯಾರ್ಥಿ

ಕಾಮೆಡ್ ಕೆ ಪರೀಕ್ಷೆಗೆ ಅಂಥ ವಿದ್ಯಾರ್ಥಿಯಿಂದ ಇವರೇ ಅರ್ಜಿ ಹಾಕಿಸುತ್ತಾರೆ. ಮೊದಲೇ ರ್‍ಯಾಂಕ್ ವಿದ್ಯಾರ್ಥಿಯಾದ್ದರಿಂದ ಸುಲಭದ ಪ್ರವೇಶ ದೊರೆಯುತ್ತದೆ. ಪರೀಕ್ಷೆಯ ದಿನ ಆ ವಿದ್ಯಾರ್ಥಿ ಮತ್ತು ಆತನ ತಂದೆ ತಾಯಂದಿರಿಗೆ ಬೆಂಗಳೂರಿನ ಐಷಾರಾಮಿ ಹೋಟೆಲಿನಲ್ಲಿ ರೂಮು ಮಾಡಿಕೊಡಲಾಗುತ್ತದೆ. ಹೋಗಿ ಬರಲು ವಿಮಾನದ ಟಿಕೆಟ್ಟನ್ನೂ ಮೊದಲೇ ಕೊಡಿಸುತ್ತಾರೆ. ಎಲ್ಲಕ್ಕೂ ಮುನ್ನ ಇದಕ್ಕೆಂದೇ 5 ಲಕ್ಷ ರೂಪಾಯಿಗಳ ಅಡ್ವಾನ್ಸನ್ನೂ ಕೊಡುತ್ತಾರೆ. ಹಾಗೇ ಬಂದ ಪ್ರತಿಭಾವಂತ ವಿದ್ಯಾರ್ಥಿ ಈ ಖದೀಮರು ಇರಿಸಿದ ಹೋಟೆಲಿನ ರೂಮಲ್ಲಿ ತಂಗಿದ್ದು ಕಾಮೆಡ್ ಕೆ ಪರೀಕ್ಷೆ ಬರೆಯುತ್ತಾನೆ. ಸಲೀಸಾಗಿ ಸೀಟು ಸಿಕ್ಕೇ ಸಿಗುತ್ತದೆ. ಈ ರೀತಿ ಮೆಡಿಕಲ್ ಸೀಟು ಪಡೆದ ಆ ವಿದ್ಯಾರ್ಥಿ ಸಹಜವಾಗೇ ಇಲ್ಲಿನ ತನ್ನ ಕಾಲೇಜಿಗೆ ಸೇರಿ ಮೆಡಿಕಲ್ ಓದಬೇಕಲ್ಲವೆ?

ಇಲ್ಲೇ ಇರುವುದು ಹಕೀಕತ್ತು, ಹಾಗೇ ಕಾಮೆಡ್ ಕೆ ಸೀಟು ಪಡೆದ ವಿದ್ಯಾರ್ಥಿ ಕೊನೇಗಳಿಗೆಯಲ್ಲಿ ಅಂದರೆ ಎಲ್ಲಾ ಮೆಡಿಕಲ್ ಕಾಲೇಜುಗಳ ಪ್ರವೇಶ ಪ್ರಕ್ರಿಯೆ ಮುಗಿಯುವ ಕೊನೇ ಕ್ಷಣದಲ್ಲಿ ತಮಗೆ ಈ ಸೀಟಿನ ಅಗತ್ಯವಿಲ್ಲವೆಂದೂ ಅನಾನುಕೂಲದ ಕಾರಣದಿಂದಾಗಿ ಈ ಸೀಟು ತಮಗೆ ಬೇಡವೆಂದೂ ಉಲ್ಟಾ ಹೊಡೆಯುತ್ತಾರೆ. ಅಂದರೆ ಮೊದಲೇ ಆ ವಿದ್ಯಾರ್ಥಿಯಿಂದ ಖಾಲಿ ಹಾಳೆಯಲ್ಲಿ ಸಹಿ ಪಡೆದು ಕೊನೇಗಳಿಗೆಯಲ್ಲಿ ಅದನ್ನು ಡ್ರಾಪ್‌ಔಟ್ ಗೆಂದು ಬಳಸಿ ಕಾಮೆಡ್ ಕೆ, ಕಾಲೇಜಿನ ಆಡಳಿತ ಮಂಡಳಿಗಳಿಗೆ ನೀಡುತ್ತಾರೆ. ಕೊನೇಗಳಿಗೆಯಲ್ಲಿ ಸೀಟು ತಿರಸ್ಕಾರಗೊಂಡಿದ್ದರಿಂದ ಹೊಸ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗದೆ, ಹಳಬರಿಗೂ ನೀಡಲಾಗದೆ ಸೀಟು ಖಾಲಿ ಬೀಳುತ್ತದೆ. ಹಾಗೆ ಖಾಲಿ ಬಿದ್ದ ಡ್ರಾಪ್‌ಔಟ್ ಸೀಟಿಗೆ ಕಾಲೇಜಿನ ಆಡಳಿತ ಮಂಡಳಿ ತನಗಿಷ್ಟ ಬಂದಷ್ಟು ದುಡ್ಡು ಕಿತ್ತು ಬೇರೆ ಯಾರಿಗಾದರೂ ಮಾರಿಕೊಳ್ಳಬಹುದು.

ಇದು ಕಾಮೆಡ್ ಕೆ ಸೀಟು ಮ್ಯಾನೇಜ್‌ಮೆಂಟ್ ಸೀಟಾಗುವ ಸೀಕ್ರೆಟ್ಟು.

ಮೊದಲೇ ನಿರ್ಧಾರಿತ ಕಪಟ ನಾಟಕದಂತೆ ಎಲ್ಲವೂ ನಡೆಯುತ್ತದೆ. ಮೊದಲೇ ಭರಪೂರ ಡೊನೇಷನ್ ನೀಡುವ, ಸಾಧಾರಣ ಅಂಕಗಳಿಸಿದ, ಜಾಣರಲ್ಲದ, ಪ್ರತಿಭೆಯಿಲ್ಲದ, ರೊಕ್ಕಸ್ಥರ ಲಂಪಟ ಮಕ್ಕಳನ್ನು ಆಯ್ದುಕೊಂಡಿರುತ್ತಾರೆ. ಕೊನೇ ಕ್ಷಣದಲ್ಲಿ ಕಾಮೆಡ್ ಕೆ ಯಿಂದ ಆಯ್ಕೆಯಾದವನನ್ನು ಡ್ರಾಪ್‌ಔಟ್ ಮಾಡಿಸಿ ದುಡ್ಡಿಗೆ ಸೀಟು ಮಾರಲಾಗುತ್ತದೆ. 3.60 ಲಕ್ಷದ ಕಾಮೆಡ್ ಕೆ ಸೀಟು ಡ್ರಾಪ್‌ಔಟ್ ಕಾರಣಕ್ಕೆ ಮ್ಯಾನೇಜ್‌ಮೆಂಟ್ ಸೀಟಾದ್ದರಿಂದ ಏಕಾಏಕಿ ಅದರ ಬೆಲೆ ಅರವತ್ತೋ ಎಪ್ಪತ್ತೋ ಲಕ್ಷಕ್ಕೇರುತ್ತದೆ.

ಇದರಲ್ಲಿ ಮ್ಯಾನೇಜ್‌ಮೆಂಟಿಗೆ ಇಪ್ಪತ್ತೋ ಇಪ್ಪತ್ತೈದೋ ಲಕ್ಷ ಕೊಟ್ಟು ಪರೀಕ್ಷೆ ಬರೆದ ಹುಡುಗನಿಗೆ ಅಡ್ವಾನ್ಸು, ವಿಮಾನದ ಟಿಕೆಟ್ಟು, ... ಎಲ್ಲಾ ಕಳೆದು ... ಡ್ರಾಪ್‌ಔಟ್ ಖದೀಮರಿಗೆ ...

12 ಕೋಟಿ!

ಡ್ರಾಪ್‌ಔಟ್ ಖದೀಮನೊಬ್ಬ ಪ್ರತಿ ವರ್ಷ ಇಂಥ 20 ಮಂದಿ ರ್‍ಯಾಂಕ್‌ಧಾರಿಗಳನ್ನು ಕರೆಸಿ ಪರೀಕ್ಷೆ ಬರೆಸಿದನೆಂದರೆ ಕಮ್ಮಿಯೆಂದರೂ 8 ಕೋಟಿ ದುಡಿಯಬಲ್ಲ!

ಇಂಥದೊಂದು ದಂಧೆಗೆ ಕೈಯಿಟ್ಟವನು ರಾಜ್ಯ ಒಕ್ಕಲಿಗರ ಸಂಘದ ಹಾಲಿ ಅಧ್ಯಕ್ಷ ಕೆಂಚಪ್ಪ ಗೌಡ.

ಮೊದಲೇ ಲಿಕ್ಕರ್ ದೊರೆ. ಸೆಕೆಂಡ್ಸ್ ದಂಧೆ ಗೊತ್ತು, ರೌಡಿಜಮ್ಮೂ ಗೊತ್ತು ಫ್ರಾಡುಗೀಡೂ ಯಾವುದೂ ಕೆಂಚಪ್ಪ ಗೌಡನಿಗೆ ಹೊಸದಲ್ಲ. ಈ ಸಲದ ಒಟ್ಟೂ 48 ಕಾಮೆಡ್ ಕೆ ಸೀಟುಗಳ ಪೈಕಿ ಕನಿಷ್ಠ 24 ಸೀಟುಗಳನ್ನಾದರೂ ಡ್ರಾಪ್‌ಔಟ್ ಮಾಡಿಸಿ ತಲಾ ಸೀಟನ್ನು ಕನಿಷ್ಠ 50 ಲಕ್ಷಕ್ಕೆ ಮಾರಿಕೊಂಡರೂ ಅದು 12 ಕೋಟಿಯಾಗುತ್ತದೆ. ಇದರಲ್ಲಿ ಅರ್ಧ ಕಳೆದರೂ ತನಗೆ ದಕ್ಕುವುದು 6 ಕೋಟಿ. ಇಂತಹ ಸೂತ್ರವೊಂದನ್ನು ಮೊದಲೇ ಹೆಣೆದಿದ್ದ ಕೆಂಚಪ್ಪ ಗೌಡ ಕಿಮ್ಸ್ ನಿರ್ದೇಶಕ ಡಾ. ಸುದರ್ಶನ್‌ರನ್ನು ಕರೆಸಿದ್ದೇ ಒಂದು ಡಜನ್ ರೊಕ್ಕಸ್ಥರ ಮಕ್ಕಳನ್ನು ಅಡ್ಮೀಷನ್ನೇ ಇಲ್ಲದೆ ಕ್ಲಾಸಿಗೆ ದಾಖಲಿಸುವಂತೆ ಆದೇಶಿಸಿದ್ದ. ಸೀಇಟಿಯಿಂದಾಗಲಿ, ಕಾಮೆಡ್ ಕೆಯಿಂದಾಗಲಿ ದಾಖಲುಗೊಳ್ಳದೆ, ಮ್ಯಾನೇಜ್‌ಮೆಂಟ್ ಸೀಟು ಕೂಡ ಖರೀದಿಸದೇ ಏಕಾಏಕಿ ಕ್ಲಾಸಿಗೆ ಅನಧಿಕೃತವಾಗಿ ಬಂದು ಕೂರುತ್ತಿದ್ದ ವಿದ್ಯಾರ್ಥಿಗಳ ಕತೆ ಗೊತ್ತಾಗಿದ್ದು ಇದೇ ಒಕ್ಕಲಿಗರ ಸಂಘದ ಕಾರ್ಯಕಾರಿಣಿ ಸದಸ್ಯರಾದ ಎ. ಪ್ರಸಾದ್ ಮತ್ತು ಪ್ರೊ. ನಾಗರಾಜ್‌ಗೆ!

ಪ್ರೊ. ನಾಗರಾಜ್ ಈ ಹಿಂದೆ ಕಿಮ್ಸ್‌ನಲ್ಲಿ ಪ್ರಾಧ್ಯಾಪಕರಾಗಿದ್ದು ಕಳೆದ ಚುನಾವಣೆಯಲ್ಲಿ ಕಾರ್ಯಕಾರಿಣಿಗೆ ಗೆದ್ದು ಬಂದವರು. ಎ. ಪ್ರಸಾದ್ ಶುರುವಿನಿಂದಲೂ ಕೆಂಚಪ್ಪ ಗೌಡನ ಹಾವಳಿಯನ್ನು ವಿರೋಧಿಸಿಕೊಂಡೇ ಬಂದಿದ್ದರು. ಲೆಕ್ಕಕ್ಕಿಲ್ಲದ ಅಪರಿಚಿತ ವಿದ್ಯಾರ್ಥಿಗಳು ಏಕಾಏಕಿ ಕಿಮ್ಸ್‌ನ ತರಗತಿಗಳಲ್ಲಿ ತೂರಿದ್ದು ಗೊತ್ತಾಗಿ ನಿರ್ದೇಶಕ ಡಾ. ಸುದರ್ಶನ್‌ರನ್ನು ವಿಚಾರಿಸಿದ್ದಾರೆ. ಈ ಥರದ ಹನ್ನೆರಡಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಕ್ಲಾಸಿಗೆ ಸೇರಿಸಿಕೊಳ್ಳುವಂತೆ ಕೆಂಚಪ್ಪ ಗೌಡ ತನ್ನ ಸಹಿ ಹಾಕಿ ಲಿಖಿತವಾಗಿ ಸೂಚಿಸಿದ್ದು ಗೊತ್ತಾಗಿದೆ. ಅದೇ ಹೊತ್ತಿಗೆ ಕೆಂಚಪ್ಪ ಗೌಡನ ಛೇಂಬರಿನಲ್ಲಿ ಡ್ರಾಪ್‌ಔಟ್ ಖದೀಮರಾದ ರಾಜಗೋಪಾಲ ರೆಡ್ಡಿ, ಡಾ. ಇಬ್ರಾಹಿಂ ಪಾಷಾ, ರಫತ್ ಮಲ್ಲಿಕ್ ಮುಂತಾದವರ ಹಿಂಡೇ ಜಮೆಗೊಂಡಿತ್ತು.




ಅಧ್ಯಕ್ಷನೇ ಎಸ್ಕೇಪ್

ನಡೆಯುತ್ತಿದ್ದ ಕಳ್ಳ ದಂಧೆಗೆ ಎಲ್ಲಾ ಸಾಕ್ಷ್ಯಾಧಾರಗಳೂ ಸಿಕ್ಕಿಯಾಗಿತ್ತು. ತಕ್ಷಣವೇ ಪ್ರಸಾದ್ ಸೆಂಟ್ರಲ್ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ಇಡೀ ದಂಧೆಯ ಬಗ್ಗೆ ಜಂಟಿ ಕಮಿಷನರ್ ದಯಾನಂದ್ ತಲೆ ಕೆಡಿಸಿಕೊಂಡು ಮೊದಲು ಹಿಡಿದದ್ದೇ ರೌಡಿ ಇಷ್ತಿಯಾಕ್‌ನನ್ನು. ಡಾ. ಇಬ್ರಾಹಿಂ ಪಾಷಾ ಮತ್ತು ರಫತ್ ಮಲ್ಲಿಕ್‌ರನ್ನು ಸಿಸಿಬಿ ಪೊಲೀಸರು ಹಿಡಿದು ರಿಪೇರಿ ಮಾಡಿದ್ದಾರೆ. ಇನ್ನೆಲ್ಲಿ ತಾನೂ ಜೈಲು ಪಾಲಾಗಬೇಕಾಗುತ್ತೋ ಎಂದು ಹೆದರಿದ ಕೆಂಚಪ್ಪ ಗೌಡ ಅರೆಕ್ಷಣ ಕೂಡ ಒಕ್ಕಲಿಗರ ಸಂಘದಲ್ಲಿ ನಿಲ್ಲದೇ ಪರಾರಿಯಾಗಿದ್ದಾನೆ. ಆತನಿಗೆ ಕೋರ್ಟು ನಿರೀಕ್ಷಣಾ ಜಾಮೀನು ಕೊಡುವ ಹೊತ್ತಿಗೆ ತಿಂಗಳು ಸಮೀಪಿಸಿತ್ತು. ಯಾವತ್ತು ಒಕ್ಕಲಿಗರ ಸಂಘದ ಅಧ್ಯಕ್ಷನೇ ಪೊಲೀಸರಿಗೆ ಹೆದರಿ ಪರಾರಿಯಾದನೋ ಸಂಘದ ಬಹುತೇಕ ಡೈರೆಕ್ಟರುಗಳೆಲ್ಲ ತಿರುಗಿಬಿದ್ದಿದ್ದಾರೆ.

ಸೆಕ್ರೆಟರಿ ಮಹಾದೇವ್, ಮಾಜಿ ಖಜಾಂಚಿ ರಮೇಶ್, ನಂಜುಂಡೇ ಗೌಡ ಮತ್ತು ನವೀನ್ ಹೊರತಾಗಿ ಮಿಕ್ಕೆಲ್ಲ ಕಾರ್ಯಕಾರಿಣಿ ಸದಸ್ಯರೂ ಕೆಂಚಪ್ಪ ಗೌಡನ ವಿರುದ್ಧ ಬಂಡೆದ್ದಿದ್ದಾರೆ. ಡ್ರಾಪ್‌ಔಟ್ ದಂಧೆಯಿಂದಾಗಿ 24 ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳ ಕನಸಿಗೆ ಬೆಂಕಿ ಬಿತ್ತು. ಬಡ ಒಕ್ಕಲಿಗರ ಮಕ್ಕಳೋ, ರೈತಾಪಿ ಹುಡುಗರೋ ಕಾಮೆಡ್ ಕೆಗೆ ಪರೀಕ್ಷೆ ಬರೆದು ಆಯ್ಕೆಯಾಗಿದ್ದರೆ ಕನಿಷ್ಠ ಕರ್ನಾಟಕಕ್ಕಾದರೂ ಲಾಭವಾಗುತ್ತಿತ್ತು. ಕೆಂಚಪ್ಪ ಗೌಡನ ಕುಲಘಾತುಕ ಬುದ್ಧಿಯಿಂದ ಒಕ್ಕಲಿಗರು ರೈತರ ಮಕ್ಕಳ ಬದಲಿಗೆ ಉತ್ತರ ಭಾರತೀಯ ಶ್ರೀಮಂತರ ಮಕ್ಕಳಿಗೆ ಲಾಭವಾಯಿತು.


ತನ್ನ ಪಾಪ ಮುಚ್ಚಿಕೊಳ್ಳಲು ಕೆಂಚಪ್ಪ ಗೌಡ ಈಗ ಒಕ್ಕಲಿಗರ ಸಂಘದ ಹೆಸರಲ್ಲಿ ಪುಟಗಟ್ಟಲೇ ಜಾಹೀರಾತು ಕೊಡುತ್ತಿದ್ದಾನೆ. ಸಂಘದ ಇತಿಹಾಸ, ಸಾಧನೆಯ ಬುರುಡೆ ಬಿಡುತ್ತಿದ್ದಾನೆ. ಒಕ್ಕಲಿಗರ ನಾಯಕರಾದ ಚೆಲುವರಾಯಸ್ವಾಮಿ, ಬಚ್ಚೇಗೌಡ, ಡೀಕೆ ಮುಂತಾದವರನ್ನೆಲ್ಲ ಸಂಘದ ಪಂಚಾಯ್ತಿಗೆ ಎಳೆದಿದ್ದಾನೆ. ಮೊದಲು ಸಂಘದ ಆಸ್ತಿ ಮಾರಿಕೊಂಡ. ಈಗ ಮೆಡಿಕಲ್ ಕಾಲೇಜಿಗೇ ಕನ್ನವಿಟ್ಟಿದ್ದಾನೆ. ಒಕ್ಕಲಿಗರ ದುರಂತ. ಸಂಘದ ದೌರ್ಭಾಗ್ಯ. ನಾಯಕರ ಆತ್ಮ...

ರೈತರಿಗೆ ಕಹಿ ತಿನ್ನಿಸುತ್ತಿರುವ ಸಕ್ಕರೆ ಕಾರ್ಖಾನೆಗಳು



"ನಮ್ಮ ಕಾರ್ಖಾನೆಗಳಿಗೆ ನೀವು ಬೆಳೆದ ಕಬ್ಬು ಕಳಿಸಿ. ಆದರೆ ಹಣ ಕೇಳಿದರೆ ಜೈಲು ಕಾಣಿಸ್ತೀವಿ ಹುಷಾರ್!"


– ಇದು ಉತ್ತರ ಕರ್ನಾಟಕದ ಸಕ್ಕರೆ ಕಾರ್ಖಾನೆಗಳ ಮಾಲೀಕರು ಒಟ್ಟಾಗಿ ಕಬ್ಬು ಬೆಳೆಗಾರರಿಗೆ ನೀಡುತ್ತಿರುವ ಎಚ್ಚರಿಕೆ.



ಜಿ.ಗುಡಗುಂಟಿ

ರೈತರ ರಕ್ತಹೀರಿ ಕೋಟಿ ಕೋಟಿ ಲಾಭ ಮಾಡಿಕೊಂಡು ಕೊಬ್ಬಿರುವ ಸಕ್ಕರೆ ದಂಧೆಕೋರರು ಕಬ್ಬು ಬೆಳೆಯುವ ಅಮಾಯಕ ರೈತರಿಗೆ ಒಂದು ಗತಿ ಕಾಣಿಸಲು ಸನ್ನದ್ಧರಾಗಿದ್ದಾರೆ. ಬೆವರು ಸುರಿಸಿ ಕಬ್ಬು ಬೆಳೆದು ಕಾರ್ಖಾನೆಗಳಿಗೆ ಕಳಿಸಿದ ರೈತರು ತಮ್ಮ ಬಾಕಿ ಹಣಕ್ಕಾಗಿ ಬಾಯಿಬಾಯಿ ಬಡಿದು ಕೊಳ್ಳುತ್ತಿದ್ದರೆ ಕಾರ್ಖಾನೆಗಳ ಮಾಲೀಕರು ಪಕ್ಷ ಪಂಗಡಗಳನ್ನೆಲ್ಲ ಮರೆತು ಒಂದಾಗಿ ರೈತರನ್ನು ಜೈಲಿಗೆ ಅಟ್ಟುತ್ತಿದ್ದಾರೆ.

ಇದು ಉತ್ತರ ಕರ್ನಾಟಕದಲ್ಲೇ ಅತೀ ಹೆಚ್ಚು ಕಬ್ಬು ಬೆಳೆಯುವ ಬಾಗಲಕೋಟೆ-ಬೆಳಗಾವಿ ಜಿಲ್ಲೆಗಳಲ್ಲಿನ ಪರಿಸ್ಥಿತಿ.



ಎಸ್.ಆರ್.ಪಾಟೀಲ್

ಸಕ್ಕರೆ ಕಾರ್ಖಾನೆ ಕಟ್ಟುವುದು ಈ ಭಾಗದಲ್ಲಿ ಅತೀ ಲಾಭದಾಯಕ ಉದ್ಯಮವಾಗಿದೆ. ಕಬ್ಬು ಬೆಳೆದ ರೈತರು ತಮ್ಮ ಬೆಳೆಗೆ ಸರಿಯಾದ ಬೆಲೆ ಸಿಗದೆ ಸಾಲುಸಾಲಾಗಿ ಆತ್ಮಹತ್ಯೆ ಮಾಡಿಕೊಂಡರೂ ಸಕ್ಕರೆ ಉದ್ಯಮ ಮಾತ್ರ ಲಾಭದಾಯಕವಾಗಿ ನಡೆಯುತ್ತಿದೆ. ರೈತರ ಸಂಕಷ್ಟಗಳು ಹೆಚ್ಚಿದಷ್ಟು ಸಕ್ಕರೆ ಕಾರ್ಖಾನೆಗಳ ಲಾಭದ ಪ್ರಮಾಣವೂ ಹೆಚ್ಚಾಗುತ್ತದೆ. ಅದೇ ಕಾರಣಕ್ಕೆ ಈ ಭಾಗದ ಯಾವುದೇ ನಾಯಕ ಶಾಸಕ ಅಥವಾ ಸಂಸದ ಆದ ಕೂಡಲೇ ಮೊದಲು ಕೈ ಇಡುವುದು ಈ ಸಕ್ಕರೆ ದಂಧೆಗೆ. ಈ ಭಾಗದ ಬಹುಪಾಲು ಹಾಲಿ-ಮಾಜಿ ಶಾಸಕ-ಮಂತ್ರಿಗಳು ಸಕ್ಕರೆ ಉದ್ಯಮಿಗಳಾಗಿದ್ದಾರೆ.



ಸಿದ್ದು ನ್ಯಾಮಗೌಡ

10-15 ವರ್ಷಗಳ ಕೆಳಗೆ ಜೋಳ, ಗೋದಿ, ಗೋವಿನಜೋಳ, ಕುಸುಬಿ, ಕಡಲೆ, ತರಕಾರಿ ಮುಂತಾದ ಆಹಾರಧಾನ್ಯಗಳನ್ನು ಬೆಳೆದು ಬದುಕನ್ನು ಭದ್ರ ಮಾಡಿಕೊಂಡು ಸ್ವಾಭಿಮಾನದಿಂದ ರೈತರು ಬದುಕುತ್ತಿದ್ದರು. ಆದರೆ ಕಾಲಕ್ರಮೇಣ ಹೆಚ್ಚು ಆದಾಯ ತರುವ ಕಬ್ಬನ್ನು ಬೆಳೆಯಲಾರಂಭಿಸಿದರು. ಆಗ ಬಾಗಲಕೋಟೆ-ಬೆಳಗಾವಿ ಜಿಲ್ಲೆಗಳಲ್ಲಿ ನಾಯಿಕೊಡೆಗಳಂತೆ ಸಕ್ಕರೆ ಕಾರ್ಖಾನೆಗಳು ಬೆಳೆದು ನಿಂತವು. ಈ ಕಾರ್ಖಾನೆಗಳ ಹೊಟ್ಟೆ ತುಂಬುವ ಸಲುವಾಗಿ ಕಬ್ಬು ಬೆಳೆಯಲಾರಂಭಿಸಿದ ರೈತರು ಕೊನೆಕೊನೆಗೆ ತಾವು ಪೂರೈಸಿದ ಕಬ್ಬಿನ ಹಣಕ್ಕಾಗಿ ಕಾರ್ಖಾನೆಯ ಮಾಲೀಕರ ಮನೆ ಕಾಯುವಂತಾಯಿತು. ಇದನ್ನು ಬಳಸಿಕೊಂಡ ಮಾಲೀಕರು ತಮಗೆ ಕಬ್ಬು ಪೂರೈಸಲು ರೈತರ ಮಧ್ಯೆ ಸ್ಪರ್ಧೆ ಏರ್ಪಡುವಂತೆ ಮಾಡಿದರು. ಆನಂತರ ಕಡಿಮೆ ಬೆಲೆಗೆ ಕಬ್ಬನ್ನು ರೈತರಿಂದ ಖರೀದಿ ಮಾಡಿ ರೈತರನ್ನೇ ವಂಚಿಸಲಾರಂಭಿಸಿದರು. ಇದು ಪ್ರತಿ ವರ್ಷ ನಡೆದುಕೊಂಡು ಬರುತ್ತಿರುವ ಪದ್ಧತಿ.


ಇದೆಲ್ಲ ಹಾಳಾಗಿ ಹೋಗಲಿ, ತಮ್ಮ ಭೂಮಿಯಲ್ಲಿ ಬೆಳೆದು ನಿಂತ ಕಬ್ಬು ಕಟಾವ್ ಆಗಿ ಕಾರ್ಖಾನೆಗೆ ಹೋದರೆ ಸಾಕು ಅವರು ಕೊಟ್ಟಷ್ಟು ಕೊಡಲಿ ಎಂದು ರೈತರು ಕಬ್ಬು ಕಳಿಸಿದರೆ ಸಕ್ಕರೆ ಕಾರ್ಖಾನೆಗಳ ಮಾಲೀಕರು ರೈತರಿಗೆ ಸರಿಯಾದ ಬೆಲೆ ಕೊಡದೇ ಸತಾಯಿಸುತ್ತಾರೆ. ಇದು ಒಂದು ಕಾರ್ಖಾನೆ ವ್ಯಾಪ್ತಿಯ ರೈತರ ಪರಿಸ್ಥಿತಿಯಲ್ಲ, ಈ ಭಾಗದ ಎಲ್ಲ ರೈತರ ಸ್ಥಿತಿಯೂ ಇದೇ ಆಗಿದೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿರುವ ಮಂತ್ರಿ ಮುರುಗೇಶ್ ನಿರಾಣಿಯ ನಿರಾಣಿ ಶುಗರ್ಸ್, ಮಹಾಲಿಂಗಪುರದ ಸೋಮಯ್ಯ ಸಕ್ಕರೆ ಕಾರ್ಖಾನೆ, ಜಮಖಂಡಿ ತಾಲ್ಲೂಕಿನ ಪ್ರಭುಲಿಂಗೇಶ್ವರ ಶುಗರ್ಸ್ ಮತ್ತು ಜಮಖಂಡಿ ಶುಗರ್ಸ್, ಬೀಳಗಿ ತಾಲ್ಲೂಕಿನ ಬೀಳಗಿ ಶುಗರ್ಸ್, ಬೆಳಗಾವಿ ಜಿಲ್ಲೆಯ ರೇಣುಕಾ ಶುಗರ್ಸ್, ಉಗಾರ ಸಕ್ಕರೆ ಕಾರ್ಖಾನೆ ಮುಂತಾದ ಇನ್ನೂ ಹಲವಾರು ಕಾರ್ಖಾನೆಗಳು, ರೈತರಿಗೆ ಇನ್ನೂ 2009 ರ ಸಾಲಿನ ಬಿಲ್‌ಅನ್ನೇ ಸಂಪೂರ್ಣವಾಗಿ ಕೊಟ್ಟಿಲ್ಲ, ಅವತ್ತಿನಿಂದ ಇವತ್ತಿನವರೆಗೆ ಸಕ್ಕರೆ ಕಾರ್ಖಾನೆಗಳು ರೈತರಿಗೆ ಕೊಡಬೇಕಾದ ಬಾಕಿ ಮೊತ್ತವೇ 70 ಕೋಟಿ ರೂಪಾಯಿಗಿಂತಲೂ ಹೆಚ್ಚು.

ಈಗ ಈ ಭಾಗದ ರೈತರು ತಮ್ಮ ಹಳೇ ಬಾಕಿ ಚುಕ್ತಾ ಆಗುವವರೆಗೂ ಕಾರ್ಖಾನೆಗಳಿಗೆ ತಾವು ಕಬ್ಬು ಪೂರೈಸುವುದಿಲ್ಲವೆಂದು ಹಠ ಹಿಡಿದಿದ್ದಕ್ಕೆ, ಜೈಲು ಸೇರಬೇಕಾದ, ನಿರಾಣಿಯ ಗೂಂಡಾಗಳ ಕಿರುಕುಳ ಅನುಭವಿಸುವ ಸ್ಥಿತಿ ಬಂದಿದೆ.

ಕಳೆದ ಆಗಸ್ಟ್ ತಿಂಗಳಲ್ಲೇ ಬಾಗಲಕೋಟೆಯ ಜಿಲ್ಲಾಧಿಕಾರಿ ಕುಂಜಪ್ಪ ಅವರಿಗೆ ಮನವಿ ಸಲ್ಲಿಸಿದ ರೈತರು ಕಾರ್ಖಾನೆಗಳಿಂದ ತಮ್ಮ ಹಳೇ ಬಾಕಿ ಕೊಡಿಸುವಂತೆ ಕೇಳಿದರು. ಅದು ಸಿ.ಎಂ. ಸದಾನಂದ ಗೌಡರ ಗಮನಕ್ಕೂ ಬಂದಿತ್ತು, ಕೊಪ್ಪಳ ಚುನಾವಣೆ ಮುಗಿದ ನಂತರ ಈ ಸಮಸ್ಯೆಯನ್ನು ಬಗೆಹರಿಸುವೆ ಎಂದು ಹೇಳಿದ್ದ ಮುಖ್ಯಮಂತ್ರಿಗಳು ಆನಂತರ ಇದನ್ನು ಮರೆತೇ ಬಿಟ್ಟರು. ನಂತರ ಅಕ್ಟೋಬರ್ 8 ಕ್ಕೆ ಮುಧೋಳದಲ್ಲಿ ಸಭೆ ಸೇರಿದ ಕಬ್ಬು ಬೆಳೆಗಾರರು, ತಹಶೀಲ್ದಾರರಿಗೆ ಮನವಿ ಸಲ್ಲಿಸಿ ತಮ್ಮ ಸಮಸ್ಯೆಯತ್ತ ಸರ್ಕಾರದ ಗಮನ ಸೆಳೆದರು. ಆದರೆ ತಹಶೀಲ್ದಾರ್ ಶಂಕರಗೌಡ ಸೋಮನಾಳ ರೈತರ ಮನವಿಗೆ ಸರಿಯಾಗಿ ಸ್ಪಂದಿಸಲೇ ಇಲ್ಲ, ಆಗ ವಿಧಿ ಇಲ್ಲದೆ ಕಬ್ಬು ಬೆಳೆಗಾರರು ರೈತ ನಾಯಕ ರಮೇಶ್ ಗಡದನ್ನವರ ನೇತೃತ್ವದಲ್ಲಿ ಮುಧೋಳದ ಸಂಗೊಳ್ಳಿ ರಾಯಣ್ಣ ಸರ್ಕಲ್‌ನಲ್ಲಿ ಧರಣಿ ಆರಂಭಿಸಿದರು.

ಆಗಸ್ಟ್ 17 ನೇ ತಾರೀಖು ಸಮೀರವಾಡಿ ಸಕ್ಕರೆ ಕಾರ್ಖಾನೆಯ ಕಬ್ಬು ಬೆಳೆಗಾರರ ಮುಖಂಡರು ತಾವೆಂದು ಹೇಳಿಕೊಂಡು ಬಂದ ರಾಮನಗೌಡ ಪಾಟೀಲ ಹಾಗೂ ರಂಗನಗೌಡ ಪಾಟೀಲ ಎಂಬ ಆಸಾಮಿಗಳು "ಈ ವರ್ಷದ ಕಬ್ಬಿನ ಪ್ರತಿ ಟನ್‌ಗೆ 1800 ರೂ. ಹಾಗೂ ಹಿಂದಿನ ಬಾಕಿ 200 ರೂ. ಕೊಡಲು ಸೋಮಯ್ಯ ಕಾರ್ಖಾನೆಯವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ನಿಮ್ಮ ಧರಣಿಯನ್ನು ಕೈ ಬಿಡಿ" ಎಂದು ರೈತರಿಗೆ ಹೇಳಿದರು. ಆದರೆ ರೈತರು "ಹಳೇ ಬಾಕಿ ಸಂಪೂರ್ಣ ಚುಕ್ತಾ ಆಗಬೇಕು. ಈ ವರ್ಷ ಪ್ರತಿ ಟನ್ ಕಬ್ಬಿಗೆ 2150 ರೂ. ಬೆಲೆ ನಿಗದಿ ಮಾಡಬೇಕು" ಎಂದು ಪಟ್ಟು ಹಿಡಿದರು.



ನಿರಾಣಿ

ಇದಾದ ಎರಡು ದಿನಗಳ ನಂತರ ತೇರದಾಳ ಶಾಸಕ ಸಿದ್ದು ಸವದಿ ಹೋರಾಟ ನಿರತ ರೈತರ ವಿರುದ್ಧ ಹೇಳಿಕೆ ಕೊಟ್ಟನಲ್ಲದೆ ಸಕ್ಕರೆ ಕಾರ್ಖಾನೆಗಳನ್ನು ಆರಂಭಿಸಬೇಕು ಎಂದು ಹೇಳಿದ. ಇದರಿಂದ ಎಚ್ಚೆತ್ತುಗೊಂಡ ರೈತರು 20 ನೇ ತಾರೀಖಿನಿಂದ ಪ್ರತಿ ಹಳ್ಳಿ ಹಳ್ಳಿಗೂ ಹೋಗಿ ರೈತರನ್ನು ಜಾಗೃತ ಮಾಡತೊಡಗಿದರು. ಕಾರ್ಖಾನೆಗಳಿಂದ ತಮಗೆ ಬರಬೇಕಿರುವ ಬಾಕಿ ಹಣ ಬರುವವರೆಗೂ ಕಬ್ಬು ಪೂರೈಸಬಾರದೆಂದು ಹೇಳಿದರು. ಕಾರ್ಖಾನೆಗಳನ್ನು ಆರಂಭಿಸಬಾರದೆಂದು ಮಾಲೀಕರಲ್ಲೂ ಮನವಿ ಮಾಡಿಕೊಂಡರು. ಆದರೆ 27 ನೇ ತಾರೀಖು ಮಂತ್ರಿ ನಿರಾಣಿಯ ತಮ್ಮಂದಿರಾದ ಸಂಗಮೇಶ ನಿರಾಣಿ ಮತ್ತು ಹಣುಮಂತ ನಿರಾಣಿ, ಧರೆಪ್ಪ ಸಾಂಗ್ಲಿಕರ್, ಸಿ.ಬಿ. ಕರಿಯಣ್ಣವರ್ ಪಾಂಡುಭೋವಿ, ಮಹ್ಮದ್ ಸಾಬ್ ಕೌಜಲಗಿ ಮುಂತಾದ ನಿರಾಣಿ ಬೆಂಬಲಿಗರು ಕಾರ್ಖಾನೆಗಳನ್ನು ಆರಂಭಿಸಿಯೇ ತೀರುತ್ತೇವೆ ಎಂದರು. ಇದರಿಂದ ಆಕ್ರೋಶಗೊಂಡ ರೈತರು ರಮೇಶ ಗಡದನ್ನವರ, ಶಂಕರನಾಯಕ, ಮುತ್ತಣ್ಣ ಕೋಮಾರ, ಎಂ.ಬಿ. ರಾಯವಾಡ, ರಾಮನಗೌಡ ಪಾಟೀಲ ಮುಂತಾದವರ ನೇತೃತ್ವದಲ್ಲಿ ತಹಶೀಲ್ದಾರರ ಕಚೇರಿಗಳಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ರೈತರ ಆಕ್ರೋಶವನ್ನು ಕಂಡು ಜಿಲ್ಲಾಧಿಕಾರಿ ಕುಂಜಪ್ಪ ಆಗಸ್ಟ್ 24 ರಂದು ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಭೆ ಕರೆದರು. ಆದರೆ ಆ ಸಭೆಯಲ್ಲಿ ಕಾರ್ಖಾನೆಗಳ ಮಾಲೀಕರು ರೈತರ ಬಾಕಿ ಹಣ ಕೊಡಲು ಒಪ್ಪಲಿಲ್ಲ, ಅಷ್ಟೇ ಅಲ್ಲ, ಮಂತ್ರಿ ನಿರಾಣಿ 28 ನೇ ತಾರೀಖು ತನ್ನ ಕಾರ್ಖಾನೆಯನ್ನು ಆರಂಭಿಸಿ ತನ್ನ ಪಕ್ಷದ ಕೆಲ ಹಿಂಬಾಲಕರನ್ನು ಪುಸಲಾಯಿಸಿ ಮಂಟೂರ ಗ್ರಾಮದಿಂದ ನೂರಾರು ಬಾಡಿಗೆ ಬಂಟರ ರಕ್ಷಣೆಯಲ್ಲಿ ಕಬ್ಬು ಒಯ್ಯಲು ಯತ್ನಿಸಿದ. ಇದನ್ನು ವಿರೋಧಿಸಿದ ಮುತ್ತಪ್ಪ ಕೋಮಾರ, ರಮೇಶ ಗಡದನ್ನವರ, ರಾಮನಗೌಡ, ನಾಯಕವಾಡ ಸೇರಿದಂತೆ 22 ಜನರ ಮೇಲೆ ಪೊಲೀ... ಕೊಲೆ ಕೇಸನ್ನು ಹಾಕಿ ಜೈಲಿಗಟ್ಟಿದರು. ಇದರಿಂದ ... ಆಕ್ರೋಶಗೊಂಡ ರೈತರು ಧರಣಿ ಮುಂದುವರೆ... ಸಂಗಪ್ಪ ನಾಗರೆಡ್ಡಿ, ಈರಪ್ಪ ಹಂಚಿನಾಳ, ಶಂಕರ ... ಗೋವಿಂದಪ್ಪ ಮುಂತಾದ ರೈತರನ್ನು ಬಂಧಿಸಿದರು. ಅಲ್ಲದೆ, ಆಗಸ್ಟ್ 31 ನೇ ತಾರೀಖು ಧರಣಿ ನಡೆ... ಟೆಂಟನ್ನು ಪೊಲೀಸರು ಹಾಗು ತಹಶೀಲ್ದಾರ ಸೇರಿ... ಹಾಕಿದರು. ನಗರದಾದ್ಯಂತ 144 ಕಲಂನ ನಿಷೇ... ಜಾರಿ ಮಾಡಿ ರೈತ ಹೋರಾಟವನ್ನು ಹತ್ತಿಕ್ಕುವ ... ಮಾಡಿದರು.

ಪೊಲೀಸರ ಗೂಂಡಾಗಿರಿಯ ಮೂಲಕ ... ಹೋರಾಟದ ಹಕ್ಕನ್ನು ಕಿತ್ತುಕೊಂಡ, ಆಡಳಿತ ವ್ಯ... ವಿರುದ್ಧ ತಿರುಗಿಬಿದ್ದ ರೈತರು ಸಿಪಿಐ ಕಚೇರಿಗೆ ... ಹಾಕಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ... ಜಿಲ್ಲಾಧಿಕಾರಿ ರೈತರನ್ನು ಸಮಾಧಾನಪಡಿಸಿ ನಿಷೇ... ತೆರವುಗೊಳಿಸಿದನಲ್ಲದೇ ಮತ್ತೆ ಟೆಂಟ್ ನಿರ್ಮಿಸಿ ... ರೈತರ ಹೋರಾಟಕ್ಕೆ ಅನುವು ಮಾಡಿ ಕೊಟ್ಟರು.

ಇವತ್ತಿನವರೆಗೂ ರೈತರ ಹೋರಾಟ ಮು... ವರೆದಿದೆಯಾದರೂ ಸಕ್ಕರೆ ಕಾರ್ಖಾನೆಗಳ ಮಾಲೀಕರು ... ಬಾಕಿ ಕೊಡಲು ಮುಂದೆ ಬರುತ್ತಿಲ್ಲ, ಇದು ರೈ... ಮಾತನಾಡುವ ಬಿಜೆಪಿ ಸರ್ಕಾರದ ಅಸಲಿ ಮುಖ.

• ಮಹಾಲಿಂಗಪ್ಪ ಆಲ...

ಲೂಟಿಕೋರ ಮಾಲೀಕರು

ಸಕ್ಕರೆ ಉದ್ಯಮದಲ್ಲಿ ಯಾವ ಕಾರ್ಖಾನೆಗಳೂ ನಷ್ಟ ಅನುಭವಿಸುವುದಿಲ್ಲ, ಏಕೆಂದರೆ ಅಲ್ಲಿ ಉತ್ಪಾದಿಸುವ ಉಪಉತ್ಪನ್ನಗಳಾದ ವಿದ್ಯುತ್, ಮೊಲ್ಯಾಸಿಸ್, ಗೊಬ್ಬರ ಮುಂತಾದವುಗಳಿಂದಲೇ ಕೋಟ್ಯಂತರ ರೂಪಾಯಿ ಲಾಭ ಬರುತ್ತದೆ.

ಈ ಉದ್ಯಮದಲ್ಲಿ ಪ್ರತಿ ಟನ್ ಕಬ್ಬಿಗೆ ರೈತರಿಗೆ 3000 ರೂಪಾಯಿ ಬೆಲೆ ಕೊಟ್ಟರೂ ಕಾರ್ಖಾನೆಗಳಿಗೆ ನಷ್ಟ ಆಗುವುದಿಲ್ಲ. ಆದರೂ ಕಾರ್ಖಾನೆಗಳ ವಂಚಕ ಮಾಲೀಕರು ರೈತರಿಗೆ ಕೊಡಬೇಕಿರುವ ಹಳೇ ಬಾಕಿ ಹಣವನ್ನಾಗಲಿ, ಈಗ ಪೂರೈಕೆಯಾಗಿರುವ ಕಬ್ಬಿಗೆ ಪ್ರತಿ ಟನ್‌ಗೆ 2,200 ರೂಪಾಯಿ ಬೆಲೆಯನ್ನಾದರೂ ಕೊಡಲು ಒಪ್ಪುತ್ತಿಲ್ಲ. ಇದೆಲ್ಲದರ ಪರಿಣಾಮವಾಗಿ ಬೆವರು ಸುರಿಸಿ ಬೆಳೆಬೆಳೆದ ರೈತ ಹತಾಶನಾಗಿ ಬೀದಿಗಿಳಿದಿದ್ದರೆ ಅವನ ಬೆವರನ್ನೇ ಬಂಡವಾಳ ಮಾಡಿಕೊಂಡು ನೂರಾರು ಕೋಟಿ ಗಳಿಸುವ ಲೂಟಿಕೋರ ಸಕ್ಕರೆ ಕಾರ್ಖಾನೆಗಳ ಮಾಲೀಕರು ತಮ್ಮ ಅರಮನೆಗಳಲ್ಲಿ ಹಾಯಾಗಿದ್ದಾರೆ.



ರೈತಕಂಟಕ ರಾಜಕಾರಣಿಗಳು

ಬಾಗಲಕೋಟೆ ಹಾಗೂ ಬೆಳಗಾವಿ ಜಿಲ್ಲೆಗ... ರಾಜಕೀಯಕ್ಕೂ, ಸಕ್ಕರೆ ಕಾರ್ಖಾನೆಗಳಿಗೂ ಗಾಢವ... ನಂಟಿದೆ. ಸಮೀರವಾಡಿಯ ಸೋಮಯ್ಯ ಸ... ಕಾರ್ಖಾನೆಯನ್ನು ಹೊರತುಪಡಿಸಿ ಈ ಭಾಗದ ... ಸಕ್ಕರೆ ಕಾರ್ಖಾನೆಗಳ ಮಾಲೀಕರು ರಾಜಕಾರಣಿಗ... ಆಗಿದ್ದಾರೆ. ಈ ಉದ್ಯಮ ಅವರಿಗೆ ಕೋಟಿ ಕೋಟಿ ಲ... ತಂದಿದೆಯಲ್ಲದೆ ರೈತರ ಮೇಲೆ ರಾಜಕೀಯವಾಗಿ ಹಿ... ಸಾಧಿಸಲು ಅನುಕೂಲ ಮಾಡಿಕೊಟ್ಟಿವೆ.

ಮುಧೋಳದ ನಿರಾಣಿ ಶುಗರ್ಸ್‌ಗೆ ಈ... ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯೇ ಮಾಲಿ... ಈತ ಮಾಜಿ ಕಾಂಗ್ರೆಸ್ ಶಾಸಕ ಎಸ್.ಆರ್. ಪಾಟೀ... ಬೀಳಗಿ ಶುಗರ್ಸ್‌ನಲ್ಲೂ ಪಾಲುದಾರ. ಜೊ... ತೇರದಾಳದ ಶಾಸಕ ಸಿದ್ದು ಸವದಿ ಜೊತೆಗೂ... ಜಮಖಂಡಿ ತಾಲ್ಲೂಕಿನ ಹಿಪ್ಪರಗಿಯಲ್ಲಿ ಸಾಯಿಪ್ರಿ... ಸಕ್ಕರೆ ಕಾರ್ಖಾನೆ ಕಟ್ಟುತ್ತಿದ್ದಾನೆ.

ಇನ್ನು ಮುಧೋಳ ತಾಲ್ಲೂಕಿನ ರನ್ನ ಸ... ಕಾರ್ಖಾನೆಯ ಅಧ್ಯಕ್ಷ ರಾಮಣ್ಣ ತಳೇವಾಡ ಕಾರ್ಖಾನೆ... ಲಾಭದಲ್ಲಿಯೇ ಬಿಜೆಪಿಯ ಮುಖ... ನಾಗಿ ಬೆಳೆಯುತ್ತಿದ್ದಾನೆ. ಜಮಖ... ತಾಲ್ಲೂಕಿನ ಸಿದ್ದಾಪುರ ಗ್ರಾಮದ... ಪ್ರಭುಲಿಂಗೇಶ್ವರ ಶುಗರ್ಸ್ ಮಾಲಿ... ಜಗದೀಶ ಗಂಡಗುಂಟ ಕಾಂಗ್ರೆಸ್... ದಿಂದ ಶಾಸಕನಾಗುವ ಪ್ರಯತ್ನವ... ದಶಕದಿಂದ ಮಾಡುತ್ತಲೇ ಇದ್ದಾನೆ. ... ತಾಲ್ಲೂಕಿನ ಹಿರೇಪಾಡಸಲಗಿ ಹ... ಜಮಖಂಡಿ ಶುಗರ್ಸ್ ಕಟ್ಟಿರುವ ಮಾ... ಕೇಂದ್ರ ಸಚಿವ ಸಿದ್ದು ನ್ಯಾಮಗೌಡ ... ತಾಲ್ಲೂಕಿನ ನಾಗ ಡಿ.ಕೆ. ಗ್ರಾಮದಲ್ಲೊ... ಕಾರ್ಖಾನೆ ಆರಂಭಿಸಿದ್ದಾನೆ.

ಬಾದಾಮಿ ತಾಲ್ಲೂಕಿನಲ್ಲಿ ಚಿವ... ಕಷ್ಟ ಕಟ್ಟಿದ್ದ ಬಾದಾಮಿ ಶುಗರ್ಸ್‌ರೈ... ಒಂಭತ್ತು ಕೋಟಿ ಹಣದ ಸಮೇ... ಮುಳುಗಿ ಹೋಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಮ... ಲಕ್ಷ್ಮಣ ಸವದಿ, ಉಮೇಶ್ ಕತ್ತಿ ಮುಂತಾ... ರಾಜಕಾರಣಿಗಳೂ ಸಕ್ಕರೆ ದಂಧೆಯಲ್ಲಿದ್ದಾರೆ.

ಇಲ್ಲಿ ಒಂದು ಆಶ್ಚರ್ಯವೆಂದರೆ ಈ ಎಲ್ಲಾ ರಾ... ಕಾರಣಿಗಳು ಬೇರೆಬೇರೆ ಪಕ್ಷಗಳಲ್ಲಿದ್ದು ಅಧಿಕಾರ... ಪರಸ್ಪರ ಬಡಿದಾಡುತ್ತಿದ್ದರೂ ರೈತರನ್ನು ಸುಲಿದು ... ಮಾಡಿಕೊಳ್ಳುವ ಸಕ್ಕರೆ ದಂಧೆಯಲ್ಲಿ ಮಾತ್ರ ಎಲ್ಲ... ಒಗ್ಗಟ್ಟಾಗಿ ಪಾಲುದಾರರಾಗಿದ್ದಾರೆ!


ಸ್ವಪ್ರತಿಷ್ಠೆಯ ಪ್ರಪಾತದಲ್ಲಿ ಹಂಪಿ ವಿವಿ

• ಗಿರೀಶ್ ತಾಳಿಕಟ್ಟೆ


ಹಂಪಿ ವಿವಿ ಕ್ಯಾಂಪಸ್-ವಿದ್ಯಾರಣ್ಯ

ಪ್ರಜ್ಞಾವಂತ ಹಾಗೂ ಪ್ರಬುದ್ಧ ಮನಸುಗಳು ಗುಂಪುಗಾರಿಕೆಯ ನೆಪದಲ್ಲಿ ...ಮ್ಯದ ಗದ್ದುಗೆ ಏರಿದರೆ ಅಕಾಡೆಮಿಕ್ ವಾತಾವರಣ ಅದೆಷ್ಟು ನಯವಾಗಿ ...ಯಾಗಬಹುದೆಂಬುದಕ್ಕೆ ಹಂಪಿ ಕನ್ನಡ ವಿವಿ ಸಾಕ್ಷಿಯಾಗುವ ಲಕ್ಷಣಗಳು ...ಸುತ್ತಿವೆ. ಮೊನ್ನೆ ಇದೇ ಕನ್ನಡ ವಿವಿಯ ಬೋಧಕ ವರ್ಗವೊಂದು ಕನ್ನಡದ ...ಜ್ಞಾನಪೀಠಿಯಾದ ಕಂಬಾರರನ್ನು ಅಭಿನಂದಿಸಿ ಹೊರತರಬೇಕೆಂದಿದ್ದ ...ದ ಸಲುವಾಗಿ ಚರ್ಚಿಸಲು ಸೇರಿದ್ದ ತೀರಾ ಖಾಸಗಿ ಸಭೆಯಲ್ಲೂ ಪ್ರತಿಷ್ಠೆಗಳು ...ಕೂಲ ಕೆಲಸ ಮಾಡಿದ ಪರಿಣಾಮವಾಗಿ ...ಸಚಿವ ಮಂಜುನಾಥ ಬೇವಿನಕಟ್ಟಿ ಹಾಗೂ ...ಧಿ ವರ್ಗಗಳ ನಡುವೆ ಶುರುವಾದ ರಾದ್ಧಾಂತ ...ಅವಾಹುತವನ್ನೇ ಸೃಷ್ಟಿಸುವ ಹಂತ ತಲುಪಿದೆ. ...ಕನ್ನಡಕ್ಕೆ ಕಂಬಾರರ ರೂಪದಲ್ಲಿ ಜ್ಞಾನಪೀಠ ...ದ್ದು ಎಲ್ಲರಿಗೂ ಹೆಮ್ಮೆಯ ವಿಷಯವಾದರೆ, ... ವಿವಿ ಪಾಲಿಗದು ತುಸು ಜಾಸ್ತಿಯೇ ಆಗುತ್ತ. ...ಎಂದರೆ ಚಂದ್ರಶೇಖರ ಕಂಬಾರರು ಹಂಪಿ ...ವಿದ್ಯಾಲಯದ ಪ್ರಪ್ರಥಮ ಕುಲಪತಿಗಳಾಗಿದ್ದವರು. ...ತ್ತಿಗೂ ಕ್ಯಾಂಪಸ್‌ನಲ್ಲಿ ಬೋಧನಾ ಇಲ್ಲವೇ ...ಧಕೇತರ ವೃತ್ತಿಯನ್ನು ಮುಂದುವರೆಸಿರುವ ಬಹುಪಾಲು ...ದಿಗಳು ಕಂಬಾರರ ಜೊತೆಗೆ ವಿವಿಗೆ ದುಡಿದವರೇ ಆಗಿದ್ದು ...ನ ಅವರೆಲ್ಲರ ಮೆಲುಕುಗಳನ್ನೂ, ಕಂಬಾರರ ವ್ಯಕ್ತಿತ್ವದ ಕುರಿತ ...ಕೆಗಳನ್ನೂ ದಾಖಲಿಸಿ ಒಂದು ಗ್ರಂಥವನ್ನಾಗಿಸುವ ಆಲೋಚನೆಗೆ ...ರ ನೀಡುವ ಉದ್ದೇಶದಿಂದ ಒಂದಷ್ಟು ಪ್ರೊಫೆಸರ್‌ಗಳು ...ಯಾಗಿ ಸಭೆ ಸೇರಿದ್ದರು. ಸಹಜವಾಗೇ ಅದರಲ್ಲಿ ವಿವಿಯ ...ಸ್ಟ್ರಾರ್ ಆದ ಬೇವಿನಕಟ್ಟಿಯವರ ಉಪಸ್ಥಿತಿಯೂ ಇತ್ತು. ವಿಷಯ ಪ್ರಸ್ತಾವನೆ ...ದ ಕೂಡಲೇ ತರಹೇವಾರಿ ಅಭಿಪ್ರಾಯಗಳು ಜಮಾವಣೆ ಯಾಗುತ್ತಿದ್ದಂತೆ ...ಸಚಿವ ಬೇವಿನಕಟ್ಟಿ ಆ ಅಭಿನಂದನಾ ಗ್ರಂಥವನ್ನು ವಿಶ್ವವಿದ್ಯಾಲಯದ ...ಂಗವೇ ಪ್ರಕಟಿಸುತ್ತೆ ಎಂಬಂತಹ ಅಸಂಬದ್ಧ ಹೇಳಿಕೆಯನ್ನು ತೇಲಿಬಿಟ್ಟಾಗಲೆ ...ತವಾದ ಗೊಂದಲ ಭುಗಿಲೆದ್ದಿತ್ತು.


ಬೋರಲಿಂಗಯ್ಯ


ಬೇವಿನಕಟ್ಟಿ

...ವಿಶ್ವವಿದ್ಯಾಲಯ ಒಂದು ಸಾರ್ವಜನಿಕ ಸಂಸ್ಥೆ. ಅದಕ್ಕಿಂತಲೂ ಹೆಚ್ಚಾಗಿ ...ಯನ ಕಮ್ ಸಂಶೋಧನಾ ಕೇಂದ್ರ. ಹಾಗಿರುವಾಗ ಅದು ಕೇವಲ ಪ್ರಕಾಶನ ...ಯೊಂದರಂತೆ ಅಭಿನಂದನಾ ಗ್ರಂಥವನ್ನು ಪ್ರಕಟಿಸುವುದು ಸಮಂಜಸ ...ವಲಿಕ್ಕಿಲ್ಲ ಎಂಬುದು ಅಲ್ಲಿದ್ದ ಬಹುತೇಕರಿಗೆ ಅರಿವಿತ್ತಾದ್ದರಿಂದ, ಬೇವಿನಕಟ್ಟಿ ...ತು ಬಂದಷ್ಟೇ ವೇಗವಾಗಿ ಪ್ರತಿಮಾತುಗಳೂ ಕೇಳಿಬಂದಿದ್ದವು. ಒಂದೊಮ್ಮೆ ...ಹ ಗೊಂದಲದ ಕೆಲಸಕ್ಕೆ ವಿವಿ ಕೈ ಹಾಕಿದ್ದೇ ಆದಲ್ಲಿ ಮುಂದೆ ಯಾವುದೇ ...ಗೆ ಪಾತ್ರರಾಗುವ ಅಧಿಕಾರ ಸ್ಥಾನದಲ್ಲಿರುವ ಪ್ರತಿಯೊಬ್ಬರಿಗೂ ಅಭಿನಂದನಾ ...ಹೊರತರಬೇಕಾದ ಸಂದಿಗ್ಧತೆಯೂ ಸೃಷ್ಟಿಯಾಗಲಿದ್ದು ಇದು ಒಪ್ಪತಕ್ಕದ್ದಲ್ಲ ...ಬದಾಗಿ ಮಾಜಿ ಕುಲಸಚಿವ ಡಾ. ಬೋರಲಿಂಗಯ್ಯ ಮುಂತಾದವರು ಕುಲಸಚಿವರಿಗೆ ತಿಳಿ ಹೇಳುವ ಪ್ರಯತ್ನವನ್ನು ಮಾಡಿದರಾದರೂ ಅಷ್ಟರಲ್ಲಾಗಲೇ ಪರಿಸ್ಥಿತಿ ಮನಸ್ತಾಪದ ಗಡಿದಾಟಿಯಾಗಿತ್ತು. ಈ ಮೊದಲಿನಿಂದಲೂ ಬೇವಿನಕಟ್ಟಿಯ ಪ್ರಚಾರಪ್ರಿಯತೆ ಹಾಗೂ ಗುಂಪುಗಾರಿಕೆಯಿಂದ ಬೇಸತ್ತಿದ್ದ ಹಲವಾರು ಪ್ರೊಫೆಸರ್‌ಗಳು ಮತ್ತೊಂದು ದಿನ ಸಭೆ ನಡೆಸಿ ಒಮ್ಮತದ ನಿರ್ಣಯ ಕೈಗೊಂಡರಾಯಿತೆಂದು ಅದನ್ನಲ್ಲಿಗೇ ಮುಗಿಸಿ ನಡೆದಿದ್ದರು.


ಕುಲಪತಿ ಮುರಿಗೆಪ್ಪ

ಕುಲಸಚಿವ ಬೇವಿನಕಟ್ಟಿ ಇದನ್ನು ತನ್ನ ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಂಡಿದ್ದಿರಬೇಕು. ಅರ್ಧಂಬರ್ಧ ಸಭೆ ನಡೆದ ಮರುದಿನವೇ ವಿವಿಯ ಕುಲಪತಿಯಾದ ಡಾ. ಎ. ಮುರಿಗೆಪ್ಪನವರ ನೇತೃತ್ವದಲ್ಲಿ ವಿಭಾಗಗಳ ಮುಖ್ಯಸ್ಥರ ಹಾಗೂ ಅಧಿಕಾರಿಗಳ ತುರಾತುರಿ ಸಭೆಯನ್ನು ಆಯೋಜಿಸಲಾಯಿತು. ಹಿಂದಿನ ದಿನ ಒಪ್ಪಿಗೆ ಸಿಗದ ತಮ್ಮ ಮಾತಿಗೆ ಬಲವಂತವಾಗಿ ಅನುಮೋದನೆ ಪಡೆದುಕೊಳ್ಳುವ ಉದ್ದೇಶದಿಂದ ರಿಜಿಸ್ಟ್ರಾರ್ ಬೇವಿನಕಟ್ಟಿ ಈ ಸಭೆ ಕರೆದಿರುವುದು ಎಂಬ ಎಲ್ಲರ ಅನುಮಾನದಂತೆಯೇ ಸಭೆಯಲ್ಲಿ ಕಂಬಾರರ ಅಭಿನಂದನಾ ಗ್ರಂಥವನ್ನು ವಿವಿಯೇ ಪ್ರಕಟಿಸುವ ವಿಷಯವನ್ನು ಪ್ರಸ್ತಾಪಿಸಿದ ಕೂಡಲೇ ಮತ್ತೆ ಪ್ರತಿರೋಧ ವ್ಯಕ್ತವಾಯಿತು. ಈ ಬಾರಿ ರಿಜಿಸ್ಟ್ರಾರ್ ಮಾತನ್ನು ವಿರೋಧಿಸುವ ಗುಂಪು ಒಂದು ಪರ್ಯಾಯ ಮಾರ್ಗವನ್ನು ಮುಂದಿರಿಸಿ ಡಾ. ಕಂಬಾರರನ್ನು ಕರೆಸಿ ಸೂಕ್ತ ರೀತಿಯಲ್ಲಿ ಗೌರವಿಸಬೇಕಾದ್ದು ವಿವಿಯ ಕರ್ತವ್ಯ ಅದರ ಜೊತೆಗೆ ಅವರ ಕುರಿತಾದ ಒಂದು ವಿಚಾರ ಸಂಕೀರ್ಣವನ್ನೂ ಆಯೋಜಿಸಿ ಅದರಲ್ಲಿ ನಡೆಯುವ ಕಲಾಪಗಳನ್ನೇ ಒಂದು ಗ್ರಂಥವಾಗಿ ತನ್ನಿ ಆಗ ಅದಕ್ಕೊಂದು ತೂಕವಿರುತ್ತದೆ. ಇನ್ನು ಅಭಿನಂದನಾ ಗ್ರಂಥ ಖಾಸಗಿಯಾದದ್ದು. ಅದನ್ನು ಕಂಬಾರರ ಒಡನಾಡಿಗಳ ಮೆಲುಕಿನ ಹೆಸರಿನಲ್ಲಿ ಖಾಸಗಿಯಾಗೇ ಬಿಟ್ಟರೆ ಒಳಿತು ಎಂಬಿತ್ಯಾದಿ ಪರಿಪಕ್ವ ಸಲಹೆಯನ್ನೇ ನೀಡಿದ್ದರು. ಸಮಸ್ಯೆಯನ್ನು ತಿಳಿಗೊಳಿಸುವ ಇರಾದೆ ಇದ್ದಿದ್ದರೆ ಅದು ಬಹಳ ಸಮಂಜಸವಾದ ಸಲಹೆಯೇ ಆಗಿತ್ತು. ಆದರೆ ಮೇಲುಗೈ ಸಾಧಿಸುವುದೇ ಅಲ್ಲಿನ ಹುನ್ನಾರವಾಗಿತ್ತಾದ್ದರಿಂದ ಒಮ್ಮತಕ್ಕೆ ಬರುವುದು ಸಾಧ್ಯವೇ ಆಗಲಿಲ್ಲ. ಇದರ ನಡುವೆ ವಿವಿಯ ಕುಲಪತಿಯೂ ಪರ್ಯಾಯ ಮಾರ್ಗವನ್ನು ಸುತಾರಾಂ ಒಪ್ಪದೆ ರಿಜಿಸ್ಟ್ರಾರ್ ಅನಿಸಿಕೆಯನ್ನೇ ನಿರ್ಣಯವನ್ನಾಗಿಸಲು ಮುಂದಾಗಿದ್ದುದು ಸಭೆಯಲ್ಲಿದ್ದ ಬಹುತೇಕರಲ್ಲಿ ಅಚ್ಚರಿ ಮತ್ತು ಅನುಮಾನವನ್ನು ಮೂಡಿಸಿತ್ತು. ಅವತ್ತೂ ಗೊಂದಲದಲ್ಲೇ ಸಭೆ ಕೊನೆಯಾಗಿತ್ತಾದರು ಮಾರನೇ ದಿನ ಕುಲ ಸಚಿವರಿಂದ ಸಿಬ್ಬಂದಿಗಳಿಗೆ ಪತ್ರ ತಲುಪಿದಾಗಲೇ ಸಭೆಯಲ್ಲಿ ಏಕಪಕ್ಷೀಯವಾಗಿ ನಿರ್ಣಯ ಕೈಗೊಂಡಿದ್ದರ ಸುಳಿವು ಸಿಕ್ಕದ್ದು.


ಬೋಧಕ ವರ್ಗದೊಡನೆ ಮಂಜುನಾಥ ಬೇವಿನಕಟ್ಟಿ

ಕುಲಪತಿಗಳ ಸಂಪಾದಕತ್ವದಲ್ಲಿ ಡಾ.ಕಂಬಾರರನ್ನು ಕುರಿತ ಗ್ರಂಥವೊಂದು ಬರುತ್ತಿದ್ದು, ಅದಕ್ಕೆ ವಿವಿಯ ನೌಕರರೆಲ್ಲರೂ ತಮ್ಮ ವೈಯಕ್ತಿಕ ಅನುಭವಗಳನ್ನು ಹಾಗೂ ಅವರ ಕೃತಿಗಳ ವಿಮರ್ಶೆಯ ಲೇಖನಗಳನ್ನು ನೀಡಬೇಕೆಂಬ ಒಕ್ಕಣೆಯಿದ್ದ ರಿಜಿಸ್ಟ್ರಾರ್‌ರ ಪತ್ರ ವಿವಿಯಲ್ಲಿ ಬಹಿರಂಗ ಸಮರಕ್ಕೆ ವಿದ್ಯುಕ್ತ ಚಾಲನೆ ನೀಡಿದೆ. ಇಂತಹ ಆತುರ ನಡೆಯನ್ನು ಪ್ರಶ್ನಿಸಿ ಡಾ. ಹಿ.ಚಿ ಬೋರಲಿಂಗಯ್ಯ ಕುಲಪತಿ ಎ.ಮುರಿಗೆಪ್ಪನವರಿಗೆ ಬರೆದ ಮೂರು ಪುಟಗಳ ಪತ್ರ ವಿವಿಯಲ್ಲಿ ಎಲ್ಲವೂ ಸರಿಯಾಗಿಲ್ಲ ಎಂಬುದನ್ನು ಬಿಚ್ಚಿಟ್ಟಿದೆ.

'ಮಾತೆಂಬುದು ಜ್ಯೋತಿರ್ಲಿಂಗ' ಎಂಬ ಧ್ಯೇಯ ವಾಕ್ಯವಿರುವ ವಿವಿಯಲ್ಲಿ ಗುಂಪುಗಾರಿಕೆ ಮತ್ತು ವೈಯಕ್ತಿಕ ದ್ವೇಷ ಅಸಹ್ಯ ಹುಟ್ಟಿಸುವಷ್ಟು ವಿಪರೀತವಾಗಿವೆ. ಕುಲಸಚಿವ ಪ್ರೊ. ಮಂಜುನಾಥ ಬೇವಿನಕಟ್ಟಿಯನ್ನು ಬೆಂಬಲಿಸುವ ಗುಂಪೊಂದು ಕಡೆಯಾದರೆ ಅವರನ್ನು ವಿರೋಧಿಸುವ ವರ್ಗ ಮತ್ತೊಂದು ಕಡೆ. ಈ ಗುಂಪುಗಾರಿಕೆಯ ರಂಪಾಟ ಅದ್ಯಾವ ಮಟ್ಟಕ್ಕೆ ಹೋಗಿ ತಲುಪಿದೆಯೆಂದರೆ ವಿವಿಯ ಅಭಿವೃದ್ಧಿ ಕುರಿತು ಚರ್ಚಿಸಲು ಸೇರುವ ಪ್ರತಿ ಸಿಂಡಿಕೇಟ್ ಸಭೆಗಳೂ ಗದ್ದಲದಲ್ಲೇ ಮುಗಿಯುತ್ತಿದೆ. ಎಷ್ಟೋ ಬಾರಿ ಅಂತಹ ಸಭೆಗೆ ಆಗಮಿಸಿದ ಅತಿಥಿಗಳೇ ಕಚ್ಚಾಟವನ್ನು ನಿಲ್ಲಿಸಿ ಸಭೆ ನಡೆಯುವಂತೆ ಮಾಡಿದ ನಗೆಪಾಟಲಿನ ನಿದರ್ಶನಗಳೂ ಉಂಟು. ಆಡಳಿತ ಮಂಡಳಿ ಕರ್ತವ್ಯ ಭ್ರಷ್ಟವಾಗಿ ಕುಳಿತಿರುವುದು ಮತ್ತು ಜವಾಬ್ದಾರಿಯುತ ಸ್ಥಾನದಲ್ಲಿರುವವರು ಗುಂಪು ಕಟ್ಟುವ ಕೀಳು ರಾಜಕಾರಣಕ್ಕಿಳಿದಿರುವುದು ಇಷ್ಟಕ್ಕೆಲ್ಲ ಕಾರಣವೆಂಬ ಸತ್ಯ ನಗ್ನವಾಗಿ ನಿಂತಿದ್ದರೂ ಅದನ್ನು ಬಗೆಹರಿಸುವ ಕೆಲಸದಿಂದ ಎಲ್ಲರೂ ವಿಮುಖರಾಗಿರುವುದು ಬಲು ದೊಡ್ಡ ವಿಪರ್ಯಾಸ.

ವಿಧಾನ ಸೌಧಕ್ಕೆ ಸೀಮಿತವಾಗಿದ್ದ ರೆಸಾರ್ಟ್ ಸಂಸ್ಕೃತಿಯೂ ವಿದ್ಯಾರಣ್ಯ ಕ್ಯಾಂಪಸ್‌ನಲ್ಲಿ ಶುರುವಾಗಿದೆ. ಪಾರ್ಟಿಯ ಹೆಸರಲ್ಲಿ ಅನಪೇಕ್ಷಿತ ಊಟೋಪಚಾರದ ರಾಜಕೀಯಗಳು ಆಗಿಂದಾಗ್ಗೆ ನಡೆಯುತ್ತಲೇ ಇರುತ್ತವೆ. ತೀರಾ ಇತ್ತೀಚೆಗಷ್ಟೇ ಅಂತಹ ಪಾರ್ಟಿಯೊಂದು ವಿವಿಯ ಪಕ್ಕದ ಆವರಣದಲ್ಲೇ ಕಚೇರಿ ವೇಳೆಯಲ್ಲೇ ನಡೆದದ್ದು, ಅದರ ಆಯೋಜನೆಗೆ ಮತ್ತು ಯಶಸ್ವಿ ಅನುಷ್ಠಾನಕ್ಕೆ ರಿಜಿಸ್ಟ್ರಾರ್ ಬೇವಿನಕಟ್ಟಿಯ ಸರ್ಕಾರಿ ವಾಹನ ಮೇಲಿಂದ ಮೇಲೆ ಹರಿದಾಡಿದ್ದು, ಖುದ್ದು ರಿಜಿಸ್ಟ್ರಾರ್ ಅದರಲ್ಲಿ ಅಟೆಂಡೆನ್ಸ್ ಹಾಕಿ ಬಂದದ್ದು, ಕರ್ತವ್ಯದ ನಡುವೆಯೇ ಸುಮಾರಷ್ಟು ವಿವಿ ನೌಕರರು ಆ ಬೇನಾಮಿ ಔತಣಕೂಟದಲ್ಲಿ ಉಂಡೆದ್ದು ಬಂದದ್ದು ಇಂತಹ ಹತ್ತಾರು ವಿಚಾರಗಳು ಇನ್ನೂ ಯಾಕೆ? ಯಾರು? ಎತ್ತ? ಎಂಬ ಪ್ರಶ್ನೆಗಳಾಗೇ ಉಳಿದಿವೆ. ಇದರ ಬೆನ್ನಿಗೇ ವಿವಿಯಲ್ಲಿ ಅವ್ಯವಹಾರ ಕೂಡ ಅವ್ಯಾಹತವಾಗಿ ನಡೆಯುತ್ತಿರುವ ಬಗ್ಗೆಯೂ ಗುಸುಗುಸು ಕೇಳಿಬರುತ್ತಿದ್ದು ವಿ.ವಿ ಚಿಂತಾಜನಕ ಸ್ಥಿತಿಯಲ್ಲಿರುವುದನ್ನು ಖಾತ್ರಿಪಡಿಸುತ್ತವೆ.

ಜ್ಞಾನ ದೇಗುಲದಲ್ಲಿನ ಇಂತಹ ಕೀಳು ವಾತಾವರಣವನ್ನು ಸುಲಭಕ್ಕೆ ನಿರ್ಲಕ್ಷಿಸಲಾಗದು. ಇದು ಅಪಾಯಕಾರಿಯಾಗಿ ಪರಿವರ್ತಿತವಾಗುವು ದರಲ್ಲಿ ಯಾವ ಅನುಮಾನವೂ ಇಲ್ಲ. ಇದ ಕ್ಕೊಂದು ತಾಜಾ ಉದಾಹರಣೆಯೆಂದರೆ ಕಳೆದ ಎಂಟು ವರ್ಷಗಳಿಂದ ಹಂಪಿ ವಿ.ವಿ.ಯು ಯು.ಜಿ.ಸಿ ಯ ನ್ಯಾಶನಲ್ ಅಸೆಸ್‌ಮೆಂಟ್ ಅಂಡ್ ಅಕ್ರಿಡಿಟೇಷನ್ ಕೌನ್ಸಿಲ್ (ನ್ಯಾಕ್)ನ ಪರಿವೀಕ್ಷಣೆಗೇ ಒಳಗಾಗಿಲ್ಲ. ಈ ಸಮಿತಿಯು ವಿ.ವಿ.ಗಳ ಸರ್ವಾಂಗೀಣ ಅಭಿವೃದ್ಧಿಯ ಸರ್ವೆ ನಡೆಸಿ ಯು.ಜಿ.ಸಿಗೆ ವರದಿ ಒಪ್ಪಿಸುತ್ತದೆ, ಅದರ ವರದಿಯನ್ನು ಪರಿಗಣಿಸಿಯೇ ಅಗತ್ಯ ಅನುದಾನವನ್ನು ಮಂಜೂರು ಮಾಡಲಾಗುತ್ತೆ. ಇದು ಆಯಾ ವಿ.ವಿ.ಗಳ ಐಚ್ಛಿಕ ಅಪೇಕ್ಷೆಯ ಮೇರೆಗೆ ಭೇಟಿ ನೀಡಿ ಪರಿಶೀಲಿಸುತ್ತದಾದರೂ ಪ್ರತಿ ಐದು ವರ್ಷಕ್ಕೊಮ್ಮೆ ಸಮಿತಿಯನ್ನು ಆಹ್ವಾನಿಸುವುದು ವಿ.ವಿ.ಗಳ ದೃಷ್ಟಿಯಿಂದ ತುಂಬಾ ಒಳ್ಳೆಯದು. ಆದರೆ ಕಿತ್ತಾಟಗಳಿಗೆ ತುತ್ತಾಗಿರುವ ಕನ್ನಡ ವಿ.ವಿ ತನ್ನ ನಿಯಮಿತ ಐದು ವರ್ಷದ ಅವಧಿಯನ್ನು ಪೂರೈಸಿ ಹೆಚ್ಚುವರಿ ಮೂರು ವರ್ಷಗಳನ್ನು ಗತಿಸಿ ಹಾಕಿದರೂ ನ್ಯಾಕ್ ಕಮಿಟಿಯನ್ನು ಆಹ್ವಾನಿಸಲು ಮುಂದಾಗಿಲ್ಲ. ಸಮಿತಿಯನ್ನು ಆಮಂತ್ರಿಸಲು ಒತ್ತಡ ಹೇರಲಾಗುತ್ತಿದೆಯಾದರೂ ಕುಲಪತಿಗಳು ಕೆಲವರ ಅಸಹಕಾರದ ನೆಪವೊಡ್ಡುತ್ತಲೇ ವಿಳಂಭ ಮಾಡುತ್ತಿದ್ದಾರೆಂದು ಬೋರಲಿಂಗಯ್ಯ ಬೆಂಬಲಿತ ವರ್ಗ ನೇರವಾಗಿ ಆಪಾದನೆಗಿಳಿದಿದೆ.

ಒಟ್ಟಿನಲ್ಲಿ ಜ್ಞಾನದ ಬೆಳೆ ಬಿತ್ತಬೇಕಾದ ವಿವಿಯ ಆಡಳಿತ ಮತ್ತು ಬೋಧಕ ವರ್ಗ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಮರೆತು ಗುಂಪುಗಾರಿಕೆಯಂತಹ ಕ್ಷುಲ್ಲಕ ವಿಕೃತಿಯಲ್ಲಿ ಕಳೆದುಹೋಗಿರುವುದು ಸಲ್ಲದ ಸಂಗತಿ. ವಿವಿಯ ಹಿತದೃಷ್ಟಿಯಿಂದ ಇದನ್ನು ಈಗಲೇ ತಿಳಿಗೊಳಿಸಿಕೊಳ್ಳುವ ಕೆಲಸಕ್ಕೆ ಆಡಳಿತ ವ್ಯವಸ್ಥೆ ಮುಂದಾಗದಿದ್ದಲ್ಲಿ ಕನ್ನಡ ವಿವಿಗೆ ಆತಂಕಗಳು ತಪ್ಪಿದ್ದಲ್ಲ.

ಗರ್ಭಗುತ್ತಿಗೆಯ ತಾಯಂದಿರು

• ಡಾ. ಕೆ. ಷರೀಫಾ



...ಸಿಗುತ್ತವೆ ಇಲ್ಲಿ ಪುಣ್ಯಭೂಮಿ ಭಾರತದಲ್ಲಿ
...ತಾಯಂದಿರ ಗರ್ಭಗಳು ಬಾಡಿಗೆಗೆ
...ತಾಯ್ತನದ ಬಯಕೆಗಳ ಅದುಮಿಟ್ಟು
...ದುಡ್ಡು ಕೊಟ್ಟವರಿಗೆ ಮಗು ಹೆತ್ತು ಕೊಡುತ್ತಾರೆ
...ಇಲ್ಲಿ ಬಾಡಿಗೆ ತಾಯಂದಿರು.

...ಬಸಿರಲ್ಲಿ ಮೂಡಿದ ಮಗುವಿನ
...ಒದ್ದು ಮೈ ಬದಲಿಸುವ ಚಲನೆ
...ತಾಯ್ತನದ ಖುಷಿಯ ಘಳಿಗೆಯಲ್ಲಿ
...ಕಲ್ಲಾಗಿ ಕನಸಿಗೆ ನಿಷೇಧ ಹೇರುತ್ತಾರೆ
...ಇಲ್ಲಿ ಬಾಡಿಗೆ ತಾಯಂದಿರು.

...ಮಗು ಕನಲುತ್ತದೆ, ಮಗ್ಗಲು ಬದಲಿಸುತ್ತದೆ
...ಮುಲುಕುತ್ತದೆ, ಹೊಟ್ಟೆಗೆ ಒದೆಯುತ್ತದೆ,
...ಮಮತೆಯ ಕೈ ಸವರಬೇಕೆಂದರೆ
...ಅಲ್ಲಿ ಅಮ್ಮ ಸತ್ತು ಹೋಗಿದ್ದಾಳೆ
...ಗಂಡನ ಸಾಲ ತೀರಿಸಲು
...ಅವಳು ಬಾಡಿಗೆ ಗರ್ಭವಾಗಿದ್ದಾಳೆ.

ಹೆತ್ತ ಮಗುವಿಗೆ ಅವಡುಗಚ್ಚಿ ಕೊಡುತ್ತಾಳೆ,
ಎದೆಯಲ್ಲಿ ಉಕ್ಕಿ ಬರುವ ಹಾಲಿನ ತೊರೆಗೆ
ಇಂಗಿಸಿ, ಮನಸು ಕಲ್ಲಾಗಿಸಿ ಆವಿಯಾಗಿಸುತ್ತಾಳೆ
ಹೆತ್ತು ಕೊಟ್ಟ ಮಕ್ಕಳಿಗೆ ನೋಡಬೇಕೆನಿಸುವುದಿಲ್ಲ
ಹೊಟ್ಟೆ ಹೊರೆಯಲು ಸಂತೆಯಲ್ಲಿ ಗರ್ಭವಿಟ್ಟಿದ್ದಾಳೆ.

ಹೊಕ್ಕಳ ಬಳ್ಳಿ ಸಂಬಂಧ ಕಡಿದುಕೊಳ್ಳುವ
ಅವಳದೆಂತಹ ದುರ್ದೈವ ನೋಡು
ಹೆತ್ತ ಮಗುವಿಗೆ ಎತ್ತಿ ಮುದ್ದಿಸಲಾರಳು
ತನ್ನ ಅನಿವಾರ್ಯ ಬದುಕಿಗೆ ಎರವಾಗುವಳು.
ಮಡಿಲು ನೀಡುತ್ತಾಳೆ. ಮಕ್ಕಳಿಲ್ಲದವರಿಗೆ.
ಜಾಗತೀಕರಣದ ಹೊಸ ಉದ್ಯಮದಲ್ಲಿ.....

ಪ್ರಭುವೆ! ಕಣ್ಣಲ್ಲಿ ಕನಸುಗಳ ಕೊಡಬೇಡ
ರೆಪ್ಪೆ ಗಟ್ಟಿಯಾಗಿ ಕಣ್ಣು ಮುಚ್ಚಿಕೊಳ್ಳುತ್ತಾಳೆ
ತೇಲಿ ಬರುವ ಕನಸುಗಳಿಗೆ ನಿಷೇಧ ಹೇರುತ್ತಾಳೆ
ಬಸಿರೋದ್ಯಮದಲ್ಲಿ ಗರ್ಭ ಮಾರಾಟಕ್ಕಿಟ್ಟಿದ್ದಾಳೆ
ಇಲ್ಲಿ ಬಾಡಿಗೆ ತಾಯಿಯಾಗಿದ್ದಾಳೆ...

ಹೆಣ್ಣು ದೇವತೆಯೆಂದು ಪೂಜಿಸುತ್ತೀರಿ ತಾನೆ?
ಮತ್ತೇಕೆ ಕಂಪನಿಗಳಿಗೆ ರತ್ನಗಂಬಳಿ ಹಾಸಿದಿರಿ
ನಮ್ಮವರ ಗೋಣು ನೇಣಿಗೇಕೆ ನೀಡಿದಿರಿ?
ಅವಳನ್ನೇಕೆ ಅನಿವಾರ್ಯದ ಬದುಕಿಗೆ ದೂಡಿದಿರಿ
ಘನತೆಯ ಬದುಕು ಬೀದಿಪಾಲು ಮಾಡಿದಿರಿ?
ಹೆಣ್ತನದ ಘನತೆ ಮಾರುಕಟ್ಟೆಯ ಸರಕಾಗಿಸಿದಿರಿ.

ಅಡಿಗಾಂಧತ್ವ

• ಎಂ.ಡಿ.ಒಕ್ಕುಂದ

'ಬಲಪಂಥೀಯ ಕೋಮುವಾದಿ ನೆಲೆ ಹಾಗೂ ಅಡಿಗರ ಮತ್ತೆ ಮೊಳಗಲಿ ಇಲ್ಲಿ ಪಾಂಚಜನ್ಯ' ಎಂಬ ನನ್ನ ಲೇಖನವನ್ನು 'ಅಡಿಗರ ಕೋಮುವಾದಿ ಕವನ' ಎಂಬ ತಲೆಬರಹದಿಂದ ಪ್ರಕಟಿಸಿ ಚರ್ಚೆಗೆ ಅವಕಾಶವನ್ನು ಕಲ್ಪಿಸಿದ ಗೌರಿ ಲಂಕೇಶ್ ಅವರಿಗೆ ನಮನಗಳು. 'ಅಡಿಗ-ಪ್ರಜ್ಞೆ'ಯು ಪುನರುತ್ಥಾನಗೊಳ್ಳುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಈ ಚರ್ಚೆಯು ಅಡಿಗರ ಕಾವ್ಯಕ್ಕೆ ಮಾತ್ರ ಸೀಮಿತಗೊಳ್ಳದೇ ಕನ್ನಡ ಸಾಹಿತ್ಯ, ಸಾಹಿತ್ಯ ವಿಮರ್ಶೆ ಹಾಗೂ ಕೋಮುವಾದ ಮೂಲಭೂತವಾದಗಳ ಅಂತರ್‌ಸಂಬಂಧದತ್ತ ವ್ಯಾಪಿಸಿ ಹೊಸ ಒಳನೋಟಗಳನ್ನು ಹುಟ್ಟಿಸಲಿ ಹಾಗೂ ಹೊಸತಲೆಮಾರು ಈ ಕುರಿತಾಗಿ ನೈತಿಕ ಎಚ್ಚರವನ್ನು ಪಡೆಯಲಿ ಎನ್ನುವುದು ನನ್ನ ಪ್ರಾಥಮಿಕ ಕಾಳಜಿ. ನಿರೀಕ್ಷೆಯಂತೆ ನಾನು ತುಂಬ ಗೌರವಿಸುವ ಹಿರಿಯ ಚಿಂತಕರಾದ ಜಿ.ರಾಜಶೇಖರ ಅವರು ಪ್ರತಿಕ್ರಿಯೆ ನೀಡಿದ್ದಾರೆ. ಕೋಮುವಾದ, ಅದರ ಸ್ವರೂಪ, ತಾತ್ವಿಕ ಪಲ್ಲಟಗಳು, ಅದರ ಹಿಂಸೆಯ ಸೂಕ್ಷ್ಮಾತಿಸೂಕ್ಷ್ಮ ಆಯಾಮಗಳನ್ನು ಕುರಿತು ಅವರು ಕನ್ನಡದಲ್ಲಿ ಮಹತ್ವದ ರಾಜಕೀಯ ಚಿಂತನೆಗಳನ್ನು ರೂಪಿಸಿದ್ದಾರೆ. ನನ್ನ ಸಂಶೋಧನಾ ಅಧ್ಯಯನಕ್ಕೆ ಅವರ ಚಿಂತನೆಗಳಿಂದ ಪ್ರೇರಣೆ ಪಡೆದಿರುವುದನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತೇನೆ.

ರಾಜಶೇಖರ ಅವರ ರಾಜಕೀಯ ಮೀಮಾಂಸೆಯ ಬಗ್ಗೆ ನನ್ನ ತಕರಾರು ಇಲ್ಲ. ಆದರೆ ಅದರೊಂದಿಗೆ ಕಲಾಮೀಮಾಂಸೆಯ ಅಂತರ್ ಸಂಬಂಧದಲ್ಲಿ ಅವರು ತಾಳುವ ನಿಲುವುಗಳ ಬಗ್ಗೆ ಭಿನ್ನಾಭಿಪ್ರಾಯವಿದೆ. ಕೆಲವೊಮ್ಮೆ ಅವು ಅವರ ರಾಜಕೀಯ ಚಿಂತನೆಗಳ ಬಗ್ಗೆ ಅನುಮಾನ ಮೂಡಿಸುವಷ್ಟು ಪ್ರಬಲವಾಗಿರುವುದಕ್ಕೆ ಅವರ ಈ ಪ್ರತಿಕ್ರಿಯೆಯೂ ಒಂದು ಸಾಕ್ಷಿ. ಜಿ.ರಾಜಶೇಖರ ಅವರು ಕರ್ನಾಟಕದ ಒಂದು ಸಾಂಸ್ಕೃತಿಕ ವಲಯದ ಬಗ್ಗೆ ಕುರುಡು ಅಭಿಮಾನವನ್ನು ತೋರುತ್ತ ಸಡಿಲಾದ ಸಮರ್ಥನಾ ಬರವಣಿಗೆಯನ್ನು ಮಾಡುತ್ತಿದ್ದು ಈ ಪ್ರತಿಕ್ರಿಯೆ ಕೂಡ ಅದರ ಮುಂದುವರಿದ ಭಾಗದಂತಿದೆ. ಅವರು ಅಡಿಗ ರನ್ನು ಸಮರ್ಥಿಸಲು ನಾನಾ ಬಗೆಯ ತಂತ್ರಗಳನ್ನು ಹೂಡಿದ್ದಾರೆ. ನಾನು ಎತ್ತಿದ ಮುಖ್ಯ ಪ್ರಶ್ನೆಗಳನ್ನು ಬೈಪಾಸ್ ಮಾಡುವುದು, ಕೆಲವು ಹಳಸಲು ವಿಮರ್ಶಾ ಪರಿಕಲ್ಪನೆಗಳಿಗೆ ಬ್ರ್ಯಾಂಡ್ ಮಾಡುವುದು, ಸಂಬಂಧಿಸದ ಸಂಗತಿಗಳನ್ನು ಎಳೆದು ತಂದು ವಿಷಯಾಂತರ ಮಾಡುವುದು, ಲಂಕೇಶರನ್ನು ಏಕಮುಖವಾಗಿ ಬಳಸಿಕೊಳ್ಳುವುದು, ಕೆಲವು ವೈರುಧ್ಯಗಳನ್ನು ಲಂಬಿಸಿ ಪ್ರಗತಿಪರರನ್ನು ಜಜ್ಜಲು ಅಸ್ತ್ರ ಮಾಡಿಕೊಳ್ಳುವುದು, ತೀರ್ಮಾನಾತ್ಮಕ ಹಾಗೂ ಆಕ್ರಮಣಕಾರಿ ಭಾಷಾ ಬಳಕೆ, ಅನಗತ್ಯ ಬೌದ್ಧಿಕತೆಯ ಪ್ರದರ್ಶನ, ಇತ್ಯಾದಿ. ಅಡಿಗರನ್ನು ನಾನು ಕಟಕಟೆಯಲ್ಲಿ ನಿಲ್ಲಿಸಿ ದ್ವೇಷನೆಂದು ಭಾವಿಸಿ ಅವರ ಪರ ವಕೀಲಿಕೆಯನ್ನು ವಹಿಸಿಕೊಂಡ ಕಾರಣಕ್ಕೆ ಪ್ರತಿವಾದಿ ಯೊಬ್ಬನ ಸಮರ್ಪಣಾ ಭಾವದ ಸಮರ್ಥನಾ ವೈಖರಿ ಈ ಬರಹಕ್ಕೆ ಸಹಜವಾಗಿ ಲಭ್ಯವಾಗಿದೆ.


ಜಿ.ರಾಜಶೇಖರ ಅವರ ಅಡಿಗ

ಸಮರ್ಥನೆಯ ಪೂರ್ವಮೀಮಾಂಸೆ: ಅಡಿಗರ ಬಲಪಂಥೀಯ ರಾಜಕೀಯ ನಿಲುವು ಅವರ ಶ್ರೇಷ್ಠ ಕವಿತೆಗಳ ಅನುಸಂಧಾನಕ್ಕೆ ಅಡ್ಡಿಯಾಗಬಾರದೆಂಬ ವಿಮರ್ಶಾ ಒತ್ತಾಯವನ್ನು ಜಿ.ರಾಜಶೇಖರ ಅವರು ದಶಕಗಳಿಂದಲೂ ಮಾಡುತ್ತಲೇ ಬಂದಿದ್ದಾರೆ. ಅಡಿಗರ 'ಸುವರ್ಣ ಪುತ್ಥಳಿಗೆ'ಗೆ ಬರೆದ ಮುನ್ನುಡಿ ಹಾಗೂ ಲಂಕೇಶ್ ಅವರ 'ಅಡಿಗರ ಪಥ'ಕ್ಕೆ ಪ್ರತಿಕ್ರಿಯೆ ಎಂಬಂತೆ ಬರೆದಿರುವ 'ಅಡಿಗರ ಶ್ರೀ ರಾಮ' ಲೇಖನಗಳು ಅವರು ಅಡಿಗರ ಪರಮ ಸಮರ್ಥಕರೆಂಬುದನ್ನು ಸಾಬೀತುಪಡಿಸಿವೆ. ಅವರು ತಮ್ಮ ಪ್ರತಿಕ್ರಿಯೆಯಲ್ಲಿ ಹೊಸದಾಗಿ ಏನನ್ನೂ ಹೇಳದೇ ಈ ಲೇಖನಗಳ ಭಾಗಗಳನ್ನೇ ಕತ್ತರಿಸಿ ಜೋಡಿಸಿದಂತಿದೆ. ಅಡಿಗರನ್ನು ಸಮರ್ಥಿಸುವ ಅವರ ಕೆಲವು ಮಾದರಿ ಗಳನ್ನು ಗಮನಿಸಿದರೆ ಯಾರಿಗೂ ಗಾಬರಿಯಾಗಬಹುದು.

1 "ಚಿಂತಾಮಣಿಯಲ್ಲಿ ಕಂಡ ಮುಖ'ದ ಒಳ್ಳೆಯ ಕವಿತೆಗಳ ಜತೆಗೆ ಅದು ಹೇಗೋ ಸೇರಿಕೊಂಡುಬಿಟ್ಟಿರುವ 'ಮತ್ತೆ ಮೊಳಗಲಿ ಪಾಂಚಜನ್ಯ'ದಂಥ ಕವಿತೆಗಳು ಇವನ್ನು ಅಡಿಗರು ಬರೆದರೇ?" (ಗೋಪಾಲಕೃಷ್ಣ ಅಡಿಗರ ಸಮಗ್ರ ಕಾವ್ಯ. ಪು.659) ಕಾವ್ಯದ ಅಭಿವ್ಯಕ್ತಿಯ ಶ್ರೇಷ್ಠತೆಯನ್ನು ಜೀವನ್ಮರಣದ ಪ್ರಶ್ನೆ ಎಂದು ಭಾವಿಸಿದ್ದ ಕಾವ್ಯದ ಮಹಾ ಕಸಬುಗಾರ ಅಡಿಗರ ಕಾವ್ಯದಲ್ಲಿ ಒಂದು ಕವಿತೆ ಹೋಗಲಿ ಒಂದು ಪದ, ಒಂದು ಅಕ್ಷರ ಕೂಡ ಹೇಗೋ ಸೇರಿಕೊಂಡು ಬಿಡಲು ಸಾಧ್ಯವಿಲ್ಲ ಅಲ್ಲವೇ?

2. "ಅಡಿಗರು ಚುನಾವಣೆಯಲ್ಲಿ ಜನಸಂಘದ ಅಭ್ಯರ್ಥಿಯಾದರು. ಆರ್.ಎಸ್.ಎಸ್.ನ ಸಭೆಯಲ್ಲಿ ಭಾಗವಹಿಸಿದರು. ಈ ವ್ಯವಸ್ಥೆಯ ಸುಳ್ಳು ಸೋಗಲಾಡಿತನಗಳನ್ನು ಮಾತ್ರ ಗಮನಿಸಿ ಅದರ ಅಸಮಾನತೆಯನ್ನು ಅಲಕ್ಷಿಸಿದರು. ಹೀಗೆ ಹೇಳುತ್ತಲೇ ಹೋಗುವುದು ಅನಾವಶ್ಯಕ. ಅವರ ಅತ್ಯುತ್ತಮ ಕಾವ್ಯ ಅವರ ಪ್ರತಿಗಾಮಿ ರಾಜಕಾರಣದ ಅಭಿವ್ಯಕ್ತಿಯಲ್ಲ" (ಅದೇ.660) ಒಂದೆಡೆ ಅಡಿಗರ ನಿಜವಾದ ಪ್ರತಿಗಾಮಿ ವ್ಯಕ್ತಿತ್ವದ ಚರ್ಚೆಯನ್ನು ನಿರಾಕರಿಸಿ ಇನ್ನೊಂದೆಡೆ ಅವರ ಕಾವ್ಯದಲ್ಲಿ ಪ್ರತಿಗಾಮಿತನವಿಲ್ಲವೆಂದು ಘೋಷಿಸಿ ಅದರ ಚರ್ಚೆಯನ್ನು ಹತ್ತಿಕ್ಕಲು ಬಯಸುತ್ತಾರಲ್ಲವೇ?

3. "ಬೇಂದ್ರೆ ತಮ್ಮ ಕೊನೆಗಾಲದಲ್ಲಿ ಸಾಯಿಬಾಬಾ ಭಕ್ತರಾಗಿದ್ದರು ಎನ್ನುವುದು ಅವರ ಸಣ್ಣ ಸೋಮವಾರದಂಥ ಪದ್ಯಗಳ ಓದಿಗೆ ಹೇಗೆ ಬಾಧಕವಲ್ಲವೋ ಹಾಗೆಯೇ ಅಡಿಗರ ಪ್ರತಿಗಾಮಿ ರಾಜಕೀಯ ನಿಲುವು ಅವರ ಒಳ್ಳೆಯ ಕವಿತೆಗಳ ಓದಿಗೂ ಬಾಧಕವಲ್ಲ" (ಅದೇ.660) ಬೇಂದ್ರೆಯವರ ಕೊನೆಗಾಲದ ಕವಿತೆಗಳ ಓದಿಗೂ ಬಾಧಕವಲ್ಲ" (ಅದೇ.660) ಬೇಂದ್ರೆಯವರ ಕೊನೆಗಾಲದ ಸಾಯಿಬಾಬಾ ಭಕ್ತಿಯು ಅವರ ಆರಂಭದ ಕವಿತೆಗಳ ಅನುಸಂಧಾನಕ್ಕೆ ಅಡ್ಡಿಯಾಗಬಾರದೆನ್ನುವುದನ್ನು ಒಪ್ಪಬಹುದು. ತಮ್ಮ ಬದುಕಿನ ಆದಿಮ ಕಾಲದಿಂದಲೂ ಬಲಪಂಥೀಯ ಬದ್ಧತೆಯನ್ನು ಹೊಂದಿ ಆ ದೃಷ್ಟಿಕೋನದಿಂದ ಕಾವ್ಯವನ್ನು ರಚಿಸಿದ ಅಡಿಗರ ಕಾವ್ಯದ ಅನುಸಂಧಾನಕ್ಕೂ ಅವರ ಪ್ರತಿಗಾಮಿ ರಾಜಕೀಯ ನಿಲುವು ಬಾಧಕವಲ್ಲವೆನ್ನುವುದು ಯಾವ ನ್ಯಾಯ? ಹೋಲಿಕೆಗಾದರೂ ಔಚಿತ್ಯ ಬೇಡವೇ? ಬೇಂದ್ರೆಯವರ ಸಾಯಿಬಾಬಾ ಭಕ್ತಿ ವ್ಯಕ್ತಿಗತ ನಂಬಿಕೆ. ಹೆಚ್ಚೆಂದರೆ ಮೌಢ್ಯವಾದೀತು. ಅದರಿಂದ ಸಮಾಜಕ್ಕೆ ಯಾವ ಹಾನಿಯೂ ಇಲ್ಲ. ಆದರೆ ಅಡಿಗರು ನಂಬಿರುವುದು ಧಾರ್ಮಿಕ ಹಿಂಸಾರತಿಯ ಆಧಾರದ ಮೇಲೆ ಜಾತಿಲಿಂಗ ವರ್ಗ ಅಸಮಾನತೆಗಳನ್ನೊಳಗೊಂಡ ಹಿಂದೂ ಸಾಮ್ರಾಜ್ಯ ಸ್ಥಾಪನೆಯ ರಾಜಕೀಯ ಸಿದ್ಧಾಂತವನ್ನು. ಧಾರ್ಮಿಕತೆ ಹಾಗೂ ಕೋಮುವಾದಗಳೆರಡೂ ಒಂದೇ ಎಂದು ಪರಿಭಾವಿಸಿದ್ದಾರಲ್ಲವೇ? ಬೇಂದ್ರೆ ಆರ್.ಎಸ್.ಎಸ್. ವಿರೋಧಿ ಸಂವೇದನೆಯನ್ನು ತಮ್ಮ ಕಾವ್ಯದಲ್ಲಿ ಪ್ರಕಟಿಸಿರುವುದನ್ನಿಲ್ಲಿ ನೆನೆಯಬೇಕು.



4. "ದೇಶದ ಅರ್ಥವ್ಯವಸ್ಥೆ ಮತ್ತು ಆ ಕಾಲದ ರಾಜಕೀಯಗಳನ್ನು ಕುರಿತು ಅಡಿಗರ ಯೋಚನೆಗಳೆಲ್ಲ ಬಲಪಂಥೀಯ ವಿಚಾರಗಳಿಂದಲೇ ರೂಪಗೊಂಡಿದ್ದು, ಒಮ್ಮೆ ಅವರು ಜನಸಂಘದ ಅಭ್ಯರ್ಥಿಯಾಗಿ ಚುನಾವಣೆಗೂ ಸ್ಪರ್ಧಿಸಿದ್ದರು. ಆದರೆ ಅವರ ಕಾವ್ಯ ಮಾತ್ರ ಬಲಪಂಥೀಯ ವಿಚಾರಗಳ ಮುಖವಾಣಿಯಾಗಲಿಲ್ಲ" (ಎಸ್.ಆರ್. ವಿಜಯಶಂಕರ, ಪ್ರತಿಮಾಲೋಕ, ಪು.30) ಬಲಪಂಥೀಯ ವಿಚಾರಧಾರೆಗಳ ಮುಖವಾಣಿಯೇ ಆಗಿರುವ ಅಡಿಗರ ಕಾವ್ಯವನ್ನು ಈ ನೆಲೆಯಿಂದ ಪ್ರವೇಶಿಸಿ ಅವರ 'ಕವಿಚಕ್ರವರ್ತಿ' ಪಟ್ಟವನ್ನು ಅಲುಗಾಡಿಸಬಾರದೆಂಬ ಎಚ್ಚರಿಕೆಯಿಂದ ರಾಜಶೇಖರ ರಂಥವರು ಪೂರ್ವಭಾವಿಯಾಗಿಯೇ ವಿಮರ್ಶೆಯ ಹೆಸರಿನ ಸಾಂಸ್ಕೃತಿಕ ರಾಜಕಾರಣವನ್ನು ಮಾಡುತ್ತಿದ್ದಾರೆಯೇ? ಅಡಿಗರ ರಾಜಕೀಯ ನಿಲುವುಗಳ ಮಿತಿಗಳನ್ನು ತಾವೇ ಪಟ್ಟಿಮಾಡಿ ಅವುಗಳಿಗೂ ಅವರ ಕಾವ್ಯಕ್ಕೂ ಸಂಬಂಧವೇ ಇಲ್ಲವೆಂಬ ಹುಸಿ ಮಿತ್ಯನ್ನು ಪ್ರತಿಷ್ಠಾಪಿಸುತ್ತಿದ್ದಾರೆ. ಅವರ ಬರವಣಿಗೆಯ ಕ್ರಮದಲ್ಲಿರುವ 'ಚಿಂತನೆಯನ್ನು ಒಪ್ಪಿಸುವ ಜಾಣ್ಮೆ' ಕೂಡ ವ್ಯವಸ್ಥಿತವಾದುದೇ ಅಲ್ಲವೇ? ಇವು ಅಡಿಗರನ್ನು ರಕ್ಷಿಸಲು ರಾಜಶೇಖರರು ತೊಡುವ ವೇಷಗಳ ಕೆಲವು ಉದಾಹರಣೆ ಮಾತ್ರ.

ಅಜಿಟ್‌ಪ್ರಾಪ್ ಎಂಬ ಆಲಾಪ


ಜಿ.ರಾಜಶೇಖರ ಅವರು ನನ್ನ ಬರಹವನ್ನು 'ಅಜಿಟ್‌ಪ್ರಾಪ್' ಎಂದು ಬ್ರ್ಯಾಂಡ್ ಮಾಡಿದ್ದಾರೆ. ಮಾರ್ಕ್ಸ್‌ವಾದ, ಅದರ ಪಂಗಡಗಳು, ಕಮ್ಯುನಿಷ್ಟ ಪಕ್ಷಗಳು, ಕಮ್ಯುನಿಷ್ಟ ಸರಕಾರಗಳು ಮುಂತಾದವುಗಳ ಬಗ್ಗೆ ಹಲವು ಭಿನ್ನಾಭಿಪ್ರಾಯಗಳನ್ನಿಟ್ಟುಕೊಂಡೂ ಮೂಲತಃ ಜನಪರವೂ ಪ್ರಗತಿಪರವೂ ಆಗಿರುವ ಎಡಪಂಥೀಯ, ಸಮಾಜ ವಾದಿ ಚಿಂತನೆ ಹೋರಾಟಗಳೊಂದಿಗೆ ನಾನು ಕೂಡ ವಿಮರ್ಶಾತ್ಮಕ ಪ್ರೀತಿಯ ಸಂಬಂಧವನ್ನು ಇಟ್ಟುಕೊಂಡಿರಬಹು ದೆಂಬ ಕಲ್ಪನೆ ಇವರಿಗೆ ಬರಲು ಸಾಧ್ಯವೇ ಇಲ್ಲ. ನನ್ನನ್ನು ಕಮ್ಯುನಿಷ್ಟ ಪಕ್ಷದ ಸದಸ್ಯ, ಕಾರ್ಯಕರ್ತ ಅಥವಾ ಡಾಗ್ಮಾಟಿಕ್ ಕಮ್ಯುನಿಸಂನ ಕಟ್ಟಾ ಅನುಯಾಯಿಯೋ ಎಂದು ಭಾವಿಸಿದಂತಿದೆ. ನನ್ನ ಲೇಖನದಲ್ಲಿ ಸಾಂಪ್ರದಾಯಿಕ ಮಾರ್ಕ್ಸ್‌ವಾದದ ಶಾಸ್ತ್ರೀಯ ಪ್ರತಿಪಾದನೆಯಾಗಲೀ, ಕಮ್ಯುನಿಷ್ಟ ಪಕ್ಷಗಳು ಹಾಗೂ ಸರಕಾರಗಳ ಬಗೆಗೆ ವಿಮರ್ಶಾತೀತ ಬದ್ಧತೆಯಾಗಲೀ ಪ್ರಸ್ತಾಪಗೊಂಡಿಲ್ಲ. ನನ್ನ ಬರಹ ಮೂಲತಃ ಒಂದು ಸಾಂಸ್ಕೃತಿಕ ಓದು.

ಅಡಿಗರನ್ನು ರಕ್ಷಿಸುವ ಭರದಲ್ಲಿ ಅವರು ಅನಗತ್ಯವಾದ ಯಾವ್ಯಾವುದೋ ಸಂಗತಿಗಳನ್ನು ಎಳೆದು ತಂದು ಬೌದ್ಧಿಕ ಅಹಂಕಾರವನ್ನು ಮೆರೆಯುತ್ತಾರೆ. ಅಡಿಗರಂಥ ಮೂಲಭೂತವಾದಿ ಬಲಪಂಥೀಯರ ಕಾವ್ಯವನ್ನು ತಾತ್ವಿಕವಾಗಿ ಪ್ರಶ್ನಿಸುವವರು ಮೂಲಭೂತವಾದಿ ಎಡಪಂಥೀಯರೇ ಇರಬೇಕೆಂಬ ರಾಜಶೇಖರ ಅವರ ಸರಳೀಕೃತ ಗ್ರಹಿಕೆಯ ಹಿಂದೆ ಇರುವುದು ಸಂಘಪರಿವಾರದ ದೃಷ್ಟಿಕೋನವೇ ಅಲ್ಲವೇ? 'ಅಜಿಟ್‌ಪ್ರಾಪ್ ವಿಮರ್ಶೆಯ ಕಟಕಟೆಯಲ್ಲಿ ಅಡಿಗರ ಕವಿತೆ' ಎಂಬ ತಲೆ ಬರಹವನ್ನು ಗಮನಿಸಿದರೆ 'ಅಜಿಟ್‌ಪ್ರಾಪ್' ಕೆಟ್ಟ ವಿಮರ್ಶಾ ವಿಧಾನ, ಅದಕ್ಕೆ ಅಡಿಗರ ಕವಿತೆ ಅನ್ಯಾಯವಾಗಿ ಬಲಿಯಾಗಿಬಿಟ್ಟಿದೆ ಎಂಬ ಧ್ವನಿ ಇದೆಯಲ್ಲವೇ? ಈ ತಲೆಬರಹ ರಾಜಶೇಖರ ಅವರ ಸುಪ್ತ ಚಿಂತನೆಯ ಹಣೆಬರಹವೋ ಅಥವಾ ಅಡಿಗಾಂಧಕಾರದಲಿ ದಿಕ್ಕು ತಪ್ಪಿದ ಭಾಷಾ ಪ್ರಯೋಗವೋ? ಅಜಿಟ್‌ಪ್ರಾಪ್ ಎಂದರೆ ರಾಜಕೀಯ ಪಕ್ಷವೊಂದರ ಪ್ರಣಾಳಿಕೆ, ಕಾರ್ಯಕ್ರಮಗಳನ್ನು ತೀವ್ರವಾಗಿ ಪ್ರಚಾರ ಮಾಡುವ, ಜನತೆಯನ್ನು ಒಪ್ಪಿಸಲು ಬಳಕೆಗೊಳ್ಳುವ ಕಲೆ ಎಂಬ ಸ್ಥೂಲ ಅರ್ಥದಲ್ಲಿ ಗ್ರಹಿಸಿದರೂ ಅಡಿಗರ ಕವಿತೆ ಒಂದು ಕೆಟ್ಟ ಅಜಿಟ್‌ಪ್ರಾಪ್. ಅದನ್ನು ಪರೋಕ್ಷವಾಗಿ ಬೆಂಬಲಿಸುವ ರಾಜಶೇ... ಬರಹ ಇನ್ನೇನಾಗಿರಲು ಸಾಧ್ಯ? ಆಧುನಿಕ ಬಂಡವಾಳಶಾಹಿ ಹಾ... ಕೋಮುವಾದಿ ಪ್ರಭುತ್ವಗಳು ಅವುಗಳ ಅಭಿವೃದ್ಧಿಯ ಪರಿಕಲ್ಪನೆಯನ್ನು ಪ್ರಶ್ನಿ... ಚಿಂತನೆ, ಹೋರಾಟ, ವ್ಯಕ್ತಿ ಹಾಗೂ ಸಂಘಟನೆಗಳನ್ನು ಬಗ್ಗುಬಡಿಯಲು ತೀವ್ರ... ಹಿಂಸಾತ್ಮಕ ರಾಜಕೀಯ ಚಿಂತನೆಗೆ ಬ್ರ್ಯಾಂಡ್ ಮಾಡುವ ಕ್ರೂರ ವಿಧಾನವ... ಸರಿಸುತ್ತಿವೆಯಷ್ಟೇ? ಪ್ರಭುತ್ವದ ಈ ಭಾಷೆಯನ್ನು ಅಡಿಗರಂಥ ಬಲಪಂಥೀ... ಕವಿಯ ಸಮರ್ಥನೆಗೆ ಸಮಾಜವಾದಿ ರಾಜಶೇಖರರು ಬಳಸುತ್ತಿದ್ದಾ... ಅಜಿಟ್‌ಪ್ರಾಪ್ ಎಂಬ ಪರಿಕಲ್ಪನೆ ರಷ್ಯನ್ ವಾಸ್ತವದಾಚೆ ಕಾವ್ಯ ಮೀಮಾಂ... ಪರಿಧಿಯೊಳಗೆ ಕೆಲವು ಸಂಕೀರ್ಣವೂ ಸೂಕ್ಷ್ಮವೂ ಆದ ಅರ್ಥಸಾಧ್ಯತೆಗ... ಪಡೆಯಬಹುದಲ್ಲವೇ? ಕನ್ನಡದ ವಚನ ಸಾಹಿತ್ಯವನ್ನು ಈ ನೆಲೆಯಿಂದ ... ಗಮನಿಸಬೇಕು.

ಘೋಷಿತವಾಗಿಯಾಗಲಿ ಅಘೋಷಿತವಾಗಿಯಾಗಲಿ ರಾಜಕೀಯ ಕೋನವಿರದ ಕಲಾಕೃತಿ ಇರಲು ಸಾಧ್ಯವಿಲ್ಲ. ಕಾಲ ಸಂದ... ಪರಿಸರದ ಅಗತ್ಯಗಳು ಬದಲಾದ ಹಾಗೆ ಹೊಸ ಹ... ತಾತ್ವಿಕತೆಗಳು ಮೈದಾಳಿದ ಹಾಗೆ ಸಾಹಿತ್ಯವನ್ನೊಳಗೊಂ... ಕಲಾಪ್ರಕಾರಗಳು ಮರುಮೌಲ್ಯಮಾಪನಕ್ಕೆ ಒಳಗಾಗು... ಹೊಸದೇನಲ್ಲ. ಸ್ವತಃ ಅಡಿಗರ ಕಾವ್ಯದ ಕಟಕಟೆಯಲ್ಲಿ ನವ್ಯೋ... ಕವಿಗಳು ನಿಂತಿದ್ದಾರೆ. ಮಾರ್ಕ್ಸ್‌ವಾದ, ಲೋಹಿಯಾ... ಅಂಬೇಡ್ಕರ್‌ವಾದ, ಸ್ತ್ರೀವಾದ, ಅಲಕ್ಷಿತಪರ ಚಿಂತನೆಗಳು ... ಕಾವ್ಯ ಪರಂಪರೆಯನ್ನು ಪರೀಕ್ಷೆಗೊಳಪಡಿಸಿವೆ. ಕಳೆದ ಮ... ದಶಕಗಳ ಭಾರತದ ಬದುಕಿನಲ್ಲಿ ಸಂಭವಿಸಿದ ಬೆಳವಣಿಗ... ಧಾರ್ಮಿಕ ಹಿಂಸೆ ಹಾಗೂ ಸೌಹಾರ್ದತೆಯ ನೆಲೆಯಿ... ಸಾಹಿತ್ಯವನ್ನು ಮರುಮೌಲ್ಯಮಾಪನ ಮಾಡಲು ಒತ್ತಾಯಿಸು... ಈ ನೆಲೆಯಿಂದ ಪ್ರವೇಶಿಸಿದಾಗ ಕೆಲವು ಕವಿಗಳ ಸ್ಥಾನ ಪಲ್ಲಟಗೊಳ್ಳಬಹುದು. ಅಡಿಗರೂ ಇದಕ್ಕೆ ಹೊರತಲ್ಲ.

ಸರಳ ಮಾರ್ಕ್ಸ್‌ವಾದಿ ಸಮೀಕರಣವೆಂಬ ವಿತಂಡವಾ...

ನಾನು ಅಡಿಗರ ಕಾವ್ಯ ಮತ್ತು ಹಿಂದೂತ್ವದ ಅಂತರ್ ಸಂಬಂಧ... ಚಾರಿತ್ರಿಕವಾಗಿ ವಿಶ್ಲೇಷಿಸಿದ ಭಾಗದ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿ... ರಾಜಶೇಖರರು ಭೂತ, ಆನಂದತೀರ್ಥರಿಗೆ, ಬತ್ತಲಾರದ ಗ... ಶ್ರೀರಾಮನವಮಿಯ ದಿವಸಗಳಂಥ ಪದ್ಯಗಳನ್ನು ಸಮರ್ಥಿಸಲು ವಿ... ಪ್ಯಾರಾಮೀಟರ್‌ಗಳನ್ನು ಬಳಸುತ್ತಾರೆ. ತಾತ್ವಿಕವಾಗಿ ಸಮರ್ಥಿ... ಸಾಧ್ಯವಾಗದಾದಾಗ ನನ್ನ ವಿಮರ್ಶಾ ವಿಧಾನವನ್ನೇ ಒರಟು ಮಾರ್ಕ್ಸ... ಸಮೀಕರಣವೆಂದು ತಿರಸ್ಕರಿಸಿಬಿಡುತ್ತಾರೆ. ಆಶ್ಚರ್ಯವೆಂದರೆ 'ಬತ್ತ ಲಾರದ ಗಂಗೆ' ಕವಿತೆಯ ಮೂಲಕ ಅಡಿಗ ರನ್ನು ಸಮರ್ಥಿಸುವ ಸಂದರ್ಭದಲ್ಲಿ ಬಾಗಲ್ಪುರ ಜೈಲಿನಲ್ಲಿ ಸೂಜಿ ಚುಚ್ಚಿ ಕಣ್ಣು ಕಿತ್ತಿದ್ದರ ಚಾರಿತ್ರಿಕ ಸಂದರ್ಭ... ಉತ್ಸಾಹದಿಂದ ಲಗತ್ತಿಸಿದ್ದಾರೆ. ಅದೇ ಸಮೀಕರಣ ಅ... ಸಮರ್ಥನೆಗಾದರೆ ಸೂಕ್ಷ್ಮ ಓದಾಗಿಬಿಡುತ್ತದೆ. ಈ ಲೇಖನದಲ್ಲಿ ಮೂಲ ... ಹಾಗೂ ಮೇಲು ರಚನೆಗಳು ಸಂದರ್ಭಕ್ಕನುಗುಣವಾಗಿ ಪರಸ್ಪರ ಪ್ರ... ಬೀರುತ್ತವೆಯೆಂಬ ಗ್ರಹಿಕೆ ಇರಬಹುದು. ಸಾಹಿತ್ಯವು ಬಲಾಢ್ಯರ ಹಿತ ಕಾಪಾ... ಐಡಿಯಾಲಜಿಯನ್ನು ಪೋಷಿಸುವ ಮತ್ತು ಪ್ರತಿಷ್ಠಾಪಿಸುವ ಹತಾರವಾ... ಚರ್ಚೆಯಿರಬಹುದು. ಸಾಂಸ್ಕೃತಿಕ ಯಾಜಮಾನ್ಯ ಮತ್ತು ರಾಜಕೀ... ಯಾಜಮಾನ್ಯಗಳ ಅಂತರ ಸಂಬಂಧದ ವಿಶ್ಲೇಷಣೆ ಇರಬಹುದು, ಮಹಾಹತ್ತೋ... ಹಾಗೂ ಆಧುನಿಕೋತ್ತರ ಕಾಲದ ಗ್ರಹಿಕೆಗಳೊಂದಿಗೆ ಕನ್ನಡದಲ್ಲಿ ನಡೆಯುತ್ತಿ... ಸಾಹಿತ್ಯದ ಸಾಂಸ್ಕೃತಿಕ ಓದಿನ ಒಂದು ಕ್ರಮವಾಗಿದೆ. ಸರಳ ಮಾರ್ಕ್ಸ್... ಸಮೀಕರಣವೆಂಬ ರಾಜಶೇಖರ ಅವರ ಮಾತು ಪಲಾಯನವಾದವಾಗಿದೆ. ಅ... ಮಾರ್ಕ್ಸ್‌ವಾದಿಗಳು, ಪ್ರಗತಿಪರರು, ಪ್ರಗತಿಶೀಲರು ಪದಗಳನ್ನು ಬಳಸಿರುವ ವಿ... ಹಾಗೂ ಅವು ಹೊರಡಿಸುವ ಧ್ವನಿಯು ಅಡಿಗರ ಇಲ್ಲವೇ ಸಂಘಪರಿವಾರದ ಗಟ್ಟಿಗಿಂತ ಭಿನ್ನವಾಗಿಲ್ಲ. ಹಿಂದೂತ್ವಕ್ಕೆ ಬಲಿಯಾಗಿ ಅಡಿಗರು ತಮ್ಮ ಸಹಜ... ವನ್ನು ಕಳೆದುಕೊಂಡಂತೆ ಅಡಿಗರಂಥವರನ್ನು ಸಮರ್ಥಿಸುತ್ತ ರಾಜಶೇಖರರು ಸಹಜ ಸಂವೇದನೆಯನ್ನು ಕಳೆದುಕೊಳ್ಳುತ್ತಿದ್ದಾರೆಯೇ? ಕೊನೆಗಾಲದಲ್ಲಿ ಕಾ... ರಂಥ ಹಿರಿಯರು ಬಲಪಂಥೀಯ ಒಲವುಗಳನ್ನು ತೋರಿದ್ದು ನೆನಪಾಗು...



ಅಡಿಗರ ಕೋಮುವಾದಿ ಕವನ


ಪ್ರತಿಕ್ರಿಯೆ

ಅಡಿಗರ ವ್ಯಕ್ತಿತ್ವ, ಕವಿವ್ಯಕ್ತಿತ್ವ ಹಾಗೂ ಕವಿತೆಗಳ ಪ್ರಾತಿನಿಧ್ಯ

ಜಿ.ರಾಜಶೇಖರ ಅವರು ಅಡಿಗರ 'ಮತ್ತೆ ಮೊಳಗಲಿ ಇಲ್ಲಿ ಪಾಂಚ... ಕೆಟ್ಟ ಪದ್ಯ ಹಾಗೂ ಇದರಲ್ಲಿ ವ್ಯಕ್ತವಾದದ್ದು ಹಿಂದೂತ್ವದ ರ... ಸಿದ್ಧಾಂತವೆಂದು ಒಪ್ಪಿಕೊಂಡಿದ್ದಾರೆ. ಆದರೆ ಕವಿಯನ್ನು ಮಾತ್ರ ಶ್ರೇಷ್ಠ... ಪುರಸ್ಕರಿಸುತ್ತಾರೆ. ಹಾಗಾದರೆ ಕವಿಗೂ ಕವಿತೆಗೂ ಇರುವ ಸಂಬಂಧವೇ... ದುಷ್ಟ ಸಿದ್ಧಾಂತವು ಕೆಟ್ಟ ಕವಿತೆಯನ್ನು ಪ್ರವೇಶಿಸಿದ್ದು ಕವಿಯ ಪ್ರಜ್ಞೆಯ ಮ... ತಾನೆ? "ಈ ಕವಿತೆ ಅಡಿಗರ ವ್ಯಕ್ತಿತ್ವಕ್ಕಾಗಲೀ ಕಾವ್ಯ ವ್ಯಕ್ತಿತ್ವಕ್ಕಾಗಲೀ ... ಮಾತ್ರಕ್ಕೂ ಪ್ರಾತಿನಿಧಿಕವಲ್ಲ" ಎಂದು ಶಿಫಾರಸ್ಸು ಮಾಡಿದ್ದಾರೆ. ಜಗ... ಗೊತ್ತಿರುವಂತೆ ಅಡಿಗರು ಜೀವಮಾನದುದ್ದಕ್ಕೂ ಹಿಂದೂತ್ವವನ್ನು ಬಾಳಿದವರು. ಅದರ ರಾಜಕೀಯ ಪ್ರಣಾಳಿಕೆಯನ್ನು ನಿಷ್ಠೆಯಿ... ಒಪ್ಪಿಕೊಂಡವರು. ಅದರ ಸಂಘಟನೆಗಳೊಂದಿಗೆ ಸದಾ ಸಂ... ಹೊಂದಿದವರು. ಅದರ ರಾಜಕೀಯ ಉತ್ಕರ್ಷಾವಸ್ಥೆಗೆ ಹಂಬಲಿಸಿದ... ಎರಡೆರಡು ಬಾರಿ ಆ ಪಕ್ಷದಿಂದ ಚುನಾವಣೆಗೆ ನಿಂತವರು. ಬ್ರಾಹ್ಮಣ್ಯ, ಜಾತಿ... ಹಿಂದೂತ್ವಗಳನ್ನು ಯಾವುದೇ ಮುಲಾಜಿಲ್ಲದೇ ಮಾತಿನಲ್ಲಿ, ಸಾರ್ವ... ಬದುಕಿನಲ್ಲಿ, ಗದ್ಯ-ಪದ್ಯಗಳಲ್ಲಿ ಮುಕ್ತವಾಗಿ ಸಮರ್ಥಿಸಿಕೊಂಡವರು. ಹಿ... ಇದು ಅವರ ನಿಜ ವ್ಯಕ್ತಿತ್ವದ ವಿಶ್ವರೂಪ ದರ್ಶನ ಮಾಡಿಸುವ ಪ್ರಾತಿನಿಧಿಕ ಕವಿ... ಎಂದು ಭಾವಿಸುವುದರಲ್ಲಿ ತಪ್ಪೇನಿದೆ? ಅಡಿಗರಿಗೆ ಇರಲಾರದ ಮಡಿವ... ರಾಜಶೇಖರರಿಗೇಕೆ? ಅದಕ್ಕೆ ಕಾರಣವಿದೆ. ಅಡಿಗರ ಕವಿ ವ್ಯಕ್ತಿತ್ವದ ಪ್ರತಿಷ್ಠಾ...

ಸತ್ಯ ಅಡ್ಡಬರಬಾರದೆಂಬ ಆತಂಕ. ಕವಿವ್ಯಕ್ತಿತ್ವ ಎಂದರೆ ಏನು? ಅವರ ಸಮಗ್ರ ಕಾವ್ಯ, ಅದರಲ್ಲಿ ವ್ಯಕ್ತವಾದ ಜೀವನದರ್ಶನಗಳು, ಸಂಘರ್ಷಗಳು, ಒಳನೋಟಗಳು, ರಾಜಕೀಯ ದೃಷ್ಟಿಕೋನಗಳು ಹಾಗೂ ಅಭಿವ್ಯಕ್ತಿಯಲ್ಲಿ ತೋರಿಸಿದ ಹೊಸತನ, ಅನನ್ಯತೆ, ಪ್ರಯೋಗಶೀಲತೆ ಇತ್ಯಾದಿ ತಾನೇ? ಈ ವ್ಯಕ್ತಿತ್ವವನ್ನು ರಾಜ ಶೇಖರರು ಸೂಚಿಸುವ ಏಳೆಂಟು ಶ್ರೇಷ್ಠ ಕವಿತೆಗಳೇ ಏಕೆ ಪ್ರತಿನಿಧಿಸ ಬೇಕು? ಮನುಷ್ಯನ ವ್ಯಕ್ತಿತ್ವದ ನಿರ್ವಚನದಲ್ಲಿ ಧನಾತ್ಮಕ ಸಂಗತಿಗಳಷ್ಟೇ ಋಣಾತ್ಮಕ ಸಂಗತಿಗಳಿಗೂ ಸಮಾನ ಮಹತ್ವವಿದೆ ಎಂದು ಅಡಿಗರೇ ಪ್ರತಿಪಾದಿಸಿದ್ದಾರಲ್ಲವೇ? ಹೆಚ್ಚಿನ ಸಂಖ್ಯೆಯಲ್ಲಿರುವ ಬ್ರಾಹ್ಮಣ್ಯ, ಪುನರುತ್ಥಾನವಾದ, ಸನಾತನತೆ, ಹಿಂದೂತ್ವಗಳನ್ನು ಪ್ರತಿಪಾದಿಸುವ ಕವಿತೆಗಳನ್ನು ಅವರ ಕವಿವ್ಯಕ್ತಿತ್ವದಿಂದ ಯಾಕೆ ಹೊರಹಾಕಬೇಕು? ರಾಜಶೇಖರರು "ಅಡಿಗರ ಕಾವ್ಯದ ಲಕ್ಷಣಗಳೇ ಆಗಿರುವ ಮಾತಿನ ವೈವಿಧ್ಯಮಯ ಬಳಕೆ, ವ್ಯಂಗ್ಯ ವಕ್ರೋಕ್ತಿ ಶ್ಲೇಷೆ, ದ್ವಂದ್ವ, ತೊಳಲಾಟ, ಆತ್ಮಾವಲೋಕನ ಮುಂತಾದ ಯಾವ ಗುಣವೂ ಪ್ರಸ್ತುತ ಕವಿತೆಯಲ್ಲಿ ಇಲ್ಲ" ಎಂಬ ಮಾತಿನಲ್ಲಿ ಅವರು ಕಲಾತ್ಮಕತೆಯ ಲಕ್ಷಣವನ್ನು ಹೇಳಿದ್ದಾರೆ. ಅಲ್ಲಿ ಕವಿಯ ರಾಜಕೀಯ ದೃಷ್ಟಿಕೋನ, ತಾತ್ವಿಕತೆಗಳು ಗೈರುಹಾಜರಾಗಿವೆ. ಅಡಿಗರ ವ್ಯಾಖ್ಯಾನಕಾರರು ಅಡಿಗರ ಕಾವ್ಯದೊಂದಿಗೆ ನಡೆಸುವ ಅನುಸಂಧಾನದ ಮೂಲಕ ಕನ್ನಡದಲ್ಲಿ ರೂಪನಿಷ್ಠ ವಿಮರ್ಶೆ ಒಂದು ಸ್ಪಷ್ಟ ಆಕಾರವನ್ನು ತಾಳಿತು. ಈ ವಿಮರ್ಶೆಗೆ ಪಶ್ಚಿಮದ ಪ್ರೇರಣೆಗಳೇನೇ ಇರಲಿ, ಕನ್ನಡದ ಮಟ್ಟಿಗೆ ಅಡಿಗರ ಹಿಂದೂತ್ವ ಪರ ನಿಲುವುಗಳನ್ನು ಮರೆಮಾಡಿ ಅವರನ್ನು ಯುಗದ ಕವಿ ಎಂದು ಪ್ರತಿಷ್ಠಾಪಿಸುವ ಸಾಂಸ್ಕೃತಿಕ ರಾಜಕಾರಣವೂ ಕಾರಣವಾದಂತಿದೆ. ಅಡಿಗರು ಪಕ್ಕಾ ರಾಜಕೀಯ ಕವಿ. ಹಿಂದೂತ್ವ ಪ್ರತಿಪಾದಕ ಕವಿ. ಅಂಥವರು ಕನ್ನಡದ ಶ್ರೇಷ್ಠ ಕವಿ, ಕನ್ನಡ ಪ್ರಜ್ಞೆಯ ದಾರ್ಶನಿಕರೆಂದು ಪ್ರತಿಪಾದಿಸುವುದರಿಂದ ಕೋಮುವಾದದ ಸಾಂಸ್ಕೃತಿಕ ರಾಜಕಾರಣದ ಉದ್ದೇಶವನ್ನು ಈಡೇರಿಸಿದಂತಾಗು ತ್ತದೆಯಲ್ಲವೇ?

ಲಂಕೇಶ್, ತಾವೆಲ್ಲ ಲೋಹಿಯಾ, ಜೆ.ಪಿ., ನರೇಂದ್ರದೇವ ಮುಂತಾದವರನ್ನು ಓದಿ ನೆಹರೂ ಅವರನ್ನು ಟೀಕಿಸುವಾಗ ಅಡಿಗರು ರಾಜಾಜಿಯವರನ್ನು ನೆಚ್ಚಿ ಬಲಪಂಥೀಯ ದೃಷ್ಟಿಕೋನದಿಂದ ನೆಹರೂ ಅವರನ್ನು ಟೀಕಿಸುತ್ತಿದ್ದುದನ್ನು ಪ್ರಸ್ತಾಪಿಸುತ್ತಾರೆ. 'ನೆಹರೂ ನಿವೃತ್ತರಾಗುವುದಿಲ್ಲ' ಕವಿತೆ ಕೂಡ ಹಿಂದೂತ್ವ ರಾಜಕಾರಣದ ಭಾಗವಾಗಿಯೇ ಹುಟ್ಟಿದ್ದಲ್ಲವೇ? ಇದನ್ನು ಶ್ರೇಷ್ಠವೆಂದು ತೀರ್ಮಾನಿಸಲು ತೊಡಕುಗಳೇ ಇಲ್ಲವೆ? ರಾಜಕೀಯ ಸರಿತನ ಮಾತ್ರ ಕಾವ್ಯದ ಶ್ರೇಷ್ಠತೆಯನ್ನು ತೀರ್ಮಾನಿಸುವ ಲಕ್ಷಣ ಆಗಿಲ್ಲದಿರಬಹುದು. ಆದರೆ ಜೀವವಿರೋಧಿತನವನ್ನು ಒಳಗೊಂಡ ರೂಪನಿಷ್ಠ ಕವಿತೆಯನ್ನು ಶ್ರೇಷ್ಠ ಎನ್ನಬಹುದೇ? ಅಡಿಗರ 'ಎನ್ನದೆನ್ನುವ ಪನ್ನತಿಕೆ'ಯ



ಹಂಬಲವನ್ನು ಕೇವಲ ರೂಪಕ್ಕೆ ಸಂಬಂಧಿಸಿ ವೈಭವೀಕರಿಸಲಾಗಿದೆ. ಈ ಪನ್ನತಿಕೆಯ ರಾಜಕೀಯ ತಾತ್ವಿಕತೆ ಹಿಂದೂತ್ವವೇ ಆಗಿರಬಹುದು. ಈ ನಿಟ್ಟಿನಲ್ಲಿ ಚರ್ಚೆ ನಡೆಯಬೇಕಿದೆ. ರಾಜಶೇಖರ ಅವರು ಹೇಳುವಂತೆ ಅಡಿಗರು ಇಂಥ ಒಂದೇ ಕವಿತೆಯನ್ನು ಬರೆದೂ ಇಲ್ಲ, ನಾನು ಒಂದೇ ಕವಿತೆ ಹಿಡಿದು ಅಡಿಗರ ಸಮಗ್ರಕಾವ್ಯದ ಬಗ್ಗೆ ತೀರ್ಮಾನ ಪ್ರಕಟಿಸಿಯೂ ಇಲ್ಲ. ಎಲ್ಲ ಕವಿತೆಗಳೂ 'ಮತ್ತೆ ಮೊಳಗಲಿ ಇಲ್ಲಿ ಪಾಂಚಜನ್ಯ'ದ ಮಾದರಿಯಲ್ಲಿ ಪ್ರಣಾಳಿಕೆಗಳೇ ಆಗಬೇಕಿಲ್ಲ. ಹಿಂದೂತ್ವದ ಹಲವಾರು ಆಯಾಮಗಳನ್ನು ಅವರ ಕವಿತೆಗಳು ಒಳಗೊಂಡ ಬಗೆಯನ್ನು ನಾನು ವಿಶ್ಲೇಷಿಸಿದ್ದೇನೆ. ಅಡಿಗರು ಇಂಥ ಹಲವಾರು ಕವಿತೆಗಳನ್ನು ಬರೆದಿರುವ ಬಗ್ಗೆ ರಾಜಶೇಖರರೂ ಉಲ್ಲೇಖಿಸಿದ್ದಾರೆ.

ವೈರುಧ್ಯಗಳ ದುರ್ಬಳಕೆ

ಜಿ.ರಾಜಶೇಖರ ಅವರು 'ಕಟ್ಟುವೆವು ನಾವು' ಕವಿತೆ ಹಾಗೂ ಮುಟ್ಟುಗೋಲಿನ ಬಳಕೆ ಕುರಿತಾದಂತೆ ನನ್ನ ತಪ್ಪು ಗ್ರಹಿಕೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಆ ಕಾರಣಕ್ಕೆ ಅವರಿಗೆ ಋಣಿಯಾಗಿರುವೆ. ಆದರೆ ಅವರು ಗುರುತಿಸಿದ ಏಕಾರ್ಥವೇ ಆತ್ಯಂತಿಕವೆಂಬ ನಿಲುವು ಹಾಗೂ ಇಡೀ ಪ್ರಬಂಧವನ್ನು ತಿರಸ್ಕರಿಸಲು ಈ ವೈರುಧ್ಯಗಳನ್ನೇ ಆಧಾರ ಮಾಡಿಕೊಳ್ಳುವ ಉತ್ಸಾಹವನ್ನು ಒಪ್ಪಿಕೊಳ್ಳಲಾಗದು. 'ಕಟ್ಟುವೆವು ನಾವು' ಕುವೆಂಪು ಅವರ 'ಪಾಂಚಜನ್ಯ'ದ ಹಾಗೆ ಭಾರತದ ರಾಷ್ಟ್ರೀಯ ಹೋರಾಟದ ಹಿನ್ನೆಲೆಯಿಂದ ಸಹಜ ಆವೇಶವನ್ನು ಪಡೆದಿದೆ. ಆ ಕಾಲದ ರಾಷ್ಟ್ರೀಯತೆಯ ಸಂಕೀರ್ಣ ರೂಪವನ್ನು ಅಧ್ಯಯನ ಮಾಡಲು ಯೋಗ್ಯವಾದ ಪದ್ಯವಿದು. ಈ ಕವಿತೆಯಲ್ಲಿ ಪಾರತಂತ್ರ್ಯ ಹಾಗೂ ಅಸಮಾನತೆಗಳನ್ನು ಸೃಷ್ಟಿಸಿದ ಶಕ್ತಿಗಳನ್ನು ನಾಶಮಾಡುವ ಹಿಂಸಾರತಿ ಇದ್ದರೂ ಸ್ವಾತಂತ್ರ್ಯ ಸಮಾನತೆಗಳ ಹಂಬಲದ ನೈತಿಕತೆಯನ್ನು ಗಮನಿಸಬೇಕು. ಇಲ್ಲವಾದರೆ ಜಗತ್ತಿನ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟ ಗಳನ್ನು ಕೂಡ 'ಹಿಂಸೆ' ಎಂದು ಏಕಮುಖವಾಗಿ ವ್ಯಾಖ್ಯಾನಿಸಿದಂತಾ ಗುತ್ತದೆ. ಹಾಗೆಯೇ 'ಮುಟ್ಟುಗೋಲು' ನನ್ನ ಬರಹದಲ್ಲಿ ಒಂದು ರೂಪಕ ವಾಗಿ ಬಳಕೆಯಾಗಿದೆ. ಇಲ್ಲಿಯದು ಸಮಾಜ ವಿರೋಧಿ ಅಪರಾಧಕ್ಕೆ ಶಿಕ್ಷೆ ಆಗಬೇಕೆಂಬ ಗ್ರಹಿಕೆ. ಪ್ರಭುತ್ವ ವಿರೋಧಿ ಕೃತ್ಯಗಳನ್ನು ಪ್ರಭುತ್ವ ಮುಟ್ಟುಗೋಲು ಹಾಕುವುದಕ್ಕೂ, ಸಮಾಜ ವಿರೋಧಿ ಜನವಿರೋಧಿ ಕೃತ್ಯಗಳನ್ನು ನಿಯಂತ್ರಿಸಬೇಕೆಂಬ ಹಂಬಲಕ್ಕೂ ವ್ಯತ್ಯಾಸವಿದೆ. ಅಡಿಗರ ಕವಿತೆ ಪ್ರಭುತ್ವದ ಪರವಾದ ಕವಿತೆ. ಅದನ್ನು ಮುಟ್ಟುಗೋಲು ಹಾಕಬಹುದೆಂದು ಸೂಚಿಸುವುದು ಪ್ರಭುತ್ವ ವಿರೋಧಿ ಭಾಷೆಯೇ ಆಗಿದೆ.

ಲಂಕೇಶರ ಅಡಿಗಾನುಸಂಧಾನ

ಜಿ.ರಾಜಶೇಖರ ಅವರು ನನ್ನ ಬರಹವನ್ನು ಅಡಿಗರ ಮೇಲೆ ಹೂಡಿದ ವಿಮರ್ಶಾರೂಪದ ದಾವೆಯೆಂದು ಪರಿಗಣಿಸಿ ಲಂಕೇಶ್ ರವನ್ನು ನನ್ನ ಪರ ಸಾಕ್ಷಿಗೆ ಬಳಸಿಕೊಂಡಿರುವುದಾಗಿ ಆಪಾದಿಸಿದ್ದಾರೆ. ಅಡಿಗರನ್ನು ಕುರಿತಾದ ಲಂಕೇಶರ ಒಟ್ಟು ಬರವಣಿಗೆಗೆ ಹೋಲಿಸಿದರೆ ತುಂಬಾ ಕಡಿಮೆ ಪ್ರಮಾಣದಲ್ಲಿರುವ ಹೊಗಳಿಕೆಯ ಮಾತುಗಳನ್ನು ಆಯ್ದುಕಟ್ಟಿ "ಅಡಿಗರ ಮಹತ್ವವನ್ನು ಕುರಿತು ಲಂಕೇಶ್ ಅವರಿಗೆ ಸಂಶಯವೇ ಇರಲಿಲ್ಲ" ಎಂಬ ಅಪ್ಪಟ ಸುಳ್ಳನ್ನು ಹೇಳಿದ್ದಾರೆ. ಇದು ಲಂಕೇಶರ ಚಿಂತನೆಯನ್ನು ದಿಕ್ಕು ತಪ್ಪಿಸುವ ವಿಧಾನ. ಅಡಿಗರೊಂದಿಗಿನ ಲಂಕೇಶರ ಅನುಸಂಧಾನವು ನಾನಾಗಲೀ ರಾಜಶೇಖರರಾಗಲೀ ನಮ್ಮ ನಮ್ಮ ವಾದಗಳಿಗೆ ಬಳಸಿ ಕೊಳ್ಳುವಷ್ಟು ಸರಳರೇಖಾತ್ಮಕವೆಂದು ಭಾವಿಸುವುದೇ ಲಂಕೇಶರ ಸ್ವಭಾವಕ್ಕೆ ಮಾಡುವ ಅಪಚಾರ. ಲಂಕೇಶ್ ತಮ್ಮ ಸಾಹಿತ್ಯ ಬದುಕಿನ ಆರಂಭದ ದಿನಗಳಲ್ಲಿಯೇ ಪ್ರಭಾವೀ ಕವಿಯಾಗಿದ್ದ ಅಡಿಗರ ಆಪ್ತ ಬಳಗವನ್ನು ಸೇರಿ ಅವರ ಗಾಢವಾದ ಪ್ರಭಾವಕ್ಕೆ ಒಳಗಾದವರು. ಅಲ್ಲಿಂದ ಅವರು ಮತ್ತು ಅಡಿಗರ ಸಂಬಂಧಕ್ಕೆ ಸುಮಾರು ಅರ್ಧಶತಮಾನದ ಚರಿತ್ರೆ ಇದೆ. (ಲಂಕೇಶರೇ ಹೇಳಿಕೊಳ್ಳುವಂತೆ) ಅಲ್ಲಿ ಹೊಗಳಿಕೆ, ತೆಗಳಿಕೆ, ಸಂಶಯ, ಅಸೂಯೆ, ನೋವು, ಪ್ರೀತಿ, ಅಸಮಾಧಾನ, ನಿಷ್ಠುರತೆ ವೈರುಧ್ಯಗಳು ತುಂಬಿವೆ. ಅಡಿಗ ಮತ್ತು ಲಂಕೇಶರ ಮುಖಾಮುಖಿ ಯನ್ನು ಮೂರು ಆಯಾಮಗಳಲ್ಲಿ ಗುರುತಿಸಬಹುದು.

ಮೊದಲನೆಯದು ಅವರ ಪ್ರಭಾವ ವಲಯದಲ್ಲಿದ್ದಾಗ್ಯೂ ಅಡಿಗರ ರಾಜಕೀಯ ಹಾಗೂ ಕವಿ ವ್ಯಕ್ತಿತ್ವಗಳನ್ನು ಕುರಿತು ನಿಷ್ಠುರ ನಿಲುವುಗಳನ್ನು ತೋರ್ಪಡಿಸುವುದು. ಇದು ಲಂಕೇಶರ ಮೂಲಗುಣವೇ ಆಗಿದೆ. ರಾಜಶೇಖರ ತರದವರು ಅವಶ್ಯ ಗಮನಿಸಬೇಕಾದ ಸಂಗತಿ ಇದು. ಅಡಿಗರಿಗೆ ಕಬೀರ್ ಸಮ್ಮಾನ ಬಂದಾಗ ವೈಯಕ್ತಿಕವಾಗಿ ತುಂಬ ಸಂತಸಪಡುತ್ತ ಲಂಕೇಶ್ ಹೀಗೆ ದಾಖಲಿಸುತ್ತಾರೆ: "ಪ್ರಕೃತಿ, ಬ್ರಾಹ್ಮಣ್ಯ ರಾಜಕೀಯ ಈ ಮೂರು ಒಬ್ಬ ವ್ಯಕ್ತಿಯಲ್ಲಿ ಹೇಗೆ ರೂಪ ಪಡೆದು ಹೊರ ಬರಬಹು ದೆಂಬುದನ್ನು ಕಾಣಲು ಅಡಿಗರ ಕಾವ್ಯ ಅಭ್ಯಾಸ ಯೋಗ್ಯವಾಗಿದೆ". (ಪಿ.ಲಂಕೇಶ್, ಸಾಹಿತಿ ಸಾಹಿತ್ಯ ವಿಮರ್ಶೆ, ಪು.50) "ಈ ದೇಶದ ಪರಂಪರಾಗತ ನೀಚತನದ ಜತೆ ಹೊಂದಿ ಕೊಂಡು ಉತ್ತಮ ಕವಿಯಾಗಲು ಸಾಧ್ಯವೇ? ಅಥವಾ ಇವನ್ನೆಲ್ಲ ಮೀರಿ ನಿಲ್ಲಬಲ್ಲ ದ್ವಂದ್ವವಿದೆ ಯೆಂದು ಇವರ ದ್ವಂದ್ವಿ ಗಳಾದ ಶಿಷ್ಯರು ವಾದ ಶುರು ಮಾಡು ವವರೇ?" (ಅದೇ) ಅಡಿಗರ ರಾಜಕೀಯ ನಿಲುವು ಹಾಗೂ ಕಾವ್ಯದ ನೈಚ್ಯಾನುಸಂಧಾನ ವನ್ನೂ ರಾಜಶೇಖರರಂಥ ದ್ವಂದ್ವಿ ಶಿಷ್ಯರ ವಿಮರ್ಶೆಯನ್ನೂ ಕುರಿತು ಲಂಕೇಶ್ ಧ್ಯಾನಿಸಿದ್ದಾರಲ್ಲವೇ?

ಲಂಕೇಶ್ ಅನುಸಂಧಾನದ ಎರಡ ನೆಯ ಮುಖವೆಂದರೆ, ಅಡಿಗರ ರಾಜಕೀಯ ನಿಲುವನ್ನು ಪ್ರಶ್ನಿಸಿಯೂ ಕಾವ್ಯಾಭಿವ್ಯಕ್ತಿಯ ಸಮಸ್ಯೆಗಳನ್ನು ಚರ್ಚಿಸಿಯೂ ಅವರ ಪ್ರಯೋಗಶೀಲತೆಯ ಗುಣಾತ್ಮಕ ಸಂಗತಿಗಳನ್ನು ಗುರುತಿಸುವುದು. ಉದಾ: "ಶ್ರೀ ರಾಮನವಮಿಯ ದಿವಸದ ವಿಧಿಯುಕ್ತ ಆಚರಣೆಗಳೆಲ್ಲ ಯಾಂತ್ರಿಕವೆನ್ನಿಸಿ ದರೂ ಚಿತ್ತಹುತ್ತಗಟ್ಟಿ ಮತ್ತೆ ಕ್ರಿಯಾಶೀಲತೆ ಸಾಧ್ಯವಾಗಬಹುದೆಂಬ ಆಶೆ, ಪ್ರಶ್ನೆ ಹುಟ್ಟುತ್ತದೆ" ಇತ್ಯಾದಿ. ರಾಜಶೇಖರರು ಎತ್ತಿಕೊಳ್ಳುವುದು ಈ ಭಾಗಗಳನ್ನು ಮಾತ್ರ. 1992-93ರ ಹಿಂದಿನ ಗ್ರಹಿಕೆಗಳಿವು.

ಲಂಕೇಶ್ ಅಡಿಗಾನುಸಂಧಾನದ ಮೂರನೆಯ ಮಜಲೆಂದರೆ ಅಡಿಗರ ವೈಯಕ್ತಿಕ ಹಾಗೂ ಕಾವ್ಯ ಪ್ರಭಾವದಿಂದ ಮುಕ್ತರಾಗಿ ಅವರ ಕಾವ್ಯದ ಬ್ರಾಹ್ಮಣ್ಯ ಮತ್ತು ಹಿಂದೂತ್ವದ ಜಗತ್ತನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸುವುದು. 1998-99ರಲ್ಲಿ ಬರೆದ 'ಅಡಿಗರ ಪಥ', 'ನೆನಪಿನ ಗಣಿಯಿಂದ ತೆಗೆದದ್ದೇನು?' ಮುಂತಾದ ಲೇಖನಗಳನ್ನು ಗಮನಿಸಬಹುದು. ಅದೇ ರಾಮನವಮಿಯ ದಿವಸದ ಬಗೆಗೆ ಅವರ ನಿಲುವು ಸಂಪೂರ್ಣ ಭಿನ್ನವಾಗಿದೆ. "ಮಧ್ವಾಚಾರ್ಯರಂತೆ ಕಣ್ಣು ಮುಚ್ಚಿ ಸಾಗುವ ಇವರು ಶ್ರೀರಾಮನವಮಿಯ ದಿವಸ ಎಂಬ ಕವನ ಬರೆಯುವ ಹೊತ್ತಿಗೆ ಪೂರ್ತಿ ತಮ್ಮವರ ನುಡಿಗಟ್ಟಿನಲ್ಲಿ ತುಮುಲುಗಳಲ್ಲಿ ವೇದೋಪನಿಷತ್ತುಗಳ ಭೂತಗನ್ನಡಿಯೊಳಗೆ ಕೂತುಬಿಟ್ಟಿದ್ದಾರೆ. ಇವರ ಆಸಕ್ತಿ, ಭಾಷೆ, ಮನುಷ್ಯರ ಬಗೆಗಿನ ಪೂರ್ಣ ನಿರ್ಲಕ್ಷ್ಯವನ್ನು ನೋಡಿದವರಿಗೆ ಇಲ್ಲಿಯ ರಾಮ ಬಿ.ಜೆ.ಪಿ.ಗಳ ರಾಮ ಎನ್ನಿಸುತ್ತದೆ. ರಥಯಾತ್ರೆಯ ಅಧ್ವಾನಿಯ ತರಹದಲ್ಲಿ ತನ್ನ ಕೋದಂಡವನ್ನು ಬಳಸಿ ಅಯೋಧ್ಯೆಯ ವಿರುದ್ಧ ಇದ್ದವರೆಲ್ಲ ಶತ್ರುಗಳು, ಪರವಾಗಿದ್ದವರೆಲ್ಲ ಮಿತ್ರರು ಎನ್ನುವಂಥ ಸ್ಥಿತಿ ತಲುಪಿದ್ದಾರೆ". "ಇಂಥ ಕವನಗಳಲ್ಲಿ ಮತ್ತೆ ಮತ್ತೆ ಬರುವ ಅಶ್ವತ್ಥದ ವಿವರ್ತ, ಪುತ್ರಕಾಮೇಷ್ಠಿ ಪಿತೃಪಿತಾಮಹರು ಮುಂತಾದವುಗಳನ್ನು ಮತ್ತೆ ಉದಾಹರಿಸಬೇಕಾದ್ದೇ ಇಲ್ಲ, ಇಲ್ಲಿ ನಿಜಕ್ಕೂ ಚಿತ್ತಕ್ಕೆ ಹುತ್ತಗಟ್ಟಿದೆ ಅಷ್ಟೇ". (ಅದೇ ಪು.68) ಇದು ಲಂಕೇಶರ ಅಡಿಗರ ಬಗೆಗಿನ ಗ್ರಹಿಕೆಗಳು ಹಾಗೂ ಒಳನೋಟಗಳ ಚಾರಿತ್ರಿಕ ವಿಕಾಸ ಕೂಡ. ಅಡಿಗರ ಆತ್ಮಚರಿತ್ರೆಯನ್ನುದ್ದೇಶಿಸಿ ಲಂಕೇಶ್ ಆಡಿದ ಕಟ್ಟಕಡೆಯ ಮಾತುಗಳಿವು- "ಅಡಿಗರು ತಮ್ಮ ನೆನಪಿನ ಗಣಿಯಿಂದ ಚಿನ್ನಕ್ಕೆ ಬದಲಾಗಿ ಮಣ್ಣು ತೆಗೆಯುವ ಕೃತ್ಯ ನೋಡಿ ಆಶ್ಚರ್ಯವಾಗುತ್ತದೆ. ಇವರು ಮತ್ತು ಇವರ ಅನುಯಾಯಿಗಳು ಸಾಹಿತ್ಯದಲ್ಲಿ ಎಷ್ಟು ಸಾಚಾ, ಎಷ್ಟು ಖೊಟ್ಟಿ ಎನ್ನುವುದು ಇಂಥ ಪುಸ್ತಕ ಓದಿದಾಗ ಗೊತ್ತಾಗುತ್ತದೆ. ಇವರೆಲ್ಲರ ಪುಸ್ತಕಗಳ ಮರು ಮೌಲ್ಯಮಾಪನಕ್ಕೆ ಒಳಪಡಿಸಲು ತಮ್ಮ ನಿಜವಾದ ವಿಮರ್ಶಕರನ್ನು ಹುರಿದುಂಬಿಸಬೇಕು". ಈಗ ನಿಜವಾಗಿ ನಡೆಯ ಬೇಕಾಗಿದ್ದು ಲಂಕೇಶ್ ಹೇಳುವಂತೆ ಅಡಿಗರನ್ನು ಕುರಿತಾದ ಅವರೆಲ್ಲ ಶಿಷ್ಯ ದ್ವಂದ್ವಿಗಳ ವಿಮರ್ಶಾ ಪ್ರಸ್ಥಾನಗಳ ಮರುಮೌಲ್ಯಮಾಪನ. ಲಂಕೇಶರ ಇನ್ನೂ ಒಂದು ಮಾತು ಗಮನಿಸಿ: "ಅಡಿಗರ ಈ ಪುಸ್ತಕ ಓದುತ್ತಿದ್ದರೆ ಒಂದು ಕಂದಾಚಾರಿ ಬ್ರಾಹ್ಮಣರ ವಠಾರವನ್ನು ಹೊಕ್ಕಂತಾಗುತ್ತದೆ". ಇದು ಅಡಿಗರ ಸಮಗ್ರಕಾವ್ಯಕ್ಕೂ ಅನ್ವಯಿಸುವ ಮಾತು. ಆದರೆ ಅಡಿಗರ ಬಲಪಂಥೀಯ ದೃಷ್ಟಿಕೋನದ ಆಚೆಯೂ ಕಾವ್ಯ ಸಂವೇದನೆಯ ಭಾಗವಾಗಿ ದೈನಂದಿನ ಬದುಕಿನ ವಿಭಿನ್ನ ಆಯಾಮಗಳಿಂದ ವಠಾರದಲ್ಲಿ ಇತರ ಸುವಾಸನೆಗಳೂ ಸಂಗಮಿಸಿರುವುದು ಅಡಿಗರ ಕಾವ್ಯದ ಹೆಚ್ಚುಗಾರಿಕೆಯಾಗಿದೆ.

2... ಖಟ್ಜು ಹೇಳಿದ್ದರಲ್ಲಿ ತಪ್ಪೇನಿದೆ?


ಈವರೆಗೆ ಪ್ರೆಸ್ ಕೌನ್ಸಿಲ್ ಬೇಜವಾಬ್ದಾರಿ ಮತ್ತು ಅಪಾಯಕಾರಿ ಪತ್ರಿಕೋದ್ಯಮವನ್ನು ನಿಯಂತ್ರಿಸುವಲ್ಲಿ ಪರಿಣಾಮಕಾರಿ ಪಾತ್ರ ವಹಿಸಲು ಸಾಧ್ಯವಾಗಿದೆಯೇ? ಬಾಳ್ ಠಾಕ್ರೆಯ 'ಸಾಮ್ನಾ' ಪತ್ರಿಕೆ ಬಹಿರಂಗವಾಗಿಯೇ ಪ್ರತಿದಿನ ಮುಸ್ಲಿಮರ ವಿರುದ್ಧ ಹಿಂದೂಗಳನ್ನು, ಮರಾಠಿಗಳಲ್ಲದವರ ವಿರುದ್ಧ ಮರಾಠಿಗಳನ್ನು ಎತ್ತಿಕಟ್ಟುತ್ತಲೇ ಬಂದಿದೆ. 1993ರಲ್ಲಿ ನಡೆದ ಮುಂಬೈ ಗಲಭೆಯಲ್ಲಿ 'ಹಿಂದೂ ಯುವಕರನ್ನು ಆಕ್ರೋಶದಿಂದ ಕುದಿಯುವಂತೆ ಮಾಡುವುದೇ' ತಮ್ಮ ಪಾತ್ರವಾಗಿತ್ತೆಂದು ಠಾಕ್ರೆ 'ಸಾಮ್ನಾ' ಪತ್ರಿಕೆಯಲ್ಲಿ ಬಹಿರಂಗವಾಗಿಯೇ ಬರೆದುಕೊಂಡರು. ಅದೇರೀತಿ ಗುಜರಾತಿನ 'ಸಂದೇಶ್' ಪತ್ರಿಕೆ 2002ರ ನರಮೇಧದಲ್ಲಿ ಹಿಂದೂಗಳ ಹಿತವನ್ನು ಕಾಯುವುದೇ ತನ್ನ ಕರ್ತವ್ಯವಾಗಿತ್ತೆಂದು ಹೇಳಿಕೊಂಡಿತು. ಬಹುಪಾಲು ಗುಜರಾತಿ ಪತ್ರಿಕೆಗಳು ಗೋಧ್ರಾ ಆದ ನಂತರ ನಡೆದ ಮುಸ್ಲಿಂ ನರಮೇಧದ ಸುದ್ದಿಯನ್ನು ಪ್ರಕಟಿಸಲೇ ಇಲ್ಲ, ಬದಲಿಗೆ ಹಿಂದೂ-ಹೆಂಗಸರು ಬಲಾತ್ಕಾರಕ್ಕೆ ಒಳಗಾದರೆಂಬ ಸುಳ್ಳು ಸುದ್ದಿಗಳನ್ನು ಪ್ರಕಟಿಸಿದವು. 1990ರಲ್ಲಿ ಬಾಬ್ರಿ ಮಸೀದಿಗೆ ಸಂಘಪರಿವಾರದವರು ಹಾಕಿದ ಮೊದಲ ಮುತ್ತಿಗೆಯಲ್ಲಿ 16 ಹಿಂದೂ ಭಕ್ತರು ಸತ್ತರು. ಆದರೆ 'ಒಂದು ಸಾವಿರ ಹಿಂದೂ ಭಕ್ತರ ಸಾವು' ಎಂದು 'ಸ್ವತಂತ್ರ ಭಾರತ್', 'ದೈನಿಕ್ ಜಾಗರಣ', 'ಸ್ವತಂತ್ರ ಚೇತನ' ಮತ್ತು 'ಆಜ್' ಎನ್ನುವ ಪತ್ರಿಕೆಗಳು ಉದ್ದೇಶಪೂರ್ವಕವಾಗಿ ತಪ್ಪು ಸುದ್ದಿ ಪ್ರಕಟಿಸಿ ಕೋಮು ಗಲಭೆಗೆ ಕಾರಣವಾದವು. ಈ ಕೆಲವು ಪತ್ರಿಕೆಗಳು ರಾಂಚಿಯಲ್ಲಿ 5000 ಪತ್ರಿಕೆಗಳನ್ನು ಉಚಿತವಾಗಿ ಹಂಚಿದ್ದು ಮತ್ತು ಅದರಿಂದ ಕೂಡಲೇ ಅಲ್ಲಿ ಕೋಮು ಗಲಭೆ ಸ್ಫೋಟಗೊಂಡಿದ್ದೂ ಸಹ ಪ್ರೆಸ್ ಕೌನ್ಸಿಲ್ ಗಮನಕ್ಕೆ ಬಂದಿತ್ತು. ಅದಕ್ಕಾಗಿ ಈ ಪತ್ರಿಕೆಗಳಿಗೆ ಕೌನ್ಸಿಲ್ ಛೀಮಾರಿ ಹಾಕಿತ್ತು. ಆದರೆ ಇದರಿಂದ ಆ ಪತ್ರಿಕೆಗಳು ತಮ್ಮ ಧೋರಣೆಯನ್ನಾಗಲಿ, ಉದ್ದೇಶಪೂರ್ವಕವಾಗಿ ಜನರಲ್ಲಿ ಕೋಮು ಭಾವನೆಯನ್ನು ಬಿತ್ತುವುದನ್ನಾಗಲಿ ತಡೆಯುವುದು ಸಾಧ್ಯವಾಗಲಿಲ್ಲ. ಹೀಗಾಗಿಯೇ ನಂತರದಲ್ಲಿ ಮುಂಬೈ, ಆಮೇಲೆ ಗುಜರಾತ್‌ನಲ್ಲಿ ಕೋಮು ಗಲಭೆಗಳು ಸಂಭವಿಸುತ್ತಲೇ ಇವೆ. ಅವೆಲ್ಲದರಲ್ಲೂ ಕೋಮುವಾದಿ ಮಾಧ್ಯಮಗಳ ಪಾತ್ರ ಇದ್ದೇ ಇದೆ.

ಆಗ ಎಲೆಕ್ಟ್ರಾನಿಕ್ ಸುದ್ದಿ ವಾಹಿನಿಗಳು ಅಷ್ಟು ಇರಲಿಲ್ಲ. ಈಗ ಸಾಮಾನ್ಯ ಜನರ ಮನೆಗಳಿಗೂ (ಒಂದು ಅಂದಾಜಿನ ಪ್ರಕಾರ ನಗರ ಪ್ರದೇಶದ ಶೇ.87 ಮತ್ತು ಗ್ರಾಮೀಣ ಪ್ರದೇಶದ ಶೇ.60) ಟಿವಿ ಮತ್ತು ಸುದ್ದಿವಾಹಿನಿಗಳ ಸಂಪರ್ಕವಿದೆ. ದಿನೇದಿನೇ ಜನರು - ಅದರಲ್ಲೂ ಸಾಮಾನ್ಯ ಜನರು - ಟಿವಿ ವಾಹಿನಿಗಳ ಸುದ್ದಿಯ ದೃಷ್ಟಿಕೋನವನ್ನು ನಿಜವೆಂದು ನಂಬುತ್ತ ತಮ್ಮ ಅಭಿಪ್ರಾಯವನ್ನು ರೂಪಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಅಲ್ಲಿ ಮೌಢ್ಯ, ಕೋಮು ಭಾವನೆ ಹಾಗೂ ದೈನಂದಿನ ಬದುಕಿನ ಸಮಸ್ಯೆಗಳನ್ನು ಪಕ್ಕಕ್ಕೆ ತಳ್ಳುವಂಥ ಕಾರ್ಯಕ್ರಮಗಳು ಜನತೆಯ ಬದುಕು ಮತ್ತು ಭವಿಷ್ಯದ ಮೇಲೂ, ದೇಶದ ಪ್ರಜಾತಂತ್ರದ ಮೇಲೂ ನೇರ ಪರಿಣಾಮ ಬೀರುತ್ತವೆ. ಹೀಗಾಗಿ ಎಲೆಕ್ಟ್ರಾನಿಕ್ ಮಾಧ್ಯಮಗಳು ಇನ್ನೂ ಹೆಚ್ಚು ಜವಾಬ್ದಾರಿಯಿಂದ ವರ್ತಿಸುವುದು ಅತ್ಯಂತ ಅಗತ್ಯ.

ಆದರೆ ಅವು ಜವಾಬ್ದಾರಿಯಿಂದ ವರ್ತಿಸದಿದ್ದರೆ ಅವುಗಳನ್ನು ನಿಯಂತ್ರಿಸುವುದು ಹೇಗೆ ಎಂಬುದೇ ಇಂದು ಸಮಾಜ ಎದುರಿಸುತ್ತಿರುವ ಪ್ರಶ್ನೆ! ಈಗಾಗಲೇ ನೋಡಿರುವಂತೆ ಪ್ರೆಸ್ ಕೌನ್ಸಿಲ್‌ಗೆ ಇರುವ ಅಧಿಕಾರ ಕೇವಲ ಛೀಮಾರಿ ಹಾಕುವುದಷ್ಟೆ. ಅದು ಮಾಧ್ಯಮಗಳ ಕೂದಲನ್ನು ಕೊಂಕಿಸುವುದಿಲ್ಲ.

ಹಾಗೆಂದು ಮಾಧ್ಯಮ ಸ್ವಾತಂತ್ರ್ಯಕ್ಕೆ ಅಂಕುಶವನ್ನು ಹೇರುವಂಥಾ ಕ್ರಮವು ಸರಿಯೇ? ಸ್ವತಂತ್ರ ಮಾಧ್ಯಮವಿಲ್ಲದೆ ಪ್ರಜಾತಂತ್ರ ಉಳಿಯಲು ಸಾಧ್ಯವೇ? ಹೀಗಾಗಿ ಮಾಧ್ಯಮದ ಮಟ್ಟಿಗೆ ಸ್ವಯಂ ನಿಯಂತ್ರಣವೇ ಒಳ್ಳೆಯದಲ್ಲವೇ? ಈ ವಾದದಲ್ಲಿ ಎಷ್ಟು ಹುರುಳಿದೆಯೋ ಅಷ್ಟೇ ಜೊಳ್ಳಿದೆ.

ಮಾಧ್ಯಮಗಳನ್ನು ನಿಯಂತ್ರಿಸುವ ಕ್ರಮಗಳನ್ನು ರೂಪಿಸುವಾಗ ಯಾವತ್ತಿಗೂ ಮಾಧ್ಯಮ ಸ್ವಾತಂತ್ರ್ಯವನ್ನು ಇಷ್ಟಪಡದ ಸರ್ಕಾರಗಳು ಪ್ರಜಾತಂತ್ರದ ಪ್ರಾಣವಾಯುವನ್ನೇ ಉಸಿರುಗಟ್ಟಿಸಬಹುದಾದ ಸಾಧ್ಯತೆ ಇದ್ದೇ ಇವೆ. ಹೀಗಾಗಿ ಒಂದು ಪ್ರಜಾತಂತ್ರದಲ್ಲಿ ತಪ್ಪೇ ನಡೆದರೂ, ಸ್ವಲ್ಪ ರಿಸ್ಕೇ ಇದ್ದರೂ ಸರ್ಕಾರೀ ನಿಯಂತ್ರಣದಿಂದ ಮುಕ್ತವಾದ ಮಾಧ್ಯಮವಿದ್ದರೆ ಒಳ್ಳೆಯದು ಎಂಬುದು ಈವರೆಗೆ ಎಲ್ಲಾ ಪ್ರಗತಿಪರರೂ ಒಪ್ಪಿಕೊಂಡು ಬಂದಿರುವ ನೀತಿ.



ಈಗ ಮಾಧ್ಯಮಗಳು ಒಂದು ಲಾಭದಾಯಕ ಉದ್ಯಮವಾಗಿ ಅದು ಸರ್ಕಾರದಿಂದ ಮುಕ್ತವಾಗಿರುವುದು ಮಾತ್ರವಲ್ಲದೇ, ತನ್ನ ಜವಾಬ್ದಾರಿಯಿಂದಲೂ ಮುಕ್ತವಾಗಿ ಮಾರುಕಟ್ಟೆಯ ಧ್ವನಿಯಾಗಿರುವ ಸಂದರ್ಭದಲ್ಲಿ ಮಾಧ್ಯಮ ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಇನ್ನೂ ಸಂಕಿರಣವಾದ ಸಮಸ್ಯೆಯನ್ನು ನಮ್ಮ ಮುಂದಿಡುತ್ತದೆ. ಅದರಲ್ಲೂ ಮಾಧ್ಯಮಗಳು ಸ್ವ ನಿಯಂತ್ರಣವನ್ನು ಹೇರಿಕೊಳ್ಳುತ್ತವೆ ಎಂಬ ಆಶಯಗಳು ಶೇ.97ರಷ್ಟು ಮಾಧ್ಯಮಗಳ ಸಂದರ್ಭದಲ್ಲಿ ಹುಸಿಯಾಗಿ ಖಟ್ಜುರವರು ಹೇಳಿರುವಂತೆ ಮಾಧ್ಯಮಗಳು ಜನಸಾಮಾನ್ಯರ ಬದುಕಿನ ಬಗ್ಗೆ ಸಂಪೂರ್ಣವಾಗಿ ಬೇಜವಾಬ್ದಾರಿಯಾಗಿ ವರ್ತಿಸುತ್ತಿರುವ ಸಂದರ್ಭದಲ್ಲಿ ಈ ಪ್ರಶ್ನೆ ಇನ್ನಷ್ಟು ಗಂಭೀರತೆಯನ್ನು ಪಡೆದುಕೊಳ್ಳುತ್ತದೆ. ಆದರೆ ನಾವಿರುವ ಸಂದರ್ಭ ಎಂತಹದ್ದೆಂದರೆ ಮಾಧ್ಯಮದ ಬೇಜವಾಬ್ದಾರಿತನವನ್ನು ತಡೆಗಟ್ಟಲು ಕಠಿಣ ಕಾನೂನನ್ನು ರೂಪಿಸಬೇಕೆಂದು ಖಟ್ಜು ಹೇಳಿದರೆ ಅದರ ಲಾಭವಾಗುವುದು ದಿನೇದಿನೇ ನಿರಂಕುಶವಾಗುತ್ತಿರುವ ಸರ್ಕಾರಕ್ಕೆ. ಅದು ಪ್ರಜಾತಂತ್ರದ ಉಸಿರನ್ನು ತೆಗೆದುಹಾಕಿದರೆ ಅದರ ನೇರ ಪ್ರಭಾವ ಬೀಳುವುದು ಸಾಮಾನ್ಯ ಜನರ ಮೇಲೆ!

ಇನ್ನು ಮಾಧ್ಯಮ ಸ್ವಾತಂತ್ರ್ಯಕ್ಕೆ ಧಕ್ಕೆ ತರಬಾರದು ಎಂದರೆ ಅದರ ನೇರ ಲಾಭವಾಗುವುದು ಕಾರ್ಪೊರೇಟ್ ಮಾಧ್ಯಮಗಳಿಗೆ ಮತ್ತು ಸಮಾಜದಲ್ಲಿ ಒಡಕನ್ನುಂಟು ಮಾಡಲು ಮಾಧ್ಯಮ ಕ್ಷೇತ್ರದಲ್ಲಿರುವ ಸಮಾಜದ್ರೋಹೀ ಶಕ್ತಿಗಳಿಗೆ...

ಹಾಗಿದ್ದಲ್ಲಿ ದಾರಿ ಏನು? ಪಾಶ್ಚಿಮಾತ್ಯ ದೇಶಗಳಲ್ಲಿ ಮಾಧ್ಯಮಗಳು ಸ್ವ ನಿಯಂತ್ರಣ ಹೇರಿಕೆಗಾಗಿ ಒಂಬುಡ್ಸ್‌ಮೆನ್‌ಗಳನ್ನು ನೇಮಿಸಿಕೊಂಡಿರುತ್ತಾರೆ. ಹಾಗಿದ್ದರೂ ಅಲ್ಲಿಯೂ ರೋಚಕತೆಯ ಹಾವಳಿಗೆ ಸಾರ್ವಜನಿಕ ಜೀವನ ಬಲಿಯಾಗುವುದು ಮತ್ತು ಸಾಮಾನ್ಯ ಜನರ ಬದುಕಿನ ವಿಷಯಗಳ ಬದಲಿಗೆ ಇತರ ಅಮುಖ್ಯ ವಿಷಯಗಳು ಹೆಚ್ಚು ಸಮಯ ಮತ್ತು ಜಾಗವನ್ನು ಆಕ್ರಮಿಸಿಕೊಳ್ಳುವುದು ತಪ್ಪಿಲ್ಲ. ಆದರೆ ತೀರಾ ಏಕಪಕ್ಷೀಯತೆ, ಕೋಮುವಾದದಂಥ ಅತಿರೇಕಗಳಿಗೆ ಹೋಗದಂತೆ ತಡೆಯೊಡ್ಡುವಲ್ಲಿ ಅವು ಬಹಳಷ್ಟು ಬಾರಿ ಸಫಲವಾಗಿವೆ. ಅದನ್ನು ನಮ್ಮಲ್ಲಿ ಪ್ರಯತ್ನಿಸಬಹುದು. ಆದರೆ ಅದಕ್ಕೆ ಪ್ರಜಾತಂತ್ರವು ತೋರಿಕೆಗಾದರೂ ಸಾಮಾಜಿಕ ಮೌಲ್ಯವಾಗಬೇಕಾದದ್ದು ಪೂರ್ವ ಶರತ್ತು. ಹಾಗಿಲ್ಲದ ಸಮಾಜದಲ್ಲಿ ಅವು ಅಲಂಕಾರಿಕವಾಗಿ ಮಾತ್ರವೇ ಉಳಿದುಬಿಡುತ್ತವೆ. ಆದ್ದರಿಂದ ನಮ್ಮಂಥಾ ದೇಶಗಳಲ್ಲಿ ಕೇವಲ ಒಂಬುಡ್ಸ್‌ಮೆನ್ ಪದ್ಧತಿ ಸಾಲುವುದೇ? ಅದರ ಬಗ್ಗೆಯೂ ಚರ್ಚೆಯಾಗಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಮಾರುಕಟ್ಟೆ ಅಧೀನ ಮಾಧ್ಯಮಗಳು ಮಾಧ್ಯಮ ಸ್ವಾತಂತ್ರ್ಯದ ಹೆಸರಲ್ಲಿ ಬೇಜವಾಬ್ದಾರಿಯಾಗಿ ವರ್ತಿಸದಂತೆ, ಬೇಜವಾಬ್ದಾರಿಯ ಹೆಸರಲ್ಲಿ ಸರ್ಕಾರ ನಿರಂಕುಶ ನಿಯಂತ್ರಣವನ್ನು ಹೇರಿ ಮಾಧ್ಯಮ ಸ್ವಾತಂತ್ರ್ಯವನ್ನು ಹರಣ ಮಾಡದಂತೆ ನೋಡಿಕೊಳ್ಳುವ ಅಗತ್ಯವಿದೆ. ಖಟ್ಜುರವರು ಮಾಡಿರುವ ಟೀಕೆಗಳಲ್ಲಿ ಕೆಲವು ಬೀಸುಮಾತಿನ ಸರಳೀಕರಣಗಳಿವೆ. ಇಡೀ ಮಾಧ್ಯಮವನ್ನು ದೋಷಿಯನ್ನಾಗಿ ತೋರುವುದು ಮತ್ತು ಮಾಧ್ಯಮ ಸ್ವಾತಂತ್ರ್ಯದ ಸಕಾರಾತ್ಮಕ ಅಂಶಗಳನ್ನು ಅವಗಣನೆ ಮಾಡಿರುವುದು ಒಪ್ಪಲಾಗದ ಅಂಶಗಳು. ಹಾಗೆಯೇ ಅದರ ಪರಿಹಾರಕ್ಕೆಂದು ಅವರು ಸೂಚಿಸುತ್ತಿರುವ ಕ್ರಮಗಳಲ್ಲಿ ನಿರಂಕುಶತೆಗೆ ಇಂಬುಗೊಡುವ ಅಂಶಗಳನ್ನು ತಡೆಗಟ್ಟುವುದು ಹೇಗೆ ಎಂಬ ಬಗ್ಗೆ ಅವರು ಅಷ್ಟಾಗಿ ತಲೆಕೆಡಿಸಿಕೊಂಡಂತೆ ಕಾಣುವುದಿಲ್ಲ.

ಮೂಲಭೂತವಾಗಿ ಅವರು ಎತ್ತಿರುವ ಪ್ರಶ್ನೆಗಳು ಸರಿಯಾಗಿವೆ. ಟೀಕೆಗಳು ಆರೋಗ್ಯಪೂರ್ಣವಾಗಿವೆ. ಮೇಲೆ ಹೇಳಿದಂತೆ ಎರಡು ಅತಿ ಪರಿಣಾಮಗಳಲ್ಲದೆ ಬೇಕಾದ ಮೂರನೇ ದಾರಿಯನ್ನು ಹುಡುಕಲು ಒಂದು ಹಿನ್ನೆಲೆಯನ್ನು ಅವರು ಒದಗಿಸಿಕೊಟ್ಟಿದ್ದಾರೆ. ಹೀಗಾಗಿ ಜಗತ್ತನ್ನೆಲ್ಲಾ ಬಾಯಿಗೆ ಬಂದಂತೆ ಟೀಕಿಸಬಲ್ಲ ಮಾಧ್ಯಮಗಳು ತಮ್ಮ ಬಗ್ಗೆ ಸಕಾರಣವಾಗಿ ಟೀಕೆ ಬಂದ ತಕ್ಷಣ ಅದನ್ನು ಸದೆಬಡೆಯಲು ಹೋಗದೆ ಅದರ ಬಗ್ಗೆ ಆರೋಗ್ಯಪೂರ್ಣ ಚರ್ಚೆಗೆ ಮುಂದಾಗಬೇಕು.

ಎಲ್ಲಕ್ಕಿಂತ ಮುಖ್ಯವಾದದ್ದು ಪ್ರಜಾತಾಂತ್ರಿಕ ಮತ್ತು ಸಕ್ರಿಯ ಪ್ರಜ್ಞಾವಂತ ಸಮಾಜ. ಅದಿಲ್ಲದೆ ಯಾವುದೂ ಪರಿಣಾಮಕಾರಿಯಾಗದು.

'ಕುಮಾರಿ'ಗೆ ಲಂಕೇಶರ ಪ್ರೇಮ ಪತ್ರ, ಭಗ್ನವಾದ ನನ್ನ ಬದುಕು



ಲಂಕೇಶರಿಗೆ ಅದೆಷ್ಟೇ ಸಿಟ್ಟು ಇದ್ದರೂ ನಮ್ಮ ಜಗಳಗಳು ಮಾತಿಗೆ, ಹೆಚ್ಚೆಂದರೆ ಬೈಗುಳಗಳಿಗೆ ಸೀಮಿತವಾಗಿರುತ್ತಿದ್ದವು. ಆದರೂ ಅವರು ನನ್ನನ್ನು ಮೂರು ಬಾರಿ ಹೊಡೆದಿದ್ದರು.

ಮೊದಲನೆಯ ಬಾರಿ ಆದದ್ದು ಹೀಗೆ: ಒಂದು ಮಧ್ಯಾಹ್ನ ಲಂಕೇಶರು ನಿದ್ರಿಸುತ್ತಿದ್ದರು. ಆಗ ಅವರ ಸ್ನೇಹಿತರಾದ ಸಿ.ಆರ್. ಸಿಂಹ ಬಂದರು. ನಾನು ಲಂಕೇಶರನ್ನು ಎಬ್ಬಿಸಲು "ರೀ, ಸಿಂಹಾ ಬಂದಿದ್ದಾರೆ" ಎಂದು ಅವರ ಭುಜ ಮುಟ್ಟಿ ಅಲ್ಲಾಡಿಸಿದೆ. ತಕ್ಷಣ ನನ್ನ ಕೆನ್ನೆಗೆ ಏಟು ಬಿತ್ತು, ಅದು ನಿದ್ದೆಯಲ್ಲಿ ಆದದ್ದು.

ಲಂಕೇಶರ ಕಾಲಿನ ಉಗುರು ತುಂಬಾ ಒರಟಾಗಿದ್ದರಿಂದ ನಾನೇ ಅದನ್ನು ಕಟ್ ಮಾಡುತ್ತಿದ್ದೆ. ಒಮ್ಮೆ ತುಂಬಾ ಹತ್ತಿರ ಉಗುರನ್ನು ಕಟ್ ಮಾಡಿ ರಕ್ತ ಬಂತು. ಆಗ ಇನ್ನೊಂದು ಏಟು ಬಿತ್ತು, ಅದು ನಿದ್ದೆಯಲ್ಲಿ ಆದದ್ದಲ್ಲ.

ಮೂರನೇ ಬಾರಿ ಏಟು ಬಿದ್ದದ್ದು ರಸ್ತೆಯಲ್ಲಿ. ಒಂದು ದಿನ ನಮ್ಮ ಮಗ ಅಜಿತು ಊಟ ಮಾಡುವುದಿಲ್ಲವೆಂದು ಹಠ ಮಾಡುತ್ತಿದ್ದ. ಆಗ ಅವನನ್ನು ರಸ್ತೆಗೆ ಕರೆದುಕೊಂಡು ಹೋಗಿ ಅಲ್ಲಿ ಏನೇನನ್ನೋ ತೋರಿಸಿ ಊಟ ಮಾಡಿಸುತ್ತಿದ್ದೆ. ರೋಡ್ ತುಂಬಾ ಓಡಾಡಿಕೊಂಡಿದ್ದ ಅಜಿತು ಜಾರಿ ಮೋರಿಗೆ ಬಿದ್ದ. ಅವನ ಬಾಯಿಗೆ ಏಟಾಗಿ, ರಕ್ತ ಸುರಿದು, ಅವನು ಜೋರಾಗಿ ಅಳಲು ಶುರುಮಾಡಿದ. ಅದನ್ನು ಕೇಳಿಸಿಕೊಂಡ ಲಂಕೇಶರು ಮನೆಯಿಂದ ಹೊರಗೆ ಬಂದು ನನಗೆ ಒಂದು ಏಟು ಕೊಟ್ಟರು.

ನಾನು ಅಜಿತುನನ್ನು ಎತ್ತಿಕೊಂಡು ಡಾಕ್ಟರ್ ಹತ್ತಿರ ಓಡಿದೆ. ಆಗ ಲಂಕೇಶರೇನು ನನ್ನೊಂದಿಗೆ ಡಾಕ್ಟರ್ ಹತ್ತಿರ ಬರಲಿಲ್ಲ. ಬಿದ್ದಿದ್ದರಿಂದ ಅಜಿತುನ ಮುಂದಿನ ಎರಡು ಹಲ್ಲುಗಳು ಉದುರಿದ್ದವು. ಅವನಿಗೆ ಆಗಿನ್ನೂ ಹಲ್ಲು ಬಿದ್ದು ಹೊಸದು ಹುಟ್ಟಿರಲಿಲ್ಲವಾದ್ದರಿಂದ ಹಲ್ಲು ಬರುತ್ತವೆ ಎಂದು ಡಾಕ್ಟರ್ ಹೇಳಿದರು. ಅವನ ಊದಿದ್ದ ಮುಖ ಒಂದು ವಾರದ ನಂತರ ಸರಿಹೋಯಿತು.

****

ವಾರಕ್ಕೊಮ್ಮೆ ನಾನು ನಮ್ಮ ಮೂವರು ಮಕ್ಕಳಿಗೆ ಮತ್ತು ಲಂಕೇಶರಿಗೆ ಎಣ್ಣೆನೀವಿ ಸ್ನಾನ ಮಾಡಿಸುತ್ತಿದ್ದೆ. ಒಮ್ಮೆ ನನಗೆ ತುಂಬಾ ಜ್ವರ ಬಂತು. ಆದರೆ ಅಷ್ಟು ಹೊತ್ತಿಗೆ ಮಕ್ಕಳಿಗೆ ಎಣ್ಣೆ ಹಚ್ಚಿ ಆಗಿತ್ತು. ಆಗ ಲಂಕೇಶರು ತಾವೇ ಮಕ್ಕಳಿಗೆ ಸ್ನಾನ ಮಾಡಿಸುತ್ತೇನೆ ಎಂದರು. ಮೂರು ಮಕ್ಕಳನ್ನು ಬಚ್ಚಲಮನೆಗೆ ಕರೆದುಕೊಂಡು ಹೋದರು. ಆಗ ಶಾಂಪೂ ಇರಲಿಲ್ಲ. ಸೀಗೆಪುಡಿ ಹಾಕಿ, ಎಣ್ಣೆ ಹೋಗುವ ತನಕ ಚೆನ್ನಾಗಿ ತಿಕ್ಕಿ ಸ್ನಾನ ಮಾಡಿಸಬೇಕಿತ್ತು. ಅದೆಲ್ಲ ಲಂಕೇಶರಿಂದ ಹೇಗೆ ಸಾಧ್ಯ? ಅವರು ಮಕ್ಕಳ ಮೇಲೆ ಒಂದಿಷ್ಟು ಸೀಗೆ ಪುಡಿ ಹಾಕಿ, ಬಿಸಿ ನೀರು ಸುರಿಯಲು ಪ್ರಾರಂಭಿಸಿದರು. ಆಗ ನಮ್ಮ ದೊಡ್ಡ ಮಗಳು ಗೌರಿ "ಅಮ್ಮಾ, ಅಪ್ಪ ಉಜ್ಜಲೇ ಇಲ್ಲ, ಎಣ್ಣೆ ಹೋಗಲೇ ಇಲ್ಲ" ಅಂತ ಕೂಗಿದಳು. ನಾನೇ ಬಚ್ಚಲು ಮನೆಯಲ್ಲಿ ಒಂದು ಸ್ಟೂಲ್ ಹಾಕಿಕೊಂಡು ಮೇಲುವಿಚಾರಣೆ ವಹಿಸಬೇಕಾಯಿತು!

****

ನರಪೇತಲುಗಳಾಗಿದ್ದ ನಮ್ಮ ಮೂವರು ಮಕ್ಕಳಿಗೆ ಅಂಗಡಿಯಿಂದ ರೆಡಿಮೇಡ್ ಬಟ್ಟೆ ತಂದರೆ ಅವು ತುಂಬಾ ಲೂಸ್ ಆಗಿರುತ್ತಿದ್ದವು ಮತ್ತು ದುಬಾರಿ ಕೂಡ ಆಗಿರುತ್ತಿದ್ದವು. ಆದ್ದರಿಂದ ನಾನು ಕಿಡ್ಡೀಸ್ ಕಾರ್ನರ್ ತರಹದ ಅಂಗಡಿಗಳಿಗೆ ಹೋಗಿ ಅಲ್ಲಿ ಶೋ ಕೇಸ್‌ನಲ್ಲಿ ಹಾಕಿದ್ದ ಚಂದದ ಬಟ್ಟೆಗಳ ಡಿಸೈನ್‌ಗಳನ್ನು ನೋಡಿಕೊಂಡು ಬಂದು ಆ ಡಿಸೈನ್‌ಗಳನ್ನು ಒಂದು ಹಾಳೆಯಲ್ಲಿ ಬರೆದುಕೊಳ್ಳುತ್ತಿದ್ದೆ. ಆನಂತರ ಅಂಗಡಿಗೆ ಹೋಗಿ ಆ ಡಿಸೈನ್‌ಗೆ ಸೂಕ್ತವಾದಂತಹ ಬಟ್ಟೆ ತಂದು ಟೈಲರ್‌ಗೆ ಬರೆದಿಟ್ಟುಕೊಂಡಿದ್ದ ಡಿಸೈನ್ ತೋರಿಸಿ ಹೊಲಿಸುತ್ತಿದ್ದೆ. ಗಾಂಧಿಬಜಾರ್‌ನಲ್ಲಿದ್ದ ರಾಮನ್ ಟೈಲರ್ ಮಕ್ಕಳ ಬಟ್ಟೆಗಳನ್ನು ನೀಟಾಗಿ ಹೊಲೆದು ಕೊಡುತ್ತಿದ್ದರು. ನಮ್ಮ ಮಕ್ಕಳು ಚೆಂದದ ಬಟ್ಟೆ ಧರಿಸುತ್ತಾರೆಂದು ಎಲ್ಲರೂ ಹೇಳುತ್ತಿದ್ದರು.

****

ಒಂದು ರಾತ್ರಿ ಗಾಂಧಿ ಬಜಾರಿನಲ್ಲಿದ್ದ ಗಣೇಶ ಬೇಕರಿಯಲ್ಲಿ ಬಾದಾಮಿ ಹಾಲು ಕುಡಿಯಲು ನಾನು, ಲಂಕೇಶ್ ಮತ್ತು ರಾಮಚಂದ್ರ ಶರ್ಮ ಹೋಗಿದ್ದೆವು. ಬೇಕರಿಯಲ್ಲಿ ರಾಮಚಂದ್ರ ಶರ್ಮ ಅವರು ಲಂಕೇಶರ ಮುಂದೆ ಮಂಡಿ ಊರಿ ಕುಳಿತು:

"ನಿನಗೇಕೆ ಇಂಥ ಜಿಂಕೆಯಂಥ ಕಣ್ಣು,

ರೆಪ್ಪೆಗಳು ಬಾಗಿ ಹುಬ್ಬನ್ನು ಮಟ್ಟುತ್ತಿವೆಯಲ್ಲ,

ಎಂಥ ಸುಂದರ ಕಣ್ಣುಗಳು.."

ಎಂದು ಲಂಕೇಶರ ಕಣ್ಣುಗಳನ್ನು ಹೊಗಳುವ ಒಂದು ಕಾವ್ಯವನ್ನೇ ಹೇಳಿದರು. ಅದನ್ನು ಕೇಳಿದ ನನಗೆ ನಕ್ಕೂನಕ್ಕೂ ಸಾಕಾಯಿತು.


ಲಂಕೇಶರ ಕಣ್ಣು ನಿಜಕ್ಕೂ ತುಂಬಾ ಚೆನ್ನ.

****

ನಮ್ಮ ದೂರದ ಸಂಬಂಧಿ ಮತ್ತು ನನ್ನ ತಮ್ಮನ ಸ್ನೇಹಿತನಾಗಿದ್ದ ಕೊಟ್ರಪ್ಪ ಎಂಬುವವರು ಒಮ್ಮೆ ನಮ್ಮ ಮನೆಗೆ ಬಂದಿದ್ದಾಗ "ಅಕ್ಕ, ನಾನು ಹೀಗೆ ಹೇಳುತ್ತೇನೆ ಅಂತ ಬೇಜಾರು ಮಾಡಿಕೊಳ್ಳಬೇಡ. ಲಂಕೇಶಪ್ಪನವರಿಗೆ ಕಾಲೇಜ್‌ನಲ್ಲಿ ಯಾವುದೋ ಹುಡುಗಿ ಅಥವಾ ಲೆಕ್ಚರರ್ ಜೊತೆ ಅಫೇರ್ ಇದೆಯಂತೆ. ಹುಷಾರು" ಎಂದ. ಆತ ನನಗೆ ಹೀಗೆ ಹೇಳಿದಾಗ ಲಂಕೇಶರು ತಮ್ಮ ರೂಮ್‌ನಲ್ಲೇ ಇದ್ದರು. ಕೊಟ್ರಪ್ಪನ ಮಾತು ಕೇಳಿ ನನಗೆ ನಗು ಬಂತು. ಕೂಡಲೇ ನಾನು "ರೀ, ಬನ್ನಿ ಇಲ್ಲಿ, ಕೊಟ್ರಪ್ಪ ಏನು ಹೇಳುತ್ತಿದ್ದಾನೆ ನೋಡಿ. ನಿಮಗೆ ಯಾರೋ ಸ್ನೇಹಿತೆ ಇದ್ದಾಳಂತೆ" ಅಂದೆ. ಲಂಕೇಶರು ತಮ್ಮ ರೂಮಿನಿಂದ ಹೊರಬಂದು ಒಮ್ಮೆ ಕೊಟ್ರಪ್ಪನನ್ನು ದುರುಗುಟ್ಟಿ ನೋಡಿ ಹೊರಟುಹೋದರು.

ನಾನು ಈ ರೀತಿ ಲಂಕೇಶರಿಗೆ ಹೇಳುತ್ತೇನೆ ಎಂದು ಪಾಪ ಕೊಟ್ರಪ್ಪ ಭಾವಿಸಿರಲಿಲ್ಲ, ಆತನ ಮುಖ ಪೆಚ್ಚಾಯಿತು. ಅದನ್ನು ನೋಡಿದ ನಾನು ನಗುತ್ತಾ "ನಿನಗೆ ಯಾರೋ ತಪ್ಪು ಹೇಳಿದ್ದಾರೆ. ಲಂಕೇಶರು ಅಂಥವರಲ್ಲ" ಎಂದೆ. ಆಗ ಆತನೂ ನಾನು ಹೇಳಿದ್ದು ಸರಿ ಇರಬಹುದು ಎಂದುಕೊಂಡು ಹೋದ.

ಇದಾದ ಹಲವಾರು ದಿನಗಳ ನಂತರ ಒಂದು ದಿನ ನಾನು ಮನೆಯ ಕಸ ಗುಡಿಸುತ್ತಿದ್ದಾಗ ಲಂಕೇಶರ ರೂಮಿನಲ್ಲಿದ್ದ ಕಸದ ಬುಟ್ಟಿಯನ್ನು ಖಾಲಿ ಮಾಡಿದೆ. ಆ ಬುಟ್ಟಿಯಲ್ಲಿ ಲಂಕೇಶರು ಬರೆದು ಆನಂತರ ಹರಿದು ಹಾಕಿದ್ದ ಪತ್ರವೊಂದು ಕಾಣಿಸಿತು. ಅದೇಕೆ ಆ ಕಾಗದದ ಚೂರುಗಳು ನನ್ನ ಗಮನ ಸೆಳೆದವು ಗೊತ್ತಿಲ್ಲ, ನಾಲ್ಕು ಭಾಗಗಳಾಗಿ ಹರಿದು ಹೋಗಿದ್ದ ಆ ಪತ್ರವನ್ನು ಜೋಡಿಸಿದೆ.



ಲಂಕೇಶರು ಯಾರಿಗೋ ಬರೆದಿದ್ದ ಆ ಪತ್ರದ ಸಾರಾಂಶ ಹೀಗಿತ್ತು:


"ನಾನು ನಿನ್ನನ್ನು ತುಂಬಾ ಇಷ್ಟ ಪಡುತ್ತೇನೆ. ನೀನೂ ನನ್ನನ್ನು ಇಷ್ಟ ಪಡುತ್ತೀಯಾ ಅಂತ ಗೊತ್ತು. ಆದರೂ ಯಾಕೆ ಇತ್ತೀಚೆಗೆ ನನ್ನನ್ನು ಸರಿಯಾಗಿ ಮಾತನಾಡಿಸುತ್ತಿಲ್ಲ ನೀನು? ನಿನ್ನ ಈ ವರ್ತನೆಯಿಂದ ನನಗೆ ತುಂಬಾ ಬೇಜಾರಾಗಿದೆ. ಯಾಕೆ ನೀನು ಹೀಗೆ ಮಾಡುತ್ತಿದ್ದಿಯಾ?

ನಿನ್ನನ್ನು ಬಿಟ್ಟಿರಲು ನನ್ನಿಂದ ಸಾಧ್ಯವಿಲ್ಲ, ನಾವಿಬ್ಬರೂ ಎಲ್ಲಿಗಾದರೂ ಹೋಗಿ ಬಿಡೋಣ. ನನಗೆ ಹೆಂಡತಿ ಮಕ್ಕಳು ಯಾರೂ ಬೇಡ. ನಾವಿಬ್ಬರೇ ಬಹುದೂರ ಹೋಗೋಣ. ದಯವಿಟ್ಟು ನನಗೆ ನಿರಾಶೆ ಮಾಡಬೇಡ..."

–ಆ ಪತ್ರವನ್ನು ಮತ್ತೆ ಮತ್ತೆ ಓದಿದೆ. ಅದೆಷ್ಟು ಸಾರಿ ಓದಿದೆನೋ ಗೊತ್ತಿಲ್ಲ, ನಾನು ಕೂತಿದ್ದ ಕಡೆಯೇ ಒಂದು ಗಂಟೆಗೂ ಹೆಚ್ಚು ಸಮಯ ಕೂತೇ ಇದ್ದೆ. ಯಾವ ರೀತಿ ಯೋಚನೆ ಮಾಡಿದರೂ ನನಗೆ ಏನೂ ತಿಳಿಯಲಿಲ್ಲ, ಏನಾಯಿತು? ಹೇಗಾಯಿತು? ಯಾಕೆ ಹೀಗಾಯಿತು? ಒಂದೂ ತೋಚಲಿಲ್ಲ, ಗಂಟೆಗಳು ಉರುಳಿದವು. ಕೆಲಸ ಅರ್ಧಕ್ಕೆ ನಿಂತಿತ್ತು, ಮಂಕು ಬಡಿದವಳಂತೆ ಕೂತಲ್ಲೇ ಕೂತಿದ್ದೆ....

ಮಕ್ಕಳು ಸ್ಕೂಲಿನಿಂದ ಬಂದರು. ಅವರಿಗೆ "ಯಾಕೋ ನನಗೆ ಮೈಯಲ್ಲಿ ಹುಷಾರಿಲ್ಲ" ಎಂದು ಸುಳ್ಳು ಹೇಳಿ ಮಲಗಿಬಿಟ್ಟೆ. ನನ್ನ ದುಃಖವನ್ನು, ಸಂಕಟವನ್ನು, ನಾನಿದ್ದ ಪರಿಸ್ಥಿತಿಯನ್ನು ಯಾರೊಂದಿಗೆ ಹೇಳಿಕೊಳ್ಳಲಿ? ಮೊದಲೇ ತಾಯಿ ಇಲ್ಲ, ತಂದೆಯನ್ನು ಮಾತಾಡಿಸುವಂತೆ ಇಲ್ಲ, ನಾನು ಲಂಕೇಶರನ್ನು ಇಷ್ಟಪಟ್ಟಿದ್ದೆ, ಪ್ರೀತಿಸಿದ್ದೆ. ಅವರೊಂದಿಗೆ ಜೀವನದಲ್ಲಿ ಎಷ್ಟು ಕಷ್ಟಗಳು ಎದುರಾದರೂ ಅದನ್ನೆಲ್ಲ ನಾನೇ ಎದುರಿಸುತ್ತೇನೆಯೇ ಹೊರತು ಅಪ್ಪಯ್ಯನ ನೆರವು ಕೇಳುವುದಿಲ್ಲ ಎಂದಿದ್ದೆ. ಈಗ ನಾನು ಯಾರೊಂದಿಗೆ ಇದನ್ನೆಲ್ಲ ಹೇಳಿಕೊಳ್ಳುವುದು? ಶಾಕ್‌ನಿಂದ ತಬ್ಬಿಬ್ಬಾದೆ.

ಮುಂದೆ ನನ್ನ ಗತಿ ಏನು? ಅದಕ್ಕಿಂತ ಮುಖ್ಯವಾಗಿ ನನ್ನ ಮಕ್ಕಳ ಗತಿ ಏನು? ಆಕೆಗೆ "ಮಕ್ಕಳನ್ನು ಬಿಟ್ಟು ಎಲ್ಲಿಗಾದರೂ ಹೋಗೋಣ" ಎಂದು ಹೇಳಲು ಲಂಕೇಶರಿಗೆ



ಅದು ಹೇಗಾದರೂ ಮನಸ್ಸು ಬಂತು? ಹಾಗೆ ಬರೆಯಲು ಅವರಿಗೆ ಅದು ಹೇಗೆ ಸಾಧ್ಯವಾಯಿತು?

ಯೋಚನೆ, ಬರೀ ಯೋಚನೆ.

ಏನೂ ತಿಳಿಯುತ್ತಿಲ್ಲ.

ಮತ್ತೆ ಮತ್ತೆ ಆ ಕಾಗದವನ್ನು ಓದಿದೆ. ಅದರಲ್ಲಿ ಅವಳ ಹೆಸರಿರಲಿಲ್ಲ, ಆದರೆ ಆಕೆಯ ಹೆಸರು ಕಟ್ಟಿಕೊಂಡು ನನಗೆ ಏನೂ ಆಗಬೇಕಿರಲಿಲ್ಲ. ಲಂಕೇಶರು ಹಾಗೆ ಬರೆದದ್ದೇ ನನಗೆ ಅರ್ಥಮಾಡಿಕೊಳ್ಳದಷ್ಟು ಶಾಕ್ ನೀಡಿತ್ತು.

ನಾನು ಎಲ್ಲಿ ತಪ್ಪು ಮಾಡಿದೆ? ಏನು ತಪ್ಪು ಮಾಡಿದೆ? ನನ್ನ ಮತ್ತು ಲಂಕೇಶರ ನಡುವಿನ ಸಂಬಂಧದ ಅರ್ಥ ಇಷ್ಟೇನಾ? ಮತ್ತೆ ಮತ್ತೆ ಅದೇ ಯೋಚನೆ.

ಸಂಜೆಗೆ ಲಂಕೇಶರು ಮನೆಗೆ ಬಂದರು. ಅವರು ಬರೆದು ಬಿಸಾಡಿದ್ದ ಕಾಗದವನ್ನು ಅವರ ಮುಂದೆ ಹಿಡಿದೆ. ಲಂಕೇಶರಿಗೆ ಸುಳ್ಳು ಹೇಳಲು ಬರುತ್ತಿರಲಿಲ್ಲ. ಹಾಗೊಮ್ಮೆ ಬಂದಿರುತ್ತಿದ್ದರೆ ಆ ಪತ್ರವನ್ನು ತಾನು ಬರೆದ ಕತೆ ಎಂದೋ, ಕಾಲ್ಪನಿಕ ಪ್ರೇಮ ಪತ್ರವೆಂದೋ ಸಬೂಬು ಹೇಳುತ್ತಿದ್ದರೇನೋ. ಆದರೆ ಹಾಗೆ ಸುಳ್ಳು ಹೇಳಿ ತಪ್ಪಿಸಿಕೊಳ್ಳುವ ಬದಲು ಅವರು "ಅದೆಲ್ಲ ಹಳೆ ಕಥೆ. ಈಗ ಅವಳಿಲ್ಲ, ಫಾರಿನ್‌ಗೆ ಹೋಗಿದ್ದಾಳೆ. ಅದೂ, ಇದೂ..." ಎಂದೆಲ್ಲ ಏನೇನೋ ಹೇಳಿದರು.

ಅದನ್ನು ಕೇಳಿ ನನಗೆ ನಿರಾಶೆ ಮತ್ತು ಕೋಪ ಎರಡೂ ಉಕ್ಕಿಬಂದವು. "ಅದು ಹೇಗೆ ನೀವು ನಿಮ್ಮ ಮಕ್ಕಳನ್ನೂ ಆಕೆಗಾಗಿ ಬಿಟ್ಟು ಹೋಗಲು ರೆಡಿ ಆಗಿದ್ರೀ?" ಎಂದೆ.

"ಅದೆಲ್ಲಾ ಮುಗಿದ ಕಥೆ. ಆ ವಿಚಾರ ಬೇಡ" ಎಂದರು ಲಂಕೇಶರು.

"ಬೇಡ ಎಂದರೆ ಹೇಗೆ? ನೀವು ನನಗೆ ಪತ್ರ ಬರೆಯುತ್ತಿದ್ದಾಗ ಏನೆಂದು ಬರೆಯುತ್ತಿದ್ದಿರಿ? ನಾವಿಬ್ಬರು ಹಾಗಿರಬೇಕು, ಹೀಗಿರಬೇಕು ಅಂತ ಬರೀತಿದ್ರೀ. ಆದರೆ ಈಗ ಅದು ಯಾವಳಿಗೋ ಹೆಂಡತಿ ಮಕ್ಕಳನ್ನು ಬಿಡಲು ಎಂದು ಬರೆದಿದ್ದೀರಿ..." ಎಂದು ಅವರೊಂದಿಗೆ ದೊಡ್ಡ ಜಗಳ ಆಡಿದೆ.

ನನಗೆಷ್ಟು ಕೋಪ ಬಂದಿತ್ತೆಂದರೆ ಲಂಕೇಶರು ನ[...] ಬರೆದಿದ್ದ ಪತ್ರಗಳನ್ನು, ನಾನು ತೆಗೆದಿದ್ದ ಅವರ [...] ಫೋಟೋಗಳನ್ನು ಹರಿದು ಅವಕ್ಕೆ ಬೆಂಕಿ ಹಚ್ಚಿ ಸು[...] ಹಾಕಿದೆ. ಅಷ್ಟೇ ಅಲ್ಲ, ನನ್ನ ಮತ್ತು ಲಂಕೇಶರ ಸಂಬ[...] ಮುಗಿಯಿತು ಎಂದು ನಾನು ಹಾಕಿಕೊಂಡಿದ್ದ ತಾಳಿಯ[...] ತೆಗೆದೆ.

ಕಣ್ಣೀರಿಡುತ್ತಾ ಹಾಸಿಗೆಯಲ್ಲಿ ಮಲಗಿದವಳು ಮ[...] ಏಳಲಿಲ್ಲ, ಹೀಗೆ ಕೆಲದಿನ ಕಳೆಯಿತು. ಲಂಕೇಶರು "[...] ಹಾಕಿಕೋ. ಈಗ ಅವಳಿಲ್ಲ" ಎಂದು ಏನೇನೋ ಹ[...] ಹಲವಾರು ಬಾರಿ ಬೇಡಿಕೊಂಡರೂ ನಾನು ಅವರ ಮಾ[...] ಕೇಳದೆ ಸುಮ್ಮನೆ ಮಲಗಿರುತ್ತಿದ್ದೆ.

ನಾನು ವಿದ್ಯಾವಂತೆ ಅಲ್ಲ, ಲಂಕೇಶರನ್ನು ಮದ[...] ಆಗುವ ಮುನ್ನ ನಾನು ಓದಿದ್ದು ಕೇವಲ ಮೊದಲನೆ ಪಿಯ[...] ತನಕ. ಲಂಕೇಶರ ಜೊತೆ ಸಾಹಿತ್ಯದ ಬಗ್ಗೆ ಚರ್ಚಿಸಲು ನ[...] ಬರುತ್ತಿರಲಿಲ್ಲ, ರಾಜಕೀಯ ಗೊತ್ತಿರಲಿಲ್ಲ, ಆದರೂ ಲಂ[...]ರನ್ನು ಅಷ್ಟು ಇಷ್ಟಪಟ್ಟೆನಲ್ಲ, ನನಗೆ ತಂದೆ-ತಾಯಿ ಎರ[...] ಆಗಿದ್ದ ನನ್ನ ಅಪ್ಪಯ್ಯನ ಮಾತನ್ನೂ ಮೀರಿ ಲಂಕೇಶರ[...] ಮದುವೆ ಆಗಿದ್ದೆನಲ್ಲ, ನನಗೆ ಸರಿಯಾದ ಶಿಕ್ಷೆ ಆಯ[...] ಎಂದುಕೊಂಡೆ.

ಆಗ ಗೌರಿ ಹಬ್ಬ ಬಂತು. ನಾನು ಆ ದಿನವೂ [...] ಮಾಡದೆ ಮಲಗಿದ್ದೆ. ನಮ್ಮ ಪರಿಚಯದವರು ಬಾ[...] ಕೊಡಲು ನಮ್ಮ ಮನೆಗೆ ಬಂದರು. ನಾನು ರೂಮಿನಿ[...] ಹೊರಬರದೆ ನನಗೆ ಹುಷಾರಿಲ್ಲ ಎಂದರೂ ಅವರು ಕೇಳ[...] ಲಂಕೇಶರು ಬಂದು "ಅವರಿಂದ ಬಾಗಿನ ತಗೋ" ಎಂದ[...] ಬಾಗಿನ ತೆಗೆದುಕೊಳ್ಳಬೇಕೆಂದರೆ ನಾನು ಮತ್ತೆ ತ[...] ಹಾಕಿಕೊಳ್ಳಬೇಕು. ಆದರೆ ಹಾಗೆ ಮಾಡದೆ ನಾನು ಸೀರೆ ಸೆರಗನ್ನು ಸುತ್ತ ಎಳೆದುಕೊಂಡು ಬಾಗಿನ ತೆಗೆದುಕೊಂ[...] ಸುಮ್ಮನಾದೆ.

ಅವತ್ತಿನಿಂದ ನನ್ನ ಜೀವನ [...] ಬೇರೆ ದಾರಿ ಹಿಡಿಯಲಿದೆ ಎಂ[...] ನನಗೆ ಅರ್ಥವಾಯಿತು. ಆದರೆ ನನ್ನ ಕಣ್ಣ ಮುಂದೆ ಯಾವ ದಾರಿಯೂ ಕಾಣಿಸುತ್ತಿರಲಿಲ್ಲ.

ನನ್ನ ಹೆಣ್ಣು ಮಕ್ಕಳು ತ[...] ಕಾಲ ಮೇಲೆ ನಿಲ್ಲುವವರೆ[...] ಅವರಿಗೆ ಮದುವೆ ಮಾಡಬಾರ[...] ಅವರೆಂದೂ ನನ್ನಂತೆ ಅಸಹಾ[...]ಸ್ಥಿತಿಯನ್ನು ಎದುರಿಸಬಾರದು, ವಿಧಿ ಇಲ್ಲದೆ ಪುರುಷನೊ[...] ಜೊತೆ ಬಲವಂತದಿಂದ ನನ್ನ ಮಕ್ಕಳು ಇರಕೂಡ[...] ಅವರನ್ನು ಚೆನ್ನಾಗಿ ಓದಿಸಬೇಕು ಎಂದೆಲ್ಲ ಯೋಚಿಸಿದೆ. ಆ[...] ಅದೆಲ್ಲ ಹೇಗೆ ಸಾಧ್ಯ? ನಾನು ಓದಿರಲಿಲ್ಲ, ಆದಾ[...] ತರುವಂತಹ ಕೆಲಸ ಗೊತ್ತಿರಲಿಲ್ಲ, ಕೈಯಲ್ಲಿ ದುಡ್ಡಿರಲಿ[...]

. ಕತ್ತಲ ಭವಿಷ್ಯ ನನ್ನನ್ನು ಆವರಿಸಿತು. ನನ್ನ ಮಕ್ಕ[...] ಸಾಕುವುದಕ್ಕೆ ನನ್ನ ಕೈಯಲ್ಲಿ ಆಗದಿದ್ದರೆ ಅವರನ್ನೆಲ್ಲ ಸಾ[...] ನಾನೂ ಸಾಯಬೇಕು ಎಂದುಕೊಂಡೆ. ಆದರೆ ಈ ಜೀವನ[...] ಅದೆಷ್ಟು ಸೋಲು ಕಂಡರೂ ನನ್ನ ಅಪ್ಪಯ್ಯನ ಮ[...] ಹೋಗಬಾರದು ಎಂದು ನಿಶ್ಚಯಿಸಿದೆ.

ಇದಾದ ಎಷ್ಟೋ ದಿನಗಳ ನಂತರ ಲಂಕೇಶರು ಯಾ[...] ಆ ಪತ್ರವನ್ನು ಬರೆದಿದ್ದರು ಎಂದು ಗೊತ್ತಾಯಿತು. ಆಕೆ ಅ[...] ಶಿಷ್ಯೆ ಆಗಿದ್ದವಳು. ವಿದ್ಯಾವಂತೆ. ಆಕೆಯನ್ನು ಲಂಕೇಶರು ತ[...] ಆತ್ಮಕಥನ 'ಹುಳಿಮಾವಿನ ಮರ'ದಲ್ಲಿ 'ಕುಮಾರಿ' ಎಂ[...] ಕರೆದಿದ್ದಾರೆ.




ಕವಿತಾ ಮತ್ತು ಗೌರಿ ಜೊತೆ ಶಾಂತಾಳ ಮಗ ವಿವೇಕ್‌ನನ್ನು ಕೂರಿಸಿಕೊಂಡಿರುವ ಕೊಟ್ರಪ್ಪ.

ಇದಾದ ನಂತರ ಲಂಕೇಶರು ನನ್ನೊಂದಿಗೆ ತುಂ[...] ವಿನೀತರಾಗಿ ನಡೆದುಕೊಳ್ಳಲು ಶುರು ಮಾಡಿದರು. ಆ[...] ನನಗೆ ನನ್ನದೇ ಚಿಂತೆ. ಹೇಗಾದರೂ ಮಾಡಿ ಏನಾದರು ಕೆ[...] ಮಾಡಬೇಕು. ಆದರೆ ಏನು ಮಾಡುವುದು? ನಾನು ಓ[...] ಪಿಯುಸಿಗೆ ಎಂತಹ ಕೆಲಸ ಸಿಗಲು ಸಾಧ್ಯ? ಇಂ[...] ತೊಳಲಾಟಗಳಲ್ಲೇ ಕಾಲ ಕಳೆಯುತ್ತಿದ್ದೆ.

ಇಂತ ಸಾಯಿತ್ಯ ಸಮ್ಮೇಳನ ಯಾಕ್ ನಡೀಬೇಕ್ಲ!

ಊರ ಮುಂದೆ ನಿಂತು ಮೂಡಲ ದಿಕ್ಕಿನ ಹೊಲ ಮಾಳ ನೋಡಿದ ಕಾಳಮಾವನಿಗೆ ಎಷ್ಟು ಸಮಾಧಾನ ಆಯಿತೆಂದರೆ, ಪರಪ್ಪನ ಅಗ್ರಹಾರದ ಜೈಲಿಂದ ಹೊರ ಬಂದು ತನ್ನಂತಹ ಜನಗಳನ್ನು ನೋಡಿ ಮಹದಾನಂದ ಗೊಂಡ ಎಡೂರಪ್ಪನಿಗಾದಂತೆಯೇ ಆಯಿತು. ಅಕಾಲ ಮಳೆಯ ದೆಸೆಯಿಂದ ಇನ್ನೇನು ಬರಗಾಲ ಬಂತು ಎಂಬಂತೆ



...ಆಗಿ ನಿಂತಿದ್ದ ರಾಗಿ ಪೈರು, ಅಡ್ಡಾದಿಡ್ಡಿಯ ಅಡ್ಡಮಳೆಗೆ ...ಕ್ಕ ನಳನಳಿಸತೊಡಗಿತ್ತು. ಹೊಸ ಜೀವದ ಕಳೆಯಲ್ಲಿ ಬಂದ ಪೈರನ್ನು ನೋಡಿ ಬಂದ ಕಾಳಮಾವ,

"ಲೇ ಉಗ್ರಿ, ನಮ್ಮ ತಾಲೋಕ ಬರಗಾಲ್ದ ಪಟ್ಟಿಲಿ ಸೇರಸದು ಬ್ಯಾಡ ಅಂತ ಹೇಳ್ಳ ಅತ್ತಗೆ" ಎಂದ.

"ಯಾಕ್ ಮಾವ? ಬರದು ಬರ್ಲಿ ಬುಡು."

"ಬರದನ್ಯಲ್ಲ ಅಧಿಕಾರಿಗಳು ಹಂಚಗತ್ತರೆ ಕಂಡ್ಯ. ಪರಿಯಾರದ ಹಣ ಅತ್ತಗೆ ಸರಕಾರದಲ್ಲೂ ಇಲ್ಲ, ಇತ್ತಗೆ ರೈತರಿಗೂ ಸಿಗಲಿಲ್ಲ ಅನ್ನಂಗಾಯ್ತದೆ."

"ನೀನೇಳದು ನಿಜ ಕಣ ಮಾವ. ಇವತ್ತು ಅಧಿಕಾರಿಗಳು ಮುಂಗಾಗ್ಯವುರೆ ಅಂದ್ರೆ ಬೇಕಾದೋಟು ಬಂಗ್ಲೆ ಕಟ್ಯವುರೆ. ಮನೆ ಮಕ್ಕಳಿಗ್ಯೆಲ್ಲ ಕಾರು ಕೊಡಿಸ್ಯವುರೆ. ಹೆಂಡಿರ ಮ್ಯಾಲೆ ...ಜಿ. ಗಟ್ಟೆ ಬಂಗಾರ ಹಾಕ್ಯವುರೆ. ಆ ದುಡ್ಯಲ್ಲ ಎಲ್ಲಿಂದ ಬತ್ತು ಅಂತಿ? ಅವ್ಯಲ್ಲ ಬರಗಾಲ್ದ ಕಾಮಗಾರಿ ದುಡ್ಡೆ ಕಣಮಾವ."

"ಬರಗಾಲ ಅಂತ ಏನು ಕೊಡಬಾರ್ದ ಕೊಟ್ಟರೇನ್ಲ. ಆರು ಕಾಸನೋ ಮೂರು ಕಾಸನೋ ಕೊಡ್ತರೆ" ಎಂದಳು ಜುಮ್ಮಿ.

"ಅದ್ಕೆ ಯಾಕೆ ಕೈಯೊಡ್ಡಬೇಕೆ. ಮನುಸುನಿಗೆ ಸ್ವಾಭಿಮಾನ ಇರಬೇಕು."

"ಅಂಗಂದ್ರೇನೊ ಉಗ್ರಿ?" ಎಂದು ವಾಟಿಸ್ಸೆ ಬಂದ.

"ಯಾಕ್ಲ ಅಂಕೇಳ್ತಿನಿನಿಗ್ಗೊತ್ತಿಲವೆ?" ಎಂದಳು ಜುಮ್ಮಿ.

"ಪರ್‌ಪೆಕ್ಟಾಗಿ ಗೊತ್ತಿಲ್ಲ ಕಣಕ್ಕ."

"ಸಾಯಿತ್ಯ ಸಮ್ಮೇಳನಕೆ ಹೋಗಿದ್ಯಲ್ಲಾ, ಅಲ್ಲೇ ಯಾವ ಸಾಹಿತಿನಾರ ಹಿಡಕಂಡು ಕೇಳಬೇಕಾಗಿತ್ತು."

"ಅಲ್ಲಿ ಅಂತ ಸಾಯಿತಿಗಳ್ಯಾರು ಬಂದಿರಲಿಲ್ಲ ಕಣೊ ಉಗ್ರಿ. ನಾನೂ ಹೋಯ್ತಿರಲಿಲ್ಲ. ಈ ಪ್ರಜಾವಾಣೆಲಿ ಚುಂಚುನಗಿರಿಲಿ ನ್ಯಡಿಯೋ ಸಾಹಿತ್ಯ ಸಮ್ಮೇಳನದಲ್ಲಿ ಎಂತ್ಯಂತ ಅಡುಗೆ ಮಾಡಿಸ್ಯವುರೆ ಅಂತ ಅದರ ಲಿಸ್ಟಾಕಿದ್ರು. ಅದ ಓದಿಬುಟ್ಟೆ. ಬಾಯಿ ನೀರು ಬಂದೊ. ಅದುಕೋಗಿದ್ದೆ."

"ನೀನು ವಳ್ಳೆ ಊಟ ಕಂಡ್ರೆ ಅಷ್ಟಕಸ್ಟೆಯಾ. ಅದ್ರು ಯಾಕೋಗಿದ್ಲ?"

"ಯಾಕೆ ಅಂದ್ರೆ, ಈಚಿಗೆ, ಅಂದ್ರೆ ಶರಾಪ ಬುಟ್ಟು ಕಾಜಾವಿಸ್ಕಿ ಕುಡಿಯಕ್ಕೆ ಸುರು ಮಾಡಿದ ಮ್ಯಾಲೆ, ಯಾಕೊ ವಳ್ಳೆ ಮೀಲ್ಸ್ ಕಂಡ್ರೆ ಇಷ್ಟ ಕಣಕ್ಕ. ಅದಕ್ಕಿಂತ್ಲೂ ಸಾಯಿತ್ಯ ಸಮ್ಮೇಳನ ಅಂದ್ರೆ ಅಲ್ಲಿ ಚನ್ನಾಗಿ ಮಾತಾಡೊ ಸಾಯಿತಿಗಳು ಬತ್ತರೆ, ವಳ್ಳೆ ಚರ್ಚಾ ಗೋಷ್ಠಿಗಳಿರತವೆ ಅಂತ ಹೋಗಿದ್ದೆ. ನಿಜವಾಗ್ಲೂ ಕಣಕ ಇಂತ ಸಾಯಿತ್ಯ ಸಮ್ಮೇಳನ ಯಾಕೆ ನಡೀಬೇಕು ಅನ್ನುಸ್ತು."

"ಯಾಕಂಗನ್ನುಸ್ತು ಹೇಳ್ಳ?" ಎಂದ ಕಾಳಮಾವ.

"ಸಾಯಿತಿಗಳು ಸಲುಪ ನಿನ್ನಂಗೆ ಯೋಚನೆ ಮಾಡಿದ್ರೆ ಇಂತ ಅವುಮಾನದಿಂದ ಬಚಾವಾಗಬವುದು ದ್ವಡಪ್ಪ. ಅಲ್ಲಾ ಬಿಟ್ಟಿ ಊಟ ಸಿಕ್ಕತದೆ ಅಂತ ಚುಂಚನಗಿರಿಗೆ ಬಂದು ಸಾಯಿತ್ಯ ಸಮ್ಮೇಳನ ಮಾಡಿದ್ರೆ, ಜನ ಬಂದರೆ ದ್ವಡಪ್ಪ?"

"ಅಂಗರೆ ಯಾರು ಬರಲಿಲ್ಲ ಅನ್ನು?"

"ಕಾರ್ಯಕ್ರಮ ಮಾಡಿದೋರು ಐವತ್ತು ಜನ. ಬಂದಿದ್ದೋರು ನೂರು ಜನ. ಆದ್ರೆ ಮಠದೋರು ಹಾಳುಬಿದ್ದೊಗ್ಲಿ ಅಂತ ಯರಡು ಸವುರು ಜನಕ್ಕೆ ಅಡುಗೆ ಮಾಡಿಸಿದ್ರಂತೆ. ಯಲ್ಲಾ ವೇಸ್ಟಾಯ್ತು."

"ವೇಷ್ಟ್ಯಾಕಾಯ್ತದೊ? ಮಠಕ್ಕೆ ಬರೊ ಭಕ್ತರು ಉಂಡಿರತರೆ ತಗೊ" ಎಂದ ಉಗ್ರಿ.

"ಇದು ಸಾಯಿತಿಗಳಿಗೆ ಮಾಡಿಸಿದ್ದ ಅಡುಗೆ ಕಣೊ ಉಗ್ರಿ. ಭಕ್ತಾದಿಗಳಿಗೆ ಬ್ಯಾರೆ ಅನ್ನ ಸಾರು, ತಿಳಿಸಾರು ಮಾಡಿರತರೆ. ಅಂತೂ ಅನ್ನದಾಸೆಗೆ ಅಂತ ಹೋಗಿ ಅವುಮಾನಾಯ್ತು."

"ಅಂಗಂತ ನೀನಂತಿ. ಅವುಮಾನ ಆಗದೆಯಿದ್ರೆ."

"ಅದು ನಿಜಕಣೊ ಉಗ್ರಿ. ಈ ಕಾಲ್ದಲ್ಲಿ ಯಾಕೊ ಯಾರಿಗೂ ಅವುಮಾನ ಆಯ್ತಾ ಇಲ್ಲ. ಅಂಗಾಗಿ ಆದಿ ಚುಂಚನಗಿರಿಲಿ ಸಾಯಿತ್ಯ ಸಮ್ಮೇಳನ ಮಾಡೋರಿಗೆ ಯಾವುದೇ ರೀತಿ ಅವುಮಾನ ಆಗಿಲಲಾರ್ದು."

"ಅವುಮಾನ ಅಂತದು ಅವುರೇನು ಮಾಡಿದರ್ಲ?"

"ಅದನ್ಯಲ್ಲ ನಿನಿಗೆ ಡೀಟೈಲಾಗಿ ಹೇಳಿದ್ರೆ ಗೊತ್ತಾಯ್ತದೆ ಕಣಕ್ಕ. ಈ ಸಾಯಿತಿಗಳು ಪೆನ್ನಿಡಕಂಡು ಅವುರಿವುರಿಗೆ ನೀತಿ ನಿಯಮ, ಸ್ವಾಭಿಮಾನ ಅಂತ ಕ್ಯರಿತರೆ. ಕ್ಯರಿಯೋ ಜನಗಳೂ ಕೂಡ ಅಂಗೇ ಬದುಕಬೇಕಂತೆ. ಆಗಿನ ಕಾಲದ ಸಾಯಿತಿಗಳ್ಯಲ್ಲ ಅಂಗೇ ಇದ್ರು. ಜನಗಳೂ ಅವುರಿಗೆ ಗೌರವ ಕೊಡತಿದ್ರು. ಆದ್ರೆ ಕಾಲಕೆಟ್ಟು ಕ್ಯರ ಹಿಡದಿರೋದ್ರಿಂದ ಸಾಹಿತ್ಯ ಬರಿಯೋರು, ಬರಸೋರು, ಸಾಯಿತ್ಯ ಸಮ್ಮೇಳನ ಮಾಡೋರ್ಯಲ್ಲ ಕೆಟ್ಟರೋದ್ರಿಂದ ಆದ ಪರಿಣಾಮ ಏನಂದ್ರೆ ಚುಂಚುನಗಿರಿಲಾದುದ್ದು."

"ಅಲ್ಲೇನಾಯ್ತೊ?"


"ಏನಿಲ್ಲ, ಸಮ್ಮೇಳನಕೆ ಅಧ್ಯಕ್ಷರಾಗಿದ್ದ ನಮ್ಮ ಹನುಮನಳ್ಳಿ ಹ.ಕ. ರಾಜೇಗೌಡ್ರನ್ನ ಹಳೇ ಬೀಜದೋರಿಯ ಗೌರಂಗಪ್ಪನ ಜಾತ್ರೆಲಿ ಮ್ಯರವಣಿಗೆ ಮಾಡಿದಂಗೆ ಮಾಡಿಕಂಡು ವೇದಿಕೆಗೆ ಕರಕಂಡು ಬಂದ್ರಾ, ಒಂದೇಟಿಗೆ ಕಾರ್ಯಕ್ರಮ ಶುರೂವಾಗಬೇಕಿತ್ತಲವೆ, ಆಗಲೇಯಿಲ್ಲ."

"ಅದ್ಯಾಕಾಗಲಿಲ್ಲಾ?"

"ಚುಂಚನಗಿರಿ ಜಗದ್ಗುರು ಬಾಲಗಂಗಾಧರ ಸ್ವಾಮಿ ಬರ್ಲಿ ಅಂತ ಕಾಯ್ತಾ ಕುಂತಗಂಡ್ರು. ಸ್ವಾಮಿ ಬರದೆ ಕಾರ್ಯಕ್ರಮ ಶುರುವಾಗಂಗಿಲ್ಲ, ಆದ್ರೆ ವೇದಿಕೆ ಮುಂದಿದ್ದ ಸಾವುರಾರು ಕುರ್ಚೆಲಿ ಇನ್ನೂರು ಮುನ್ನೂರು ಕುರ್ಚೆಲಿ ಮಾತ್ರ ಜನಿದ್ರು. ಅವುರು ಕೂಡ ಮಠಕ್ಕೆ ಬಂದ ಭಕ್ತಾದಿಗಳೇ ವರತು ಸಾಹಿತ್ಯಾಸಕ್ತರಲ್ಲ, ಈ ಸುದ್ದಿ ಸಾಮಿಗಳಿಗೆ ತಲುಪ್ತು."

"ಅವುರಮ್ಯಾಲೆ ಬಂದ್ರು ಅನ್ನು."

"ಬರಲಿಲ್ಲ, ಮಠದಲ್ಲಿ ಓತ್ತಾಯಿರೊ ಸಣ್ಣಡುಗ್ರ ಕಳಿಸಿ ಕಾಲಿ ಕುರ್ಚೆ ತುಂಬಿಕಳಂಗೆ ಮಾಡಿ ನಾನು ಬರದಿಲ್ಲ ಅಂದ್ರು. ಈ ಸಾಯಿತಿಗಳು ಬುಡಬೇಕಲ್ಲ, ಕೂಡ್ಯೆ ಪೀಠದಂಗಿದ್ದ ಕುರ್ಚೆ ಮ್ಯಾಲೆ ಸ್ವಾಮಿಗಳ ಪೋಟ ಮಡಗಿ ಸಾಹಿತ್ಯ ಸಮ್ಮೇಳನ ಶುರುಮಾಡಿದ್ರು. ಇಂತ ಘಟನೆ ಸಾಯಿತ್ಯ ಚರಿತ್ರೆಲಿ ನ್ಯಡದಿಲ್ಲ, ಇದು ಸಾಯಿತಿಗಳಿಗೆ ಅವುಮಾನಲವೆ ದ್ವಡಪ್ಪ?"



"ಅವುಮಾನವೆ ಬುಡು. ಅಲ್ಲೇ ಇದ್ದ ಸ್ವಾಮಿ ಬರದಲೆ, ಅವುರಿನ್ನೂ ಬದುಕಿದ್ದಾಗ್ಲೆ ಅವುರ ಫೋಟಾ ಮಡಿಕಂಡು ಸಭೆ ಮಾಡ್ತರೆ ಅಂದ್ರೆ, ಅವುರಿನ್ಯಂತಾ ಜನುವುಲ."

"ಅಷ್ಟೇ ಅಲ್ಲ ದ್ವಡಪ್ಪಾ, ಈತರದ ಶ್ರದ್ಧಾಂಜಲಿ ತರದ ಸಾಯಿತ್ಯ ಸಮ್ಮೇಳನ ನಡೆಸೋ ಅಗತ್ಯ ಇದ್ಯ ದೊಡಪ್ಪ, ಚುಂಚನಗಿರಿ ಸ್ವಾಮಿಗಳು ಹಾಸನ ಕಡಿಕೆ ವಂಟೋದ್ರು. ಇದು ಅವುಮಾನಲವೆ ಅಂತ."

"ಯಾರಿಗವುಮಾನವ್ಯೊ ವಾಟಿಸ್ಸೆ? ಮಠದಲ್ಲಿ ಸಾಯಿತ್ಯ ಸಮ್ಮೇಳನ ಮಾಡಿದೋರಿಗೊ ಅಥವಾ ಸ್ವಾಮಿ ಬದುಕಿದ್ದಾಗ್ಲೆ ಅವುರ ಫೋಟಾ ಇಟ್ಟೋರಿಗೊ, ಅಲ್ಲಿಗೋದೋರಿಗೊ, ಇಲ್ಲ ಸಾಯಿತಿಗಳಿಗೊ?"

"ಟೋಟಲ್ಲಿ ಅವುಮಾನ ಕಣೊ ಉಗ್ರಿ. ಮಠದಲ್ಲಿ ಸಮ್ಮೇಳನ ಮಾಡುವಾಗ ಬಿಟ್ಟಿ ಅನ್ನ ಹಾಕೊ ಮಠದೋರು ಸುಮ್ಮನಿದ್ದರೆ. ಅವುರು ಕೂಡ ಮಠದ ಹುಡುಗರ ಕಳಿಸಿ ವೇದಿಕೆಲಿ ಭಜನೆ ಮಾಡಿಸಿದ್ರು. ಅವು ಪಾಪ ರಘುಪತಿ ರಾಘವ ಅಂತ ಸ್ಲೋಮೋಸನ್ನಾಗಿ ಹೇಳಿ, ಅಮ್ಯಾಲೆ ಪಾಸ್ಟಾಗಿ ಹೇಳಿದ್ರು. ಅಮ್ಯಾಲೆ ತಿರಗ ಸ್ಲೋಮೋಸೆನ್ನಿನಲ್ಲಿ ಹೇಳಿದ್ರು. ಆಗ ನನಿಗೆ ಎಮೋಶನ್ನಾಗಿ ಮೋಷನ್ನಾಗಂಗಾಯ್ತು. ಆಗ ಓಡಿ ಬಂದೆ ಅತ್ಲಗೆ."

"ಅಂಗರೆ ಊಟ ಮಾಡಲಿಲ್ಲ ಅನ್ನು."

"ಅದ್ಯಂಗಕ್ಕ ಮಾಡ್ತಿ, ಮದ್ಯಾನಾದ್ರು ಉದ್ಘಾಟನೆ ಕಾರ್ಯಕ್ರಮನೆ ಮುಗಿದಿರಲಿಲ್ಲ, ಇನ್ನು ಗೋಷ್ಠಿ ಆದಾದ ಮ್ಯಾಲೆ ಊಟ. ಅದ ನ್ಯನಿಸಿಗಂಡು ಓಡಿಬಂದೆ. ಅಂತೂ ಎಡೂರಪ್ಪನ ಸರಕಾರದಂಗೆ ಸಾಯಿತ್ಯ ಸಮ್ಮೇಳನಗಳೂ ನ್ಯಡಿತಾ ಅವೆ ಕಣಕ್ಕ."

"ಎಡೂರಪ್ಪ ಬಿಡುಗಡೆಯಾಗಿ ಯತ್ತಗೋದುನ್ಲ?"

"ಸಾಮಾನ್ಯವಾಗಿ, ಕಾಡುಪ್ರಾಣಿಯ ಬೋನಿಂದ ಬುಟ್ಟಾಗ, ಅವು ತಿರಗ ಕಾಡಕಡಿಕೆ ದೌಡಾಯಿಸ್ತವೆ. ಅದೇ ತರ ನಮ್ಮ ಎಡೂರಪ್ಪ ಬುಟ್ಟೇಟಿಗೆ ಸಿದ್ದಗಂಗೆ ಮಠದ ಕಡಿಕೆ ಓಡಿದನಂತೆ."

"ಅದೇನೊ ಸರಿ. ಜನಾಂಗದ ರಾಜಕಾರಣಿಗೆ ಅವುನು ಯಾವುದೇ ಪಾರ್ಟಿಲಿರ್ಲಿ ಆತನಿಗೆ ತೊಂದ್ರೆಯಾದಾಗ ನಾವು ಒಗ್ಗಟ್ಟನಿಂದ ಸಪೋರ್ಟು ಮಾಡಬೇಕು ಅಂತ ಸುತ್ತೂರಲಿ ಠರಾವು ಪಾಸ್ ಮಾಡಿದ್ರಲ್ಲಾ, ಅದೇನಾಯ್ತು?"

"ಸಪೋರ್ಟು ಮಾಡಿದರಲ್ಲೊ ಉಗ್ರಿ. ಎಡೂರಪ್ಪ ಜೈಲಿಗೋದೇಟಿಗೆ ಈ ಸ್ವಾಮಿಗಳು ಹೋಗಿ ಹೆದರಬ್ಯಾಡ, ನಾವಿದ್ದೀವಿ ಅಂತ ಹೇಳಿ ಬಂದ್ರು. ಮುಂದೆ ಎಡೂರಪ್ಪ ಯಲಕ್ಷನ್ನಿಗೋದ್ರೆ ಈ ಪಿಂಜರಾಪೋಲು ಸ್ವಾಮಿಗಳ್ಯಲ್ಲ ಬೀದಿಗಿಳಿದು ಓಟು ಕೇಳಿದ್ರೂ ಆಶ್ಚರ್ಯಪಡಬ್ಯಾಡ."

"ಈಗ ಎಡೂರಪ್ಪ ಈಚಿಗೆ ಬಂದವುನಲ್ಲಾ ಸದಾನಂದಗೌಡನ ಕತಿಯೇನು?"

"ಯಾಕೊ ಅವುನು ನಗಡಾದ್ರಲ್ಲಿ ಸ್ವಲ್ಪ ಡಲ್ ಕಳೆ ಕಾಣ್ತದೆ ದ್ವಡಪ. ಗಾಯಗೊಂಡ ಹುಲಿ ಕಾಡಿಂದ ನಾಡಿಗೆ ಬಂದಾಗ, ಯಾರನ್ನ ಕಚ್ಚತದೆ ಹೇಳಕ್ ಬರದಿಲ್ಲ. ವಯಸ್ಸಾಗಿರೊ ಹುಲಿ ಮುಂದೆ ಏನೇನು ಮಾಡ್ತದೊ ಏನೊ. ಅಂತೂ ತಿಂಗಳಿಂದ ಡಲ್ಲಾಗಿದ್ದ ಕೇಸರಿ ಪಡೆ ಈಗ ಜ್ಯಾಪಾಳ ಮಾತ್ರ ತಿಂದಂಗಾಗ್ಯದೆ, ನೋಡನಿರು."

"?!"


ಸಾಹಿತ್ಯ ಮತ್ತು ವಿಮರ್ಶೆ

ನಾನು ಆಗಾಗ ನೋಡಿದ ಪುಸ್ತಕಗಳ ಬಗ್ಗೆ ಬರೆಯುತ್ತಿರುವುದನ್ನು ನೀವು ಗಮನಿಸಿರಬಹುದು. ನನ್ನ ಪ್ರಕಾರ ಸಾಹಿತ್ಯ, ರಾಜಕೀಯ, ಕಲೆ, ಮನುಷ್ಯನ ವಿವಿಧ ವೃತ್ತಿಗಳು–ಎಲ್ಲವೂ ಮುಖ್ಯ; ಒಂದನ್ನೊಂದು ರೂಪಿಸುತ್ತಾ ತಿದ್ದುತ್ತಾ ಬೆಳೆಸುತ್ತಾ ಹೋಗುತ್ತವೆ. "ನೀವು ಒಳ್ಳೇ ಬಿಸಿನೆಸ್‌ಮನ್" ಎಂದು ನಮ್ಮ ಮಣಿ ಹೇಳಿದಾಗ ನನಗೆ ಆಗುವಷ್ಟೇ ಸಂತೋಷ, "ಒಳ್ಳೆಯ ಸಾಹಿತಿ" ಅಂದಾಗಲೂ ಆಗುತ್ತದೆ; ಹಾಗೆಯೇ ಒಳ್ಳೆಯ ಮುಂದಾಳು ಅನ್ನಿಸಿಕೊಂಡಾಗಲೂ ಮಗುವಿನಂತೆ ಹಿಗ್ಗಿಬಿಡುತ್ತೇನೆ. ಬದುಕು ವೈವಿಧ್ಯಮಯ ಮುಖವುಳ್ಳದ್ದು; ಸ್ವಾರಸ್ಯವಾದದ್ದು.

ಆದ್ದರಿಂದಲೇ ಕನ್ನಡದ ದಿನಪತ್ರಿಕೆಗಳು, ವಾರ ಪತ್ರಿಕೆಗಳು ಪುಸ್ತಕಗಳನ್ನು ನಿರ್ಲಕ್ಷಿಸಿದಾಗ, ನಾಟಕಗಳ ಬಗ್ಗೆ ಯಾವಾಗೆಂದರೆ ಆವಾಗ ಬೇಕಾಬಿಟ್ಟಿಯಾಗಿ ಬರೆದಾಗ ವ್ಯಥೆಯಾಗುತ್ತದೆ. ಕನ್ನಡದಲ್ಲಿ ಒಳ್ಳೆಯ ಪುಸ್ತಕವೊಂದು ಬಂದರೆ ಮೊದಲು ವಿಮರ್ಶಿಸುವುದು ಪತ್ರಿಕೆಯೊಂದಕ್ಕೆ ಹೆಮ್ಮೆಯ ವಿಷಯವಾಗಬೇಕು. ಬುಧವಾರ ಒಳ್ಳೆಯ ನಾಟಕವಾಡಿದರೆ ಗುರುವಾರವೇ ಅದರ ವಿಮರ್ಶೆ ಬರಬೇಕು. ಇವತ್ತಿನ ಸಂಗೀತದ ವಿಮರ್ಶೆ ನಾಳೆ ಪ್ರಕಟವಾಗದಿದ್ದರೆ ಈ ದಿನಪತ್ರಿಕೆಗಳನ್ನು ದಿನಪತ್ರಿಕೆಗಳು ಅನ್ನಲು ಸಾಧ್ಯವೆ?

ಕನ್ನಡದಲ್ಲಿ ಇವತ್ತಿಗೂ ಅನೇಕ ಕಷ್ಟಗಳಿವೆ. ಸೂಕ್ಷ್ಮಜ್ಞರಾದ ವಿಮರ್ಶಕರು ಕಮ್ಮಿ; ಬುದ್ಧಿವಂತರಿದ್ದರೂ ಅವರಿಗೆ ಚಾರಿತ್ರ್ಯವಿಲ್ಲ. ಇಡೀ ಕನ್ನಡ ಸಾಹಿತ್ಯವನ್ನು ಅರೆದು ಕುಡಿದವರು ಕೂಡಾ ಚೈತ್ರವನ್ನು ಹೊಗಳಿ ಬರೆದದ್ದು ನೋಡಿದ್ದೀರಿ. ಸಾವಿರಾರು ಜನ ಅವರ ಮಾತು ನಂಬಿ ತಮ್ಮ ಶಕ್ತಿ ಪೋಲಿ ಪೋಲು ಮಾಡಿಕೊಂಡಿದ್ದಾರೆ.

ಕೃತಿಯೊಂದನ್ನು ಓದಿ ಖುಷಿಪಡಲಾರದವ ಆಡುವ ಮಾತು, ಮಾಡುವ ಕೆಲಸ ಕೂಡ ಹಿಡಿಸಾಗಿರುತ್ತದೆ; ಮನುಷ್ಯ ಹದಗೊಳ್ಳಲು ಸಾಹಿತ್ಯ, ಕಲೆ, ಸಂಗೀತ, ಮುಖ್ಯ



ನೆನಪಿನಿಂದ, ಕಲ್ಪನೆಯಿಂದ...

ಈ ಹುಡುಗಿ ತುಂಬ ಜಾಣೆ. ಆಕೆ ಬರೆಯುವುದು ತುಂಬ ಚೆಂದ. ನಾನೊಮ್ಮೆ ಈಕೆಗೆ ಕಾಗದ ಬರೆದು ನನಗೆನ್ನಿಸಿದ ಅಭಿಪ್ರಾಯ ಹೇಳಿ ಖುಷಿಪಡಿಸಿದೆ. ಆಮೇಲೆ ಎಲ್ಲೋ ಕ್ಷಣ ಸಿಕ್ಕು ನಮಸ್ಕಾರ ಎಂದು ಹೋದವಳು ಮತ್ತೆ ಬಹು ಕಾಲ ಸಿಕ್ಕಲಿಲ್ಲ. ಆದರೆ ಈಕೆ ಅದೆಂತೋ ನನ್ನಲ್ಲಿ ಬೆಳೆಯುತ್ತಾ ಹೋಗಿ ಅದ್ಭುತ ಸುಂದರಿ ಎನ್ನಿಸಿಬಿಟ್ಟಳು. ನಾವು ವ್ಯಕ್ತಿಗಳನ್ನು ನೆನೆಯುವಾಗ ಅವರ ಬರವಣಿಗೆ, ಮಾತು, ಕೆಲಸಗಳು, ಕಟ್ಟಿದ ಪರೀಕ್ಷೆ, ತೋರುವ ಆಸಕ್ತಿಗಳು–ಎಲ್ಲವೂ ಸೇರಿಕೊಳ್ಳುತ್ತವೆ. ಹೀಗಾಗಿ ಈ ಜಯಶ್ರೀ ಎಂಬ ಹುಡುಗಿ (ಇದು ಅವಳ ಹೆಸರಲ್ಲ–ಆದರೆ ಊರಿಗೊಬ್ಬಳೇ ಪದ್ಮಾವತಿಯಲ್ಲ, ಅಲ್ಲವೆ?) ನನ್ನಲ್ಲಿ ಬೆಳೆದುಬಿಟ್ಟಳು; ಅವಳನ್ನು ಇಷ್ಟಪಡುವಂತೆಯೇ ಅವಳ ಬಗ್ಗೆ ನನ್ನಲ್ಲಿ ಕಿರಿಕಿರಿ ಹುಟ್ಟಿಕೊಂಡಿತು. ಆಕೆಯ ಸ್ನೇಹಿತರು ಸಿಕ್ಕಾಗ, "ಆ ಹುಡುಗಿ ಈಗ ಹೇಗಿದ್ದಾಳೆ?" ಎಂದು ಕೇಳಿ ಅವರು ಎಲ್ಲ ಹುಡುಗಿಯರ ಬಗ್ಗೆ ಹೇಳಿದಂತೆ ಹೇಳಿದಾಗ ಸಮಾಧಾನಪಟ್ಟು, "ನಾನು ಮಿಸ್ಟೇಕ್ ಮಾಡಿಕೊಂಡಿದ್ದೆ!" ಎಂದು ಹೇಳಿಬಿಡುತ್ತಿದ್ದೆ. ಹೀಗಿದ್ದಾಗ ಈ ಹುಡುಗಿ ಒಂದು ದಿನ ನಮ್ಮ ಕಚೇರಿಗೆ ಬಂದು ನನ್ನನ್ನು ನೋಡಿದಳು. ಪಾಪ, ಪುಟ್ಟ ಹೆಣ್ಣುಮಗಳು, ಸೊರಗಿದ್ದಂತಿದ್ದಳು; ಪ್ರಾಯದ ಹುಡುಗಿಗಿರಬೇಕಾದ ಮಿಂಚು, ಕಾಂತಿ ಒಂದೂ ಇರಲಿಲ್ಲ, ಮನುಷ್ಯನ ಮನಸ್ಸು ಎಷ್ಟು ವಿಚಿತ್ರ ಎಂದು ಯೋಚಿಸುತ್ತಾ ಆಕೆಯ ಜೊತೆಗೆ ಸಂಭಾಷಣೆ ನಡೆಸಲು ಪ್ರಯತ್ನಿಸಿದೆ; ಆಕೆ ನನ್ನನ್ನು ನೋಡಿ ನಿರಾಶಳಾಗದಂತೆ ಮಾತಾಡಲು ಯತ್ನಿಸಿ ಸಾಧ್ಯವಾಗದೆ ಆಕೆ ನಿಜಕ್ಕೂ ಹರೆಯದ ಹುಡುಗಿಯಂತೆ ಆಗಬೇಕಾದರೆ ಅವಳು ನಿತ್ಯ ತಿನ್ನಬೇಕಾದ ಆಹಾರ, ಮಾಡಬೇಕಾದ ಅಂಗಸಾಧನೆ ಇತ್ಯಾದಿಯ ಬಗ್ಗೆ ಮಾತಾಡತೊಡಗಿದೆ. ಇದನ್ನೆಲ್ಲ ನೆನೆಸಿಕೊಂಡರೆ ಸೋಜಿಗ ಅನ್ನಿಸುತ್ತದೆ. ಆ ಪಾಪದ ಹೆಣ್ಣುಮಗಳು ನನ್ನ ಮಾತನ್ನು ಸಮಾಧಾನವಾಗಿ ಕೇಳಿ, "ನಾನು ಈ exercise ಗೆ ಬೆಳಗ್ಗೇನೇ ಏಳಬೇಕಾ?" ಅಂದಳು. "ಹೌದು, ಐದೂವರೆಗೆ ಎದ್ದು jog ಮಾಡಿದರೆ ಒಳ್ಳೆಯದು" ಅಂದೆ. "ನಾನು ಬೆಳಗ್ಗೆ ಏಳೋದೇ ಎಂಟೂವರೆಗೆ ಸರ್" ಎಂದು ನಕ್ಕಳು. ಅವಳಿಗೆ ಉಪಯುಕ್ತ ಬೋಧನೆ ನೀಡುವುದು ವ್ಯರ್ಥ ಎಂದು ವಿಷಯ ಬದಲಾಯಿಸಿ ಮಾತಾಡಿದೆ. ನೆನೆಸಿಕೊಂಡರೆ ನಗೆ ಬರುತ್ತದೆ......

–ಜನವರಿ 24, 1996

ಮನಸ್ಸಾದರೂ ಬರುತ್ತಾ....

ಸ್ವಾಮಿ ವಿಶ್ವನಾಥ್ ಅವರೆ ನೀವು ಮಂತ್ರಿಯಾಗಿದ್ದೋರು, ಸಂಸದ ಆಗಿರುವವರು. ಸುಖದ ಸುಪ್ಪತ್ತಿಗೆಯಲ್ಲೇ ಇರುವವರು. ನಮ್ಮ ಕಷ್ಟ ನಿಮ್ಮಂತಹವರಿಗೆ ಅರ್ಥ ಆಗೋಲ್ಲ ಬಿಡಿ.

ಕನ್ನಡದ ಬಗ್ಗೆ ಬಲೇ ಕಾಳಜಿ ತೋರಿಸಿದ್ದೀರಿ. ನವೆಂಬರ್ ಪ್ರಭಾವ ಇದ್ದರೂ ಇರಬಹುದು. ನಾವು ಏನೂ ಕನ್ನಡ ವಿರೋಧಿಗಳಲ್ಲ, ನಮ್ಮಂತೆಯೇ ನಮ್ಮ ಮಂತ್ರಿ ಕಾಗೇರಿ ಅವರೂ ಇದ್ದಾರೆ. ಆದರೂ ಅವರು ಕನ್ನಡ ಪ್ರಾಥಮಿಕ ಶಾಲೆಗಳನ್ನು ಮುಚ್ಚುತ್ತಾರೆ, ಈಗಾಗಲೇ ಮೂರು ಸಾವಿರ ಚಿಲ್ಲರೆ ಶಾಲೆಗಳ ಪಟ್ಟಿ ತಯಾರು ಮಾಡಿದ್ದಾರೆ ಎಂದು ಹೇಳಿದ್ದೀರಿ. ಹಾಗೆಂದು ನಿಮಗೆ ತಿಳಿಸಿದವರು ಯಾರು? ಕಾಗೇರಿಯವರು ಹೇಳಿದರಾ? ಅವರು ಮುಚ್ಚುತ್ತಿಲ್ಲ ಕಣ್ರಿ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದರಿಂದ ಸಮೀಪದ ಶಾಲೆಗಳೊಂದಿಗೆ ವಿಲೀನಗೊಳಿಸುತ್ತಿದ್ದಾರೆ ಅಷ್ಟೇ! ಮುಚ್ಚುವುದಕ್ಕೂ ವಿಲೀನಗೊಳಿಸುವುದಕ್ಕೂ ಇರುವ ಸೂಕ್ಷ್ಮತೆಯ ಅರ್ಥ ಮಾಡಿಕೊಳ್ಳಿ.

ಇಂದಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಿ. ಇತರೆಯವರ ಮಕ್ಕಳು ಹಾಗಿರಲಿ, ಸರ್ಕಾರಿ ಶಾಲೆ ಉಪಾಧ್ಯಾಯರ ಮಕ್ಕಳೂ ಆ ಶಾಲೆಗೆ ಬರುವುದಿಲ್ಲ. ಅಧ್ಯಾಪಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಲ್ಲಿ ಬಿಟ್ಟು ಅವರು ಮಾತ್ರ ಸರ್ಕಾರಿ ಶಾಲೆಗಳಿಗೆ ಬರುತ್ತಾರೆ! ಮಕ್ಕಳೇ ಬಾರದಿರುವಾಗ ಶಾಲೆಗಳನ್ನು ಇಟ್ಟುಕೊಂಡು ಏನು ಮಾಡಬೇಕು ಹೇಳಿ.

ಸರ್ಕಾರದ ಈ ಕ್ರಮ ಮಹಿಳೆಯರ, ದಲಿತರ, ಬಡವರ ವಿರೋಧಿ ಎಂಬ ಆರೋಪ ಮಾಡಿದ್ದೀರಿ. ಸಮಾಧಾನವಾಗಿ ಯೋಚಿಸಿ. ಮಕ್ಕಳು ಶಾಲೆಗಾಗಿ ಮೂರು ನಾಲ್ಕು ಕಿಲೋಮೀಟರು ನಡೆದರೆ ಅವರ ಆರೋಗ್ಯ ಸುಧಾರಿಸುತ್ತೆ; ಮನೋಸ್ಥೈರ್ಯ ಹೆಚ್ಚುತ್ತೆ. ಎಂತಹ ಪರಿಸ್ಥಿತಿಯನ್ನೂ ಎದುರಿಸುವ ಶಕ್ತಿ ಹಾಗೂ ಧೈರ್ಯ ಬರುತ್ತೆ.

ಖಾಸಗಿ ಶಾಲೆಗಳ ಹಾವಳಿಯಿಂದಾಗಿ ಸರ್ಕಾರಿ ಶಾಲೆಗಳಿಗೆ ಮಕ್ಕಳ ಕೊರತೆ ಇದೆ ಎಂದು ಆರೋಪಿಸಿದ್ದೀರಿ. ಖಾಸಗಿಯವರು ಎಂದರೆ ಶಿಸ್ತಿಗೆ, ಅಚ್ಚುಕಟ್ಟುತನಕ್ಕೆ ಹೆಸರಾದವರು. ಶಾಲೆಗಳನ್ನೂ ಉತ್ತಮವಾಗಿ ನಡೆಸುತ್ತಾರೆ. ಅಂತಹ ವಾತಾವರಣವನ್ನು ಸರ್ಕಾರಿ ಶಾಲೆಗಳಲ್ಲಿ ತರುವುದು ನಿಮ್ಮಿಂದಲೂ ಸಾಧ್ಯವಾಗಿರಲಿಲ್ಲ, ಈಗಲೂ ಅದು ಸಾಧ್ಯವಿಲ್ಲ, ಉತ್ತಮ ಶಿಕ್ಷಣ ಬೇಕು ಎಂದು ಆಶಿಸಿದರೆ ಖಾಸಗಿ ಶಾಲೆಗಳು ಬೇಕೇಬೇಕು. ಅವುಗಳಿಂದ ಮಾತ್ರ ಇದು ಸಾಧ್ಯ ಎಂಬುದು ನೀವು ತಿಳಿದಿರುವ ಸಂಗತಿಯೇ ಆಗಿದೆ. ಯಾರೋ ಕೆಲವರಿಗೆ ಅನಾನುಕೂಲ ಆಗುತ್ತದೆಂಬ ಕಾರಣಕ್ಕೆ ಬಹುಜನರನ್ನು ಉತ್ತಮ ಶಿಕ್ಷಣದಿಂದ ವಂಚಿಸುವುದು ಮಹಾಪಾಪ ಎಂದೇ ಕಾಗೇರಿ ಸರ್ಕಾರ ಖಾಸಗಿ ಶಾಲೆಗಳಿಗೆ ಉತ್ತೇಜನ ನೀಡುತ್ತಾ ಬಂದಿದೆ. ಇದನ್ನು ಮುಂದುವರೆಸದೇ ಇರಲು ಯಾವ ಕಾರಣವೂ ಅದಕ್ಕೆ ಗೋಚರಿಸುತ್ತಿಲ್ಲ.

ಸಮಾಜದ ಎಲ್ಲ ಸ್ತರಗಳಲ್ಲಿ ನೈತಿಕತೆ ಕುಸಿದಿದೆ. ಇಂದಿನ ವಿದ್ಯಾಭ್ಯಾಸ ಪದ್ಧತಿಯಲ್ಲಿನ ಲೋಪವೇ ಇದಕ್ಕೆ ಕಾರಣ. ಇದನ್ನು ಹೋಗಲಾಡಿಸಲು ಕಾಗೇರಿ ಸರ್ಕಾರ ಸರಸ್ವತಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿ ಭಾರತೀಯ ಸಂಸ್ಕೃತಿಯ ತಿರುಳನ್ನು ಬೋಧಿಸುವ ಪ್ರಯತ್ನದಲ್ಲಿ ಮಗ್ನವಾಗಿದೆ. ಭಾರತೀಯ ಸಂಸ್ಕೃತಿ ಎಂದರೇನು? ಹಿಂದೂ ಸಂಸ್ಕೃತಿಯೆ? ಎಂಬೆಲ್ಲ ಮೊಂಡು ವಾದಗಳಿಗೆ ಉತ್ತರ ಹೇಳಲಾಗುವುದಿಲ್ಲ.

ಇಷ್ಟೆಲ್ಲವನ್ನೂ ಕಾಗೇರಿಯವರು ಮಾಡುತ್ತಿದ್ದರೂ ಖಾಸಗಿ ಶಾಲೆಗಳ ವಿರುದ್ಧ ನೀವು ತಿರುಗಿ ಬದ್ದಿದ್ದೀರಿ. ರಾಜ್ಯ ಪ್ರಶಸ್ತಿ ವಿಜೇತರಿಗೆ 'ರಾಜ್ಯೋತ್ಸವ ಪ್ರಶಸ್ತಿ' ತಿರಸ್ಕರಿಸುವಂತೆ ಕರೆ ನೀಡಿದ್ದೀರಿ. ಸ್ವಾಮಿ ವಿಶ್ವನಾಥ್ ಅವ್ರೆ ನಿಮಗೇನಾದರೂ ಬುದ್ಧಿ ಇದೆಯ ಎಂದು ವಿನಮ್ರವಾಗಿ ಕೇಳಲೇಬೇಕಾದ ಅನಿವಾರ್ಯತೆ ಉಂಟು ಮಾಡಿಕೊಂಡಿದ್ದೀರಿ. ಪ್ರಶಸ್ತಿಯ 'ವಜನ್ನು' ನಿಮ್ಮ ದರ್ಬಾರಿನಲ್ಲಿದ್ದಂತೆ ಈಗಲೂ ಇದೆ ಎಂದುಕೊಂಡಿದ್ದೀರಾ? ಒಂದು ಲಕ್ಷ ರೂಪಾಯಿ ನಗದು, ಇಪ್ಪತ್ತು ಗ್ರಾಂ ಬಂಗಾರದ ಪದಕ ಇದೆ ಕಣ್ರಿ. ಇವತ್ತಿನ ರೇಟಲಿ ಕಳ್ಳನಿಗೆ ಕೊಟ್ಟರೂ ಐವತ್ತು ಸಾವಿರ ರೂಪಾಯಿ ಸಿಗುತ್ತೆ. ಅಂದ್ರೆ ಸರಿಸುಮಾರು ಒಂದೂವರೆ ಲಕ್ಷ ರೂಪಾಯಿನ ಬಾಬತ್ತು ಕಣ್ರಿ ಇದು. ಅಂತಹುದನ್ನೇ ತಿರಸ್ಕರಿಸಿ ಅಂತ ಹೇಳುತ್ತಿದ್ದೀರಲ್ಲ ಹಾಗೆ ಮಾಡಲು ಹ್ಯಾಗಾದರೂ ಮನಸ್ಸು ಬರುತ್ತೆ ಹೇಳಿ, ಇನ್ನೂ ಹಣ ಬಂಗಾರ ತೆಗೊಳ್ಳಿ ಪ್ರಶಸ್ತಿ ಪತ್ರ ತಿರಸ್ಕರಿಸಿ ಎಂದಾದರೂ ಹೇಳಿದ್ದರೆ 'ಭೇಸ್ ಕಣಯ್ಯ ವ್ಯವಾರಸ್ತ' ಅನ್ನಬಹುದಾಗಿತ್ತೇನೋ... ಒಂದು ಸಮಾಧಾನದ ಸಂಗತಿ ಎಂದರೆ ನೀವು ಗಂಭೀರವಾಗಿಯೇ 'ತಿರಸ್ಕರಿಸಿ ಯೋಗ' ಬೋಧಿಸಿದ್ದರೂ ಅದನ್ನು ಯಾವ ಪ್ರಶಸ್ತಿ ವಿಜೇತರೂ ಹಾಗೆ ಪರಿಗಣಿಸಿಲ್ಲ ಎಂಬುದು!

ನಿವೇಶನ ಭೂತ

'ನಿಮ್ಮಂತಹವರು ಲೋಕಾಯುಕ್ತರಾಗಬೇಕು ಸಾರ್' ಅಂದೆ.

ನಿವೃತ್ತ ನ್ಯಾಯಾಧೀಶರ ಮುಖದಲ್ಲಿ ಒಂದು ರೀತಿಯ ಕಳೆ ತುಂಬಿಕೊಂಡಿತು. ಹುಸಿನಗು ಬೀರಿದರು.

'ಯಾಕಪ್ಪಾ ನಾವು ಮರ್ಯಾದೆಯಾಗಿರೋದು ನಿನಗೆ ಕಷ್ಟವಾಗಿದೆಯಾ?' ಅಂದರು ಅವರ ಸಹಧರ್ಮಿಣಿ.


ನ್ಯಾಯಾಧೀಶರ ಮುಖ ಕಳೆಗುಂದಿತು.


ಲೋಕಾಯುಕ್ತರಾಗುವುದು ಅಂದರೆ ಮಾನ ಮರ್ಯಾದೆ ಹೋಗುವ ಕೆಲಸವಾ?

'ಯಾಕೆ ತಾಯಿ ಹಾಗಂತೀರಿ' ಅಂತಂದೆ.

'ಈಗ ಹ್ಯಾಗೋ ಎಲೆ ಮರೆ ಕಾಯಿ ಹಾಗೆ ಬದುಕ್ತಿದೀವಿ. ಇವರನ್ನ ಲೋಕಾಯುಕ್ತರನ್ನ ಮಾಡಿ ನಮ್ಮ ಬದುಕ ಬೀದಿಗೆಳೆಯಬೇಕು ಅಂತ ಮಾಡಿದೀಯಾ' ಅಂತ ಕೊಂಚ ಅಸಮಾಧಾನದ ದನಿಯಲ್ಲೇ ಹೇಳಿದರು.

ನಿವೃತ್ತ ನ್ಯಾಯಾಧೀಶರ ಧರ್ಮಪತ್ನಿಯವರ ಮಾತಿನಲ್ಲೂ ಸತ್ಯ ಇತ್ತು. ಮಾಹಿಂತಿಹಕ್ಕು ಕಾಯ್ದೆ ರಣಹದ್ದುಗಳು ಸುಮ್ಮನೆ ಹಾರಾಡುತ್ತಿರುತ್ತವೆ. ಹೆಣ ಕಣ್ಣಿಗೆ ಬಿದ್ದ ತಕ್ಷಣ ರಣಹದ್ದುಗಳು ಆಕ್ರಮಿಸಿಕೊಳ್ಳುತ್ತಾವಲ್ಲ ಹಾಗೇನೆ ಇವು ಲೋಕಾಯುಕ್ತನಾದರೂ ಆಗಬಹುದು ಎನ್ನುವ ಗುಮಾನಿ ಬಂದರೂ ಸಾಕು. ಅವನ ಜಾತಕಾನೆ ಹೊರಗೆಳೆದು ಹರಾಜು ಹಾಕುತ್ತವೆ. ಪಾಪ ನಮ್ಮ ನಿವೃತ್ತ ನ್ಯಾಯಾಧೀಶರೂ ಹೈಕೋರ್ಟಿನಲ್ಲಿ ಜಡ್ಜ್ ಆಗಿದ್ದರು. ನ್ಯಾಯಾಂಗ ಇಲಾಖೆಯ ಸರ್ಕಾರಿ ನೌಕರರು ಒಂದು ಗೃಹ ನಿರ್ಮಾಣ ಸಂಸ್ಥೆ ಎಂದು ಮಾಡಿದ್ದರು. ಅದರಲ್ಲಿ ಒಂದು ನಿವೇಶನವನ್ನು ಇವರಿಗೂ ಕೊಟ್ಟಿದ್ದರು. ಇವರೇನು ಸಕಾಸುಮ್ಮನೆ ತೆಗೆದುಕೊಂಡಿರಲಿಲ್ಲ, ನಿಗದಿತ ಹಣಾನೂ ಪಾವತಿಸಿದ್ದರು. ಆದರೆ ಸೊಸೈಟಿ ಬೈಲಾ ಪ್ರಕಾರ ಸಂಘದ ಸದಸ್ಯರಲ್ಲದೆ ಬೇರೆಯವರಿಗೆ ನಿವೇಶನ ನೀಡುವುದು ಕಾನೂನು





ಎಚ್.ಎಲ್. ಕೇಶವಮೂರ್ತಿ

ಅಣಕ

ವಿರೋಧವಂತೆ. ಅಲ್ಲಾ ಜಡ್ಜ್ ಆಗಿದ್ದರಲ್ಲಾ ಇವರು ಅಂದರೆ ನ್ಯಾಯಾಧೀಶರು ಸರ್ಕಾರಿ ನೌಕರರಲ್ಲವಂತೆ! ಅವರ ನೇಮಕ ಮಾಡುವವರು ರಾಷ್ಟ್ರಪತಿಗಳಂತೆ! ಈ ವಿಷಯ ಸನ್ಮಾನ್ಯರಿಗೆ ತಿಳಿದಿರಲಿಲ್ಲ ಎಂದೇನೂ ಅಲ್ಲ. ಸದಸ್ಯರಲ್ಲದವರೂ ನಿವೇಶನವನ್ನ ಅಕ್ರಮವಾಗಿ ಪಡೆದಿದ್ದಾರೆ ಎಂದು ಯಾರು ಏನೇ ಬಂಬ್ಡಾ ಬಜಾಯಿಸಿದರೂ ಅಂತಿಮ ತೀರ್ಮಾನ ಆಗುವುದು ನ್ಯಾಯಾಲಯಗಳಲ್ಲಿ; ಅಲ್ಲಿ ಯಾರೇ ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತಿದ್ದರೂ, ತಮ್ಮ ಹಿರಿಯರು ಮಾಡಿರುವ ಅಕ್ರಮ ಕೃತ್ಯ ಇದು ಎಂದು ಹೇಳಿ ಹಿರಿಯರಿಗೆ ಎರಡು ಬಗೆಯುವವರಲ್ಲ; ಹೇಗೋ ತಿಪ್ಪೆ ಸಾರಿಸುತ್ತಾರೆ ಎಂಬ ಧೈರ್ಯದಿಂದಲೋ ಏನೋ ಹೀಗೆ ಮಾಡಿದ್ದಿರಬಹುದು. ನ್ಯಾಯಾಧೀಶರು ಮುಂದೆ ಬೇಕಾಗುತ್ತಾರೆ ಎಂದು ಇತರೆ ಗೃಹಮಂಡಳಿಯವರೂ ನಿವೇಶನ ದಯಪಾಲಿಸಿದ್ದರೂ ಇರಬಹುದು. ಇದೆಲ್ಲ ಎಲ್ಲಿ ಬಯಲಾಗುತ್ತೊ ಅನ್ನುವ ಭಯ ಅಮ್ಮನವರನ್ನು ಕಾಡಿರಬಹುದು.

ಇದು ಕರ್ನಾಟಕಕ್ಕೆ ಮಾತ್ರ ಸೀಮಿತ ಎಂದು ಭಾವಿಸಲಾಗದು. ಗುಜರಾತಿನ ಲೋಕಾಯುಕ್ತ ಸ್ಥಾನ ಹಲವು ವರ್ಷಗಳಿಂದ ತೆರವು ಬಿದ್ದಿದೆಯಂತೆ. ಅದನ್ನು ತುಂಬಲು ನರೇಂದ್ರ ಮೋದಿಗೆ ತಾನೂ ಇದರ ಬಲೆಯೊಳಗೆ ಬೀಳಬಹುದು ಎಂಬ ಭಯ; ಇದೇ ಕಾರಣಕ್ಕೆ ಅದನ್ನು ಹಾಗೆ ಬಿಟ್ಟಿದ್ದಾರೆ ಎಂದೇ ಅವರಿಗೆ ಆಗದವರು ಆರೋಪಿಸುತ್ತಿದ್ದರು. ಆದರೆ ಈ ಆರೋಪ ಸುಳ್ಳಂತೆ. ಮೋದಿ ಶಿಷ್ಟಾಚಾರಕ್ಕೆ ಹೆಸರಾದವರಂತೆ. ಲೋಕಾಯುಕ್ತರ ಸ್ಥಾನಕ್ಕೆ ಬರುವವರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಅಥವಾ ಸುಪ್ರೀಂ ಕೋರ್ಟಿನ ನ್ಯಾಯಾಧೀಶರು ಆಗಿದ್ದಿರಲೇಬೇಕು ಎಂಬ ಕಾನೂನು ಇದೆಯಂತೆ. ಮೋದಿ ಸಾಹೇಬರು ಅಕ್ರಮ ಹೊಲಸು ಅಂಟಿಕೊಳ್ಳದಿರುವ ನ್ಯಾಯಾಧೀಶರ ತಡಕಾಟದಲ್ಲಿ ತೊಡಗಿದ್ದರಂತೆ. ಅಂತಹವರು ಯಾರೂ ಅವರ ಕಣ್ಣಿಗೆ ಇನ್ನೂ ಬಿದ್ದಿಲ್ಲವಂತೆ!

ಸಾವಿಲ್ಲದ ಮನೆಯಿಂದ ಸಾಸಿವೆ ತಾ ಎಂದು ಭಗವಾನ್ ಬುದ್ಧ ಹೇಳಿದ ಹಾಗೆ ಅಕ್ರಮ ವೆಸಗದ ನ್ಯಾಯಾಧೀಶರನ್ನು ತೋರಿಸು ಅನ್ನುವ ಕಾಲ ಬಂದಿರಬಹುದು ಅನ್ನಿಸುತ್ತೆ. ಇದನ್ನೆಲ್ಲ ಅರಿತಿರುವ ಸದಾನಂದಗೌಡರು 'ಸಣ್ಣಪುಟ್ಟ ಆರೋಪ ಇಲ್ಲದ ವ್ಯಕ್ತಿಗಳೇ ಇಲ್ಲ' ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ!

ಸದ್ಯದ ಪರಿಸ್ಥಿತಿ ಹೇಗಿದೆ ಅಂದರೆ ಗೃಹ ನಿರ್ಮಾಣ ಮಂಡಳಿ ಅಂದರೆ ಸಾಕು ನ್ಯಾಯಾಧೀಶರುಗಳಿಗೆ ಬೆವರು ಕಿತ್ತುಕೊಳ್ಳುತ್ತಂತೆ. ಲೋಕಾಯುಕ್ತ ಪದವಿ ಅಂದರೆ ಭೂಗತರಾಗುವುದೇ ಉತ್ತಮ ಎನ್ನಿಸುತ್ತಿದೆಯಂತೆ!

ಮಂಪರಿನಿಂದ ಎಚ್ಚರಿಸಿದ ದೇವನೂರು

ಭ್ರಷ್ಟ ರಾಜಕಾರಣಿಗಳಿಗೆ ತಮ್ಮ ಮೊನಚಾದ ಬರವಣಿಗೆಯ ಮೂಲಕ ಸರಿಯಾಗಿ ಉಗಿದು ಬುದ್ಧಿ ಕಲಿಸುತ್ತಿದ್ದ ಪಿ.ಲಂಕೇಶರು ಕುದುರೆ ಜೂಜಿನ ಚಟಕ್ಕೆ ಬಿದ್ದು ತಮ್ಮ ಪತ್ನಿಯಿಂದಲೇ ಬುದ್ಧಿ ಹೇಳಿಸಿಕೊಂಡಿದ್ದರ ಬಗ್ಗೆ ಇಂದಿರಾ ಲಂಕೇಶರು ಬರೆಯುತ್ತಿರುವ 'ಹುಳಿಮಾವು ಮತ್ತು ನಾನು' ಅಂಕಣದಲ್ಲಿ ಓದಿ ಅಚ್ಚರಿ ಆಯಿತು.

ಹಾಗೆಯೇ ಪತ್ರಿಕೆಯು ಚಿತ್ರನಟ ರಮ್ಯಾಳಿಗೆ 'ಗ್ಲೋಬಲ್ ಶೇಪರ್ 2011' ಪ್ರಶಸ್ತಿ ದೊರಕಿರುವ ವಿಚಾರವನ್ನು ಪ್ರಸ್ತಾಪಿಸುತ್ತಾ "ಕನ್ನಡ ಚಿತ್ರರಂಗದಲ್ಲಿ ರಮ್ಯಾಳಿಗೆ ನಟನೆಯಲ್ಲಿ ಪರ್ಯಾಯವಾದ ನಟಿಯರಿಲ್ಲ" ಎಂದಿರುವುದು ಸರಿಇಲ್ಲ, ಏಕೆಂದರೆ ರಾಧಿಕಾ ಪಂಡಿತ್, ನಿಧಿ ಸುಬ್ಬಯ್ಯರಂತಹ ಪ್ರತಿಭಾನ್ವಿತ ಕನ್ನಡತಿಯರೂ ಕನ್ನಡ ಚಿತ್ರರಂಗದಲ್ಲಿದ್ದಾರೆ ಎಂಬುದನ್ನು ಪತ್ರಿಕೆ ಮರೆಯಬಾರದು.

ಅದೇನೇ ಇರಲಿ, ಈ ಪ್ರಶಸ್ತಿ ಪಡೆಯಲು ನಟನೆ ಮತ್ತು ಸಮಾಜ ಸೇವೆ ಮಾನದಂಡಗಳಾಗಿದ್ದು ನಿಮ್ಮ ಹಾಗೆಯೇ ನಾವೂ ಕೂಡ ರಮ್ಯಾ ಮಾಡಿರುವ ಸಮಾಜ ಸೇವೆಯನ್ನು ಪತ್ತೆಹಚ್ಚಲು ದುರ್ಬೀನು ಹಾಕಿ ಹುಡುಕುತ್ತಿದ್ದೇವೆ.

- ವಿನಯ್ ಬೂಕೆಗೌಡ, ಕುರುಬಾರಹಳ್ಳಿ, ಮೈಸೂರು

ಈ ಫಣಿರಾಜ್ ಯಾಕೆ ಈ ರೀತಿ ನಿಮ್ಮ ಔದಾರ್ಯತೆಯನ್ನು ಮಿಸ್ ಯೂಸ್ ಮಾಡಿಕೋತಾರೋ..

ಯಾಕೆ ಅಷ್ಟೊಂದು ಸ್ಪೇಸ್ ತಿನ್ನುತ್ತಾರೋ...

ನಾವು ಹೇಟ್ ಮಾಡೋ ವಿಚಾರಗಳ ಬಗ್ಗೆ ಅಷ್ಟು ಬರೆದು ಯಾಕೆ ನಮ್ಮನ್ನ ಸಿಟ್ಟಿಗೆಬ್ಬಿಸುತ್ತಾರೋ...

ಯಾಕೆ ತಮ್ಮ ಪಾಂಡಿತ್ಯವನ್ನು ಫಣಿ ಹೀಗೆ ಹಾಳು ಮಾಡಿಕೋತಾರೋ..

ಅದೇನು ಬರೀತಾರೋ..

ಅದೇನು ಕೊರಿತಾರೋ..

ಏನ್ ಕತೆನೋ.....

- ಶಶಿಧರ ಹೆಮ್ಮಾಡಿ, ಕುಂದಾಪುರ

ಅನಗತ್ಯವಾಗಿ ಎಲ್ಲವನ್ನು ಲಂಬಿಸದೆ ಪದೇ ಪದೇ ಹಾಡಿದ್ದನ್ನೇ ಹಾಡಿದರೂ ನನಗನ್ನಿಸುವುದೇನೆಂದರೆ:

'ಕಾಡುತ್ತಿವೆ ಭೂತಕಾಲದ ಭ್ರೂಣಗೂಢಗಳು;
ಹುಗಿದ ಹಳಬಾವಿಯೊಳ ಕತ್ತಲ ಹಳಸು ಗಾಳಿ
ಅಂಬೆಗಾಲಿಟ್ಟು ತಲೆಕೆಳಗು ತೆವಳುತ್ತೇರಿ... (ಭೂತ ಕವನದಲ್ಲಿ)
ಮತ್ತು
ಹಿಮದ ಹಂದರದಲ್ಲಿ ಗಾಳಿಬೀಳಿನ ಮೇಲೆ
ಉಯ್ಯಲಾಡುವ ಬೆಳ್ಳಿಗಡ್ಡ ಸಾಲು;
ಸರ್ಚ್‌ಲೈಟ್ ಕಣ್ಣುಗಳು, ಹೊಳೆವ ಕಗ್ಗವಿ ಬಾಯಿ"
(ಹಿಮಗಿರಿಯ ಕಂದರ ಕವನದಲ್ಲಿ)

... ಈ ರೀತಿಯ ಅನೇಕ ಉತ್ತಮ ಸಾಲುಗಳುಳ್ಳ ಕವಿತೆಗಳ ಮೂಲಕ 60ರ ದಶಕದಲ್ಲಿ 'ಚಂಡ ಮದ್ದಳೆ' ಬಾರಿಸಿದ ಕವಿ ಗೋಪಾಲಕೃಷ್ಣ ಅಡಿಗರು ಒಂದು ಜನಾಂಗವನ್ನು ಪ್ರಭಾವಿಸಿದ್ದು ನಿಜ. ನೆಹರೂ ಕಾಲದ ದೊಡ್ಡ ದೊಡ್ಡ ಆಶಯಗಳು ಭ್ರಮನಿರಸನವಾದದ್ದರ ಬಗ್ಗೆ, ಅಂದಿನ ಮೇಲ್ಜಾತಿಯ ಮಹತ್ವಾಕಾಂಕ್ಷಿ ಯುವಕರ ತೊಳಲಾಟಗಳ ಬಗ್ಗೆ ತಮ್ಮದೇ ಆದ ಟಿಪಿಕಲ್ ತಲೆದೂಗಿಸುವ ಭಾಷೆಯ ಮೂಲಕ ತೆರೆದಿಡುವ ಈ ಕವಿಗಳ ಪ್ರತಿಭೆಗೆ ಆಗ ಸಾಹಿತ್ಯಾಸಕ್ತರೆಲ್ಲರೂ ಬೆರಗಾದದ್ದು ನಿಜ.

ಆದರೆ ಕವಿಯ ಆಶಯ ಎಷ್ಟೇ ಸದಾಶಯದಿಂದ ಕೂಡಿದ್ದರೂ ಅಡಿಗರ ಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವರ ಚಿಂತನಾ ಪ್ರಜ್ಞೆಯಲ್ಲಿ ಎಲ್ಲಿಯೂ ಈ ನಾಡಿನ ಬಹು ಸಂಖ್ಯಾತರ ಬಗ್ಗೆಯಾಗಲಿ, ಪ್ರಥಮ ಸೋಶಿಯಲಿಸ್ಟರಾದ ಬುದ್ಧ ಮತ್ತು ಬಸವರು ಭ್ರಷ್ಟ ಜಾತಿ ವ್ಯವಸ್ಥೆಯನ್ನು ಸುಧಾರಿಸಲು ಮಾಡಿದ ಪ್ರಯೋಗಗಳ ಬಗ್ಗೆಯಾಗಲಿ ಕೊಂಚವೂ ಕಾಣಿಸುವುದಿಲ್ಲ, ಈ ಮಹಾತ್ಮರ ಕತ್ತಲ ದಾರಿಗೂ, ಅಡಿಗರ ಹಾಗೂ ನವ್ಯದವರು ಪರಿಭಾವಿಸಿದ ಕತ್ತಲ ದಾರಿಗೂ ಬಲು ಬಲು ದೊಡ್ಡ ವ್ಯತ್ಯಾಸವಿತ್ತು. ಈ ತಲ್ಲಣಗಳನ್ನು ರವಷ್ಟಾದರೂ ಅಡಿಗರು ತಮ್ಮ ಪ್ರಜ್ಞೆಯ ತೆಕ್ಕೆಯೊಳಗೆ ತಂದುಕೊಂಡಿದ್ದರೆ ಅವರ ಕವಿತೆಗಳ ಚಹರೆಗಳೇ ಬದಲಾಗುತ್ತಿದ್ದವು. ಅಡಿಗರು ದೇಶದ ಅನಿಷ್ಟ ಜಾತಿಪದ್ಧತಿಯ ಬಗ್ಗೆ, ಪುರೋಹಿತಶಾಹಿಯ ಅಮಾನವೀಯ ಚಿಂತನೆಗಳ ಬಗ್ಗೆ ಎಲ್ಲಿಯೂ ಪ್ರಖರವಾಗಿ ನಿರಂತರವಾಗಿ ಗೊಣಗಿದ್ದೂ ಇಲ್ಲ, ಕೋಮುವಾದಿ ಸಂಘ ಪರಿವಾರದಿಂದ ಎರಡು ಬಾರಿ ಚುನಾವಣೆಗೆ ಸ್ಪರ್ಧಿಸಿದ್ದವರಿಂದ ಅದನ್ನು ನಿರೀಕ್ಷಿಸುವುದೂ ಮೂರ್ಖತನ.

ಇವೆಲ್ಲವೂ ಸಾಹಿತ್ಯಾಸಕ್ತರಿಗೆ ಗೊತ್ತಾಗಲಾರಂಭಿಸಿದ್ದು ಶತಮಾನಗಳಿಂದ ಅಪಮಾನಕ್ಕೊಳಗಾದ ತಳ ಸಮುದಾಯದ ಕವಿ, ಈ ನೆಲದ, ಈ ಮಣ್ಣಿನ ಕವಿ ಸಿದ್ದಲಿಂಗಯ್ಯ ಅವರು:

'ಕತ್ತಲೆ ಬೋರ್ಡಿನ ಮೇಲೆ ಕಲಿತ ಅ ಆ
ಅಕ್ಷರಗಳ ನಡುವೆ ಅವ್ವ ಅಪ್ಪನ ಆಸೆಗಳು ಸಿಕ್ಕಿದ್ದವು,
ನಮ್ಮೂರು ಕೇರಿ ಸಮಾಧಿಗಳು ಸಿಕ್ಕಿದ್ದವು,
ಅಸ್ಥಿ ಪಂಜರಗಳ ಪಾತಾಳದಲ್ಲಿ ಒಂದಿಷ್ಟು ಮಾತುಗಳು ಸಿಕ್ಕಿದ್ದವು,
ಅಲ್ಲೇ ಕುಂತವರೆ ಅವರು ಅಲ್ಲೇ ಕುಂತವರೆ,
ಸ್ನೈಮಗಲ್ಲು ಹೊರುಸೋರು, ಹುಣಸೆ ಮರಕೆ ಕಟ್ಟೋರು,
ಬಸುರಿ ಕೈಯ್ಯ ಮಡಗವರೆ, ಮೂಳೇ ಜೋಳಿಗೆ ಹಾಕವರೆ, ಮೀಸೆಯ ಮರೆಯಲಿ ನಗುತಾರೆ"

ಎನ್ನುತ್ತಾ ಹಾಡಲಾರಂಭಿಸಿದಾಗ.

70ರ ದಶಕದ ಆರಂಭದಲ್ಲಿ ಪ್ರಕಟಗೊಂಡ 'ದ್ಯಾವನೂರು', 'ಒಡಲಾಳದ'... 'ಅಬಚೂರಿನ ಪೋಸ್ಟಾಫೀಸು' ಇಡೀ ಕನ್ನಡ ಸಾಹಿತ್ಯದ ಮುಂದಿನ ದಿಕ್ಕಿಗೆ ಮಾರ್ಗವನ್ನೇ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.





ಮೈಕು ಮಿತ್ರ!

ದ್ವಾರಕೀಶ್ ಅವರನ್ನು ಯಾವುದೇ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಕರೆದರೆ ಆ ಸಮಾರಂಭದ ವ್ಯವಸ್ಥಾಪಕರಿಗೆ ನಿಜಕ್ಕೂ ಒಂದು ರೀತಿಯಲ್ಲಿ ಗಲಿಬಿಲಿಯಾಗುತ್ತದೆ. ಇದಕ್ಕೆ ಕಾರಣ ಇಷ್ಟೆ. ಅದ್ಯಾವುದೇ ಸಮಾರಂಭವಿರಲಿ, ದ್ವಾರಕೀಶ್ ಮೈಕ್ ಹಿಡಿದರೆಂದರೆ ಕನಿಷ್ಠ ಅರ್ಧ ಗಂಟೆ ಭಾಷಣ ಬಿಗಿಯುತ್ತಾರೆ. ಅದನ್ನು ಸಹಿಸಬಹುದು. ಆದರೆ ಪ್ರತೀ ಬಾರಿ ಅವರು ಭಾಷಣ ಮಾಡುವಾಗ ಫ್ಲಾಶ್‌ಬ್ಯಾಕ್ ಕಥೆಯನ್ನೇ ಹೇಳುವುದು ನುಂಗಲಾಗದ ತುತ್ತಾಗುತ್ತಿದೆ.


"ನಮ್ಮ ಕಾಲದಲ್ಲಿ ಸಿನಿಮಾ ಹಾಗಿತ್ತು, ನಾನು ಈ ದೇಶದಲ್ಲಿ ಹಾಗೆ ಮಾಡಿದ್ದೆ, ನಾನು 48 ಸಿನಿಮಾಗಳನ್ನು ನಿರ್ಮಾಣ ಮಾಡಿದರೂ ನನ್ನನ್ನು ಉದ್ಯಮದಲ್ಲಿ ಯಾರೂ ಗೌರವಿಸುತ್ತಿಲ್ಲ, ಹಣಕ್ಕಾಗಿ ಸಿನಿಮಾ ಮಾಡಬಾರದು...." ಎಂಬಿತ್ಯಾದಿ ಹಿತೋಪದೇಶಗಳನ್ನು ಕುಳ್ಳ ಯಥೇಚ್ಛವಾಗಿ ಹೇಳುತ್ತಲೇ ಹೋಗುತ್ತಾರೆ. ಹೀಗಾಗಿ ದ್ವಾರಕಿ ಹೇಳಿದ್ದನ್ನೇ ಹೇಳುವ ಕಿಸುಬಾಯ್‌ದಾಸನಾಗಿದ್ದಾರೆ. ಮೊನ್ನೆ 'ಹೊಸ ಪ್ರೇಮ ಪುರಾಣ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಂದರ್ಭದಲ್ಲೂ ಮೊದಲ ಒಂದು ನಿಮಿಷ ಆ ಚಿತ್ರಕ್ಕೆ ಸಂಬಂಧಿಸಿದಂತೆ ಮಾತನಾಡಿದ ದ್ವಾರಕೀಶ್ ಆನಂತರ ಮಾತನಾಡಿದ್ದೆಲ್ಲಾ ಮತ್ತದೇ ಫ್ಲಾಶ್‌ಬ್ಯಾಕ್ ಕಥೆಗಳು.

ಇದಕ್ಕಿಂತಲೂ ತಮಾಷೆಯ ವಿಷಯವೇನೆಂದರೆ, ದ್ವಾರಕೀಶ್ ನಿರ್ಮಾಣದ 'ಆಪ್ತಮಿತ್ರ' ಚಿತ್ರ ತೆಲುಗು, ತಮಿಳು ಮತ್ತು ಹಿಂದಿ ಭಾಷೆಗಳಲ್ಲೂ ಸೂಪರ್ ಹಿಟ್ ಆಗಿ ಅಲ್ಲಿನ ನಿರ್ಮಾಪಕರಿಗೆ ಕೋಟ್ಯಂತರ ರೂಪಾಯಿ ಲಾಭ ತಂದುಕೊಟ್ಟಿದೆ ಎಂದು ಹೇಳಲು ಮರೆಯುವುದೇ ಇಲ್ಲ. ಅದಕ್ಕೆಲ್ಲ ತಾನೇ ಕಾರಣಕರ್ತ ಎಂಬ ರೀತಿಯಲ್ಲಿ ದ್ವಾರಕೀಶ್ ಮಾತನಾಡುತ್ತಾರೆ. ಆದರೆ ಆ ಚಿತ್ರವನ್ನು ಅವರು ಮಲೆಯಾಳಂನಿಂದ ತಂದು ರಿಮೇಕ್ ಮಾಡಿದ್ದು ಎಂಬುದನ್ನು ಮಾತ್ರ ಹೇಳುವುದೇ ಇಲ್ಲ. ಒಂದು ವೇಳೆ ಮಾತಿನ ಮಧ್ಯೆ ಅದನ್ನು ಪ್ರಸ್ತಾಪಿಸಿದರೂ ಆ ಚಿತ್ರಕ್ಕೆ ಅಥವಾ ಅದರ ಮೂಲ ಕಥೆಗಾರನಿಗೆ ಕೊಡಬೇಕಾದ ಗೌರವವನ್ನೂ ಕುಳ್ಳ ಕೊಡುವುದಿಲ್ಲ.

ಸದ್ಯದಲ್ಲೇ ಅವರ ನಿರ್ಮಾಣದ 'ವಿಷ್ಣುವರ್ಧನ' ಚಿತ್ರ ತೆರೆ ಕಾಣಲಿರುವುದರಿಂದ ಇನ್ನು ಮುಂದೆ ದ್ವಾರಕಿಯ 'ಆಪ್ತಮಿತ್ರ' ಚಿತ್ರದ ಫ್ಲಾಶ್‌ಬ್ಯಾಕ್ ಕಥೆಗೆ ಫುಲ್‌ಸ್ಟಾಪ್ ಬಿದ್ದು 'ವಿಷ್ಣುವರ್ಧನ' ಕಥೆ ಆರಂಭವಾಗಬಹುದು ಎಂಬುದು ಕೆಲವರಿಗೆ ನೆಮ್ಮದಿ ತಂದಿದೆ!

ಶಿವಣ್ಣನ ಜೊತೆ ಕಿಚ್ಚನ ಕದನ

ಕಿಚ್ಚ ಸುದೀಪ್ ಮತ್ತು ಜೋಗಯ್ಯ ಶಿವರಾಜ್‌ಕುಮಾರ್ ನಡುವೆ ಎರಡನೇ ಸುತ್ತಿನ ಕದನ ಆರಂಭವಾಗಿದೆ.



ಮೊನ್ನೆ ಮೊನ್ನೆಯಷ್ಟೇ ಹುಬ್ಬಳ್ಳಿಯ ನೆಹರೂ ಕ್ರೀಡಾಂಗಣದಲ್ಲಿ ಕ್ರಿಕೆಟ್ ಆಡುವಾಗ ಸುದೀಪ್ ಮತ್ತು ಶಿವರಾಜ್‌ಕುಮಾರ್ ಅಭಿಮಾನಿಗಳ ನಡುವೆ ಮಾತಿನ ಚಕಮಕಿ ನಡೆದದ್ದು ನಿಮಗೆ ಗೊತ್ತೇ ಇದೆ. ಇದೀಗ ಸುದೀಪ್ ಮತ್ತು ಶಿವಣ್ಣರ ಅಭಿಮಾನಿಗಳು ಮತ್ತೆ ಪರಸ್ಪರ ಮೈ ಪರಚುವ ಕೆಲಸ ಆರಂಭಿಸಿದ್ದಾರೆ. ಉದಾಹರಣೆಗೆ ಸುದೀಪ್‌ರ ಆಪ್ತಮಿತ್ರ ಶಂಕ್ರೇಗೌಡ ನಿರ್ಮಿಸಲಿರುವ ಚಿತ್ರಕ್ಕೆ 'ವರದನಾಯಕ' ಎಂಬ ಹೆಸರಿಟ್ಟಿದ್ದಾರೆ. ಆದರೆ ಶಿವರಾಜ್‌ಕುಮಾರ್ ಅವರನ್ನು ಹಾಕಿಕೊಂಡು 'ವರದ' ಎಂಬ ಚಿತ್ರವನ್ನು ಆರಂಭಿಸಲು ನಿರ್ಮಾಪಕ ಸೂರಪ್ಪ ಬಾಬು ಬಹಳ ಹಿಂದೆಯೇ ಯೋಜನೆ ಹಾಕಿಕೊಂಡಿದ್ದರು.

ಅದಕ್ಕೆ ಈಗ ಸುದೀಪ್ ತನ್ನ ಚಿತ್ರಕ್ಕೆ 'ವರದನಾಯಕ' ಎಂಬ ಹೆಸರಿಟ್ಟಿರುವುದನ್ನು ಸೂರಪ್ಪ ಬಾಬು ತೀವ್ರವಾಗಿ ಆಕ್ಷೇಪಿಸಿದ್ದಾರೆ. ಅಷ್ಟೇ ಅಲ್ಲ, ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಚಿತ್ರಗಳ ಹೆಸರನ್ನು ಕ್ಲಿಯರ್ ಮಾಡುವ ಸಮಿತಿಗೆ ಸ್ವತಃ ಸೂರಪ್ಪ ಬಾಬು ಅಧ್ಯಕ್ಷರಾಗಿರುವುದರಿಂದ ಶಂಕ್ರೇಗೌಡರು ನಿರ್ಮಿಸುವ ಚಿತ್ರಕ್ಕೆ 'ವರದನಾಯಕ' ಎಂಬ ಹೆಸರು ನೀಡಲು ಆಗುವುದಿಲ್ಲ ಎಂದಿದ್ದಾರೆ. ಆದರೆ ಇದಕ್ಕೆ ಪ್ರತ್ಯುತ್ತರವಾಗಿ ಶಂಕ್ರೇಗೌಡರು "ಏನೇ ಆದರೂ 'ವರದನಾಯಕ' ಟೈಟಲ್‌ಅನ್ನು ನಾವು ನ್ಯಾಯಯುತವಾಗಿ ಖಂಡಿತ ಪಡೆದುಕೊಳ್ಳುತ್ತೇವೆ" ಎನ್ನುತ್ತಿದ್ದಾರೆ. "ಶಿವರಾಜ್‌ಕುಮಾರ್ ನಾಯಕನಾಗಿ ನಟಿಸುವ 'ವರದ' ಚಿತ್ರ ಬಹಳ ಹಿಂದೆಯೇ ಘೋಷಣೆಯಾಗಿರುವುದರಿಂದ ಆ ಟೈಟಲ್ ನಮ್ಮ ಬ್ಯಾನರ್‌ನ ಚಿತ್ರಕ್ಕೇ ಇರಬೇಕು" ಎಂಬುದು ಸೂರಪ್ಪ ಬಾಬು ಅವರ ವಾದ.


ಮೊನ್ನೆ ಮೊನ್ನೆಯಷ್ಟೇ 'ಜೋಗಯ್ಯ' (ಕು)ಖ್ಯಾತಿಯ ಪ್ರೇಮ್ ಮತ್ತು ಅವರ ಒಂದು ಕಾಲದ ದೋಸ್ತ್ ಶ್ರೀನಿವಾಸ್ ನಡುವೆ ಇದೇ ತರಹ 'ಅಡ್ಡ' ಎಂಬ ಹೆಸರಿಗಾಗಿ ದೊಡ್ಡ ಗಲಾಟೆಯೇ ನಡೆಯಿತು. ಮಹೇಶ್‌ಬಾಬು ನಿರ್ದೇಶನದ ಪ್ರೇಮ್ ನಾಯಕನಾಗಿ ನಟಿಸುತ್ತಿರುವ ಚಿತ್ರಕ್ಕೆ 'ಅಡ್ಡ' ಎಂದು ಹೆಸರಿಟ್ಟಿದ್ದರು. ಆದರೆ ಇನ್ನೂ ತಮ್ಮ ಚಿತ್ರವನ್ನೇ ಆರಂಭಿಸದ ಮಂದಾಕಿನಿ ಖ್ಯಾತಿಯ ಶ್ರೀನಿವಾಸ್ "ಈ 'ಅಡ್ಡ' ಎಂಬ ಟೈಟಲ್ ನಮ್ಮ ಬಳಿಯಿದೆ" ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಒಟ್ಟಾರೆಯಾಗಿ ಚಿತ್ರದ ಟೈಟಲ್‌ಗಾಗಿ ಕನ್ನಡದ ನಿರ್ಮಾಪಕರು ಪರಸ್ಪರ ದೋಷಾರೋಪಣೆ ಮಾಡಿಕೊಳ್ಳುವ ಹೊಸ ಟ್ರೆಂಡ್ ಕನ್ನಡದಲ್ಲಿ ಆರಂಭವಾದಂತೆ ಕಾಣಿಸುತ್ತಿದೆ.

ಬಾಲಿವುಡ್‌ಗೆ ಗುಡ್‌ಬೈ

ಸುದೀಪ್ ಹಿಂದಿ ಚಿತ್ರರಂಗಕ್ಕೆ ಗುಡ್‌ಬೈ ಹೇಳಿದ್ದಾರೆ.

ಇದಕ್ಕೆ ಅವರು ನೀಡುವ ಸಬೂಬು ಏನು ಗೊತ್ತೆ? "ಹಿಂದಿಯಲ್ಲಿ ನಟನೆ ಮಾಡುವುದೆಂದರೆ ಸುಮಾರು ಒಂದೂವರೆ ವರ್ಷಗಳ ಕಾಲ ಕಾಲ್‌ಶೀಟ್ ನೀಡಬೇಕಾಗುತ್ತದೆ. ಆಗ ಕನ್ನಡದಲ್ಲಿ ನಟಿಸುವ ಸಿನಿಮಾಗಳ ನಡುವೆ ಬಹಳ ದೊಡ್ಡ ಅಂತರ ಉಂಟಾಗುತ್ತದೆ. ಇದರಿಂದಾಗಿ ಇಲ್ಲಿಯ ನನ್ನ ಅಭಿಮಾನಿಗಳಿಗೆ ನಿರಾಶೆಯಾಗುತ್ತದೆ. ಆ ಕಾರಣಕ್ಕಾಗಿ ಇನ್ನು ಮುಂದೆ ಹಿಂದಿಯಲ್ಲಿ ನಟಿಸುವುದಿಲ್ಲ" ಎಂದು ಸುದೀಪ್ ಘೋಷಿಸಿದ್ದಾರೆ.


ಮೇಲ್ನೋಟಕ್ಕೆ ಸುದೀಪ್ ಹೇಳುವ ಈ ಮಾತುಗಳು ನಿಜವೆಂದು ಕಾಣಿಸುತ್ತದೆ. ಆದರೆ ಗಾಂಧಿನಗರದ ಪಂಡಿತರ ಪ್ರಕಾರ ಇದರ ಹಿಂದೆ ನಿಜವಾದ ಮತ್ತೊಂದು ಕಾರಣವೂ ಇದೆ. ಅದೇನೆಂದರೆ ಹಿಂದಿ ಚಿತ್ರರಂಗದಲ್ಲಿ ಸುದೀಪ್‌ರಂತಹ ನೂರಾರು ಯುವ ನಟರು ಈಗಾಗಲೇ ತಮ್ಮ ಅದೃಷ್ಟದ ಪರೀಕ್ಷೆಯನ್ನು ಮಾಡುತ್ತಿದ್ದಾರೆ. ಈ ನೂರಾರು ಹುಡುಗರ ಜೊತೆಗೆ ಸುದೀಪ್ ಸೆಣಸಾಡಿ ಹೀರೋ ಆಗಿ ವಿಜೃಂಭಿಸಬೇಕಾಗಿದೆ. ಅದು ಸದ್ಯಕ್ಕೆ ಆಗುಹೋಗುವ ಕೆಲಸವಲ್ಲ. ಈ ಕಾರಣದಿಂದಲೇ ಸುದೀಪ್ ಬಹಳ ಜಾಣತನದಿಂದ ಸಮಯದ ಅಭಾವದ ನೆಪ ಹೇಳಿ ಈ ಕಡೆಗೆ ಬರುತ್ತಿದ್ದಾರೆ.



ಸುದೀಪ್ ಹಿಂದಿಯಲ್ಲಿ ಫುಲ್ ಲೆಂತ್ ಹೀರೋ ಆಗಿ ಇನ್ನೂ ನಟಿಸಿಲ್ಲ. ನಿರ್ದೇಶಕ ರಾಮ್ ಗೋಪಾಲ್ ವರ್ಮ ಅವರ 'ಫೂಂಕ್', 'ಫೂಂಕ್ ಭಾಗ -2' ಮತ್ತು 'ರಣ' ಈ ಮೂರು ಚಿತ್ರಗಳಲ್ಲಿ ಗಮನಾರ್ಹ ಪಾತ್ರಗಳಲ್ಲಿ ಸುದೀಪ್ ಕಾಣಿಸಿಕೊಂಡಿದ್ದರು. ಅದರಲ್ಲೂ ಅವರು ವಿಲನ್ ಆಗಿ ಕಾಣಿಸಿಕೊಂಡಿದ್ದು ಮತ್ತೊಂದು ವಿಶೇಷ. 'ರಣ' ಚಿತ್ರದಲ್ಲಿ ಹಿಂದಿ ಚಿತ್ರರಂಗದ ಲಂಬು ಅಮಿತಾಭ್ ಬಚ್ಚನ್ ಜೊತೆ ನಟಿಸಿದಾಗ ಇನ್ನು ಮುಂದೆ ತನಗೆ ರಾಷ್ಟ್ರಮಟ್ಟದ ಮನ್ನಣೆ ದೊರಕಬಹುದೆಂಬ ಭ್ರಮೆಯಲ್ಲಿದ್ದರು ಸುದೀಪ್. ಆದರೆ ಹಿಂದಿ ಚಿತ್ರರಂಗ ಒಂದು ರೀತಿಯಲ್ಲಿ ಹಿಂದೂ ಮಹಾಸಾಗರ ಇದ್ದಂತೆ. ಅಲ್ಲಿ ಕನ್ನಡದ ನಟರು ಈಸಿ ಜೈಸುವುದು ಬಹಳ ಕಷ್ಟದ ಕೆಲಸ.

ಸಾಧಾರಣವಾಗಿ ದಕ್ಷಿಣ ಭಾರತದ ನಟರಿಗೆ ಹಿಂದಿ ಸಿನಿಮಾಗಳಲ್ಲಿ ನಟಿಸುವ ಕ್ರೇಜ್ ಇದ್ದೇ ಇರುತ್ತದೆ. ಇದಕ್ಕೆ ರಜನಿಕಾಂತ್, ಕಮಲಹಾಸನ್ ಕೂಡ ಅಪವಾದವಲ್ಲ. ಆದರೆ ದಕ್ಷಿಣದ ನಾಯಕ ನಟರು ಹಿಂದಿ ಚಿತ್ರರಂಗದಲ್ಲಿ ಗೆದ್ದು ಜಯಭೇರಿ ಭಾರಿಸಿದ ಉದಾಹರಣೆಗಳು ಬಹಳ ಕಡಿಮೆ. ಈಗ ಅಂಥವರ ಸಾಲಿಗೆ ನಮ್ಮ ಸುದೀಪ್ ಕೂಡ ಸೇರ್ಪಡೆಯಾಗಿರುವುದು ವಿಶೇಷವೇನೂ ಅಲ್ಲ. ಈ ಹಿಂದೆ ಹಿಂದಿ ಚಿತ್ರರಂಗದಲ್ಲಿ ವಿಫುಲ ಪ್ರಯತ್ನ ಮಾಡಿದ ಇತರೆ ನಟರು ಸಮಯದ ನೆಪವನ್ನು ನೀಡಿದ್ದರು. ನಮ್ಮ ಸುದೀಪ್ ಕೂಡ ಈಗ ಹಿಂದಿಯಲ್ಲಿ ನಟಿಸುವುದೆಂದರೆ ಒಂದೂವರೆ ವರ್ಷ ಹಾಳಾಗುತ್ತದೆ ಎಂದು ಹಳಬರು ಹೇಳಿದ ಡೈಲಾಗ್‌ಅನ್ನೇ ಹೊಸ ಶೈಲಿಯಲ್ಲಿ ಹೇಳಿದ್ದಾರಷ್ಟೆ. ಅದೇನೇ ಇರಲಿ ಕನ್ನಡದಲ್ಲಿ ನಾಯಕ ನಟನಾಗಿ ಉಜ್ವಲ ಭವಿಷ್ಯವಿರುವ ಈ ಸುದೀಪ್ ಕನ್ನಡಕ್ಕೇ ಅಂಟಿಕೊಳ್ಳುವ ನಿರ್ಧಾರ ಕೈಗೊಂಡಿರುವುದು ಅವರ ಅಭಿಮಾನಿಗಳಿಗೆ ಮಾತ್ರವಲ್ಲ ಇಲ್ಲಿಯ ನಿರ್ಮಾಪಕರಿಗೂ ಸಂತೋಷ ಕೊಡುವ ವಿಷಯವಾಗಿದೆ.

...ಕಿಕೊಟ್ಟು, ಅದರ ಲೇಖಕರಾದ ದೇವನೂರು ಮಹಾದೇವ ಮತ್ತು ಪೂರ್ಣಚಂದ್ರ ತೇಜಸ್ವಿ ಅವರು 'ಮಾರ್ಗ ಪ್ರವರ್ತಕ'ರೆನಿಸಿಕೊಂಡರು. ಅಲ್ಲಿವರೆಗಿನ ಮುರುಕದ, ವ್ಯಕ್ತಿತ್ವವಾದಿ, ಬಹುಪಾಲು ವೈದಿಕ ಸಾಹಿತ್ಯ ತಿರಸ್ಕೃತಗೊಂಡು ಅಂಬೇಡ್ಕರ್‌ವಾದದ ತೊದಲು ನುಡಿಯ ಅಪಾರ ಕನಸಿನೊಂದಿಗೆ, ಕುವೆಂಪು ಸಾಹಿತ್ಯಸೃಷ್ಟಿ, ಲೋಹಿಯಾರ ತತ್ವ ಚಿಂತನೆ, ಶಿವರಾಮ ಕಾರಂತರ ಜೀವನ ದರ್ಶನವನ್ನು ಧರಿಸಿ ಹೊಸ ದಿಗಂತದೆಡೆಗೆ ಗುತ್ತಿ, ಹೂವಯ್ಯನವರ ನಾಯಕತ್ವದಲ್ಲಿ ಶೂದ್ರರ ಹೊಸ ನೋಟಗಳು, ನುಡಿಗಟ್ಟುಗಳು ಹುಟ್ಟಿಕೊಂಡು ಬೆಳಕಿನೆಡೆಗೆ ಹೊಸ ಪಯಣ ಆರಂಭವಾಯಿತು. ಈ ಮಾರ್ಗದಲ್ಲಿ ಹೊಸತನದ ಪಿತೃಹತ್ಯೆಯ ಉತ್ಸಾಹದಲ್ಲಿ ತಪ್ಪುಗಳಾಗಿದ್ದರೂ ಆತ್ಮಗೌರವವಿತ್ತು, ಸಂಯಮವಿತ್ತು, ಈ ನೆಲದ ಸಮುದಾಯದ ಬಗ್ಗೆ ಅರಿವಿತ್ತು, ಪುರೋಹಿತಶಾಹಿಯ ಅಮಾನವೀಯ ಚಿಂತನೆಗಳಿಗೆ ಖಚಿತವಾದ ವಿರೋಧವಿತ್ತು.



ಸಾಹಿತ್ಯದಲ್ಲಿ ರಾಮನವಮಿಯ ದಿವಸದ ಹೆಸರಿನಲ್ಲಿ ಕೋಸಂಬರಿ, ಪಾನಕ, ಇಂಗನ್ನು ಹಂಚುವ ಪದ್ಧತಿಯೇ ತಿರಸ್ಕೃತಗೊಂಡಿತು. ಏಕೆಂದರೆ ಅವು ಎಷ್ಟೇ ರುಚಿಯಾಗಿದ್ದರೂ ಅವು ನಿರರ್ಥಕವಾಗಿದ್ದವು, ದೇಹದ ಆರೋಗ್ಯಕ್ಕೆ ಅವು ಯಾವುದೇ ರೀತಿಯಲ್ಲೂ ಮದ್ದಾಗಿರಲಿಲ್ಲ. ಇದರ ಜಾಗನ್ನೇ ಹಿಡಿದುಕೊಂಡು ಮುಂದೆ ಬರಹಗಾರರ ಒಕ್ಕೂಟ, ಜಾತಿವಿನಾಶ ಸಮ್ಮೇಳನ, ದಲಿತ ಸಂಘರ್ಷ ಸಮಿತಿ, ಬಂಡಾಯ ಚಳವಳಿ, ರೈತ ಚಳವಳಿ, ಲಂಕೇಶ್ ಪತ್ರಿಕೆ, ಗೋಕಾಕ್ ಚಳವಳಿಗಳು ಮೈದಾಳಿ ಮುಂದಿನ ಎರಡು ದಶಕಗಳ ಕಾಲ ಇಡೀ ಕರ್ನಾಟಕದ ರಾಜಕೀಯ, ಸಾಮಾಜಕೀಯ, ಸಾಹಿತ್ಯ ರಂಗಗಳ ಸರಿ ತಪ್ಪುಗಳನ್ನೇ ನಿರ್ಣಯಿಸುವ ಸ್ತರ ಮಟ್ಟಗೆ ಬೆಳೆದವು.

ಇವುಗಳು ರಾಜ್ಯದ ದಮನಿತರ, ತಳಸಮುದಾಯಗಳ ಮೂಲಭೂತ ಹಕ್ಕುಗಳನ್ನು ಸಂಘಟನೆಗಳ ಮೂಲಕವೇ ಪಡೆದುಕೊಳ್ಳಬೇಕೆನ್ನುವ ಹೋರಾಟದ ಮಾರ್ಗಗಳನ್ನು ತೋರಿಸಿದವು. ಇದರಲ್ಲಿದ್ದ ಪ್ರಮುಖ ಲೇಖಕರು, ಚಿಂತಕರು, ಹೋರಾಟಗಾರರು ತಮ್ಮ ಜೀವನದ ಭಾಗವಾಗಿದ್ದ ವೈಚಾರಿಕತೆ, ಜಾತ್ಯತೀತತೆ, ಪ್ರಗತಿಪರ ನೀತಿಗಳನ್ನು ಮೇಲ್ಕಾಣಿಸಿದ ಎಲ್ಲಾ ಚಳವಳಿಗಳಿಗೆ ಸಂಪೂರ್ಣವಾಗಿ ಧಾರೆಯೆರೆದರು. ಆ ಮೂಲಕ ಸಮಾಜಕ್ಕೆ, ವ್ಯವಸ್ಥೆಗೆ ತಮ್ಮ ಕತ್ತನ್ನು ಕೊಡುವ ಕಾರ್ಯಕ್ಕೆ ಕೈ ಹಾಕಿದರು. ಆ ಮೂಲಕ ನಮ್ಮನ್ನೂ ಇದಕ್ಕೆ ಪ್ರೇರೇಪಿಸಿದರು. 70ರ ದಶಕದ ನಂತರ ಸಾಹಿತ್ಯದಲ್ಲಿ ರಮ್ಯತೆಯ ಕಾಲ ಮುಗಿಯುತ್ತಿರುವ ಸೂಚನೆ ನೀಡಿದರೆ, 80ರ ದಶಕದಲ್ಲಿ ಅನೇಕ ತಲ್ಲಣಗಳನ್ನೊಳಗೊಂಡ ವ್ಯವಸ್ಥೆಯಲ್ಲಿ ಆ ಶೈಲಿಯಲ್ಲಿ ಬರೆಯುವುದೇ ಒಂದು ಅಪರಾಧವೆನಿಸುತಿತ್ತು, ಇನ್ನು ಸಂಪೂರ್ಣ ವ್ಯಕ್ತಿಗತ ನರಕಗಳನ್ನೇ ನೆಚ್ಚಿಕೊಂಡ, ಲಿಬಿಡೊದ ಹೆಸರಿನಲ್ಲಿ ಹೊರಬಿದ್ದ ಹೇವರಿಕೆಗಳು, ಅತಿಯಾದ ನಾರ್ಸಿಸಂ, ಇವನ್ನೆಲ್ಲ ನೆಚ್ಚಿಕೊಂಡು ಕಟ್ಟಿದ ನವ್ಯದ ಅರಗಿನ ಮನೆ ಎಷ್ಟೇ ಕಲಾತ್ಮಕವಾಗಿದ್ದರೂ ಉದುರಿ ಹೋಯಿತು. ಈಗ ಈ 21ನೇ ಶತಮಾನದಲ್ಲಿ ನಿಂತು ನೋಡಿದಾಗ ಕಳೆದ 30 ವರ್ಷಗಳಿಂದ ತನ್ನ ಸಫಲತೆ ಹಾಗು ವಿಫಲತೆಗಳ ನಡುವೆ ಈವರೆಗೆ ನಡೆದ ಈ ಎಲ್ಲ ವಿದ್ಯಾಮಾನಗಳು ನಮಗೆ ಮಿಣುಕು ದೀಪಗಳಾಗಿಯೇ ಗೋಚರಿಸುತ್ತವೆ. ಹಾಗೂ ಅಲ್ಲಿ ಉಂಟಾದ ವೈಫಲ್ಯದ ಕಾರಣಗಳ ಬಗ್ಗೆ ಎಚ್ಚರಿಕೆಯನ್ನೂ ಇಟ್ಟುಕೊಂಡು ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಲೋಹಿಯಾರೆಂಬ ಸೂರ್ಯ ಬೆಳಕಿನಲ್ಲಿ ಆ ಮಾರ್ಗವನ್ನೇ ಕ್ರಮಿಸದೆ ಬೇರೆ ಅನ್ಯ ಮಾರ್ಗ ಇಲ್ಲ ಎಂಬುದು ಕೂಡ ನಮ್ಮೆಲ್ಲರ ಸುಪ್ತ ಪ್ರಜ್ಞೆಯೊಳಗಿದೆ.

ಅತ್ಯಂತ ಚರ್ವಿತ ಚರ್ವಣಗಳಾಗಿರುವ ಈ ವಿಷಯದ ಬಗ್ಗೆ ಮತ್ತೆ ಮತ್ತೆ ಏಕೆ ಮಾತನಾಡಬೇಕಾಗಿದೆ ಎಂದರೆ ಸಂಘಪರಿವಾರ ನೇತೃತ್ವದ ತಿಳಿಗೇಡಿ ರಾಜ್ಯ ಸರ್ಕಾರ ಕಡಿಮೆ ವಿದ್ಯಾರ್ಥಿಗಳಿರುವ ಸರ್ಕಾರಿ ಕನ್ನಡ ಶಾಲೆಗಳನ್ನು ವಿಲೀನಗೊಳಿಸುತ್ತೇವೆ ಎನ್ನುವ ಮುಖವಾಡದ ಮರೆಯಲ್ಲಿ ಶಾಲೆಗಳನ್ನು ಮುಚ್ಚುವ ದುಸ್ಸಾಹಸಕ್ಕೆ ಕೈ ಹಾಕಿದೆ. ಅದರ ವಿರುದ್ಧ ಮೊದಲು ತೀವ್ರವಾದ ದನಿಯೆತ್ತಿದ್ದು ದೇವನೂರು ಮಹಾದೇವ. ನಮ್ಮನ್ನು ಮಂಪರಿನಿಂದ ಎಚ್ಚರಿಸಲು ಮತ್ತೆ ನಮಗೆ ದೇವನೂರು ಮಹಾದೇವರೇ ಬರಬೇಕಾಯಿತು. ಕನ್ನಡ ಶಾಲೆಗಳ ಅಗತ್ಯತೆಗೆ, ಕನ್ನಡ ಮಾಧ್ಯಮದ ಶಿಕ್ಷಣಕ್ಕೆ ತಮಗೆ ದೊರೆತ ಪಂಪ ಪ್ರಶಸ್ತಿಯನ್ನು ತಿರಸ್ಕರಿಸಿದ ಮಹಾದೇವರು ಇವತ್ತಿಗೂ ನಮಗೆ ಮಾದರಿಯಾಗಿದ್ದಾರೆ.

- ಬಿ.ಶ್ರೀಪಾದ ಭಟ್, ಬೆಂಗಳೂರು

ಕಳೆದ ವಾರ 'ಹೊಸ ದಿಗಂತ' ಪತ್ರಿಕೆಯ ಬಗ್ಗೆ ಪ್ರಕಟವಾದ ವರದಿಯಲ್ಲಿ ಹಲವು ತಪ್ಪು ಅಂಶಗಳು ತೂರಿಕೊಂಡಿವೆ. ಉದಾಹರಣೆಗೆ ನಿಮ್ಮ ವರದಿ ಹೇಳಿರುವಂತೆ ಒಂದು ಪತ್ರಿಕೆಯು ರಾಜ್ಯ ಪತ್ರಿಕೆ ಎನಿಸಿಕೊಳ್ಳಲು ಈಗಿರುವ 30 ಜಿಲ್ಲೆಗಳ ಪೈಕಿ 19 ಜಿಲ್ಲೆಗಳಲ್ಲಿ ಆ ಪತ್ರಿಕೆ ಅಸ್ತಿತ್ವ ಹೊಂದಿದ್ದರೆ ಸಾಲದು. ಬದಲಾಗಿ ವಾರ್ತಾ ಇಲಾಖೆಯ ನಿಯಮಗಳ ಪ್ರಕಾರ ಯಾವುದೇ ಪತ್ರಿಕೆಯು ರಾಜ್ಯ ಮಟ್ಟದ ಪತ್ರಿಕೆ ಎನಿಸಿಕೊಳ್ಳಲು ಎಲ್ಲಾ 30 ಜಿಲ್ಲೆಗಳಲ್ಲಿ ಪ್ರತಿ ದಿನ 75,000 ಪ್ರಸಾರ ಸಂಖ್ಯೆಯನ್ನು ಹೊಂದಿರುವುದಕ್ಕೆ ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಷನ್ (ಎಬಿಸಿ) ನಿಂದ ಸರ್ಟಿಫಿಕೇಟ್ ಪಡೆದಿರಬೇಕು. ಅಕಸ್ಮಾತ್ ಆ ಪತ್ರಿಕೆಯು ಯಾವುದೇ ಒಂದು ಜಿಲ್ಲೆಯಲ್ಲಿ ಅಷ್ಟು ಪ್ರಸಾರ ಹೊಂದಿರದಿದ್ದರೆ ಅದನ್ನು ಯಾವುದೇ ಕಾರಣಕ್ಕೂ ರಾಜ್ಯ ಮಟ್ಟದ ಪತ್ರಿಕೆ ಎಂದು ಪರಿಗಣಿಸಲಾಗುವುದಿಲ್ಲ.

'ಹೊಸ ದಿಗಂತ' ಪತ್ರಿಕೆಯ ವಿರುದ್ಧ ನಾನು ರಾಜ್ಯ ಹೈಕೋರ್ಟಿನಲ್ಲಿ ದಾವೆ ಒಂದನ್ನು ಹೂಡಿದ್ದು ವಕೀಲರಾದ ಬಿ.ಟಿ.ವೆಂಕಟೇಶ್ ಅವರು ನನ್ನನ್ನು ನ್ಯಾಯಾಲಯದ ಮುಂದೆ ಪ್ರತಿನಿಧಿಸುತ್ತಿದ್ದಾರೆ. 'ತೆಹೆಲ್ಕಾ' ಪತ್ರಿಕೆಯು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾವೆಯನ್ನಾಧರಿಸಿ ಒಂದು ವರದಿಯನ್ನು ಪ್ರಕಟಿಸಿದೆ. ತಮ್ಮ ವರದಿಗಾರರೂ ಈ ಕುರಿತು ನನ್ನನ್ನು ಅಥವಾ ವೆಂಕಟೇಶ್ ಅವರನ್ನು ಮಾತನಾಡಿಸಿದ್ದರೆ ಇಂತಹ ತಪ್ಪುಗಳು ಆಗದಂತೆ ಎಚ್ಚರವಹಿಸಬಹುದಿತ್ತು.

ಅದೇನೇ ಇರಲಿ, ಬಿಜೆಪಿ ಸರ್ಕಾರ ತನ್ನ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಸಂಘ ಪರಿವಾರ ನಡೆಸುವ 'ಹೊಸ ದಿಗಂತ' ಪತ್ರಿಕೆಯನ್ನು ಅಕ್ರಮವಾಗಿ ಪೋಷಿಸುತ್ತಿರುವುದನ್ನು ನಿಮ್ಮ ವರದಿಯು ಗುರುತಿಸಿರುವುದು ಸರಿಯಾಗಿದೆ. ಈ ಪತ್ರಿಕೆಯನ್ನು ಆರೆಸ್ಸೆಸ್‌ನ ಒಂದು ಟ್ರಸ್ಟ್ ನಡೆಸುತ್ತಿದ್ದು ಕುಖ್ಯಾತ ಬಿಲ್ಡರ್ ದಯಾನಂದ ಪೈ ಈ ಟ್ರಸ್ಟ್‌ನ ಮುಖ್ಯಸ್ಥನಾಗಿದ್ದಾನೆ.

- ಬಿ.ವಿ.ಸೀತಾರಾಂ, ಕರಾವಳಿ ಅಲೆ, ಮಂಗಳೂರು

ಸ್ಪಷ್ಟೀಕರಣ

'ಬದುಕಿಗಾಗಿ ಮಹಿಳೆಯರ ಹೋರಾಟ' ಎಂಬ ಲೇಖನದಲ್ಲಿ ಆಸಿಡ್ ದಾಳಿಗೊಳಗಾದ ಮಹಿಳೆಯ ಮೊಕದ್ದಮೆಯಲ್ಲಿ ನ್ಯಾಯಾಲಯದ ತೀರ್ಪಿನ ಕುರಿತು ಬರೆದ ವರದಿ ಸರಿಯಲ್ಲ. ಆ ಮೊಕದ್ದಮೆಯಲ್ಲಿ ಕೆಲ ನ್ಯಾಯಾಲಯದಲ್ಲಿ ಆಸಿಡ್ ದಾಳಿ ಮಾಡಿದಾತನಿಗೆ ಮೂರು ಲಕ್ಷ ಫೈನ್ ಮತ್ತು ಐದು ವರ್ಷ ಜೈಲು ಶಿಕ್ಷೆ ಎಂದು ತೀರ್ಪು ನೀಡಲಾಗಿತ್ತು. ಕೊಲೆಗೆ ಪ್ರಯತ್ನವೆಂದೇ ಮೊಕದ್ದಮೆ ದಾಖಲಾಗಿತ್ತು. ಹೈಕೋರ್ಟಿನಲ್ಲಿ ಮತ್ತೂ ಎರಡೂ ಲಕ್ಷ ಫೈನ್ (ಒಟ್ಟು ಐದು ಲಕ್ಷ) ಮತ್ತು ಆಜೀವ ಜೈಲು ಶಿಕ್ಷೆ ಎಂದು ತೀರ್ಪು ನೀಡಲಾಗಿದೆ. ಈ ತೀರ್ಪಿನ ವಿರುದ್ಧ ಆರೋಪಿಯು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಿದ್ದು ತೀರ್ಪು ಇನ್ನೂ ಹೊರಬಂದಿಲ್ಲ.

ವೇದಿಕೆಗಳಲ್ಲಿ ಇಂತಹ ವಿಷಯಗಳನ್ನು ಪ್ರಸ್ತುತಪಡಿಸುವಾಗ ಅದರ ಸತ್ಯಾಸತ್ಯತೆಯನ್ನು ನಿಖರವಾಗಿ ತಿಳಿದುಕೊಳ್ಳುವುದು ಅಗತ್ಯವಾಗಿದೆ.

ನ್ಯಾಯಾಲಯಗಳ ಕ್ಷಮೆಯೊಡನೆ


-ಸಾರಾ ಅಬೂಬಕ್ಕರ್

Regd.No.KA/RNP/BGS/2036/2011-13 Posted at : GPO, Bangalore-01, Fri/Saturday R B P LANKESH, Kannada Weekly Price Rs. 14/- 23-11-2011 RNI No. KARKAN20

ಕೋಟಿವೀರರ ವಿರುದ್ಧ ಮುನಿ ಕಿಡಿ

ನಿರ್ಮಾಪಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಆರಂಭದಲ್ಲಿ ಮುನಿರತ್ನಂ ನಾಯ್ಡು ಅವರು ಕೆಲವು ಸಮಸ್ಯೆಗಳನ್ನು ಪರಿಹರಿಸಿ ನಿರ್ಮಾಪಕರ ಮತ್ತು ಉದ್ಯಮದ ಪಾಲಿಗೆ ಆಶಾಕಿರಣವಾಗಿ ಕಾಣಿಸಿಕೊಂಡಿದ್ದರು. ಆದರೆ ಇತ್ತೀಚೆಗೆ ಸಭೆ-ಸಮಾರಂಭಗಳಲ್ಲಿ ಮುನಿರತ್ನಂ ನಾಯ್ಡು ಹಾಸ್ಯಾಸ್ಪದವಾಗಿ ಮಾತನಾಡುತ್ತಿರುವುದು ಸೋಜಿಗವೆನಿಸಿದೆ.





ಉದಾಹರಣೆಗೆ ಮೊನ್ನೆ ಮಾಜಿ ಭೂಗತ ದೊರೆ ಜೇಡರಹಳ್ಳಿ ಕೃಷ್ಣಪ್ಪ ನಾಯಕನಟನಾಗಿ ನಟಿಸಿರುವ ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭದಲ್ಲಿ ಮುನಿ ಹೇಳಿದ್ದೇನು ಗೊತ್ತೆ? "ನೀವು ಈ ಚಿತ್ರ ಯಶಸ್ವಿಯಾದ ನಂತರ ಮುಂಬರುವ ದಿನಗಳಲ್ಲಿ ಕೋಟಿ ರೂಪಾಯಿ ಸಂಭಾವನೆ ಪಡೆಯುವ ಪ್ರಯತ್ನ ಮಾಡಿ ನಿರ್ಮಾಪಕರ ಕೊರಳನ್ನು ಹಿಸುಕಿ ಹಾಕಬೇಡಿ" ಎಂದು ಮುನಿ ಜೇಡರಹಳ್ಳಿಗೆ ಬುದ್ಧಿವಾದ ಹೇಳಿದರು. ಮುನಿಯ ಈ ಮಾತನ್ನು ಕೇಳಿ ಅಲ್ಲಿ ನೆರೆದಿದ್ದವರೆಲ್ಲಾ ಗೊಳ್ಳನೆ ನಕ್ಕರು. ಯಾಕೆಂದರೆ ಜೇಡರಹಳ್ಳಿ ನಟಿಸಿರುವ ಚಿತ್ರ ಹಿಟ್ ಆಗುವ ಸಾಧ್ಯತೆಯೂ ಇಲ್ಲ, ಅವರು ಕೋಟಿ ರೂಪಾಯಿ ಸಂಭಾವನೆ ಪಡೆಯುವ ಪ್ರಶ್ನೆಯಂತೂ ಉದ್ಭವಿಸುವುದೇ ಇಲ್ಲ. ಇನ್ನೂ ಮಜವಾದ ವಿಷಯ ಯಾವುದೆಂದರೆ ಇದಕ್ಕೆ ಒಂದು ವಾರದ ಹಿಂದೆ ಮುನಿ ಅದೇ ಡೈಲಾಗ್‌ಅನ್ನು ಇನ್ನೊಂದು ಸಂದರ್ಭದಲ್ಲಿ ಹೊಡೆದದ್ದು. ಯುವನಟ ನವೀನ್ ಹೀರೋ ಆಗಿರುವ 'ಹೊಸ ಪ್ರೇಮ ಪುರಾಣ' ಚಿತ್ರದ ಆಡಿಯೋ ಬಿಡುಗಡೆ ಸಮಾರಂಭವದು. ಅಂದು ನವೀನ್ ಮುನಿರತ್ನಂ ಜೊತೆ ವೇದಿಕೆಯಲ್ಲಿದ್ದ. ಆವತ್ತು ಮಾತನಾಡುತ್ತಾ ಮುನಿ "ನೀನು ಈ ಚಿತ್ರ ಯಶಸ್ವಿಯಾದ ಮೇಲೆ ಕೋಟಿ ಕೋಟಿ ಸಂಭಾವನೆ ಪಡೆಯಲು ಪ್ರಯತ್ನಿಸಬಾರದು. ಹಣಕ್ಕಿಂತ ಕಥಾವಸ್ತು ಮುಖ್ಯ" ಎಂಬಿತ್ಯಾದಿಯಾಗಿ ಭಾಷಣ ಮಾಡಿದರು. ಅವರ ಮಾತನ್ನು ಕೇಳಿ ನವೀನ್ ನಾಚಿಕೆಯಿಂದ ತಲೆತಗ್ಗಿಸಿಕೊಂಡು ಕೂತಿದ್ದ. ಈಗ ಉದ್ಯಮದವರು ಕೇಳುತ್ತಿರುವ ಪ್ರಶ್ನೆ ಏನೆಂದರೆ: ಮುನಿರತ್ನಂ ನಾಯ್ಡು ಅವರು ಇದೇ ಡೈಲಾಗ್‌ಅನ್ನು ಕೋಟಿ ಕೋಟಿ ರೂ. ಸಂಭಾವನೆ ಪಡೆಯುವ ಪುನೀತ್ ರಾಜ್‌ಕುಮಾರ್, ದರ್ಶನ್, ಗಣೇಶ್, ಶಿವರಾಜ್‌ಕುಮಾರ್ ಮೊದಲಾದವರಿಗೆ ಹೇಳುವ ತಾಕತ್ತು ತೋರಿಸಿಯಾರೇ?

ಮುನಿರತ್ನಂ ಅವರು ನಾಯಕ ನಟರ ಸಂಭಾವನೆಯನ್ನು ಧೈರ್ಯವಾಗಿ ಸಾರ್ವಜನಿಕ ಸಭೆಯಲ್ಲಿ ಪ್ರಶ್ನಿಸುವುದನ್ನು ಮೆಚ್ಚಬೇಕಾದದ್ದೆ. ಆದರೆ ವೇದಿಕೆಯಲ್ಲಿ ಕೋಟಿವೀರ ನಾಯಕ ನಟರು ಇದ್ದಾಗ ಅದನ್ನು ಹೇಳಿದಾಗ ಅದಕ್ಕೆ ಬೆಲೆ ಬರುತ್ತದೆ. ಆದರೆ ಬೇರೆ ಸಂದರ್ಭದಲ್ಲಿ ಅದನ್ನು ಹೇಳಿದರೆ ಅದು ಹಾಸ್ಯಾಸ್ಪದವಾಗಿ ಕಾಣಿಸುತ್ತದೆ. ಆದರೆ ಮುನಿಯ ಅಭಿಮಾನಿಗಳು ಹೇಳುವುದೇನೆಂದರೆ "ಈಗ ಎರಡು ಸಮಾರಂಭಗಳಲ್ಲಿ ಅವರು ಹೇಳಿದ ಡೈಲಾಗ್ ಬರೀ ರಿಹರ್ಸಲ್. ಮುಂಬರುವ ದಿನಗಳಲ್ಲಿ ಇದಕ್ಕಿಂತಲೂ ದೊಡ್ಡ ಬಾಂಬನ್ನು ನಮ್ಮ ಅಧ್ಯಕ್ಷರು ಸಿಡಿಸುತ್ತಾರೆ" ಎಂದು ಅವರು ಭವಿಷ್ಯ ನುಡಿಯುತ್ತಾರೆ. ಅದೇನೇ ಇರಲಿ, ಮುನಿರತ್ನಂ ನಾಯ್ಡು ಅಧ್ಯಕ್ಷರಾದ ನಂತರ ನಿರ್ಮಾಪಕರ ಸಂಘಕ್ಕೆ ಒಂದು ಹೊಸ ಜೀವಕಳೆ ಬಂದಿದೆಯೆಂಬುದು ನಿಜ.

ಮೂರನೇ ಮದುವೆ



ರಾಜೇಶ್ ಕೃಷ್ಣನ್ ಎಂಬ ಗಾಯಕ ಇನ್ನೂ ಅದೆಷ್ಟು ಬಾರಿ ಮದುವೆಯಾಗುತ್ತಾನೋ ಗೊತ್ತಿಲ್ಲ.

ಈಗಿನ್ನೂ ಮೂವತ್ತೈದರ ಆಜುಬಾಜಿನಲ್ಲಿರುವ ರಾಜೇಶ್‌ಗೆ ಮೊನ್ನೆ ಮೂರನೇ ಮದುವೆ ಆಗಿದೆ. ಕನ್ನಡದ ಜನಪ್ರಿಯ ಹಿನ್ನೆಲೆ ಗಾಯಕ, ನಟ, ಸಂಗೀತ ನಿರ್ದೇಶಕ ಎಲ್ಲವೂ ಆಗಿರುವ ಈತ ಈಗಾಗಲೇ ತನ್ನ ಇಬ್ಬರು ಹೆಂಡತಿಯರಿಗೆ ಸೋಡಾ ಚೀಟಿ ನೀಡಿದ್ದಾನೆ. ಈಗ ಕಿರುತೆರೆ ನಟಿ ಕಂ ಗಾಯಕಿ ರಮ್ಯಾ ವಸಿಷ್ಠ ಎಂಬಾಕೆಯನ್ನು ಮದುವೆಯಾಗಿದ್ದಾನೆ!

'ಸುಮ್ ಸುಮ್ನೇ ನಗ್ತಾಳೆ...' ಅಂತ ಹಾಡುತ್ತಾ ಕನ್ನಡ ಚಿತ್ರರಂಗದಲ್ಲಿ ಹೆಸರು ಮಾಡಿದ ರಾಜೇಶ್ ಕೃಷ್ಣನ್ ಇತ್ತೀಚೆಗೆ ಕೊಲ್ಲೂರು ಮೂಕಾಂಬಿಕಾ ದೇವಿ ಸನ್ನಿಧಿಯಲ್ಲಿ ಗ್ರಹಸ್ಥಾಶ್ರಮ ಪ್ರವೇಶಿಸಿದರು ಅಂತ ಬಹುತೇಕ ಮಾಧ್ಯಮಗಳು ವರದಿ ಮಾಡಿವೆ. ಆದರೆ ಈ ಹಿಂದೆ ಇದೇ ರೀತಿ ಈತ ಎರಡು ಬಾರಿ ಗ್ರಹಸ್ಥಾಶ್ರಮವನ್ನು ಪ್ರವೇಶಿಸಿದ್ದರು, ಮತ್ತು ಇದು ಮೂ ಎಂಬ ಮಾಹಿತಿ ಮಾತ್ರ ಆ ವರದಿಗಳಲ್ಲಿ ಮಿಸ್ ಆಗಿಬಿಟ್ಟಿತ್ತು.

ರಾಜೇಶ್ ಕೃಷ್ಣನ್‌ನ ಮೊದಲ ಹೆಂಡತಿ ಸೌಮ್ಯಾ ರಾವ್. ಆಕೆ ಕೂಡಾ ಗಾ ಒಂದಷ್ಟು ವರ್ಷ ಸೌಮ್ಯಾ ಜತೆ ಸಂಸಾರ ಮಾಡಿದ ರಾಜೇಶ್ ಕೊನೆಗೆ ಆಕೆಯಿಂದ ಬ ಈ ಬಗ್ಗೆ ಒಂದು ಸಂದರ್ಶನದಲ್ಲಿ "ನಮ್ಮಿಬ್ಬರ ನಡುವೆ ಎಲ್ಲವೂ ಸರಿ ಹೋಗಲಿ ಸಂಸಾರದ ನೌಕೆ ಮುಂದೆ ಸಾಗಲಿಲ್ಲ, ಆದರೂ ನಾವಿಬ್ಬರೂ ಬೆಸ್ಟ್ ಫ್ರೆಂಡ್ಸ್ ಎಂದಿದ್ದರು ರಾಜೇಶ್.

ಸೌಮ್ಯಾರಿಗೆ ವಿಚ್ಛೇದನ ಕೊಟ್ಟ ರಾಜೇಶ್ ಆನಂತರ ಹರಿಪ್ರಿಯ ದಂತವೈದ್ಯೆಯೊಂದಿಗೆ ಎರಡನೇ ಮದುವೆಯಾಗಿದ್ದ. ಇದು ಮೊದಲ ಸಂಬಂ ಶಾರ್ಟ್ ಪೀರಿಯಡ್ ಅಸ್ತಿತ್ವದಲ್ಲಿದ್ದು ತೀರಾ ಬೇಗ ಮುರಿದು ಬತ್ತು. ಈಗ ನ ರಮ್ಯಾ ವಸಿಷ್ಠಳೊಂದಿಗೆ ರಾಜೇಶ್ ಮದುವೆಯಾಗಿದ್ದಾನೆ.

'ಮುಕ್ತ' ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ನಟಿಸಿರುವ ರಮ್ಯಾ ಕಾರ್ಯಕ್ರಮಗಳಲ್ಲೂ ಕಾಣಿಸಿಕೊಳ್ಳುತ್ತಾಳೆ. ಮೊದಲೆರಡು ಮದುವೆಗಳಲ್ಲಾದ ರಾಜೇಶ್ ಮತ್ತೆ ಮಾಡಿಕೊಳ್ಳದಿರಲಿ.

ಅಂದಹಾಗೆ 'ಎರಡನೇ ಮಧುವೆ', 'ಮತ್ತೊಂದ್ ಮದುವೆ' ಎಂಬೆರಡು ನಿರ್ಮಿಸಿದ್ದ ನಿರ್ಮಾಪಕ ಉಮೇಶ್ ಬಣಕಾರ್ ಅವರು ರಾಜೇಶ್ ಕೃಷ್ಣನ್‌ನಿ ಪಡೆದು 'ಮೂರನೇ ಮದುವೆ' ಅನ್ನೋ ಶೀರ್ಷಿಕೆಯನ್ನು ಛೇಂಬರ್‌ನ ಮಾಡಿಸಿದ್ದಾರೆ ಅನ್ನೋದು ಲೇಟೆಸ್ಟ್ ನ್ಯೂಸ್!

ಭಟ್ಟರ ಕ್ಯಾಲೆಂಡರ್ ಕೆಲಸ!

'ಪರಮಾತ್ಮ' ಪಾಪರ್ ಆದ ಮೇಲೆ ಯೋಗರಾಜ್ ಭಟ್ಟರು ಹೊಸ ಕ್ಯಾಲೆಂಡರ್ ಕೆಲಸಕ್ಕೆ ರೆಡಿಯಾಗಿದ್ದಾರೆ. ಇದೇನಿದು ಹೊಸ ವರ್ಷ ಹತ್ತಿರಾಗುತ್ತಿದ್ದಂತೇ ಯೋಗರಾಜ್ ಭಟ್ಟರು ಕ್ಯಾಲೆಂಡರ್ ವ್ಯಾಪಾರ ಶುರುವಿಟ್ಟರೇ? ಎಂದು ಪ್ರಶ್ನಿಸಬೇಡಿ!

'ಮುಂಗಾರು ಮಳೆ'ಯ ನಂತರ 'ಗಾಳಿಪಟ', 'ಲಗೋರಿ', 'ಮನಸಾರೆ', 'ಪಂಚರಂಗಿ'.. ಹೀಗೆ ಚಿತ್ರ ವಿಚಿತ್ರ ಟೈಟಲ್‌ಗಳನ್ನು ತಮ್ಮ ಸಿನಿಮಾಗಳಿಗೆ ಇಟ್ಟ ಭಟ್ಟರು ಈಗ 'ಕ್ಯಾಲೆಂಡರ್' ಹೆಸರಿನ ಚಿತ್ರವೊಂದನ್ನು ಪ್ಲಾನ್ ಮಾಡಿದ್ದಾರೆ. ಗಣೇಶನ ನಂತರ ದಿಗಂತ್, ಆನಂತರ ಪವರ್‌ಸ್ಟಾರ್ ಪುನೀತ್‌ನೊಂದಿಗೆ ಸಿನಿಮಾ ಮಾಡಿದ ಭಟ್ಟರ 'ಕ್ಯಾಲೆಂಡರ್'ನಲ್ಲಿ ಯಾರು ಹೀರೋ ಎಂಬುದು ಇನ್ನೂ ಖಚಿತವಾಗಿಲ್ಲ, ಅವರು ಮತ್ತದೇ ದಿಗಂತ್‌ನನ್ನೇ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆಯಿದೆ ಎಂಬ ಮಾತು ಕೇಳಿಬರುತ್ತಿವೆ.



ಮಂದಹಾಸ ನಿಕ್ಕಿ

ಸಿನಿಮಾ ಸಹವಾಸ ಬೇಡ!

"ಸಿನಿಮಾ ಇಂಡಸ್ಟ್ರಿ ಸಹವಾಸವೇ ಸದ್ಯಕ್ಕೆ ಬೇಡ..." ಅಮೂಲ್ಯ ಎಂಬ ಎಳೇ ನಟಿ ನಾಲ್ಕೈದು ಸಿನಿಮಾಗಳಲ್ಲಿ ನಟಿಸುವ ಹೊತ್ತಿಗೇ ಸಿಕ್ಕಾಪಟ್ಟೆ ಬೇಸರಗೊಂಡು ಇಂಥ ಮಾತಾಡುತ್ತಿದ್ದಾಳೆ. ಇದಕ್ಕೆ ಕಾರಣ ಆಕೆಯ ಅಣ್ಣನೇ ನಿರ್ದೇಶಿಸಿ ಈಕೆ ನಟಿಸಿದ್ದ 'ಮನಸಾಲಜಿ' ಎಂಬ ಸಿನಿಮಾ ಫ್ಲಾಪಾಲಜಿ ಆಗಿರುವುದು. ಈ ಸೋಲಿನ ನಂತರವೂ ಆಕೆಯನ್ನು ಅವಕಾಶಗಳು ಅರಸಿ ಬಂದರೂ ಅಮೂಲ್ಯ ಮಾತ್ರ ಯಾವ ಸಿನಿಮಾನೂ ಬೇಡ ಎಂದು ಹಠ ಹಿಡಿದು ಕುಂತಿದ್ದಾಳೆ. ಸದ್ಯ ಪಿಯುಸಿ ಓದುತ್ತಿರುವ ಅಮೂಲ್ಯ ಓದಿನಲ್ಲಿ ಸಿಕ್ಕಾಪಟ್ಟೆ ಮುಂದಿದ್ದಾಳಂತೆ. ಹೀಗಾಗಿ ಇತ್ತೀಚೆಗೆ ಆರ್.ಎಸ್.ಬ್ರದರ್ಸ್ ನಿರ್ದೇಶಿಸಲು ಉದ್ದೇಶಿಸಿರುವ 'ಐಶೂ' ಚಿತ್ರದ ಆಫರ್‌ಅನ್ನು ಅಮೂಲ್ಯ ಹಿಂದೂಮುಂದೂ ನೋಡದೆ ತಿರಸ್ಕರಿಸಿದ್ದಾಳೆ. "ಸದ್ಯಕ್ಕೆ ಚಿತ್ರರಂಗದ ಸಹವಾಸ ಬೇಡ. ಹೇಗೂ ವಯಸ್ಸಿದೆ. ವಿದ್ಯೆಯತ್ತ ಹೆಚ್ಚು ಒಲವು ತೋರಿ ಆಮೇಲೆ ಬೇಕಿದ್ದರೆ ಸಿನಿಮಾಗೆ ರೀ ಎಂಟ್ರಿ ಕೊಟ್ಟರಾಯಿತು" ಅನ್ನೋದು ಅಮೂಲ್ಯಳ ಸದ್ಯದ ಲೆಕ್ಕಾಚಾರ.


ಹಾಗೆ ನೋಡಿದರೆ ಅಮೂಲ್ಯಳ ತಂದೆ ಕೆಂಪರಸು ಅವರು ಕಾಲಾನಂತರ ಅಮೂಲ್ಯ ಫ್ಯಾಮಿಲಿ ಒಂದಿಲ್ಲೊಂದು ಕಷ್ಟಗಳನ್ನು ಎದುರಿಸುತ್ತಲೇ ಇದೆ. ಆಕೆ ನಟಿಸಿದ್ದ 'ಪ್ರೇಮಿಸಂ' ಚಿತ್ರ ಕೂಡಾ ಬಾಕ್ಸಾಫೀಸಿನಲ್ಲಿ ನೆಲ ಕಚ್ಚಿತು. ಆದರೆ ಯಾರೋ ಕಿಡಿಗೇಡಿಗಳು ಈಕೆ ನಿರ್ದೇಶಕ ರತ್ನಜಾರೊಂದಿಗೆ ಚುಂಬಿಸುತ್ತಿರುವ ಫೋಟೋವನ್ನು ಮಾಧ್ಯಮಕ್ಕೆ ನೀಡಿ ಆಕೆಯ ಬದುಕಿನಲ್ಲಿ ಕೋಲಾಹಲವೇಳುವಂತೆ ಮಾಡಿದ್ದರು. ಇದೇ ಹೊತ್ತಿಗೆ ಅಮೂಲ್ಯ ತನ್ನ ಅಣ್ಣನ ಜೊತೆ ಸೇರಿ ಸಿನಿ ಸ್ಪರ್ಶ ಎಂಬ ಎಡಿಟಿಂಗ್ ಸ್ಟುಡಿಯೋ ಆರಂಭಿಸಿದಳು. ಆದರೆ ಅದು ಅಂತಾ ಯಶಸ್ಸು ಕಾಣಲಿಲ್ಲ. ಇದೆಲ್ಲದರ ನಡುವೆಯೇ ಆಕೆಯ ಅಣ್ಣ ದೀಪಕ್ ಅರಸ್ ತಂಗಿಗಾಗಿ 'ಮನಸಾಲಜಿ' ನಿರ್ಮಿಸಿದನು. ಅಷ್ಟಲ್ಲದೆ ಸಿನಿಮಾವನ್ನು ಸ್ವತಃ ತಾವೇ ಬಿಡುಗಡೆ ಮಾಡಲು ಹೋಗಿ ಇದ್ದಬದ್ದದನ್ನೂ ಕಳೆದುಕೊಂಡು ನಷ್ಟಕ್ಕೀಡಾದರು.



ಯಮಸ್ವರೂ

ಈ ಹಿಂದೆ ಧೀರೇಂದ್ರಗೋಪಾಲ್ ಮತ್ತು ದೊಡ್ಡಣ್ಣನಂಥ ನಟ ಪಾತ್ರದಲ್ಲಿ ಸಾಕಷ್ಟು ಬಾರಿ ನಟಿಸಿದ್ದರು. ಈಗ ಕನ್ನಡದ ಹಳೇ ಹೀರ ಯಮಸ್ವರೂಪಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಸದ್ಯಕ್ಕೆ ಯಮನ ಪಾತ್ರದಲ್ಲಿ ನಟಿಸುವಂಥ ದೈತ್ಯದೇಹಿ ನಟ ಅಲ್ಲ, ರೆಬೆಲ್ ಸ್ಟಾರ್ ಅಂಬರೀಶ್!



'ತಂದೆಗೆ ತಕ್ಕ ಮಗ' ಚಿತ್ರದ ನಂತರ ಮತ್ತೊಮ್ಮೆ ಉಪೇಂದ್ರ ಮತ್ತು ಅಂಬರೀಶ್ ಒಂದಾಗುತ್ತಿದ್ದಾರೆ. ಹಿಂದೆ ಉಪ್ಪಿಯ ತಂದೆಯಾಗಿ ಕಾಣಿಸಿಕೊಂಡಿದ್ದ ಅಂಬಿ ಈ ಬಾರಿ ಯಮನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಉಪೇಂದ್ರ ಮತ್ತೊಮ್ಮೆ ಉಪೇಂದ್ರನಾಗಿಯೇ ಶೋ ಕೊಡುತ್ತಿದ್ದಾರೆ.

ಹೌದು. ಉಪೇಂದ್ರ ಮತ್ತು ಅಂಬಿ ನಟಿಸಲಿರುವ 'ಯಮೇಂದ್ರ ಉಪೇಂದ್ರ' ಎಂಬ ಹಾಸ್ಯ ಚಿತ್ರ ಇಷ್ಟರಲ್ಲೇ ಸೆಟ್ಟೇರುತ್ತಿದೆ. ಈ ಚಿತ್ರವನ್ನು ಸಾಧು ಕೋಕಿಲಾ ನಿರ್ದೇಶಿಸಲಿದ್ದಾರೆ. ಉಪ್ಪಿ-ಸಾಧು ಕಾಂಬಿನೇಷನ್‌ನ 'ಅನಾಥರು', 'ರಕ್ತಕಣ್ಣೀರು' ಚಿತ್ರಗಳನ್ನು ನಿರ್ಮಿಸಿದ ಈ ಚಿತ್ರವನ್ನೂ ನಿರ್ಮಿಸುತ್ತಿದ್ದಾರೆ.

ಈ ಚಿತ್ರದಲ್ಲಿ ಉಪ್ಪಿಯ ಜೋಡಿಯಾಗಲು ರಮ್ಯಾ ಒಪ್ಪಿದ್ದಾಳೆ. 'ಗೌರಮ್ಮ' ಎಂ ಹಿಟ್ ಸಿನಿಮಾದ ನಂತರ ಈ ಜೋಡಿ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಚಿತ್ರದಲ್ಲಿ ಆದರೆ ದುರಾದೃಷ್ಟಕ್ಕೆ ಆ ಚಿತ್ರವಿನ್ನೂ ಬಿಡುಗಡೆಯ ಭಾಗ್ಯವನ್ನೇ ಪಡೆದಿಲ್ಲ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -560
Phone : 080-26676427, Fax : 080-26604536, E-mail :lankesh70@rediffmail.com